TEXT PROBLEM WITHIN THE BOOK ONLY

UNIVERSAL LIBRARY

OU_198565

UNIVERSAL LIBRARY

OSMANIA UNIVERSITY LIBRARY

Call No. K 32 3.2 B 25 V Accession No. K 147

Author

Title

This book should be returned on or before the date last marked below

ಶ್ರೀಃ.

ಶ್ರೀಮನ್ಮಹಾ ಗಣಪತಯೇನಮಃ.

ಶ್ರೀಮದಖಿಲ ಭೂಪಾಲ ಲಲಾಮನಾಗಿಯೂ ನಿಖಿಲ ಕವಿಕು
ಲಕಲ್ಪ ಭೂಜನಾಗಿ ರಾರಾಜಿಸುತ್ತ ಧರ್ಮದಿಂದ
ವಸೂಧರೆಯನ್ನಾಳುತ್ತಿರ್ದ

# ರಾಜಾಧಿರಾಜನಾದ ಭೋಜಮಹಾರಾಯನ
# ಚರಿತ್ರವಾದ

ಈ ಕಾವ್ಯರತ್ನವು

ಕಾಳಿದಾಸ, ಭವಭೂತಿ, ಬಾಣ, ಮಯೂರಾದಿ ಕವಿ
ಸಾರ್ವಭೌಮರುಗಳಿಂದ ರಚಿತವಾದ ಶ್ಲೋಕಗ
ಳಿಂದಂದವಾದ ಈ ಪ್ರಬಂಧವು ಎಲ್ಲರಿಗೂ
ಸುಲಭವಾಗಿ ತಿಳಿಯುವಂತೆ

ವೇ|| ರೋಣೂರ್, ವೆಂಕಟರಾಮಶಾಸ್ತ್ರಿಗಳಿಂದ
ಕನ್ನಡದಲ್ಲಿ ತಾತ್ಪರ್ಯ ಟೀಕೆಯು ಬರೆಯಲ್ಪಟ್ಟು
ಇದರ ಸ್ವಾತಂತ್ರ್ಯವನ್ನು ಹೊಂದಿದ

ಬೆಂಗಳೂರು ಬುಕ್‌ಡಿಪೊ
ಪಿ. ಯ. ಕ. ಕೃಷ್ಣಯ್ಯಶೆಟ್ಟಿಯವರಿಂದ

ಮೊದಲನೇ ಛಾಪಾ ೧,೦೦೦ ಪ್ರತಿಗಳು.

ಬೆಂಗಳೂರು:
"ಆನಂದ" ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.
1909.
ಕ್ರಯ ೧೦ ಆಣೆ.

ಶ್ರೀಮನ್ಮಹಾಗಣಪತಯೇನಮಃ.

ತಾತ್ಪರ್ಯ ಟೀಕಾಸಹಿತವಾದ ಭೋಜಚರಿತ್ರೆಯು.

# ವಿಷಯಾನುಕ್ರಮಣಿಕೆ.


| ವಿಷಯಗಳು. | ಪುಟಸಂಖ್ಯೆ. |
|---|---|
| ಗ್ರಂಥಾರಂಭದಲ್ಲಿ ಮಂಗಳಾಚರಣವು ... ... | ೧ |
| ಸಿಂಧುಲರಾಯನ ರಾಜ್ಯಭಾರ ಮತ್ತು ಪುತ್ರಜನನ ... | ೧ |
| ಸಿಂಧುಲನು ರಾಜ್ಯವನ್ನಾರಿಗೆ ಕೊಡತಕ್ಕದ್ದೆಂದು ಯೋಚಿಸಿದ್ದು ... | ೧ |
| ಸಿಂಧುಲನು ತನ್ನ ತಮ್ಮ ಮುಂಜನಿಗೇನೆ ರಾಜ್ಯವನ್ನ ಕೊಟ್ಟಿದ್ದು. | ೨ |
| ಮುಂಜರಾಯನಬಳಿಗೆ ಜೋಯಿಸನು ಬಂದು ತನ್ನ ಸರ್ವಜ್ಞತ್ವವನ್ನು ತೋರ್ಪಡಿಸಲು ರಾಯನು ತನ್ನ ವಿಷಯವನ್ನೆಲ್ಲಾ ತಿಳುಕೊಂಡು ಜೋಯಿಸನಲ್ಲಿ ನಂಬುಗೆ ಇಟ್ಟದ್ದು. | ,, |
| ಬುದ್ಧಿಸಾಗರನೆಂಬ ಮುಂಜರಾಯನ ಮಂತ್ರಿಯು ಭೋಜನ ಜಾತಕವನ್ನು ಜೋಯಿಸನಿಗೆ ತೋರಿಸಿದ್ದು .. | ೫ |
| ಜೋಯಿಸನು ಭೋಜನ ಜಾತಕವನ್ನು ನೋಡಿ ೫೫ ವರುಷ ೭ ತಿಂಗಳು ೩ ದಿನ ರಾಜ್ಯವನ್ನಾಳುತ್ತಾನೆಂದು ಹೇಳಿದ್ದು. | ೬ |
| ಮುಂಜನು ಭೋಜನಿಗೆ ರಾಜ್ಯಲಾಭವಾಗುವದೆಂದು ಹೊಟ್ಟೆಕಿಚ್ಚಿನಿಂದ ದುಃಖಪಡುವಿಕೆ ... ... | ೭ |
| ಮುಂಜನು ರಾಜ್ಯಲೋಭದಿಂದ ಭೋಜನನ್ನು ಕೊಲ್ಲಿಸಲು ಯತ್ನಮಾಡುವಿಕೆ ... ... | ೮ |
| ಮುಂಜನು ಭೋಜನನ್ನು ಕೊಲ್ಲಲು ವತ್ಸರಾಯನಿಗೆ ಆಜ್ಞಾಪಿಸುವಿಕೆ. | ,, |
| ವತ್ಸರಾಯನು ಕೊಲ್ಲಬಾರದೆಂದು ನೀತಿಯನ್ನು ಹೇಳುವಿಕೆ ... | ೧೦ |
| ಮುಂಜನು ನೀತಿಯನ್ನು ಕೇಳದೆ ವತ್ಸನಮೇಲೆ ಕೋಪಿಸಿಕೊಳ್ಳಲು ವತ್ಸನು ಸುಮ್ಮನಾಗಿ ಭೋಜನನ್ನು ಕೊಲ್ಲುವೆನೆಂದು ಭೋಜನನ್ನು ಪಾಠಶಾಲೆಯಿಂದ ಕರೆಯಿಸುವಿಕೆ. | ೧೨ |
| ಭೋಜನನ್ನು ರಥದಮೇಲೆ ಕೂಡಿಸಿಕೊಂಡು ಭುವನೇಶ್ವರಿ ಕಾಡಿಗೆ ಹೋಗುವಿಕೆ ... .. | ೧೩ |
| ಭೋಜನನ್ನು ಕರೆದುಕೊಂಡುಹೋಗುತ್ತಿರಲು ಪುರಜನರೊಬ್ಬರಿಗೊಬ್ಬರಿಗೆ ಕಲಹಗಳುಂಟಾಗಿ ಸಾಯುವಿಕೆ ... | ,, |

ಭೋಜನನ್ನು ಕೊಲ್ಲಲು ಪ್ರಯತ್ನಪಟ್ಟ ವತ್ಸರಾಯನನ್ನು ಕುರಿತು ಭೋಜನು ಪೂರ್ವರಾಜರ ವೃತ್ತಾಂತವನ್ನು ತಿಳಿಸುವಿಕೆ. ೧೫

ಭೋಜನು ವೈರಾಗ್ಯವನ್ನು ತಿಳಿಸುವಿಕೆ. ... ,,

ವತ್ಸರಾಜನ ತಮ್ಮನು ಭೋಜನನ್ನು ಕೊಲ್ಲಲಾರದೆ ಅಣ್ಣನಿಗೆ ನೀತಿಯನ್ನು ಹೇಳುವಿಕೆ ... ೧೬

ವತ್ಸರಾಜನು ವೈರಾಗ್ಯವನ್ನು ತಾಳಿ ಭೋಜನನ್ನು ಕ್ಷಮಿಸಿ ನೆಲಮಾಳಿಗೆಯಲ್ಲಿಟ್ಟು ಘೋಷಿಸಿ ರಕ್ತವನ್ನು ತಂದು ಭೋಜನು ಬರೆದುಕೊಟ್ಟಿದ್ದ ಶ್ಲೋಕವನ್ನು ದೊರೆಗೆ ತೋರಿಸುವಿಕೆ. ೧೮

ಮುಂಜರಾಯನು ಆ ಶ್ಲೋಕಾರ್ಥವನ್ನು ಕೇಳಿ ಮೂರ್ಛೆ ಹೋಗುವಿಕೆ. ೧೯

ಬ್ರಾಹ್ಮಣರು ಮುಂಜನಿಗೆ ಅಗ್ನಿಪ್ರವೇಶಮಾಡುವಂತೆ ವಿಧಿಸುವಿಕೆ. ,,

ಮುಂಜನು ಅಗ್ನಿಪ್ರವೇಶಮಾಡುವನೆಂದು ಪುರಜನಗಳೆಲ್ಲರೂ ಸೇರುವಿಕೆ. ,,

ಬುದ್ಧಿಸಾಗರನು ವತ್ಸರಾಯನಿಂದ ಭೋಜನು ಜೀವಿಸಿರುವನೆಂದು ತಿಳಿಯುವಿಕೆ ... ,,

ಬಳಿಕ ಕಾಪಾಲಿಕನು ಅರಮನೆಗೆಬಂದು ಸತ್ತವರನ್ನು ಬದುಕಿಸುವೆನೆಂದು ಹೇಳುವಿಕೆ ... ... ೨೨

ಕಾಪಾಲಿಕನು ಶ್ಮಶಾನದಲ್ಲಿ ಭೋಜನನ್ನು ಬದುಕಿಸುವಿಕೆ ... ೨೩

ಮುಂಜರಾಯನು ಭೋಜನನ್ನು ಸಂಭ್ರಮದಿಂದ ಕರತಂದು ರಾಜನನ್ನಾಗಿ ಮಾಡಿ ತಾನು ತಪೋವನಕ್ಕೆ ತೆರಳುವಿಕೆ ... ೨೪

ಒಬ್ಬ ಬ್ರಾಹ್ಮಣನು ಭೋಜನ ಲೋಭವನ್ನು ಹೊಗಳುವಿಕೆ. ,,

ಭೋಜನು ಬ್ರಾಹ್ಮನ ಮಾತುಗಳಿಗೆ ಸಂತೋಷಪಟ್ಟು ಲಕ್ಷ ವರಹಗಳನ್ನು ಕೊಡುವಿಕೆ ... ... ,,

ಭೋಜನು ವಿದ್ವತ್ಪ್ರಿಯನೆಂದು ಪ್ರಸಿದ್ಧಿಯನ್ನು ಹೊಂದುವಿಕೆ. ೨೯

ಮಿತಿಯಿಲ್ಲದೆ ಕೊಡುತ್ತಿದ್ದ ಭೋಜನಿಗೆ ಅತಿ ವ್ಯಯವನ್ನು ಮಾಡಬಾರದೆಂದು ಮಂತ್ರಿಯು ತಿಳಿಸುವಿಕೆ ... ,,

ಭೋಜನು ತ್ಯಾಗವೇ ಶ್ರೇಷ್ಠವೆಂದು ಹೇಳಿ ಮಂತ್ರಿಯನ್ನಧಿಕ ರಿಸುವದು. ೩೧

ಭೋಜನು ದಾನವೇ ಮುಖ್ಯವೆಂದು ತಿಳಿಸುವಿಕೆ ... ,,

ಭೋಜನ ಸಮೀಪಕ್ಕೆ ಕಳಿಂಗದೇಶದ ಕವಿಯು ಬರುವಿಕೆ ... ೩೨

ಭೋಜನು ಬೇಟೆಗೆ ಹೋಗಿರಲು ಪುಳಿಂದ ಪುತ್ರನ ಗಾನಕ್ಕೆ ಮೆಚ್ಚಿ ೫ ಲಕ್ಷ ವರಹಾಗಳನ್ನು ಕೊಡುವಿಕೆ ... ೩೨

ಭೋಜನ ಸಮೀಪಕ್ಕೆ ಐದುಜನ ಕವಿಗಳು ಬಂದದ್ದು ... ೩೩

ಗೋವಿಂದ ಪಂಡಿತನನ್ನು ಅಧಿಕಾರದಿಂದ ತಪ್ಪಿಸಿ ಭೋಜನು ಮಿಕ್ಕ ಕವಿಗಳಿಗೆ ಬಹುಮಾನ ಮಾಡುವಿಕೆ ... ೨೫

ಭೋಜರಾಯನ ಸಭೆಗೆ ವರರುಚಿ, ಬಾಣ, ಮಯೂರಾದಿ ಕವಿಗಳು ಬರುವಿಕೆ ... ... ೨೬

ಶಂಕರ ಕವಿಯು ಭೋಜಸಭೆಗೆ ಬಂದು ಶ್ಲೋಕವನ್ನು ಹೇಳಲು ಆತನಿಗೆ ಹನ್ನೆರಡು ಲಕ್ಷವನ್ನು ಕೊಡಲಾಗಿ ಮಿಕ್ಕ ಕವಿಗಳು ದುಃಖಪಡುವಿಕೆ ... ೨೭

ಕಾಳಿದಾಸನ ಪ್ರವೇಶವು ... ... ೨೮

ಕಾಳಿದಾಸನು ಕವಿಗಳಿಗೆ ಸಮಾಧಾನಹೇಳಿ ತನ್ನ ಹೆಸರನ್ನು ರಾಜನ ಕೈಯಲ್ಲಿ ಬರೆಯುವಿಕೆ ... ೨೯

ಕಾಳಿದಾಸನು ಸಂಧ್ಯಾ ಕಾಲವನ್ನು ವರ್ಣಿಸಿದ್ದು ... ೪೦

ಭೋಜ ಮತ್ತು ಕಾಳಿದಾಸರಿಗೆ ಪ್ರೀತಿಯು ಹೆಚ್ಚುವಿಕೆ ... ೪೧

ಕಾಳಿದಾಸನು ವೇಶ್ಯಾಲಂಪಟನೆಂದು ಇತರರು ಅಪವಾದ ಮಾಡಲು ಕಾಳಿದಾಸನು ಸಮಾಧಾನ ಹೇಳಿದ್ದು ... ,,

ಕಾಳಿದಾಸನು ಭೋಜರಾಜನನ್ನು ಬಣ್ಣಿಸುವಿಕೆ ... ೪೨

ದೊರೆಯು ಕಾಳಿದಾಸನಿಗೆ ಅಕ್ಷರಲಕ್ಷವನ್ನು ಕೊಟ್ಟದ್ದು. ,,

ಭೋಜನ ಸಮೀಪಕ್ಕೆ ಅಧ್ಯಾಪಕರು ಕವಿತ್ವ ಮಾಡಿಕೊಂಡು ಬಂದು ಹೇಳಿದ್ದು ... ... ೪೪

ಉತ್ತರಾರ್ಧವು ಕಾಳಿದಾಸಕೃತವೆಂದು ದೊರೆಯು ಅಕ್ಷರಲಕ್ಷವನ್ನು ಕೊಟ್ಟದ್ದು ... ... ೪೫

ದ್ರಾವಿಡದೇಶದಿಂದ ಲಕ್ಷ್ಮೀಧರನೆಂಬ ಕವಿಯು ಭೋಜನ ಸಭೆಗೆ ಬಂದು ಕವಿತ್ವವನ್ನು ಹೇಳಲು ದೊರೆಯು ಲಕ್ಷ್ಮೀಧರಕವಿಗೆ ಅಕ್ಷರಲಕ್ಷಗಳನ್ನು ಕೊಟ್ಟದ್ದು ... ೪೮

ಲಕ್ಷ್ಮೀಧರನಿಗೆ ಮನೆಯನ್ನು ಮಾಡಿ ಕೊಡಬೇಕೆಂದು ಭೋಜನು ತನ್ನ ಮಂತ್ರಿಗಳಿಗೆ ಆಜ್ಞೆ ಮಾಡಿದ್ದು ... ,,

ಕುವಿಂದನನ್ನು ಹೊರಡಿಸುವದಕ್ಕೆ ಯತ್ನಮಾಡಲು ಕುವಿಂದನೂ ಕೂಡಾ ಕವಿತ್ವವನ್ನು ಹೇಳಿದ್ದು ... ೪೯

ಕುವಿಂದನ ಯೋಗ್ಯತೆಯನ್ನು ತಿಳಿದು ರಾಜನು ಅಕ್ಷರಲಕ್ಷವನ್ನು ಕೊಟ್ಟದ್ದು ... ... ೫೦

ಬಾಣನು ಬಡತನದಿಂದ ಪೀಡಿತನಾಗಿ ಮಡದಿಯೊಡನೆ ಮಾತ

ನಾಡಿಕೊಳ್ಳುವಿಕೆ ... ... ೫೦

ದೊರೆಯು ವೇಷಧಾರಿಯಾಗಿ ಬಾಣನ ಸಂಗತಿಯನ್ನು ಕೇಳುವಿಕೆ. ೫೧

ದೊರೆಯು ದಾರಿಯಲ್ಲಿ ಕಳ್ಳರನ್ನು ನೋಡುವಿಕೆ ... ೫೨

ಕಳ್ಳರಿಬ್ಬರೂ ಪರಸ್ಪರ ಮಾತನಾಡಿಕೊಳ್ಳುವಿಕೆ ... ,,

ಆ ಕಳ್ಳರಿಬ್ಬರ ಸಂಭಾಷಣೆಯನ್ನು ಕೇಳಿ ಸಂತುಷ್ಟನಾಗಿ ಬರುತ್ತಾ ರಾಜನು ಮತ್ತೊಂದು ಮನೆಯಲ್ಲಿ ತಂದೆಮಕ್ಕಳ ಸಂವಾದವನ್ನು ಕೇಳುವಿಕೆ ೫೬.

ಭೋಜನು ಪಿತಾಪುತ್ರರ ಸಂಭಾಷಣೆಯನ್ನು ಕೇಳಿ ತನ್ನ ಮೇಲೆ ಧರಿಸಿಕೊಂಡಿದ್ದ ಒಡವೆಗಳನ್ನೆಲ್ಲಾ ಕೊಡುವಿಕೆ. ,,

ಭೋಜನ ಸಭೆಗೆ ಕ್ರೀಡಾಚಂದ್ರನು ಬರುವಿಕೆ ... ೫೮

ಕ್ರೀಡಾಚಂದ್ರನ ಕವಿತ್ವಕ್ಕೆ ಮೆಚ್ಚಿ ೧೦ ಆನೆಗಳನ್ನೂ ೫ ಗ್ರಾಮಗಳನ್ನೂ ಕೊಡುವಿಕೆ ... ೬೦

ಕ್ರೀಡಾಚಂದ್ರನು ತಿರುಗೂ ಭೋಜನನ್ನು ಹೊಗಳುವಿಕೆ. ,,

ರಾಮೇಶ್ವರ ಕವಿಯು ಬಂದದ್ದು ... ,,

ರಾಮೇಶ್ವರಕವಿಯ ಕವಿತ್ವಕ್ಕೆ ಮೆಚ್ಚಿ ಭೋಜನು ಆಭರಣಗಳನ್ನು ಕೊಟ್ಟದ್ದು .. ... ೬೧

ಕಾಳಿದಾಸನು ಕವಿಶ್ರೇಷ್ಠನಾದರೂ ವೇಶ್ಯಾಲೋಲನೆಂದು ಅಸಮಾಧಾನಗೊಳ್ಳುವಿಕೆ ... ... ೬೧

ರಾಯನು ಕಾಳಿದಾಸನನ್ನು ಅವಮಾನಪಡಿಸಲು ಕಾಳಿದಾಸನು ತನ್ನ ಮನೆಗೆ ಹೊರಟುಹೋದದ್ದು ... ೬೨

ಕಾಳಿದಾಸನ ವಿಷಯವಾಗಿ ಲೀಲಾವತಿಯು ಭೋಜನಿಗೆ ಸಮಾಧಾನ ಹೇಳಿದ್ದು ... ... ೬೩

ಭೋಜನು ಮತ್ತೆ ಕಾಳಿದಾಸನನ್ನು ಕರೆಕಳುಹಿಸಿದ್ದು ... ೬೪

ಕಾಳಿದಾಸನನ್ನು ಭೋಜನು ಸಿಂಹಾಸನದಮೇಲೆ ಕೂಡಿಸಿದ್ದಕ್ಕಾಗಿ ಮಿಕ್ಕ ಕವಿಗಳು ಹೊಟ್ಟೆಕಿಚ್ಚಿನಿಂದ ಏಕವಾಗಿ ಕಾಳಿದಾಸನೊಡನೆ ದೊರೆಗೆ ದ್ವೇಷವುಂಟಾಗುವಂತೆ ಮಾಡುವಿಕೆ. ೬೫

ಕಾಳಿದಾಸನನ್ನು ಭೋಜನು ಸಭೆಯಿಂದ ಹೊರಡಿಸುವಿಕೆ. ೭೦

ಭೋಜನಿಗೂ ಲೀಲಾವತಿಗೂ ಸಂಭಾಷಣೆ ... ೭೧

ಲೀಲಾವತಿಯ ಪಾತಿವ್ರತ್ಯಕ್ಕೆ ಮೆಚ್ಚಿ ಭೋಜನು ತನ್ನ ಮನೆಯೇ ಕ್ಷಮಿಸಿಕೊಳ್ಳುವಿಕೆ ... ... ೭೨

ಭೋಜನು ಸಭೆಯಲ್ಲಿ ಸಮಸ್ಯೆ ಕೊಟ್ಟು ಪೂರ್ತಿ ಮಾಡಿದವರಿಗೆ

ದೇಶದಿಂದ ಹೊರಡಬೇಕೆಂದು ಕವಿಗಳಿಗೆ ಹೇಳುವಿಕೆ ... ೭೪

ಕವಿಗಳು ರಾಯನ ಸಮಸ್ಯೆ ಪೂರ್ತಿ ಮಾಡಲಾಗದೆ ಎಲ್ಲರೂ ದೇಶವಂನು ಬಿಟ್ಟು ಹೊರಡುವಿಕೆ ... ೭೬

ಕಾಳಿದಾಸನು ಚಾರಣವೇಷದಿಂದ ಬಂದು ಕವಿಗಳಿಗೆ ಸಮಸ್ಯೆಯನ್ನು ಪೂರ್ತಿಮಾಡಿ ಕೊಡುವಿಕೆ ... ೭೯

ಭೋಜನು ಸಮಸ್ಯಾಪೂರಣವಂನು ಬಾಣಾದಿಗಳಿಂದ ತಿಳದು ಬಹಳ ಧನವಂನು ಕೊಡುವಿಕೆ ... ... ೮೧

ಕವಿಗಳೆಲ್ಲರೂ ಬಾಣನಮೇಲೆ ಹೊಟ್ಟೆಕಿಚ್ಚಿನಿಂದ ಧೊರೆಗೆ ದೂ[illegible] ... ... ,,

ಭೋಜನು ಕಾಳಿದಾಸನು ವಿಲಾಸವತಿಯ ಮನೆಯಲ್ಲಿರುವನೆಂದು ತಿಳದು ತಾನೇ ಅಲ್ಲಿಗೆ ಹೋಗುವಿಕೆ ... ೮೩

ಕಾಳಿದಾಸನಂನು ಭೋಜನು ತಂನ ಕುದುರೆಯಮೇಲೇರಿಸಿಕೊಂಡು ಅರಮನೆಗೆ ಕರೆದುಕೊಂಡು ಬರುವಿಕೆ ... ೮೪

ಭೋಜನು ಸಂಧ್ಯಾಕಾಲದಲ್ಲಿ ಸಮಸ್ಯೆ ಕೊಡಲು ಅದಂನು ಬಾಣಾದಿಗಳು ಪೂರ್ತಿ ಮಾಡಿದ್ದು .. ೮೫

ಭೋಜನು ಒಬ್ಬ ಬಡಬ್ರಾಂಹಣನ ಕವಿತ್ವಕ್ಕೆ ಅಕ್ಷರಲಕ್ಷ ಕೊಟ್ಟದ್ದು. ೮೬

ತಂಡುಲದೇವಕವಿಯು ಬಂದದ್ದು ... ೮೭

ಭೋಜಸಭೆಗೆ ಹೆಂಡತಿಯೊಡನೆ ಕೂಡಿದ ಒಬ್ಬ ಕುರುಡ ಕವಿಯು ಬಂದದ್ದು ... ... ೮೮

ವಿದ್ವತ್ಕುಟುಂಬವಂನು ನೋಡಿ ಧೊರೆಯು ಸಮಸ್ಯೆ ಹೇಳುವಿಕೆ. ೮೯

ವಿದ್ವತ್ಕುಟುಂಬವು ಪ್ರತ್ಯೇಕವಾಗಿ ಸಮಸ್ಯಾ ಪೂರಣಮಾಡಿದ್ದು. ೯೦

ಶ್ರೀಮಂತಕವಿಯು ಬಂದದ್ದು ... ... ೯೧

ಶ್ರೀಮಂತಕವಿಗೆ ಮಣಿಖಚಿತ ತಟ್ಟೆಯಂನು ಕೊಟ್ಟದ್ದು ... ೯೨

ಭೋಜನು ಬೇಟೆಗೆ ಹೋಗಿರಲು ಬ್ರಾಂಹಣನೊಡನೆ ಪ್ರಶ್ನೋತ್ತರಗಳು ನಡೆದು ಪೈರುಗಳಂನು ಬಣ್ಣಿಸಲು ಆ ಬ್ರಾಂಹ್ಮಣನಿಗೆ ಎಲ್ಲಾ ಒಡವೆಗಳಂನೂ ಕೊಟ್ಟನು ... ೯೩

ಭೋಜಸಭೆಗೆ ಕುಂಬಾರಳು ಬಂದದ್ದು ... ೯೪

ಕುಂಬಾರಳು ಶ್ಲೋಕವಂನು ಹೇಳಲು ಧೊರೆಯು ಆಕೆಗೆ ಶಿಕ್ಕಿದ ನಿಕ್ಷೇಪವಂನೆಲ್ಲಾ ಕೊಟ್ಟದ್ದು ... ೯೫

ಭೋಜನು ವಿಕ್ರಮಾರ್ಕನಿಗೆ ಸಮವಲ್ಲವೆಂದು ಒಬ್ಬ ವೈಶ್ಯನು

ತನ್ನ ಪತ್ನಿಯೊಡನೆ ಮಾತಾಡುತ್ತಿದ್ದುದು ... ೯೬
ಭೋಜನು ಕ್ರೀಡೋದ್ಯಾನದಲ್ಲಿರಲು ಒಬ್ಬಾಳೊಬ್ಬ ಸುಂದರಿಯು ಮಾಂಸ ವ್ಯಾಜದಿಂದ ಶ್ಲೋಕವನ್ನು ಹೇಳಿದ್ದು ಅಕ್ಷರಲಕ್ಷವನ್ನು ಕೊಟ್ಟದ್ದು. ೯೭
ಭೋಜನ ಕೀರ್ತಿಯನ್ನು ಬಣ್ಣಿಸಿದ ಕವಿಗೋವರ್ಧನಿಗೆ ೫ ಮದ್ದಾನೆಗಳನ್ನು ಕೊಟ್ಟದ್ದು ... ೯೯
ಭೋಜನು ಬೇಟೆಯಿಂದ ಬರುತ್ತಾ ದಾರಿಯಲ್ಲಿ ನದಿಯನ್ನು ದಾಟಿ ಬಂದ ಬ್ರಾಹ್ಮಣನನ್ನು ನೋಡಿ ಮಾತನಾಡಿದ್ದು ... ,,
ನದಿಯು ಜಾನುದಘ್ನವೆಂದು ಬಣ್ಣಿಸಿದ್ದಕ್ಕಾಗಿ ಬ್ರಾಹ್ಮಣನಿಗೆ ಮೂರುಲಕ್ಷಗಳನ್ನೂ ಅನೇಕ ಮದ್ದಾನೆಗಳನ್ನೂ ಕೊಟ್ಟದ್ದು. ೧೦೧
ಶುಕದೇವಕವಿಯು ಭೋಜಸಭೆಗೆ ಬಂದದ್ದು ... ೧೦೨
ಶುಕದೇವಕವಿ ವಿಷಯದಲ್ಲಿ ಕಾಳಿದಾಸಾದಿಗಳ ಅಭಿಪ್ರಾಯ. ,,
ಶುಕದೇವಕವಿಯ ಕವಿತ್ವಕ್ಕೆ ಮೆಚ್ಚಿ ಭೋಜನು ಮರ್ಯಾದೆಮಾಡಿದ್ದು. ೧೦೪
ವಾಸುದೇವಕವಿಯು ಬಂದದ್ದು ... ,,
ಭೋಜನು ಯಾವಾಗಲೂ ದಾನಮಾಡುತ್ತಿರುವದನ್ನು ನೋಡಿ ಮುಖ್ಯಮಂತ್ರಿಯು ಭೋಜನೊಡನೆ ವಾದಿಸಿದ್ದು. ... ೧೦೬
ಭೋಜನ ಮಲಗುವ ಮನೆಗೆ ಕಳ್ಳಬ್ರಾಹ್ಮಣನೊಬ್ಬನು ಬಂದದ್ದು. ೧೦೬
ಕಳ್ಳಬ್ರಾಹ್ಮಣನು ಐಶ್ವರ್ಯತುಷ್ಟನಾದರೂ ಯಾಕೆಗೆ ಉತ್ತರ ಹೇಳಿದ್ದು ೧೦೭
ಭೋಜನು ಬ್ರಾಹ್ಮಣನಿಗೊಬ್ಬನಿಗೆ ವೀರವಲಯದ ಎವಿಗೆ ಒಂದು ಲಕ್ಷ ವರಹಾಗಳನ್ನು ಕೊಟ್ಟದ್ದು ... ೧೦೮
ಭೋಜನು ವಿಷ್ಣುಕವಿಗೆ ಸಂತುಷ್ಟನಾಗಲು ಸೋಮನಾಥಕವಿಯು ದುಃಖಪಟ್ಟು ತಿರುಗೂ ಸೋಮನಾಥಕವಿಯು ವಿಷ್ಣು ಕವಿಗೆ ಸರ್ವಸ್ವವನ್ನೂ ಕೊಟ್ಟದ್ದು ... ೧೦೯
ಭೋಜಮಂತ್ರಿಯು ಖಜಾನೆ ಬರಿದಾಯಿತೆಂದು ತಿಳಿಸಲು ದ್ವಾರದಲ್ಲಿದ್ದ ಕವಿಗೆ ಭೋಜನು ತನ್ನಾಭರಣಗಳನ್ನೆಲ್ಲಾ ಕೊಟ್ಟದ್ದು. ೧೧೨
ಮುಚುಕುಂದಕವಿಗೆ ಪ್ರತ್ಯಕ್ಷರಲಕ್ಷ ಕೊಟ್ಟದ್ದು ... ೧೧೪
ಭೋಜನು ಚಾಮರಹಾಕುತ್ತಿದ್ದವಳ ಕವಿತ್ವಕ್ಕೆ ಅಕ್ಷರಲಕ್ಷಕೊಟ್ಟದ್ದು ೧೧೫
ಬಡವನಾದ ಗೋಪಾಲಕವಿಯ ಕವಿತ್ವಕ್ಕೆ ಮೆಚ್ಚಿ ಷೋಡಶ ರತ್ನಗಳನ್ನು ಕೊಟ್ಟದ್ದು ... ೧೧೬
ಭೋಜನು ಒಂದು ದೇವಾಲಯದಲ್ಲಿ ಮಾತಾಡುತ್ತಿರುವ ಭಾಸ್ಕರನಿಗೆ ಪಡವೆಗಳನ್ನೆಲ್ಲಾ ಕೊಟ್ಟದ್ದು ... ೧೧೮

ಶಾಕಲ್ಯನ ಶ್ಲೋಕಕ್ಕೆ ಮೆಚ್ಚಿ ಮೂರು ಲಕ್ಷಗಳನ್ನು ಕೊಟ್ಟದ್ದು. ೧೧೯
ಮುದುಕಿಯೊಬ್ಬಳು ಹೇಳಿದಕವಿತ್ವಕ್ಕೆ ರತ್ನಕಲಶವನ್ನು ಕೊಟ್ಟದ್ದು ೧೨೦
ಒಬ್ಬಚಾರನು ಗಂದದ ತುಂಡನ್ನು ತಂದು ಕೊಡಲು ಭೋಜನು ಲಕ್ಷವನ್ನು ಕೊಟ್ಟದ್ದು ... ೧೨೦
ದಾಮೋದರ ಕವಿಯು ದೊರೆಯನ್ನು ಬಣ್ಣಿಸಿದ್ದು ... ೧೨೧
ಮಲ್ಲಿನಾಥಕವಿಗೆ ಕೈಬಳೆಯನ್ನು ಕೊಟ್ಟದ್ದು ... ೧೨೨
ಮಂತ್ರಜ್ಞನಾದೊಬ್ಬ ವಿದ್ವಾಂಸನ ಭೋಜನಸಂಭಾಷಣೆ ... ೧೨೩
ಐದುಮಂದಿ ಕವಿಗಳು ಬಂದು ರಾಯನನ್ನಾಶೀರ್ವದಿಸಿದ್ದು ... ೧೨೫
ಭೋಜನು ತನ್ನ ಸಮಾನದಾತೃವಿಲ್ಲವೆಂದು ತಿಳುಕೊಳ್ಳಲು ಮಂತ್ರಿಯೊಬ್ಬನು ವಿಕ್ರಮಾರ್ಕನ ದಾನಶಾಸನವನ್ನು ತೋರಿಸಿದ್ದು ... ೧೨೬
ಭೋಜನು ರಾತ್ರಿ ದೇವಾಲಯದಲ್ಲಿ ಛಳಿಯಿಂದ ಪೀಡಿತನಾದ ಬ್ರಾಹ್ಮಣನಿಗೆ ಸುವರ್ಣಕಲಶಗಳನ್ನು ಕೊಟ್ಟದ್ದು ... ೧೨೯
ಮಯೂರಕವಿಯು ಭೋಜನನ್ನು ಕಬ್ಬಿನಸೆವವಿಂದ ವರ್ಣಿಸಿದ್ದು. ೧೩೦
ಭೋಜನು ಚಂದ್ರನನ್ನು ಬಣ್ಣಿಸುತ್ತಿರಲು ಉತ್ತರಾರ್ಧವನ್ನು ಹೇಳಿದ ಕಳ್ಳನಿಗೆ ಮರ್ಯಾದೆಮಾಡಿದ್ದು ... ೧೩೧
ಶಾಂಭವಕವಿಯು ಶ್ಲೋಕಗಳಿಗೆ ಮೆಚ್ಚಿ ಅಕ್ಷರ ಲಕ್ಷಕೊಟ್ಟದ್ದು ... ೧೩೩
ಶಿವಾಲಯದಲ್ಲಿ ಭೋಜನನ್ನು ಕವಿಯೋರ್ವನು ವರ್ಣಿಸಿದ್ದು ... ೧೩೪
ಭೋಜಸಭೆಗೆ ಭವಭೂತಿಯು ಬಂದದ್ದು ... ೧೩೫
ಭವಭೂತಿ, ಬಾಣ, ಕಾಳಿದಾಸರ ಸಂಭಾಷಣೆ ಭವಭೂತಿಕಾಳಿದಾಸರಯೋಗ್ಯತೆಯನ್ನು ಪಾರ್ವತಿಯುಂತರಾಗಿ ಹೇಳಲು, ಭವಭೂತಿಯು ಕಾಳಿದಾಸನ ಸ್ನೇಹಮಾಡಿದ್ದು. ... ೧೪೦
ಚಾರಳ ಕವಿತ್ವಕ್ಕೆ ಭುಜವಲಯಗಳನ್ನು ಕೊಟ್ಟದ್ದು ... ೧೪೧
ಭೋಜನು ಚಂದ್ರನನ್ನು ಬಣ್ಣಿಸುತ್ತಿರಲು ಉತ್ತರಾರ್ಧವನ್ನು ಹೇಳಿದುದಕ್ಕೆ ಕಾಳಿದಾಸನಿಗೆ ಅಕ್ಷರ ಲಕ್ಷವನ್ನು ಕೊಟ್ಟದ್ದು. ,,
ವಿಣಾಕವಿಯು ಹೇಳಿದಶ್ಲೋಕಕ್ಕೆ ಬಾಣನು ಸಂತೋಷಿಸಿದ್ದು ... ೧೪೫
ಭೋಜನಸ್ಪೃಹೆಯಿಂದ, ಸೀತೆಯು ಪ್ರಾತಃಕಾಲವನ್ನು ಬಣ್ಣಿಸಿದ್ದು ೧೪೬
ಕಾಳಿದಾಸನೂ ಪ್ರಾತಃಕಾಲವನ್ನು ಬಣ್ಣಿಸಿದ್ದು ... ,,
ಪಠಿವ್ವಾಡಿಗಳು ಭೋಜಸಭೆಗೆ ಬಂದು ವರ್ಣಿಸಲು ಅಕ್ಷರಲಕ್ಷಕೊಟ್ಟದ್ದು ೧೪೭
ಭೋಜನು ರಾತ್ರಿಕಾಲದಲ್ಲಿ ಪ್ರೊಸಿಕೆಯಿಂದ ಕಾಪ್ಪಿಸ್ತಿದ್ದ ಸುಂದರಿಯನ್ನು ನೋಡಿ ಒಂದು ಸಮಸ್ಯೆಕೊಡಲು, ಕಾಳಿದಾಸನು

ಪೂರ್ತಿಮಾಡಿದ್ದು ... ೧೪೮
ಜಲಕ್ರೀಡೆಯಿಂದ ಶ್ರಾಂತನಾಗಿ ಮರದ ಕೆಳಗೆನಿಂತಿರಲುವೊಬ್ಬಕ
ವಿಯು ವರ್ಣಿಸುತ್ತಾನೆ ... ,,
ಮರದ ಮೇಲೆ ಕೂಗುತ್ತಿದ್ದ ಕಾಗೆಕೋಗಿಲೆಗಳನ್ನು ಕುರಿತು
ಜಯದೇವಕವಿಯು ಹೇಳುತ್ತಾನೆ ... ೧೪೯
ಭೋಜನು ವೊಬ್ಬನೊಬ್ಬ ತಪಸ್ವಿಯೊಡನೆ ಮಾತನಾಡುತ್ತಾ ಆತ
ನಿಗೆ ಲಕ್ಷಗಳನ್ನು ಕೊಟ್ಟದ್ದು ... ೧೫೧
ಬ್ರಹ್ಮಚಾರಿಯೋರ್ವ ನೊಡನೆ ಕಾಶೀಯಾತ್ರೆಗೆ ಯಲ್ಲಾಪಂಡಿತರ
ನ್ನೂ ಕಳುಹಿಸಿದ್ದು ... ೧೫೩
ಭೋಜನು ಕಾಳಿದಾಸನಲ್ಲಿ ಅಸಮಾಧಾನ ಪಡಲು ಕಾಳಿದಾಸನು
ಅಲ್ಲಾಳ ದೇಶಕ್ಕೆ ಹೋಗಿದ್ದದ್ದು ... ೧೫೫
ಅಲ್ಲಿ ತನ್ನ ಕವಿತ್ವವನ್ನು ತೋರ್ಪಡಿಸಿದ್ದು ಮಾಘಪಂಡಿತನ ಪ
ತ್ನಿಯು ಭೋಜನಿಂದ ದ್ರವ್ಯವನ್ನು ಹೊಂದಿ ಅದನ್ನು ಯಾಚ
ಕರಿಗೆ ಕೊಟ್ಟದ್ದು ... ೧೫೬
ಯಾಚಕರಿಗಾಗಿಯೇ ಕಷ್ಟಪಡುತ್ತಿದ್ದ ಮಾಘಪಂಡಿತನ ಮರಣ. ೧೫೮
ಭೋಜನು ಅಲ್ಲಾಳದೇಶಕ್ಕೆ ಕಾಳಿದಾಸನಿಗೆಕಾಗದಬರೆದುಕಳುಹಿಸಿದ್ದು. ೧೫೯
ಕಾಳಿದಾಸನು ಅಲ್ಲಾಳರಾಯನಪ್ಪಣೆಯನ್ನು ಪಡೆದು ಭೋಜನೆ
ಡೆಗೆ ಬಂದದ್ದು ... ... ೧೬೦
ಭೋಜನ ಸಭೆಯಲ್ಲಿ ಕವಿತ್ವವು ಹೊರಡದೆ ಬಡವನಾಗಿದ್ದ ಒಬ್ಬ
ಬ್ರಾಹ್ಮಣನಿಗೆ ಲಕ್ಷಗಳನ್ನು ಕೊಟ್ಟದ್ದು ... ೧೬೧
ವೇಶ್ಯಾಸ್ತ್ರೀಯನ್ನು ಕಾಳಿದಾಸನೂ ಭೋಜನೂ ಬಣ್ಣಿಸಿದ್ದು. ೧೬೧
ಭೋಜನು ರಾತ್ರಿನೋಡಿ ಬಂದಿದ್ದ ಪತಿವ್ರತಾಮಾಹಾತ್ಮ್ಯ ವಿಷ
ಯವಾಗಿ ಸಮಸ್ಯೆಕೊಡಲು ಪೂರ್ತಿಮಾಡಿದ್ದು ... ೧೬೪
ಗ್ರೀಷ್ಮವನ್ನುಕುರಿತುಸಮಸ್ಯಾಪೂರಣವನ್ನುಕಾಳಿದಾಸನುಮಾಡಿದ್ದು. ೧೬೫
ಗುಳುಗುಗ್ಗುಳು ಎಂಬ ಸಮಸ್ಯೆ ಪೂರ್ತಿ ಮಾಡಿದ್ದು. ,,
ದಿವಾಕಾಕರುತಾದ್ಭೀತಾ, ಎಂಬ ಸಮಸ್ಯೆಯನ್ನು ಕಾಳಿದಾಸನು
ಪೂರ್ತಿಮಾಡಿದ್ದು ... ೧೬೭
ಚೆಂಡನ್ನು ಭವಭೂತಿ ಮುಂತಾದವರು ಬಣ್ಣಿಸಿದ್ದು ... ೧೬೮
ಕಾಳಿದಾಸನು ಕುಂಪಟಿಯನ್ನು ಬಣ್ಣಿಸಿದ್ದು ... ೧೭೦
ಭೋಜನು ತನ್ನ ಹೆಂಡತಿಯರ ವಿಷಯವಾಗಿ ಸಮಸ್ಯೆ ಕೊಡಲು

ಕಾಳಿದಾಸನು ಪೂರ್ತಿ ಮಾಡಿದ್ದು ... ೧೭೧
ಮತ್ತೊಂದು ಸಮಸ್ಯಾ ಪೂರಣ ... ೧೭೨
ನರ್ಮದಾನದಿಯಲ್ಲಿ ಸಿಕ್ಕಿದ ಶಾಸನದಲ್ಲಿದ್ದ ಶ್ಲೋಕವು ಪೂರ್ವಾರ್ಧಮಾತ್ರವಿರಲು, ಉತ್ತರಾರ್ಧವನ್ನು ಭವಭೂತಿ ಮೊದಲಾದವರು ಪೂರ್ತಿ ಮಾಡಿದ್ದು ... ೧೭೩
ಭೋಜನ ನೂತನಗೃಹದಲ್ಲಿ ಬ್ರಹ್ಮರಾಕ್ಷಸನ ಪ್ರಶ್ನೆಗಳಿಗೆ ಕಾಳಿದಾಸನು ಉತ್ತರ ಹೇಳಿ ರಾಕ್ಷಸನನ್ನು ಹೊರಡಿಸಿದ್ದು ... ೧೭೪
ಭೋಜನು ದರಿದ್ರನಾದ ಕವಿಗೆ ಐಶ್ವರ್ಯವನ್ನು ಕೊಟ್ಟದ್ದು ... ೧೭೬
ಭೋಜನು ಕವಿಶೇಖರನೆಂಬವನಿಗೆ ರಾಜ್ಯವನ್ನೆಲ್ಲಾ ಕೊಡಲು ಮಂತ್ರಿಯು ಕೊಟ್ಟ ದ್ರವ್ಯವನ್ನು ಕೊಂಡುಕೊಂಡು ರಾಯನಿಗೆ ಕೊಟ್ಟದ್ದು. ೧೭೯
ಭೋಜನು ಮೊಸರು ಮಾರುವವಳನ್ನು ಲೀಲಾದೇವಿಯ ಅನುಮತಿಯಿಂದ ಸ್ವೀಕರಿಸಿದ್ದು ... ೧೮೦
ಭೋಜನು ಭುಕ್ಕುಂಡನೆಂಬ ಕಳ್ಳನನ್ನು ಬಿಟ್ಟದ್ದು ... ೧೮೨
ಚಂದ್ರನನ್ನು ಕವಿಗಳು ವರ್ಣಿಸಿದ್ದು ... ೧೮೩
ಭೋಜನಿಗೆ ಜಲಕ್ರೀಡೆಯಿಂದ ಉಂಟಾದ ಅಮಾನುಷರೋಗವನ್ನು ಅಶ್ವಿನೀ ದೇವತೆಗಳು ಗುಣಪಡಿಸಿದ್ದು ... ೧೮೬
ಮಲ್ಲಿನಾಥನ ಗಾಥೆಗೆ, ಕಾಳಿದಾಸನು ಉತ್ತರ ಹೇಳಿದ್ದು ... ೧೮೮
ಮಲ್ಲಿನಾಥನ ಚಮತ್ಕಾರವಾದ ಗಾಥೆಗೆ ಸಂತೋಷಪಟ್ಟು ಭೋಜನು ಲಕ್ಷಾಂತರ ದ್ರವ್ಯವನ್ನು ಕೊಟ್ಟದ್ದು ... ೧೮೯
ಭೋಜನ ಚರಮ ಶ್ಲೋಕವನ್ನೂ ನಾತಕ್ಷಣವೇ ಮಂಗಳ ಶ್ಲೋಕವನ್ನೂ ಕಾಳಿದಾಸನು ಹೇಳಿದ್ದು ... ೧೯೧
ಭೋಜನು ಲೋಕೋತ್ತರನೆನಿಸಿಕೊಂಡು ರಾಜ್ಯವನ್ನಾಳುತ್ತಿದ್ದನು. ೧೯೨

ಸಂಪೂರ್ಣಂ.

ಶ್ರೀ.

ಶ್ರೀಮನ್ಮಹಾಗಣಪತಯೇನಮಃ.

ತಾತ್ಪರ್ಯ ಟೀಕಾಸಹಿತವಾದ

# ಭೋಜಚರಿತ್ರೆ.

ಶ್ಲೋ॥ ಶುಕ್ಲಾಂಬರಧರಂವಿಷ್ಣುಂ । ಶಶಿವರ್ಣಂ ಚತುರ್ಭುಜಂ ॥
ಪ್ರಸನ್ನವದನಂಧ್ಯಾಯೇತ್ । ಸರ್ವವಿಘ್ನೋಪಶಾಂತಯೇ ॥

ಮೂ॥ಸ್ವಸ್ತಿಶ್ರೀಮನ್ಮಹಾರಾಜಾಧಿರಾಜಸ್ಯಭೋಜರಾಜಸ್ಯಪ್ರಬಂಧಃಕಥ್ಯತೇ

ಟೀ॥ ಓದುವವರಿಗೂ, ಕೇಳುವವರಿಗೂ, ಮಂಗಳವಾಗಲಿ. ರಾಜಾಧಿರಾಜನಾದ ಭೋಜಮಹಾರಾಯನ ಚರಿತ್ರೆಯು ಹೇಳಲ್ಪಡುತ್ತದೆ.

ಮೂ॥ ಆಸೀದ್ಧಾರಾರಾಜ್ಯೇಸಿಂಧುಲಸಂಜ್ಞೋರಾಜಾ। ಚಿರಂಪ್ರಜಾಃಪರ್ಯಪಾಲಯತ್ ॥ ತಸ್ಯವೃದ್ಧತ್ವೇಭೋಜಇತಿಪುತ್ರಸ್ಸಮಜನಿ । ಸಯದಾಪಂಚವಾರ್ಷಿಕಸ್ತದಾಪಿತಾಹ್ಯಾತ್ಮನೋಜರಾಂಜ್ಞಾತ್ವಾ । ಮುಖ್ಯಾಮಾತ್ಯಾನಾಹೂಯ॥ ಅನುಜಂಮುಂಜಂಮಹಾಬಲಮಾಲೋಕ್ಯ । ಪುತ್ರಂಚಬಾಲಂವೀಕ್ಷ್ಯವಿಚಾರಯಾಮಾಸ ॥ ಯದ್ಯಹಂರಾಜ್ಯಲಕ್ಷ್ಮೀಭಾರಧಾರಣಸಮರ್ಥಂ । ಸೋದರಮಪಹಾಯರಾಜ್ಯಂಪುತ್ರಾಯಪ್ರಯಚ್ಛಾಮಿ ॥ ತದಾಲೋಕಾಪವಾದಃ । ಅಥವಾಬಾಲಂಮೇಪುತ್ರಂ ಮುಂಜೋರಾಜ್ಯಲೋಭಾದ್ವಿನಾಶಯಿಷ್ಯತಿ । ತದಾದತ್ತಮಪಿ ರಾಜ್ಯಂವೃಥಾಭವತಿಪುತ್ರಹಾನಿರ್ವಂಶೋಚ್ಛೇದಶ್ಚ.

ಟೀಕಾ॥ ಪೂರ್ವಕಾಲದೋಳ್ ಧಾರಾರಾಜ್ಯದಲ್ಲಿ ಸಿಂಧುಲನೆಂದು ಹೆಸರುಳ್ಳ ರಾಯನು ಬಹುಕಾಲ ಪ್ರಜೆಗಳನ್ನು ಕಾಪಾಡುತ್ತಿದ್ದನು. ಹೀಗಿರಲಾಗಿ ಆತನಿಗೆ ಮುಪ್ಪಿತನದಲ್ಲಿ ಭೋಜನೆಂಬ ಮಗನು ಹುಟ್ಟಿದನು. ಆ ಹುಡುಗನಿಗೆ ಐದುವರುಷಗಳಾಗಲು ತಂದೆಯು ತನ್ನ ಮುದಿತನವನ್ನು ತಿಳಿದುಕೊಂಡು ಮಂತ್ರಿಗಳನ್ನು ಕರೆಸಿ ಯೋಚಿಸಿದ್ದೇನೆಂದರೆ, ನನ್ನ ತಮ್ಮನಾದ ಮುಂಜನು ಬಹಳ ಬಲಿಷ್ಠನು ನನ್ನ ಮಗನಾದರೆ ಐದುವರುಷದ ಹುಡುಗನು

ಆದ್ದರಿಂದ ರಾಜ್ಯವನ್ನಾಳಲು ಸಾಮರ್ಥ್ಯವುಳ್ಳ ತಮ್ಮನನ್ನು ಬಿಟ್ಟು ಬಾಲಕ
ನಾದ ಮಗನಿಗೆ ರಾಜ್ಯವನ್ನು ಕೊಟ್ಟರೆ ಲೋಕದಲ್ಲಿ ನನಗೆ ಅಪವಾದ ಉಂ
ಟಾಗುವದು. ಅಲ್ಲದೆ ಬಲಿಷ್ಠನಾದ ತಮ್ಮನು ರಾಜ್ಯಲೋಭದಿಂದ ಬಾಲ
ನಾದ ನನ್ನ ಮಗನನ್ನು ಕೊಂದುಹಾಕುವನು. ಆಗ ಮಗನಿಗೆ ರಾಜ್ಯ
ಕೊಟ್ಟರೂ ಪ್ರಯೋಜನವಿಲ್ಲವು ಮತ್ತೂ ಪುತ್ರನಾಶ ದುಃಖವೂ ವಂಶನಾ
ಶವೂ ಉಂಟಾಗುವದು. ರಾಜ್ಯಲೋಭವೆಂಬುವುದು ಬಹಳ ಕೆಟ್ಟದ್ದು.
ಹ್ಯಾಗೆಂದರೆ:—

ಶ್ಲೋ॥ ಲೋಭಃಪ್ರತಿಷ್ಠಾಪಾಪಸ್ಯ ಪ್ರಸೂತಿರ್ಲೋಭಏವಚ ।
ದ್ವೇಷಕ್ರೋಧಾದಿಜನಕೋ ಲೋಭಃಪಾಪಸ್ಯಕಾರಣಂ ॥
ಲೋಭಾತ್ಕ್ರೋಧಃಪ್ರಭವತಿ ಕ್ರೋಧಾದ್ದ್ರೋಹಃಪ್ರವರ್ತತೇ ।
ದ್ರೋಹೇಣನರಕಂಯಾತಿ ಶಾಸ್ತ್ರಜ್ಞೋಪಿವಿಚಕ್ಷಣಃ ॥
ಮಾತರಂಪಿತರಂಪುತ್ರಂ ಭ್ರಾತರಂವಾಸುಹೃತ್ತಮಂ ।
ಲೋಭಾವಿಷ್ಟೋನರೋಹಂತಿ ಸ್ವಾಮಿನಂವಾಸಹೋದರಂ ॥

ಟೀ॥ ಲೋಭವು ಅಂದರೆ ಅತ್ಯಾಶೆಯು ಪಾಪಕ್ಕೆ ಆಧಾರವಾದದ್ದು
ಮತ್ತು ಪಾಪವನ್ನುಂಟುಮಾಡುವದು ದ್ವೇಷ, ಕೋಪ ಮೊದಲಾದ ದುರ್ಗು
ಣಗಳನ್ನುಂಟುಮಾಡುವದು ಆದ್ದರಿಂದ ಲೋಭವೇ ಪಾಪಕ್ಕೆ ಕಾರಣವಾ
ಗಿರುವದು. ಮತ್ತೂ ಲೋಭದಿಂದ ಕೋಪ ಉಂಟಾಗುವುದು ಮೋಸವ
ನ್ನು ಮಾಡಬೇಕಾಗುತ್ತೆ. ಆದ್ದರಿಂದ ಎಷ್ಟು ಶಾಸ್ತ್ರಗಳನ್ನು ಓದಿದ
ಬುದ್ಧಿವಂತನುಕೂಡ ಮೋಸ ಮಾಡುವದರಿಂದ ನರಕವನ್ನು ಹೊಂದುವನು.
ಮತ್ತು ಬಹಳ ಲೋಭಿಯಾದ ಮನುಷ್ಯನು ತಾಯಿಯನ್ನಾದರೂ,
ತಂದೆಯನ್ನಾದರೂ, ಮಗನನ್ನಾದರೂ, ಅಣ್ಣತಮ್ಮಂದಿರನ್ನಾದರೂ, ಸ್ನೇಹಿ
ತನನ್ನಾದರೂ, ತನ್ನ ಯಜಮಾನನನ್ನಾದರೂ, ತಮ್ಮನನ್ನಾದರೂ ಕೊಲ್ಲಲು
ಹಿಂಜರಿಯುವದಿಲ್ಲವು.

ಮೂ॥ ಇತಿವಿಚಾರ್ಯರಾಜ್ಯಂಮುಂಜಾಯ ದತ್ವಾತದುತ್ಸಂಗೇಭೋಜಮಾತ್ಮಜಂ
ಮುಮೋಚ । ತತಃಕ್ರಮಾದ್ರಾಜನಿದಿವಂಗತೇ ಸಂಪ್ರಾಪ್ತರಾಜ್ಯ
ಸಂಪತ್ತಿರ್ಮುಂಜೋ ಮುಖ್ಯಾಮಾತ್ಯಂ ಬುದ್ಧಿಸಾಗರ ನಾಮಾನಂ
ವ್ಯಾಪಾರಮುದ್ರಯಾ ದೂರೀಕೃತ್ಯತತ್ಪದೇಅನ್ಯಂ ನಿವೇಶಯಾಮಾಸ
ತತಃಗುರುಭ್ಯಃಕ್ಷಿತಿಪಾಲಪುತ್ರಂಪಾಠಯತಿ ಶೃಣೋತಿಚಶಾಸ್ತ್ರಾಣಿ ತ
ತಃಕ್ರಮೇಣಸಭಾಯಾಂ ಕೋಪಿಜ್ಯೋತಿಶ್ಶಾಸ್ತ್ರಪಾರಂಗತೋ ಸಕಲ

ವಿದ್ಯಾಚಾತುರ್ಯವಾನ್ ಬ್ರಾಹ್ಮಣಸ್ಸಮಾಗಮತ್ ರಾಜೇಂದ್ರಸ್ವಸ್ತೀ
ತ್ಯುಕ್ತ್ವಾ ರಾಜಾಜ್ಞಯಾಉಪವಿಷ್ಟಃಸಚಾಹ ದೇವಲೋಕೇಮಾಂ
ಸರ್ವಜ್ಞಂವದಂತಿ ತತ್ಕಿಮಪಿಪೃಚ್ಛ.

ತಾ॥ ಈ ರೀತಿಯಾಗಿ ಮಂತ್ರಿಗಳೊಡನೆ ಆಲೋಚಿಸಿ ರಾಜ್ಯವನ್ನು ತಮ್ಮನಾದ ಮುಂಜನಿಗೆ ಕೊಟ್ಟು ಅವನ ಹತ್ತಿರದಲ್ಲಿ ಮಗನಾದ ಭೋಜನನ್ನು ಬಿಟ್ಟು ಇದ್ದನು. ಬಳಿಕ ಕೆಲವು ಕಾಲವಾದಮೇಲೆ ರಾಯನು ಮರಣವನ್ನೈದಲು ರಾಜ್ಯಾಭಿಷಿಕ್ತನಾಗಿದ್ದ ಮುಂಜನು ತನ್ನ ಮುಖ್ಯ ಮಂತ್ರಿಯಾದ ಬುದ್ಧಿಸಾಗರನೆಂಬುವನನ್ನು ಬಿಡಿಸಿ ಅವನ ಕೆಲಸದಲ್ಲಿ ಮತ್ತೊಬ್ಬನನ್ನು ಸೇರಿಸಿದನು. ತರುವಾಯ ರಾಜಪುತ್ರನಾದ ಭೋಜನಿಗೆ ಗುರುಜನಗಳಿಂದ ವಿದ್ಯೆಗಳಂ ಕಲಿಸಿ ಆ ಹುಡುಗನ ವಿದ್ಯಾ ಕೌಶಲ್ಯಕ್ಕೆ ಸಂತೋಷಿಸುತ್ತಿರಲು ಒಂದಾನೊಂದುದಿನ ತನ್ನ ಸಭೆಗೆ ಒಬ್ಬಾನೊಬ್ಬ ಜ್ಯೋತಿಶ್ಶಾಸ್ತ್ರ ನಿಪುಣನಾದ ಜೋಯಿಸನು ಬಂದು ರಾಜನನ್ನಾಶೀರ್ವದಿಸಿ ರಾಜಾಜ್ಞೆಯಿಂದ ಕುಳಿತುಕೊಂಡು ರಾಜನನ್ನು ಕುರಿತು ಎಲೌ ಪೂಜ್ಯನಾದ ಧೊರೆಯೆ ಲೋಕದಲ್ಲಿ ನನ್ನನ್ನೆಲ್ಲರೂ ಸರ್ವಜ್ಞನೆಂದು ಹೇಳುವರು ಆದ್ದರಿಂದ ನನ್ನನ್ನು ಏನಾದರೂ ಕೇಳಬಹುದು. ಯಾಕಂದರೆ—

ಮೂ॥ ಕಂಠಸ್ಥಾಯಾಭವೇದ್ವಿದ್ಯಾ ಸಾಪ್ರಕಾಶ್ಯಾಸದಾಬುಧೈಃ ।
ಯಾಗುರೌಪುಸ್ತಕೇವಿದ್ಯಾ ತಯಾಮೂಢಃಪ್ರತಾರ್ಯತೇ ॥

ಲೋಕದಲ್ಲಿ ಯಾವ ಮನುಷ್ಯನು ವಿದ್ಯೆಗಳನ್ನು ಕಂಠಪಾಠವಾಗಿಟ್ಟುಕೊಂಡಿರುವನೋ ಅಂಥವನನ್ನು ವಿದ್ವಾಂಸರು ಹೊಗಳುವರು. ಯಾರ ವಿದ್ಯೆಯಾದರೆ ಹೇಳಿಕೊಟ್ಟವರಲ್ಲಿಯೂ ಪುಸ್ತಕಗಳಲ್ಲಿಯೇ ಇರುವುದೊ ಅಂಥವನನ್ನು ಮೂಢನೆನ್ನುವರು ಆದ್ದರಿಂದ ನೀನು ನನ್ನನ್ನೇನಾದರೂ ಕೇಳಬಹುದು. ಎಂದು ರಾಯನನ್ನು ಕುರಿತು ಹೇಳಲು.

ಮೂ॥ ಗ॥ ತತೋರಾಜಾಪಿ ವಿಪ್ರಸ್ಯಾಹಂಭಾವಮುದ್ರಯಾ । ಚಮತ್ಕೃ
ತಾಂತದ್ವಾರ್ತಾಂಶ್ರುತ್ವಾ ಅಸ್ಮಾಕಂಜನ್ಮಾರಭ್ಯೇತಕ್ಷಣಪರ್ಯಂತಂ
ಯದ್ಯನ್ಮಯಾಚರಿತಂ । ತತ್ಸರ್ವಂವದಸಿಯದಿಭವಾನ್ಸರ್ವಜ್ಞ
ಏವೇತ್ಯುವಾಚ ॥

ತಾ॥ ಬಳಿಕ ರಾಯನಾದರೊ ಆ ಜೋಯಿಸನ ಅಹಂಭಾವದಿಂದ ಕೂಡಿದ ಚಮತ್ಕಾರವಾದ ಆ ಸಮಾಚಾರವನ್ನು ಕೇಳಿದವನಾಗಿ ಎಲೌ ಜೋಯಿಸನೇ ನಾನು ಹುಟ್ಟಿದ ಮೊದಲ್ಗೊಂಡು ಇದುವರಿವಿಗೂ ಏನೇ

ನನ್ನು ಪೊಡ್ಡಿರುವೆನೊ ಅದೆನ್ನೆಲ್ಲನನ್ನೂ ಹೇಳಿದವಕ್ಷದಲ್ಲಿ ನೀನು ಸರ್ವಜ್ಞನೇ ಅಹುದು. ಎಂದು ಹೇಳಿದನು

ಗದ್ಯ॥ ತತೊಬ್ರಾಹ್ಮಣೋಹಿರಾಜ್ಞಾಯದ್ಯತ್ಕೃತಂ ತತ್ಸರ್ವಮುವಾಚಗೂಢವ್ಯಾಪಾರಮಪಿ । ತತೋರಾಜಾಸರ್ವಜ್ಞಇತಿಜ್ಞಾನಾಸಿಜ್ಞಾತ್ವಾತುತೋಷ ಪುಷ್ಪವಂಚಷಟ್ಟದಾನಿಗತ್ವಾವಿಪ್ರಸ್ಯಪಾದಯೋಃ ಪತಿತ್ವಾತದಿಂದ್ರನೀಲ ಪುಷ್ಯರಾಗಮರಕತವೈಢೂರ್ಯ ಖಚಿತಸಿಂಹಾಸನೇಉಪವೇಶ್ಯರಾಜಾಪ್ರಾಹ.

ತಾ॥ ಆನಂತರ ಭೋಜಯೆಸನು ರಾಜನು ಹೇಳಿದಂತೆ ಆತನು ಹುಟ್ಟಿದ ವೊದಲ್ಗೊಂಡು ಮಾಡಿದ ಬಹಳ ಗುಟ್ಟಾದ ಕೆಲಸಗಳನ್ನೂ ಕೂಡ ಹೇಳಲು ಧೊರೆಯು ಸಂತೋಷಪಟ್ಟು ಅನನು ಹೇಳಿದವುಗಳನ್ನೆಲ್ಲಾ ನಿಜ್ಜಯವೆಂದು ತಿಳಿದುಕೊಂಡು ಐದಾರು ಹೆಜ್ಜೆ ಹೋಗಿ ಬ್ರಾಹ್ಮಣನ ಪಾದಗಳಿಗೆರಗಿ ಆತನನ್ನು ದಿವ್ಯರತ್ನ ಖಚಿತವಾದ ಪೀಠದಮೇಲೆ ಕುಳ್ಳಿರಿಸಿ ಹೇಳಿದ್ದೇನೆಂದರೆ-

ಶ್ಲೋ॥ ಮಾತೇವರಕ್ಷತಿಪಿತೇವಹಿತೇನಿಯುಙ್ಕ್ತೇ ।
ಕಾಂತೇವಚಾಭಿರಮಯತ್ಯಪನೀಯಖೇದಂ ॥
ಕೀರ್ತಿಂಚದಿಕ್ಷುವಿಮಲಾಂವಿತನೋತಿ ।
ಲಕ್ಷ್ಮೀಂಕಿಂಕಿಂನಸಾಧಯತಿಕಲ್ಪಲತೇವವಿದ್ಯಾ ॥

ಗ॥ಇತ್ಯುಕ್ತ್ವಾಸರಾಜಾವಿಪ್ರವರಾಯ ದಶಾಶ್ವಾನಾಜಾನೇಯಾನ್ದದೌ॥

ತಾ॥ ಎಲೈ ಬ್ರಾಹ್ಮಣನೇ ವಿದ್ಯೆಯೆಂಬುವುದು ತಾಯಿಯಂತೆ ಕಾಪಾಡುವುದು, ತಂದೆಯಂತೆ ಒಳ್ಳೆಮಾರ್ಗದಲ್ಲಿರುವಂತೆ ಅಪ್ಪಣೆಮಾಡುವುದು ಮತ್ತು ಹೆಂಡತಿಯಂತೆ ತನಗುಂಟಾದ ದುಃಖವನ್ನು ಹೋಗಲಾಡಿಸಿ ಮನಸ್ಸಂತೋಷವನ್ನುಂಟು ಮಾಡುವುದು. ಅಲ್ಲದೆ ನಾನಾ ದಿಕ್ಕುಗಳಲ್ಲಿಯೂ ನಿರ್ಮಲವಾದ ಕೀರ್ತಿಯನ್ನುಂಟು ಮಾಡುವುದು. ಮತ್ತೂ ಐಶ್ವರ್ಯವನ್ನು ಹೆಚ್ಚಿಸುವದು. ಆದ್ದರಿಂದ ವಿದ್ಯೆಯು ಯಾರಿಗಿರುತ್ತದೆಯೋ ಅಂಥವರಿಗೆ ಯಾವ ವಸ್ತುತಾನೇ ಕಮ್ಮಿಯಾಗಿರುವದು. ಆದ್ದರಿಂದ ವಿದ್ಯೆಯನ್ನು ಕಲ್ಪವೃಕ್ಷಕ್ಕೆ ಸಮಾನವೆಂದು ಹೇಳುವರು, ಯೆಂಬುದಾಗಿ ಹೇಳಿ ರಾಜನು ಆ ಬ್ರಾಹ್ಮಣೋತ್ತಮನಿಗೆ ಅತ್ಯುತ್ತಮವಾದ ಹತ್ತು ಕುದುರೆಗಳನ್ನು ಕೊಟ್ಟನು.

ಗ॥ ತತಸ್ಸಭಾಯಾಮವಾಸೀನೊ ಬುದ್ಧಿಸಾಗರಃ। ಪ್ರಾಹರಾಜಾನಂ ದೇವ ಭೋಜಸ್ಯ ಜನ್ಮಪತ್ರಿಕಾಮೇತಂ ಬ್ರಾಹ್ಮಣಂ ಪೃಚ್ಛೇತಿ । ತತೋಮುಂಜಃಪ್ರಾಹ । ವಿದ್ವನ್ ಭೋಜಸ್ಯ ಜನ್ಮಪತ್ರಿಕಾಂ ವಿಧೇಹಿ

ತಿ ತತೋ ರಾಜಾ ಬ್ರಾಹ್ಮಣಮುವಾಚ॥ ಅಧ್ಯಯನಶಾಲಾಯಾಂ ಭೋ ಆನೇತವ್ಯ ಇತಿ । ಪುಂಭಿಃ ಪ್ರೇಷಿತೈಸ್ತತ್ರ ಕೌತುಕಾದಧ್ಯಯನ ಶಾಲಾಮಲಂಕುರ್ವಾಣಂ ಭೋಜಂ [illegible] ಸಭಾಂ ॥ ತತಸ್ಸ ಕ್ಷತ್ರಿಯವರೋ ರಾಜಾನಂ ಪ್ರಣಮ್ಯ ಸವಿನಯಂ ತಸ್ಥೌ ತತಸ್ತದ್ರೂಪಮವಲೋಕಯಂತೇ ರಾಜಕುಮಾರಮಂಡಲ ಪ್ರಭೂತಸೌಭಾಗ್ಯಂ ಮಹೀಮಂಡಲಮಾಗತಂ ಮಕರಧ್ವಜಮಿವ ಸಾಕಾರಂ ಮನ್ಮಥಮಿವ ॥ [illegible] । ದೈವಜ್ಞಶಿಖಾಮಣಿಃ ರಾಜಾನಮಾಹ ॥ ರಾಜನ್ ಭೋಜಸ್ಯ ಭಾಗ್ಯೋದಯಂ ವಕ್ತುಂ । ವಿರಿಂಚೋಽಪಿ ನಾಲಂ ॥ ಕೋಹಮುದರಂಭರಿಃ ಬ್ರಾಹ್ಮಣಃ ತಥಾಪಿ ವದಾಮಿ ಸ್ವಮತ್ಯನುಸಾರೇಣ । ಭೋಜಮಧ್ಯಯನಶಾಲಾಯಾಂ ಪ್ರೇಷಯ ॥ ತತೋ ರಾಜಾಜ್ಞಯಾ ಭೋಜೇ ಅಧ್ಯಯನಶಾಲಾಂ ಗತೇ ದೈವಜ್ಞಶಿಖಾಮಣಿರ್ವಿಪ್ರಃ ಪ್ರಾಹ ॥

ತಾ॥ ಆ ವೇಳೆ ಸಭೆಯೊಳಗೆ ಕುಳಿತಿದ್ದ ಬುದ್ಧಿಸಾಗರನು ರಾಜನನ್ನು ಕುರಿತು ಹೇಳಿದ್ದೇನಂದರೆ, ಸ್ವಾಮಿ ಬಾಲಕನಾದ ಭೋಜನ ಜನ್ಮಪತ್ರಿಕೆಯನ್ನು ತೋರಿಸಿರಿ ಎನ್ನಲಾಗ ರಾಯನು ಭೋಜನ ಜಾತಕವನ್ನು ಆ ಜೋಯಿಸನ ಕೈಗೆ ಕೊಟ್ಟನು. ಆಗ ಜೋಯಿಸನು, ಭೋಜನನ್ನು ಪಾಠಶಾಲೆಯಿಂದ ಕರೆಸಬೇಕೆಂದು ಹೇಳಲು, ದೊರೆಯು ಭಟರ ಕಡೆ ನೋಡಲಾಗಿ ಆಕ್ಷಣವೇ ರಾಜಾಜ್ಞೆಯಂತೆ ಭೋಜನನ್ನು ಕರೆತಂದರು. ಆಗ ಪಾಠಶಾಲೆಯಿಂದ ಬಂದ ಭೋಜನು ಚಿಕ್ಕ ತಂದೆಯಾದ ರಾಯನನ್ನು ತಂದೆಗಿಂತಲೂ ಹೆಚ್ಚಾದ ಮರ್ಯಾದೆಯಿಂದ ನಮಸ್ಕಾರಮಾಡಿ, ನಮ್ರನಾಗಿ ನಿಂತಿದ್ದನು. ಹಾಗೆ ನಿಂತಿರುವ ಭೋಜಕುಮಾರನ ರೂಪಲಾವಣ್ಯಗಳನ್ನು ನೋಡಿ ಸಭೆಯಲ್ಲಿದ್ದ ರಾಜಪಿಂಡೆಯವರು ಬೆರಗಾಗುತ್ತಿರಲು, ಕಾಂತಿಯ ಸಮುದಾಯವೇನಾದರೂ ಈ ರೂಪದಿಂದವತರಿಸಿರುವದೊ ಅಲ್ಲದೆ ದೇವೇಂದ್ರನೇನಾದರೂ ಭೂಲೋಕಕ್ಕಿಳಿದುಬಂದಿರುವನೊ ಒಂದುವೇಳೆ ಅನಂಗನಾದ ಮನ್ಮಥನು ರೂಪವನ್ನು ತಾಳಿರುವನೊ ಮೂರ್ತಿಭವಿಸಿರುವ ಸೌಭಾಗ್ಯಶ್ರೀ ಎಂಬಂತಿರುವ ಭೋಜಕುಮಾರನನ್ನು ನೋಡಿದ ದೈವಜ್ಞಶಿಖಾಮಣಿಯು ರಾಯನನ್ನು ಕುರಿತು ಎಲೌ ಪ್ರಭುವೇ ! ಭೋಜನ ಭಾಗ್ಯೋದಯವನ್ನು ಹೇಳಲು ಬ್ರಹ್ಮಾದಿಗಳಿಗೂ ಅಳವಲ್ಲವು. ಹೀಗಿರಲು ಅಲ್ಪಜ್ಞನಾದ ಹೊಟ್ಟೆ ತುಂಬಿಕೊಳ್ಳುವ ನಾನು ಹೇಳುವದೇನು ? ಆದರೂ ತಿಳಿ

ದನ್ನು ಹೇಳುತ್ತೇನೆ. ಈ ಮುಗನನ್ನು ಪಾಠಶಾಲೆಗೆ ಕಳುಹಿಸಬೇಕೆನ್ನಲು ಅದರಂತೆ ಬೋಜನನ್ನು ಪಾಠಶಾಲೆಗೆ ಕಳುಹಿಸಿದ ಮೇಲೆ ಜೋಯಿಸನು ಹೇಳುತ್ತಾನೆ.

ಶ್ಲೋ॥ ಪಂಚಾಶತ್ಪಂಚವರ್ಷಾಣಿ ಸಪ್ತಮಾಸಾದಿನತ್ರಯಂ ।
ಭೋಜರಾಜೇನಭೋಕ್ತವ್ಯ ಸ್ಸಗೌಡೋದಕ್ಷಿಣಾಪಥಃ ॥

ತಾ॥ ಭೋಜರಾಯನು ಐವತ್ತೈದು ವರುಷಗಳು, ಏಳು ತಿಂಗಳು, ಮೂರು ದಿನಗಳು, ಗೌಡದೇಶಸಹಿತವಾಗಿ ದಕ್ಷಿಣದೇಶವನ್ನು ಆಳುತ್ತಾನೆ.

ಗ॥ ಇತಿಪ್ರಾಹ. ತಾ॥ ಹೀಗೆ ಹೇಳಿದನು.

ವ॥ ತತ್ತದಾಕರ್ಣ್ಯರಾಜಾ ಜಾತುರ್ಯ್ಯಾದಪಹಸನ್ನಿವಸುಮುಖೋಪಿ ವಿಚ್ಛಾಯವದನೋಭೂತ್ ತತೋರಾಜಾಬ್ರಾಹ್ಮಣಂ ಪ್ರೇಷಯಿತ್ವಾ ನಿಶೀಥೆ ಸ್ವಶಯನಪ್ರಾಸಾದಮಾಸಾದ್ಯ ಏಕಾಕೀನನ್ವ್ಯಚಿಂತಯತ್ ಯದಿರಾಜ್ಯಲಕ್ಷ್ಮೀರ್ಭೋಜಕುಮಾರಂಗಮಿಷ್ಯತಿತದಾಹಂಜೀವನ್ನಪಿಮೃತಃ ॥

ತಾ॥ ದೊರೆಯಾದ ಮುಂಜರಾಯನು ಆ ಮಾತನ್ನು ಕೇಳಿ ನಗುವವನಂತೆ ನಗೆಮೊಗವುಳ್ಳವನಾಗಿದ್ದರೂ ಕಂಗೆಟ್ಟ ಮುಖವುಳ್ಳವನಾದನು. ಬಳಿಕ ಮುಂಜರಾಯನು ಬ್ರಾಹ್ಮಣನನ್ನು ಕಳುಹಿಸಿ ತಾನು ಶಯ್ಯಾಗೃಹವನ್ನು ಹೊಕ್ಕು ನಿದ್ರೆ ಬಾರದೆ ರಾಜ್ಯ ಲಕ್ಷ್ಮಿಯು ಭೋಜನ ಅಧೀನವಾದ ಪಕ್ಷದಲ್ಲಿ ತಾನು ಬದುಕಿದ್ದರೂ ಸತ್ತವನಂತೆ ಇರಬೇಕಾಗುವದೆಂದು ಯೋಚಿಸಿದನು. ಅದೆಂತೆಂದರೆ—

ಶ್ಲೋ॥ ತಾನೀಂದ್ರಿಯಾಣ್ಯವಿಕಲಾನಿತದೇವನಾಮ
ಸಾಬುದ್ಧಿರಪ್ರತಿಹತಾವಚನಂತದೇವ ॥
ಅರ್ಥೋಷ್ಮಣಾವಿರಹಿತಃ ಪುರುಷಃಕ್ಷಣೇನ ।
ಸೋಪ್ಯನ್ಯಏವಭವತೀತಿವಿಚಿತ್ರಮೇತತ್ ॥

ತಾ॥ ಹಣಗಾರನಾಗಿದ್ದು ಬಡವನಾದರೂ ಉನ್ನತ ಪದವಿಯುಳ್ಳಿದ್ದು ಹೀನಸ್ಥಿತಿಗೆ ಬಂದರೂ ಬಡವನು ಪುಣ್ಯವಂತನಾದರೂಕೂಡ ಲೋಕದಲ್ಲಿ ತನ್ನ ಕಣ್ಣು ಮೂಗು ಮೊದಲಾದ ಇಂದ್ರಿಯಗಳೂ ತನ್ನ ಹೆಸರೂ ಬುದ್ಧಿ ಮಾತೂಕೂಡಾ ಮೊದಲಿನಂತೆಯೇ ಇದ್ದಾಗ್ಯೂ ಆ ಬದಲಾಯಿಸಿದ ಮನುಷ್ಯನು ಬೇರೆ ಮನುಷ್ಯನೇ ಆಗುವನು. ಇದು ಆಶ್ಚರ್ಯವಾದ ವಿಷಯವು ಅಲ್ಲದೆ—

ಶ್ಲೋ॥ ಶರೀರತನಿರಪೇಕ್ಷ ಸ್ಯದಕ್ಷಸ್ಯವ್ಯವಸಾಯಿನಃ ।

ಬುದ್ಧಿಪ್ರಾರಬ್ಧಕಾರ್ಯಸ್ಯ ನಾಸ್ತಿಕಿಂಚನದುಷ್ಕರಂ ॥

ತಾ॥ ದೇಹಾಭಿಮಾನವಿಲ್ಲದ ಶಕ್ತನಾದ ಪುರುಷ ಪ್ರಯತ್ನಗಳಿಂ ಮತ್ತು ಬುದ್ಧಿಯಿಂದ ಕಾರ್ಯಾರಂಭವಮಾಡುವ ಮನುಷ್ಯನಿಗೆ ಅಸಾಧ್ಯಕಾರ್ಯವಾವುದೂ ಇರುವದಿಲ್ಲವು. ಮತ್ತೂ

ಶ್ಲೋ॥ ಅಸೂಯಯಾಹತೇನೈವ ಪೂರ್ವೋಪಾಯೋದ್ಯಮೈರಪಿ ।
ಕರ್ತೄಣಾಂಗೃಹ್ಯತೇಸಂಪತ್ಸುಹೃದ್ಭಿರ್ಮಂತ್ರಿಭಿಸ್ತಥಾ.

ತಾ॥ ಯಜಮಾನನ ಅಂದರೆ ಧೊರೆಯ ಐಶ್ವರ್ಯವು ಅವರ ಹೊಟ್ಟೆಕಿಚ್ಚಿನಿಂದಲೂ, ಅವರ ಹಠದಿಂದಲೂ ಸಕಲೋಪಾಯ ಪ್ರಯತ್ನಗಳಿಂದಲೂ ಸ್ನೇಹಿತರಿಂದಲೂ, ಮಂತ್ರಿಗಳಿಂದಲೂ ಅಪಹರಿಸಲ್ಪಡುವದು.

ಮೂ॥ ತತೋದ್ಯಮೇಕಿಂದುಸ್ಸಾಧ್ಯಂ ॥

ತಾ॥ ಆದ್ದರಿಂದ ಪ್ರಯತ್ನದಲ್ಲಿ ಯಾವದುತಾನೆ ಅಸಾಧ್ಯವು.

ಶ್ಲೋ॥ ಅತಿದಾಕ್ಷಿಣ್ಯಯುಕ್ತಾನಾಂ ಶಂಕಿತಾನಾಂಪದೇಪದೇ ।
ಪರಾಪವಾದಭೀರೂಣಾಂ ದೂರತೋಯಾಂತಿಸಂಪದಃ ॥

ತಾ॥ ಬಹಳ ದಾಕ್ಷಿಣ್ಯವುಳ್ಳವರಿಗೂ ಬಾರಿಬಾರಿಗೂ ಸಂಶಯವುಮನಸ್ಸುಳ್ಳವರಿಗೂ, ಪರಾಪವಾದಕ್ಕೆ ಹೆದರುವವರಿಗೂ ಸಂಪತ್ತುಗಳುಂಟಾಗಲಾರವು.

ಶ್ಲೋ॥ ಆದಾನಸ್ಯ ಪ್ರದಾನಸ್ಯ ಕರ್ತವ್ಯಸ್ಯಚಕರ್ಮಣಃ । ಕ್ಷಿಪ್ರಮಕ್ರಿಯ
ಮಾಣಸ್ಯಕಾಲಃ ಪಿಬತಿಸಂಪದಃ ॥

ತಾ॥ ಅಲ್ಲದೆ ತೆಗೆದುಕೊಳ್ಳಬೇಕಾಗಿರಲಿ ಕೊಡಬೇಕಾಗಿರಲಿ ಯಾವದಾದರೂ ಕೆಲಸವನ್ನು ಮಾಡಬೇಕಾಗಿರಲಿ ಅಂಥಾದ್ದನ್ನು ಬೇಗಮಾಡದಿದ್ದರೆ ಅಂಥವನ ಸಂಪತ್ತುಗಳನ್ನು ಕಾಲವು ಕಸುಕೊಳ್ಳುತ್ತದೆ.

ಶ್ಲೋ॥ ಅಪಮಾನಂ ಪುರಸ್ಕೃತ್ಯಮಾನಂ ಕೃತ್ವಾಚಪೃಷ್ಠತಃ । ಸ್ವಾರ್ಥಂ
ಸಮುದ್ಧರೇತ್ಪ್ರಾಜ್ಞಃ ಸ್ವಾರ್ಥಭ್ರಂಶೋಹಿಮೂರ್ಖತಾ ॥

ತಾ॥ ಬುದ್ಧಿವಂತನಾದವನು ಮಾನವನ್ನು ತೊರೆದು ಅಪಮಾನವನ್ನು ಮುಂದಿಟ್ಟುಕೊಂಡು ತನ್ನ ಕೆಲಸವನ್ನು ಮಾಡಿಕೊಳ್ಳಬೇಕು, ಅಪಮಾನವಾಗುವುದೆಂದು ತನ್ನ ಪ್ರಯೋಜನವನ್ನು ಕಳಕೊಳ್ಳುವನೇ ಮೂರ್ಖನು.

ಶ್ಲೋ॥ ನಸ್ವಲ್ಪಸ್ಯ ಕೃತೇಭೂರಿನಾಶಯೇನ್ಮತಿಮಾನ್ನರಃ । ಏತದೇವಾತ್ರಪಾಂ
ಡಿತ್ಯಂ ಯತ್ಸ್ವಲ್ಪಾದ್ಭೂರಿರಕ್ಷಣಂ ॥

ತಾ॥ ಒಂದು ಅಲ್ಪ ಕಾರ್ಯದಿಂದ ದೊಡ್ಡ ಕೆಲಸವು ನಾಶವಾಗುವದುಂಟು

ಆದ್ದರಿಂದ ಬುದ್ಧಿವಂತನಾದವನು, ಸ್ವಲ್ಪಕಾರ್ಯಕ್ಕೋಸ್ಕರ ಅಧಿಕ ಕಾರ್ಯವನ್ನು ಹೋಗಲಾಡಿಸಿಕೊಳ್ಳದೇ ಇರಬೇಕು ಇದೇನೇ ಪಾಂಡಿತ್ಯವು.

ಶ್ಲೋ॥ಜಾತಮಾತ್ರಂನಯಶ್ಶತ್ರುಂ ವ್ಯಾಧಿಂಚಾಪ್ರಶಮಂನಯೇತ್ ।
    ಅತಿಪುಷ್ಟಾಂಗಯುಕ್ತೋಽಪಿ ಸಪಶ್ಚಾತ್ತೇನಹನ್ಯತೆ ॥

ತಾ॥ ಬುದ್ಧಿಶಾಲಿಯಾದವನು ರೋಗ ಹುಟ್ಟಿದರೂ, ಶತ್ರುವು ಹುಟ್ಟಿಕೊಂಡರೂ ಕೂಡ ಆ ತತ್ಕ್ಷಣದಲ್ಲಿಯೇ ಅದು ನಾಶವಾಗುವಂತೆ ಯತ್ನಿಸಬೇಕು. ಹಾಗೆ ಮಾಡದೆ ತಾನು ಘಟ್ಟಿಗನೆಂದೂ ದೃಢಾಂಗನೆಂದೂ ಸುಮ್ಮನಿದ್ದರೆ ಅವು ನಾಶಮಾಡದೇ ಬಿಡವು.

ಶ್ಲೋ॥ಪ್ರಜಾಗುಪ್ತಶರೀರಸ್ಯ ಕಿಂಕರಿಷ್ಯಂತಿಸಂಹತಾಃ ।
    ಹಸ್ತನ್ಯಸ್ತಾತಪತ್ರಸ್ಯ ವಾರಿಧಾರಾಇವಾರಯಃ ॥

ತಾ॥ ಕೊಡೆಯನ್ನು ಹಿಡಿದವನನ್ನು ಮಳೆಹನಿಗಳು ಹ್ಯಾಗೆ ಏನನ್ನೂ ಮಾಡಲಾರವೊ ಹಾಗೆ ಪ್ರಜೆಗಳಿಂದ ಕಾಪಾಡಲ್ಪಡುವ ಅರಸನನ್ನು ಶತ್ರುಗಳೇನನ್ನು ತಾನೆ ಮಾಡುವರು.

ಶ್ಲೋ॥ಅಫಲಾನಿದುರಂತಾನಿ ಸಮವ್ಯಯಫಲಾನಿಚ ।
    ಅಶಕ್ಯಾನಿಚಕಾರ್ಯಾಣಿ ನಾರಭೇತವಿಚಕ್ಷಣಃ ॥

ತಾ॥ಬುದ್ಧಿಶಾಲಿಯಾದವನು, ಪ್ರಯೋಜನವಿಲ್ಲದ, ಕೊನೆಸಾಗದ, ಆದಾಯ ನಷ್ಟಗಳಿಲ್ಲದ ಕೈಲಾಗದ ಕೆಲಸಗಳನ್ನು ಮಾಡಬಾರದು.

ಗ॥ ತತಶ್ಚೈವಂವಿಚಿಂತಯನ್ನು ಭುಕ್ತ್ವಾವಿವಿನಕ್ತಾತ್ರಿಯೆಯಾಮೇಏಕ ಏವಮಂತ್ರಯಿತ್ವಾವಂಗದೇಶಾಧೀಶ್ವರಸ್ಯಮಹಾಬಲಸ್ಯ । ವತ್ಸರಾಜಸ್ಯಾಹ್ವಾನಾಯ ಏಕೈಕಮಂಗರಕ್ಷಕಂಪ್ರಹಿಣೋತ್ । ಸಚಾಂಗರಕ್ಷಕೋವತ್ಸರಾಜಮುಪೇತ್ಯಪ್ರಾಹರಾಜಾ ತ್ವಾಮಾಕಾರಯತೀತಿತತಸ್ಸರಥಮಾರುಹ್ಯಪರಿವಾರೇಣಪರಿವೃತಃ ಸಮಾಗತೋ ರಥಾದವತೀರ್ಯ ರಾಜಭವನಮಾಸಾದ್ಯ ರಾಜಾನಮನಸ್ಕೃತ್ಯತದುಪದಿಷ್ಟೇಪೀಠೇಉಪವಿಷ್ಟಃ ರಾಜಾಚತಮೇಕಾಂತೇನಿರ್ಜನಂವಿಧಾಯವತ್ಸರಾಜಂಪ್ರಾಹ ॥

ತಾ॥ ಬಳಿಕ ಈ ರೀತಿಯಾಗಿ ಆಲೋಚಿಸಿ ಊಟವನ್ನು ಮಾಡಿದ ಬೆಳಗಿನ ಮೂರನೇ ಝಾಮದಲ್ಲಿ ಒಬ್ಬನೇ ಆಲೋಚಿಸಿ ಮಹಾರಾಜನಾದ ವಂಗದೇಶಾಧಿಪತಿಯಾದ ವತ್ಸರಾಜನನ್ನು ಕರಿಸಲು ತನ್ನ ದೂತನೊಬ್ಬನನ್ನು ಕಳುಹಿಸಲಾಗಿ ಅವನು ವತ್ಸರಾಜನ ಬಳಿಗೆ ಹೋಗಿ ಮುಂಜರಾಯನು ತಮ್ಮನ್ನು ಕರೆದುಕೊಂಡು ಬರುವಂತೆ ಹೇಳಿ ಕಳುಹಿಸಿದನೆಂದು

ಹೇಳಲಾಗಿ ಆ ವಂಗಾಧಿಪತಿಯಾದ ವತ್ಸರಾಜನು ತನ್ನ ರಥವನ್ನೇರಿ ಪರಿವಾರ ದೊಡನೆ ಪರಿವೃತನಾಗಿ ಬಂದು ರಥವಿಂಬಿಳಿದು ರಾಜನರಮನೆಯಂ ಪೊಕ್ಕು ರಾಜನನ್ನು ನೋಡಿ ನಮಸ್ಕರಿಸಿ ಕಾಳ್ತುಕೊಂಡನು. ಬಳಿಕ ಧೊರೆಯಾದ ಮುಂಜನು ನಿರ್ಜನವಾಗಿದ್ದ ಸೌಧದೊಳ್ ವತ್ಸರಾಯನನ್ನು ಕುರಿತಿಂ ತೆಂದನು.

ಶ್ಲೋ॥ ರಾಜಾತುಷ್ಟೋಪಿಭೃತ್ಯಾನಾಂ ಮಾನಮಾತ್ರಂಪ್ರಯಚ್ಛತಿ ।
ತೇತುಸನ್ಮಾನಿತಾಸ್ತಸ್ಯ ಪ್ರಾಣೈರಪ್ಯುಪಕುರ್ವತೇ ॥

ತಾ॥ ಧೊರೆಯು ತಮ್ಮ ಭೃತ್ಯರ ವಿಷಯದಲ್ಲಿ ಎಷ್ಟು ಪ್ರೀತಿಯುಳ್ಳವ ರಾದರೂ ಮರ್ಯಾದೆಯನ್ನು ಮಾತ್ರ ಕೊಡುವರು. ಭೃತ್ಯರಾದರೊ ಆ ಮ ರ್ಯಾದೆಯನ್ನು ಹೊಂದಿ ತಮ್ಮ ಪ್ರಾಣಗಳನ್ನಾದರೂ ಕೊಟ್ಟು ಉಪಕಾರ ಮಾಡುವರು.

ಗ॥ ವತ್ಸತತಸ್ತ್ವಯಾಭೋಜೋ ಭುವನೇಶ್ವರೀವಿಪಿನೇಹಂತವ್ಯಃ। ಪ್ರಥಮ ಯಾಮೇನಿಶಾಯಾಶ್ಶಿರಶ್ಚಾಂತಃಪುರಮಾನೇತವ್ಯ ಇತಿ ॥ ಸಚೋತ್ಥಾ ಯನೃಪಂನತ್ವಾಹ ದೇವಾದೇಶೋಽಪ್ರಮಾಣಂ । ತಥಾಪಿಭವಲ್ಲಾಲ ನಾತ್ಕಿಂಚಿವಕ್ತುಕಾಮೋಸ್ಮಿತತಸ್ಸಾಪರಾಧಮಪಿಮೇವಚಃಕ್ಷಂತವ್ಯಂ॥

ತಾ॥ ಆದ್ದರಿಂದ ಎಲೈ ವತ್ಸರಾಯನೇ ! ಭೋಜನನ್ನು ಭುವನೇ ಶ್ವರೀ ಕಾಡಿನಲ್ಲಿ ಕೊಂದು ರಾತ್ರಿಯ ಮೊದಲನೇ ಝಾಮದಲ್ಲಿಯೇ ಭೋ ಜನ ತಲೆಯನ್ನು ತಂತಕ್ಕದ್ದೆಂದು ಹೇಳಲಾಗಿ ಆ ವತ್ಸರಾಯನು ಮಹಾ ಸ್ವಾಮಿ ಅಪ್ಪಣೆಯಂತೆಯೇ ಆಗಲಿ. ಆದರೂ ತಾವು ನಮಿಗೆ ದಯಮಾಡಿಕೊ ಟ್ಟಿರುವ ಸಲಿಗೆಯಿಂದ ಒಂದು ಮಾತನಾಡಬೇಕೆಂದಿರುವೆನು. ದಯಮಾಡಿ ಅದರಲ್ಲಿ ತಪ್ಪಿದ್ದರೂ ಕ್ಷಮಿಸಬೇಕೆಂದು ಹೇಳಿದನು.

ಶ್ಲೋ॥ ಭೋಜೇದ್ರವ್ಯಂನಸೇನಾವಾ ಪರಿವಾರೋಬಲಾನ್ವಿತಃ ।
ಪದಂಪ್ರೋತಇವಾಸ್ತ್ಯದ್ಯ ಸಹಂತವ್ಯಃಕಥಂಪ್ರಭೋ ॥

ತಾ॥ ಎಲೌ ಧೊರೆಯೇ। ಭೋಜನಲ್ಲಿ ಹಣವಾಗಲಿ, ಸೇನೆಯಾದರೂ, ಬಲಸತ್ತ್ವರವಾದ ಪರಿವಾರವಾದಾಗ್ಯೂ ಇರುವದಿಲ್ಲವು. ಅಲ್ಲದೆ ಅವನು ಏನೂ ತಿಳಿಯದ ಮಗುವಾಗಿರುವನು. ಅಂಥವನನ್ನು ಹ್ಯಾಗೆ ಕೊಲ್ಲುವುದು?

ಶ್ಲೋ॥ ಪಾರಂಪರ್ಯಇವಾಸಕ್ತಸ್ತ್ವತ್ಪದಲುದರಂಭರಿಃ ।
ತದ್ವದೇಕಾರಣಂನ್ಯೈವ ಪಶ್ಯಾಮಿನೃಪಪುಂಗವ ॥

ತಾ॥ ಮತ್ತು ಎಂಬಿನಂತೆ ತಮ್ಮ ಪಾದಸನ್ನಿಧಾನದಲ್ಲಿ ಹೊಟ್ಟೆಯನ್ನು

ಮಹತ್ತ್ವ ಹೊರಕೊಳ್ಳುತ್ತಿರುವ ಆ ಭೋಜಕುಮಾರನನ್ನು ಕೊಲ್ಲಲು ಏನು ಕಾರಣವೂ ತೋರುವುದಿಲ್ಲವಲ್ಲಾ ಎಂದು ಹೇಳಿದನು.

೧॥ ತತೋರಾಜಾಮುಂಜಃ ಪ್ರಾತಸ್ಸಭಾಯಾಂಪ್ರವೃತ್ತಂ ವೃತ್ತಾಂತಮಕಥ
ಯತ್ । ಸಚವತ್ಸರಾಜಃಪ್ರಹಸನ್ನಾಹದೇವಾಕರ್ಣಯ ॥

ತಾ॥ ಬಳಿಕ ಮುಂಜರಾಯನು ಪ್ರಾತಃಕಾಲದೊಳ್ ಸಭೆಯಲ್ಲಿ ನಡೆದ ಸಂಗತಿಗಳನ್ನೆಲ್ಲವನ್ನೂ ಹೇಳಲು ವತ್ಸರಾಯನು ನಗುತ್ತಿಂತೆಂದನು.

ಶ್ಲೋ॥ ತ್ರೈಲೋಕ್ಯನಾಥೋರಾಮೋಽಸ್ತಿ ವಸಿಷ್ಠೋಬ್ರಹ್ಮಪುತ್ರಕಃ ।
ತೇನರಾಜ್ಯಾಭಿಷೇಕೇತು ಮುಹೂರ್ತಃಕಥಿತೋಽಭವತ್ ॥
ತನ್ಮುಹೂರ್ತೇನರಾಮೋಽಪಿ ವನಂಸೀತೋಪನೀಂವಿನಾ ।
ಸೀತಾಪಹಾರೋಽಪ್ಯಭವದ್ವೈರಿಂಚಿವಚನಂವೃಥಾ ॥

ತಾ॥ ಮಹಾರಾಜನಾದ ಮುಂಜನೇ ಕೇಳು ಮೂರು ಲೋಕಗಳಿಗೂ ಒಡೆಯನಾದ ಶ್ರೀರಾಮನಿಗೆ ಸಾಕ್ಷಾತ್ ಬ್ರಹ್ಮಪುತ್ರನಾದ ವಸಿಷ್ಠರು ಪಟ್ಟಾಭಿಷೇಕಕ್ಕಾಗಿ ಲಗ್ನವನ್ನು ನಿಶ್ಚಯಿಸಿ ಹೇಳಲು ಅದೇ ಲಗ್ನದಲ್ಲಿಯೇ ರಾಜ್ಯವಂ ಬಿಟ್ಟು ಕಾಡಿಗೆ ಹೋಗಲಿಲ್ಲವೆ ? ಕಾಡಿನಲ್ಲಿಯೂ ಸೀತೆಯನ್ನು ಕಳಕೊಳ್ಳಲಿಲ್ಲವೆ ? ಅಂಥಾ ವಸಿಷ್ಠರ ಮಾತೇ ವ್ಯರ್ಥವಾಗಲಿಲ್ಲವೇ ? ಎಂದು ಸಮಾಧಾನಗೊಳಿ.

ಶ್ಲೋ॥ ಉಚಿತಮನುಚಿತಂ ವಾಕುರ್ವತಾಕಾರ್ಯಜಾತಂ ।
ಪರಿಣತಿರವಧಾರ್ಯಾ ಯತ್ನತಃಪಂಡಿತೇನ ॥
ಅತಿರಭಸಕೃತಾನಾಂ ಕರ್ಮಣಾಮಾವಿಪತ್ತೇಃ ।
ಭವತಿಹೃದಯದಾಹೀ ಶಲ್ಯತುಲ್ಯೋವಿಪಾಕಃ ॥

ತಾ॥ ಪಂಡಿತನಾದವನು ಒಳ್ಳೆ ಕೆಲಸವನ್ನಾದರೂ, ಕೆಟ್ಟ ಕೆಲಸವನ್ನಾದರೂ, ಮಾಡುವಾಗ ಕೊನೆಗೇನಾಗುವುದೆಂದು ಬುದ್ಧಿಯಿಂದ ನಿಶ್ಚಯಿಸಿಯೇ ಮಾಡಬೇಕು. ಹಾಗಲ್ಲದೆ ಗಾಬರಿಯಿಂದ ಕೆಲಸಮಾಡಿ ಕೆಟ್ಟುಹೋದ ಪಕ್ಷದಲ್ಲಿ ಆ ಕೆಡಕು ತನ್ನನ್ನು ಸಾಯುವವರೆಗೂ ದುಃಖಪಡಿಸದೇ ಬಿಡದು ಹೀಗಿರಲು.

ಶ್ಲೋ॥ ಯೇನಸಹಾಸಿತಮುಸಿತಂ ಹಸಿತಂಕಥಿತಂಚರಹಸಿವಿಸ್ರಬ್ಧಂ ।
ತಂಪ್ರತಿಕಥಮಸತಾಮಪಿ ನಿವರ್ತತೇಚಿತ್ತಮಾಪ್ರಾಣಾತ್ ॥

ತಾ॥ ಯಾವ ಮನುಷ್ಯನೊಡನೆ ವಾಸಮಾಡುತ್ತಾ, ಊಟಮಾಡುತ್ತಾ, ನಗುತ್ತಾ, ಮಾತನಾಡುತ್ತಾ ರಹಸ್ಯವನ್ನು ಹೇಳುತ್ತಾ ಎಡಬಿಡದೆ

ಇದ್ದು, ಅವನನ್ನು ಪುರಿತಿಲು ಎಂಥಾ ಕೆಟ್ಟವನಿಗೂ ಅಸಾಧ್ಯ ವಲ್ಲವೇ ? ಮತ್ತು.

ಗ|| ಅಸ್ಮಿನ್ನಂತೇಸ್ಪೃದ್ಧರಾಜ್ಞಸ್ಸಿಂಧು ಲಸ್ಯಾಪದನುಪ್ರೀತಿಪಾತ್ರಾಣಿ । ಮಹಾವೀರಾಸ್ತ್ವನ್ಮಾನು ಮತಸ್ಥಿತಾಃತತ್ವನ್ನಗರಮುರ್ಲೋಲ ಕಲ್ಲೋಲಾಃಪಯೋಧಯಾ ಇವಪ್ಲಾವಯಿಷ್ಯಂತಿ । ಚಿರಾದ್ವೃದ್ಧಮೂಲೇಪಿತ್ವಯಿಪ್ರಾಯಃ ಪೌರಾಃಭೋಜಂ ಭೂಭೃತ್ತ್ವೋಭರ್ತಾರಂಭಾವಯಂತಿ ||

ತಾ|| ಈ ಭೋಜನು ಸಾಯಲಾಗಿ ಮುಂದೆ ರಾಜನಾದ ಸಿಂಧುಲನಿಗೆ ಪ್ರೀತಿಪಾತ್ರರಾದ ಮಹಾಶೂರರು ನಿನ್ನನುಮತಿಯಂತೆ ನಡದುಕೊಳ್ಳುತ್ತಿದ್ದರೂ ಈ ಕೆಲಸದಿಂದ ನಿನ್ನ ಪಟ್ಟಣವನ್ನು ಸಮುದ್ರಗಳಂತೆ ಬಂದು ಮುಣುಗಿಸುವರು. ನೀನು ಬಹಳ ದಿವಸಗಳಿಂದ ರಾಜ್ಯವಾಳುತ್ತಿದ್ದರೂ ಪಟ್ಟಣಿಗರು ಭೋಜನನ್ನೇ ಭೂಪತಿಯೆಂದು ತಿಳಿದಿರುವರು.

ಶ್ಲೋ|| ಸತ್ಯಪಿಚಸುಕೃತಕರ್ಮಣಿ ದುರ್ನೀತಿಶ್ಚೇಚ್ಛ್ರಿಯಂ ಹರತ್ಯೇವ ।
ತೈಲೈಸ್ಸಮಪಿ ಸಂಯುಕ್ತಾಂ ದೀಪಶಿಖಾಂ ವಿದಳಯತಿಹಿ ವಾತಾಳಿಃ ||

ತಾ|| ಮನುಷ್ಯನಿಗೆ ಸತ್ಕರ್ಮಗಳಿದ್ದಾಗ್ಯೂ ನೀತಿಯನ್ನು ಬಿಟ್ಟರೆ ಅವನ ಸಂಪತ್ತು ಮತ್ತು ಕಾಂತಿಯೂ ನಾಶವಾಗುತ್ತದೆ. ಹ್ಯಾಗಂದರೆ— ಯಾವಾಗಲೂ ಎಣ್ಣೆ ಕಡಿಮೆಯಾಗದಿದ್ದರೂ ದೀಪವನ್ನು ಗಾಳಿಯು ಹೋಗಲಾಡಿಸುವಂತೆಯೇ ಆದ್ದರಿಂದ—

ಗ|| ದೇವಪುತ್ರವಧಃ ಕ್ವಾಪಿನಹಿತಾಯ । ಇತ್ಯುಕ್ತವತ್ಸರಾಜವಚನಮಾಕರ್ಣ್ಯ ರಾಜಾಕುಪಿತಃ ಪ್ರಾಹ । ತ್ವಮೇವರಾಜ್ಯಾಧಿಪತಿರ್ನತುಸೇವಕಃ ||

ತಾ|| ಎಲೈ ಸ್ವಾಮಿಯಾದ ಮುಂಜರಾಯನೇ ಮಗನನ್ನು ಕೊಲ್ಲುವುದು ಎಂದಿಗೂ ಒಳ್ಳೆದಾಗಬಾರದು. ಎಂದು ಹೇಳಿದ ವತ್ಸರಾಯನ ಮಾತನ್ನು ಕೇಳಿ ಮುಂಜರಾಯನು ಕೋಪಗೊಂಡು ಎಲೈ ನೀನು ರಾಜ್ಯಾಧಿಪತಿಯಲ್ಲದೆ ಸೇವಕನಾಗಿಲ್ಲವು.

ಶ್ಲೋ|| ಸ್ವಾಮ್ಯುಕ್ತೇ ಯೋನಯತತೇ ಸಭೃತ್ಯೋ ಭೃತ್ಯಪಾಶಕಃ ।
ತಜ್ಜೀವನಮಪಿವ್ಯರ್ಥಂ ಅಜಾಗಳಕುಚಾವಿವ ||

ತಾ|| ಯಾರಾದರೆ ಯಜಮಾನನ ಮಾತಿನಂತೆ ನಡಿಯುವದಿಲ್ಲವೋ ಅಂಥಾ ಭೃತ್ಯನು ಭೃತ್ಯನೆಂಬ ಗಲ್ಲಿನ ಹಗ್ಗವೇ ಅಲ್ಲದೆ ಅವನು ಬದುಕಿದ್ದರೂ ಅವನ ಬಾಳು ಮೇಕೆಯ ಕತ್ತಿನಲ್ಲಿರುವ ಮೊಲೆಗಳಂತೆ ವ್ಯರ್ಥವು.

ಗ॥ ತತೋವತ್ಸರಾಜಃ ಕಾಲೋಚಿತಸಮಾಲೋಚನೀಯ ಮಿತಿಮತ್ವಾತೂಷ್ಣೀಂಬಭೂವ ॥

ತಾ॥ ಬಳಿಕ ವತ್ಸರಾಯನು ಸಮಯಕ್ಕೆ ತಕ್ಕಹಾಗೆ ಯೋಚಿಸಬೇಕೆಂದು ಸುಮ್ಮನಾದನು.

ಗ॥ ಅಥಲಂಬಮಾನೇದಿವಾಕರೇಉತ್ತುಂಗ ಸೌಧೋತ್ಸಂಗಾದವತರಂತಂ । ಕುಪಿತಮಿವಕೃತಾಂತಂವತ್ಸರಾಜಂವೀಕ್ಷ್ಯಸಮೇತಾಅಪಿವಿವಿಧೇನಮಿಷೇಣಸ್ವಭವನಾನಿಸಭ್ಯೈರ್ಗತಾಸ್ಸಭಾಸದಃ ತತೋವತ್ಸರಾಜಃ ಸ್ವಸೇವಕಾನ್ ಸ್ವಾಗಾರಪರಿತ್ರಾಣಾರ್ಥಂ ಪ್ರೇಷಯಿತ್ವಾರಥಂ ಭುವನೇಶ್ವರೀಭವನಾಭಿಮುಖಂವಿಧಾಯ ಭೋಜಕುಮಾರೋಪಾಧ್ಯಾಯಸ್ಯಾಕಾರಣಾಯಪ್ರಾಹಿಣೋದೇಕಂವತ್ಸರಾಜಃ । ಸಭಾಪಂಡಿತಂ ತಾತತ್ವಾಮಾಕಾರ ಯತಿವತ್ಸರಾಜಇತಿ ಸೇವಿತದಾಕರ್ಣ್ಯ ವಜ್ರಾಹತಇವ ಭೂತಾವಿಷ್ಟ ಇವಗ್ರಹಗ್ರಸ್ತ ಇತೇನಸೇವಕೇನ ಕರೇಣಧೃತ್ವಾನೀತಃಪಂಡಿತಃ । ತಂಚಬುದ್ಧಿಮಾನ್ ವತ್ಸರಾಜಃ ಸಪ್ರಣಾಮಮಿತ್ಯಾಹ ॥ ಪಂಡಿತತಾತ ಉಪವಿಶರಾಜಕುಮಾರಂಜಯಂತಮಧ್ಯಾಯನಶಾಲಾಯಾಮಾನಯೇತಿ । ಪಂಡಿತಸ್ತಥಾಚಕಾರ । ಆಯಾಂತಂಜಯಂತಮಧ್ಯಯನ ಶಾಲಾಯಾಮಾನಯೇತಿ। ಪಂಡಿತಸ್ತಥಾಚಕಾರ । ಆಯಾಂತಂಜಯಂತಮಿವಕುಮಾರಂ ಕಿಮಪ್ಯಧೀತಂ ಪೃಷ್ಟ್ವಾಸ್ಥಾಪೀತ್ । ಪುನಃಪ್ರಾಹಪಂಡಿತಂವಿಪ್ರ ಭೋಜಕುಮಾರಮಾನಯೇತಿ । ತತೋವಿದಿತವೃತ್ತಾಂತೋ ಭೋಜಃಕುಪಿತೋಜ್ವಲನ್ನಿವ ಶೋಣಿತೇಕ್ಷಣಃ ಸಸಮೇತ್ಯಪ್ರಾಹ ಆಃಪಾಪ ರಾಜ್ಞೋಮುಖ್ಯಕುಮಾರಂ ಏಕಾಕಿನಂಮಾಂರಾಜಭವನಾದ್ಬಹಿರಾನೇತುಂತವಕಾನಾಮಶಕ್ತಿಃ ಇತಿವಾಮಚರಣಪಾದುಕಾಪ್ರಹಾರಾದ್ಯೈಃಭೋಜೇನತಾಲುದೇಶೇಹತೋವತ್ಸರಾಜಃ ॥

ತಾ॥ ಬಳಿಕ ಸಾಯಂಕಾಲವಾಗಲಾಗಿ ಅರಮನೆಯ ಮಾಹಡಿಯಿಂದ ಇಳಿದು ಬರುತ್ತಿರುವ ವತ್ಸರಾಯನು ಕೋಪದಿಂದ ಸೊಡ್ಡುವವನಿಗೆ ಯಮನಂತೆ ಕಾಣಿಸುತ್ತಿರುವವನ ಕಂಡು, ಬರುತ್ತಿರುವ ಸಭಾಸದರೆಲ್ಲರೂ ತಮ್ಮ ತಮ್ಮ ಮನೆಗಳನ್ನು ಕುರಿತು ಹಿಂತೆರಳಿದರು ಬಳಿಕಲಾವತ್ಸರಾಯನು ಕೆಲವು ಸೇವಕರನ್ನು ತನ್ನ ಮನೆಯನ್ನು ಕಾಯುತ್ತಿರುವಂತೆ ಹೇಳಿ ರಥವನ್ನು ಭುವನೇಶ್ವರಿ ದೇವಾಲಯದ ಕಡೆಗೆ ತಿರುಗಿಸಿ ಭೋಜಕುಮಾರನ ಉಪಾಧ್ಯಾಯನನ್ನು ಕರೆಕಳುಹಿಸಲು ಒಬ್ಬ ದೂತನನ್ನು ಕಳುಹಿಸಿದನು.

ಸೇವಕನು ಉಪಾಧ್ಯಾಯನಿಗೆ ವತ್ಸರಾಯನ ಅಪ್ಪಣೆಯನ್ನು ತಿಳಿಸಲಾ ಉ
ಪಾಧ್ಯಾಯನು ಪಿಶಾಚ ಹಿಡಿದವನಂತೆ ಗ್ರಹಗ್ರಸ್ತನಾದಂತೆ ಆ ಸೇವಕನೊ
ಡನೆ ಬರಲಾಗಿ ವತ್ಸರಾಯನು ಆತನಿಗೆ ನಮಸ್ಕಾರವಂ ಮಾಡಿ ಭೋಜ ಕು
ಮಾರನನ್ನು ಪಾಠಶಾಲೆಯಿಂದ ಕರೆಕಳುಹಿಸೆಂದು ಹೇಳಿದನು. ಬಳಿಕ ಬಂದ
ಭೋಜನನ್ನು ಏನು ಓದಿದೆ ಎಂದು ಸ್ವಲ್ಪ ವಿಚಾರಿಸಿ ಕಳುಹಿಸಿಬಿಟ್ಟ ತಿರು
ಗೂ ಭೋಜ ಕುಮಾರನನ್ನು ಕರೆತರಬೇಕೆಂದು ಪಂಡಿತನನ್ನು ಕುರಿತು
ಹೇಳಲಾಗಿ ಭೋಜನು ಕೋಪಗೊಂಡು ಕಣ್ಣುಗಳನ್ನು ಕೆಂಪಗೆ ಮಾಡಿ
ಎಲೈ ಪಾಪಿಯೇ ರಾಜಪುತ್ರನಾದ ನನ್ನನ್ನು ಬಾರಿಬಾರಿಗೂ ಅರಮನೆಯಿಂದ
ಹೊರಕ್ಕೆ ಒಬ್ಬನೇ ಬರಹೇಳಲು ನಿನಗೇನು ಅಧಿಕಾರವಿದೆಯೆಂದು ತನ್ನ
ಎಡಕಾಲಿನಿಂದ ವತ್ಸರಾಜನನ್ನು ಒದ್ದನು.

ಗ|| ತತೋವತ್ಸಃಪ್ರಾಹ ಭೋಜಮಯಂ ರಾಜಾದೇಶಕಾರಿಣಃ । ಬಾಲಂ
ರಥೇನಿವೇಶ್ಯಖಡ್ಗಮುದ್ಕೋಶಂ ಕೃತ್ವಾಜಗಾಮಮಹಾಮಾಯಾ
ಭವನಂ । ತತೋಗೃಹೀತೇಭೋಜೇಲೋಕಾಃ ಕೋಲಾಹಲಂಚಕ್ರುಃ
ಹಾಹಾಕಾರಶ್ಚಪ್ರವೃತ್ತಃ ಕಿಂಕಿಮಿತಿಬ್ರುವಾಣಾಃ ಭಟಾಃಪಿಕ್ರೋಶಂತ
ಆಗತ್ಯಸಹಸಾ ಭೋಜಂಪಥಾಯಾಸ್ತಂಜ್ಞಾತ್ವಾಹಸ್ತಿಶಾಲಾಮಂದುರಾಪ್ರ
ಶಾಲಾಃ ವಾಜಿಶಾಲಾಂರಥಶಾಲಾಂ ಪ್ರವಿಶ್ಯಸರ್ವೇಜಘ್ನುಃ ತತಃಪ್ರ
ತೋಳೀಷುರಾಜಭವನಪ್ರಾಕಾರವೇದಿಕಾಸು । ಬಹಿರ್ದ್ವಾರವಿಟಂಕೇ
ಷು । ಭೇರೀಪಟಹಮುರಜಮಡ್ಡುಕಡಿಂಡಿಮನಿನದಾಡಂಬರೇಣಅಂಬ
ರಂವಿಡಂಬಿತಮಭೂತ್ । ಕೇಚಿದ್ವಿಮಲಾಸಿನಾ । ಕೇಚಿತ್ಪರಶುನಾ ।
ಕೇಚಿದ್ಭಲ್ಲೇನಕೇಚಿತ್ತೋಮರೇಣ ಕೇಚಿತ್ಪ್ರಾಸೇನ । ಕೇಚಿತ್ಕುಂ
ತೇನ । ಕೇಚಿತ್ಪರಶುನಾಕೇಚಿದ್ವಿಷೇಣ । ಕೇಚಿದ್ವಹ್ನಿನಾಕೇಚಿದಂ
ಭಸಾ । ಕೇಚಿದ್ದಾರಾಯಾಂಬ್ರಾಹ್ಮಣಯೋಷಿತೋ । ರಾಜಪುತ್ರಾಃ ।
ರಾಜಸೇವಕಾಃ । ರಾಜಾನಃ ಪೌರಾಶ್ಚಪ್ರಾಣಪರಿತ್ಯಾಗಂ ವಿದಧುಃ ।
ತತಸ್ಸಾವಿತ್ರೀಸಂಜ್ಞಾ ಭೋಜಸ್ಯಮಾತಾದಾಸೀಮುಖಾತ್ ಸ್ವಪುತ್ರ
ಸ್ಥಿತಿಮಾಕರ್ಣ್ಯಕರಾಭ್ಯಾಂ ನೇತ್ರೇಪಿಧಾಯರುದತೀಪ್ರಾಹ । ತಪ್ರು
ಪಿತೃವ್ಯೇನಕಾಂ ದಶಾಂಪ್ರಾಪಿತೋಸಿ । ಹೇಮಯಾಸಿಯಮಾ ಉಪ
ಮಾಸಾಶ್ಚಕೃತಾತೇದ್ಯವಿಫಲಾಜಾತಾಃ । ದಶಾಪಿದಿಶಾಮುಖಾನಿ ಶೂನ್ಯಾ
ನಿಪುತ್ರದೇವೇನ ಸರ್ವಜ್ಞೇನಸರ್ವಶಕ್ತಿನಾಪಹೃತೋಸಿ । ಪುತ್ರಪಿ

ನಂಷ್ಟಾಸದಾಪಿ ಸರ್ಗಂ ಸಸಾಸಾಪಿಟ್ಟಿಂನ ಶಿರಸಂಪುಶ್ಯೇತ್ಯುಕ್ತ್ವಾ ವಿಭೂ ಮಾವಪತತ್ ||

ತಾ|| ಬಳಿಕ ವತ್ಸರಾಯನು ಎಲೆ ಭೋಜನೇ ನಾವು ರಾಜನಪ್ಪಣೆಯಂತೆ ನಡೆಯಕೊಳ್ಳತಕ್ಕವನೆಂದು ಹೇಳಿ ಬಾಲಕನಾದ ಭೋಜನನ್ನು ರಥವನೇರಿಸಿ ಕುಳ್ಳಿರಿಸಿಕೊಂಡು ಕತ್ತಿಯನ್ನು ವರೆಯಿಂದ ತೆಗೆದು ಭುವನೇಶ್ವರೀ ಅರಣ್ಯವನ್ನು ಕುರಿತು ಬೇಗ ಹೊರಟುಹೋದನು. ಆ ಬಳಿಕ ಈ ಸಮಾಚಾರವನ್ನು ಕೇಳಿದ ಪ್ರಜೆಗಳ ಕೋಲಾಹಲವು ಎಲ್ಲಿಯೂ ವ್ಯಾಪಿಸಿತು ಭಟರುಗಳಾದರೂ ಇದೇನನ್ಯಾಯವೆಂದು ಹೂಂಕಾರಗಳನ್ನು ಮಾಡುತ್ತಾ ಘಟ್ಟಿಯಾಗಿ ಕೂಗಿಕೊಳ್ಳುತ್ತಾ ಬಂದು ಭೋಜನನ್ನು ಕೊಲ್ಲಲು ಹಿಡಿದುಕೊಂಡು ಹೋದರೆಂದು ತಿಳಿದು, ಆನೆಗಳ ಲಾಯಗಳನ್ನೂ ಒಂಟೆಗಳಲಾಯಗಳನ್ನೂ ಕುದುರೆಲಾಯಗಳನ್ನೂ ರಥಶಾಲೆಗಳನ್ನೂ ಹೊಕ್ಕು ನಾಶಮಾಡಿದರು. ಮತ್ತೂ ಅರಮನೆಯ ಒಳಗಣ ಹಡಗಳ ಜಗುಲಿಗಳಲ್ಲಿಯೂ, ಊರುಬಾಗಿಲುಗಳ ಕಪೋತಗಳಲ್ಲಿಯೂ ಪಟ್ಟಣದ ಸುತ್ತಮುತ್ತಲೂ ಭೇರಿಗಳು ತಪ್ಪಟೆಗಳು ನಗಾರಿಗಳು ಮದ್ದಲೆಗಳು ಮೊದಲಾದ ಧ್ವನಿಗಳನ್ನು ಭೂನಭೋಂತರಾಳಗಳನ್ನು ವ್ಯಾಪಿಸುವಂತೆ ಧ್ವನಿಮಾಡುತ್ತಿದ್ದರು. ಅಲ್ಲದೆ ಪಟ್ಟಣಗಳಿಂದ ಬ್ರಾಹ್ಮಣಸ್ತ್ರೀಯರೂ, ರಾಜಪುತ್ರರೂ, ರಾಜಸೇವಕರೂ, ರಾಜರುಗಳೂ ಮೊದಲಾಗಿ ಕೆಲವರು ಕತ್ತಿಗಳಿಂದಲೂ ಕೆಲಬರು ಭಲ್ಯಗಳಿಂದಲೂ ಇತರರು ಪ್ರಾಸಗಳಿಂದಲೂ ಅನೇಕರು ವಿಷಪಾನಗಳಿಂದಲೂ ಇನ್ನೂ ಬಹಳ ಮಂದಿಯು ಬೆಂಕಿಯ ಮೂಲಕವಾಗಿಯೂ ಪ್ರಾಣಗಳನ್ನು ಬಿಟ್ಟರು. ಆಗ ಸಾವಿತ್ರಿಯೆಂಬ ಹೆಸರುಳ್ಳ ಭೋಜನ ತಾಯಿಯು ದಾಸಿಗಳಿಂದ ತನ್ನ ಮಗನ ಸಮಾಚಾರವನ್ನು ಕೇಳಿ ಎರಡು ಕೈಗಳಿಂದಲೂ ಕಣ್ಣುಗಳನ್ನು ಮುಚ್ಚಿಕೊಂಡು ಅಳುತ್ತಾ ಅಯ್ಯೋ ಮಗನೆ ನಿನ್ನ ಚಿಕ್ಕಪ್ಪ ನಿನ್ನನ್ನು ಯಾವಗತಿಗೆ ತಂದನು. ನಾನು ಮಾಡಿದ ನಿಯಮಗಳೂ ಉಪವಾಸವ್ರತಗಳೂ ವ್ಯರ್ಥವಾದವಲ್ಲ. ನನ್ನ ಭಾಗಕ್ಕೆ ಹತ್ತು ದಿಕ್ಕುಗಳೂ ಬಯಲಾಯಿತಲ್ಲಾ, ಸರ್ವಶಕ್ತನಾದ ಭಗವಂತನು ನಿನ್ನಂತೆ ಕಿತ್ತುಕೊಳ್ಳಬೇಕಾಯಿತೇ, ಅಯ್ಯೋ ವಿಧಿಯೇ ಎಂದು ದುಃಖಪಡುತ್ತಾ ಮಗನೇ ಈ ದಾಸಪಾಪೀ ಸಮೂಹವು ಪ್ರಾಣಗಳಬಿಟ್ಟು ಬಿದ್ದಿರುವವನ್ನು ನೋಡಿದೆಯಾ ಮಗನೇ ಎಂದು ಭೂಮಿಯಲ್ಲಿ ಬಿದ್ದಳು.

ಗ|| ತತಃ ಪ್ರವಿಷ್ಟೇ ನೈಸ್ಯಾರಕೆ ರಕ್ಷಾಂಪ್ಯತಥಾಮಾಸ್ತ್ಯೋಮೇನ್ಯೆನು

ಲೀನಾಂಸಿ ನಭಸಿ ಗಾತತ್ರಾಸಾದಿವ ಪಶ್ಚಿಮಪಯೋನಿಧೌ ಮಗ್ನೇ ಮಾರ್ತಾಂಡಮಂಡಲೇ ಮಹಾಗಾರಾಭವನ ಮಾಸಾದ್ಯ ಸ್ವಗೃಹಂ ಭೋಜಂ ವತ್ಸರಾಜಃ ರಾಜಕುಮಾರ ಜ್ಯೋತಿಶ್ಶಾಸ್ತ್ರವಿಶಾರದೇನ ಕೇನಚಿದ್ಬ್ರಾಹ್ಮಣೇನ ತವ ರಾಜ್ಯಪ್ರಾಪ್ತಿ ರುದೀರಿತಾ ಯತಾಂ ರಾಜ್ಞಾ ಭವದ್ವಧೋ ವ್ಯಾದಿಷ್ಟಃ ಇತಿ ತದಾಕರ್ಣ್ಯ ಭೋಜಃ ಪ್ರಾಹ ॥

ತಾ॥ ತರುವಾಯ ಸಾಯಂಕಾಲವಾಗಲು ದೀಪಗಳನ್ನು ಹಚ್ಚಲಾಗಿ ಅವುಗಳ ಹೊಗೆಯೋ ಏನೋ ಎಂಬಂತೆ ಆಕಾಶವು ಕಪ್ಪಗಾಗಲು ಬೆಳಲು ಭಯದಿಂದಲೋ ಏನೋ ಎಂಬಂತೆ ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಮುಳುಗುತ್ತಿರಲು ವತ್ಸರಾಯನು ಮಹಾಯಾಭವನವನ್ನೈದಿ ಭೋಜಕುಮಾರನನ್ನು ಕುರಿತು ಎಲೈ ಭೋಜನೆ ಯಾರೋ ಒಬ್ಬ ಜೋಯಿಸೋತ್ತಮರಿಂದ ಹೇಳಲ್ಪಟ್ಟ ನಿನ್ನ ಭೂಪತಿತನವನ್ನು ಕೇಳಿ ನಿನ್ನನ್ನು ಕೊಲ್ಲಲು ಅಪ್ಪಣೆ ಮಾಡಿರುವನು ಎನ್ನಲಾಗಿ ಭೋಜನು ಇಂತೆಂದನು.

ಶ್ಲೋ॥ ರಾಮಪ್ರವ್ರಜನಂ ಬಲೇರ್ನಿಯಮನಂ ಪಾಂಡೋಸ್ಸುತಾನಾಂ ವನಂ ।
ವೃಷ್ಣೀನಾಂ ನಿಧನಂ ನಳಸ್ಯ ನೃಪತೇ ರಾಜ್ಯಾತ್ಪರಿಭ್ರಂಶನಂ ॥
ಕಾರಾಗಾರನಿಷೇವಣಂಚ ಮರಣಂ ಸಂಚಿಂತ್ಯ ಲಂಕೇಶ್ವರೇ ।
ಸರ್ವಃ ಕಾಲವಶೇನ ನಶ್ಯತಿ ನರಃ ಕೋವಾ ಪರಿತ್ರಾಯತೇ ॥

ತಾ॥ ಶ್ರೀರಾಮನ ವಿಷಯದಲ್ಲಿ ಅರಣ್ಯವಾಸವನ್ನು ಯೋಚಿಸಿದರೂ ಬಲಿಚಕ್ರವರ್ತಿಯ ನಿರ್ಬಂಧವನ್ನೂ ಪಾಂಡುಪುತ್ರರ ವನವಾಸವನ್ನೂ ಯಾದವರ ನಾಶವನ್ನೂ ನಳಚಕ್ರವರ್ತಿಯು ರಾಜ್ಯ ಬಿಟ್ಟದ್ದನ್ನೂ ರಾವಣಾಸುರನು ಬಂದೀಖಾನೆಯಲ್ಲಿ ಇದ್ದುದನ್ನೂ ಮತ್ತು ಅವನ ಸಾವನ್ನೂ ಕುರಿತು ಯೋಚಿಸಿದರೆ ಎಲ್ಲವೂ ಕಾಲಬಂದರೆ ನಾಶವಾಗುತ್ತದೆಂದು ನಿಶ್ಚಯವಾಗಿರುವಲ್ಲಿ ಯಾರುತಾನೇ ಕಾಪಾಡುವರು ?

ಶ್ಲೋ॥ ಲಕ್ಷ್ಮೀಕೌಸ್ತುಭಪಾರಿಜಾತ ಸಹಜಸ್ಸೂನುಸ್ಸುಧಾಂಭೋನಿಧೇ
ರ್ದೇವೇನ ಪ್ರಣಯ ಪ್ರಸಾದವಿಧಿನಾ ಮೂರ್ಧ್ನಾಧೃತಶ್ಶಂಭುನಾ ॥
ಅಪ್ಯಾಪ್ಯುಜ್ಝತಿ ನೈವ ದೈವವಿಹಿತಂ ಕ್ಷೈಣ್ಯಂ ಕ್ಷಪಾವಲ್ಲಭಃ ।
ಕೇನಾನ್ಯೇನ ವಿಲಂಘ್ಯತೇ ವಿಧಿಗತಿಃ ಪಾಷಾಣಲೇಖಾಸಖೀ ॥

ತಾ॥ ಶ್ರೀ ಮಹಾಲಕ್ಷ್ಮಿ ಕೌಸ್ತುಭಮಣಿ ಕಲ್ಪವೃಕ್ಷವಾದ ಪಾರಿಜಾತ ಇವುಗಳೊಡನೆ ಕ್ಷೀರಸಮುದ್ರದಲ್ಲಿ ಹುಟ್ಟಿದ ಅಮೃತ ಕಿರಣಗಳುಳ್ಳ ಚಂದ್ರನನ್ನು ಸಾಕ್ಷಾತ್ಪರಮೇಶ್ವರನೂ ಕೂಡ ತಲೆಯಲ್ಲಿ ಹೊತ್ತುಕೊಂಡಿರುವನು.

ಆದರೂ ಅವನಿಗೆ ಕ್ಷೀಣತ್ವವು ತಪ್ಪಲಿಲ್ಲವು. ಆದ್ದರಿಂದ ದೈವವಿಹಿತವಾದ ಕಲ್ಲಿನಲ್ಲಿ ಕೆತ್ತಿರುವ ಅಕ್ಷರಗಳಿಗೆ ಸಮಾನವಾದ ಹಣೆ ಬರಹವನ್ನು ಯಾರಿಂದ ತಾನೆ ಅಳಿಸಲಾದೀತು.

ಶ್ಲೋ॥ ವಿಕಟೋರ್ವ್ಯಾಮಟನಂ ಶೈಲಾರೋಹಣಮಾಂಸಿಧೇಸ್ತರಣಂ ।
ನಿಗಳಂ ಗುಹಾಪ್ರವೇಶೋ ವಿಧಿಪರಿಪಾಕಃ ಕಥನ್ನು ಸಂತಾರ್ಯಃ ॥

ತಾ॥ ಮರುಭೂಮಿಯಲ್ಲಿ ತಿರುಗುವುದೂ, ಬೆಟ್ಟಗಳನ್ನು ಹತ್ತುವುದೂ, ಸಮುದ್ರಯಾನವಾಡುವುದೂ, ನಿರ್ಬಂಧಕ್ಕೆ ಸಿಲ್ಕುವದೂ, ಗುಹೆಯಲ್ಲಿ ಹೋಗುವುದೂ ಇವೆಲ್ಲವೂ ಹಣೆಬರಹವು. ಇದನ್ನು ವಿಧಾರಲಾರಿಂದ ತಾನೇ ಆಗುವುದು.

ಶ್ಲೋ॥ ಅಂಭೋಧಿಸ್ಥಲತಾಂ ಸ್ಥಲಂ ಜಲಧಿತಾಂ ಧೂಳೀಲವಶ್ಶೈಲತಾಂ ಮೇರು
ಮೃತ್ಕಣತಾಂ ತೃಣಂ । ಕುಲಿಶತಾಂ ವಜ್ರಂ ತೃಣಪ್ರಾಯತಾಂ॥ ವಹ್ನಿ
ಶ್ಶೀತಲತಾಂ ಹಿಮಂ ದಹನತಾಂ ಆಯಾತಿ ಯಸ್ಯೇಚ್ಛಯಾ ಲೀಲಾದುರ್ಲ
ಲಿತಾದ್ಭುತವ್ಯಸನಿನೇ ದೇವಾಯ ತಸ್ಮೈ ನಮಃ ॥

ತಾ॥ ಯಾವ ದೇವರ ಇಚ್ಛಾಮಾತ್ರದಿಂದ ಸಮುದ್ರವೂಕೂಡ ಮರುಭೂಮಿಯಾಯಿತೋ, ನೆಲವು ಸಮುದ್ರವಾಯಿತೋ, ಧೂಳಿಯು ಬೆಟ್ಟವಾಯಿತೋ ಮೇರು ಪರ್ವತವು ಮಣ್ಣಾಯಿತೋ, ಹುಲ್ಲುಕಡ್ಡಿಯು ವಜ್ರಾಯುಧವಾಯಿತೋ, ವಜ್ರಾಯುಧವೂ ಕೂಡ ಹುಲ್ಲಿನಂತಾಯಿತೋ, ಬೆಂಕಿಯು ತಣ್ಣಗಾಯಿತೋ, ಮಂಜು ಬೆಂಕಿಯಾಯಿತೋ ಅಂಥಾ ಅತ್ಯಾಶ್ಚರ್ಯಕರವಾದ ಲೀಲಾವಿಲಾಸವುಳ್ಳ ದೇವರಿಗೆ ನಮಸ್ಕಾರವು.

ಗ॥ ತತಃ ಸೋವಟವೃಕ್ಷಸ್ಯ ಪತ್ರದ್ವಯಮಾದಾಯ ಏಕೇನಪುಟೀಕೃತ್ಯ ಪಂ
ಘಾಂ ಛುರಿಕಯಾಭಿತ್ವಾ ತತ್ಪುಟಕೇ ರಕ್ತಮಾರೋಪ್ಯ ತತ್ತೇನ ಅನ್ಯಸ್ಮಿ
ನ್ಪತ್ರೇ ಕಂಚನ ಶ್ಲೋಕಂ ಲಿಖಿತ್ವಾ ವತ್ಸಂ ಪ್ರಾಹ ಮಹಾಭಾಗ ಏತತ್ಪ
ತ್ರಂ ನೃಪಾಯ ದಾತವ್ಯಂ ತ್ವಮಪಿ ರಾಜಾಜ್ಞಾಂ ವಿಧೇಹೀತಿ ॥

ತಾ॥ ಇಂತು ನಿರ್ಧರಿಸಿ ತರುಣನಾದ ಭೋಜನು ಎರಡು ಆಲದ ಎಲೆಗಳನ್ನು ತಂದು ಒಂದರಲ್ಲಿ ದೊನ್ನೆಯನ್ನು ಮಾಡಿ ಚಾಕಿನಿಂದ ತನ್ನ ಮುಂಗಾಲನ್ನು ಕೊಯ್ದು ರಕ್ತವನ್ನು ದೊನ್ನೆಗೆ ಹಾಕಿ ಮತ್ತೊಂದೆಲೆಯಲ್ಲಿ ಕಡ್ಡಿಯಿಂದ ಒಂದು ಶ್ಲೋಕವನ್ನು ಬರೆದು ವತ್ಸರಾಯನ ಕೈಗೆ ಕೊಟ್ಟು ಇದನ್ನು ಮುಂಜರಾಯನಿಗೆ ಕೊಟ್ಟು ನೀನು ರಾಜಾಜ್ಞೆಯಂತೆ ನಡೆಕೊಳ್ಳಬಹುದೆಂದು ಹೇಳಿದನು.

ಗ॥ ತತೋವತ್ಸರಾಜಸ್ಯಾನುಜೋ ಭೋಜಸ್ಯಪ್ರಾಣ ಪರಿತ್ಯಾಗಸಮಯೇ
ದೀಪ್ಯಮಾನಮುಖಶ್ರಿಯಂ ನಯನಾಭಿರಾಮಂ ಭೋಜಂ ಸಕರುಣ
ಮವಲೋಕ್ಯ ಅಗ್ರಜಂಪ್ರಾಹ ॥

ತಾ॥ ಆ ಬಳಿಕ ವತ್ಸರಾಯನ ತಮ್ಮನು ಭೋಜಕುಮಾರನ ಮರಣ ಸಮಯದಲ್ಲಿಯೂ ಮುಖ ಕಾಂತಿಯು ಕುಂದದೆ ಮನೋಹರವಾಗಿರುವ ಮುಖ ಕಾಂತಿಯನ್ನು ನೋಡಿ ಕರುಣಾರ್ದ್ರಹೃದಯನಾಗಿ ಅಣ್ಣನನ್ನು ಕುರಿತು ಹೇಳಿದನು.

ಶ್ಲೋ॥ ಏಕಏವಸುಹೃದ್ಧರ್ಮೋನಿಧನೇಪ್ಯನುಯಾತಿಯಃ ।
ಶರೀರೇಣಸಮಂನಾಶಂ ಸರ್ವಮನ್ಯಚ್ಚಗಚ್ಛತಿ ॥

ಎಲೈ ಅಣ್ಣನೇ ಮರಣ ಕಾಲದಲ್ಲಿಯೂ ಹಿಂಬಾಲಿಸುವದಾವುದೋ ಅದೊಂದೇ ಸ್ನೇಹಿತರ ಧರ್ಮವೆನ್ನುವದು,ಮಿಕ್ಕದ್ದೆಲ್ಲವೂ ಶರೀರದೊಡನೆಯೇ ನಾಶವಾಗುವುದು.

ಶ್ಲೋ॥ ನಶತೋಹಿಸಹಾಯಾರ್ಥೇ ಮಾತಾಭಾರ್ಯಾಚತಿಷ್ಠತಿ ।
ನಪಿತ್ರಪುತ್ರಾನಜ್ಞಾತಿರ್ಧರ್ಮಸ್ತಿಷ್ಠತಿಕೇವಲಃ ॥

ತಾ॥ ಮನುಷ್ಯನು ಸಾಯುವಾಗ ಅವನ ಸಹಾಯಕ್ಕಾಗಿ ತಾಯಿ ಹೆಂಡತಿ ಸ್ನೇಹಿತ ಮಗ ನೆಂಟರಿಷ್ಟರು ಯಾರೂ ಜೊತೆಯಲ್ಲಿ ಬರಲಾರರು. ತಾನು ಮಾಡಿದ ಧರ್ಮ ಒಂದುಮಾತ್ರ ಹಿಂಬಾಲಿಸುವುದು.

ಶ್ಲೋ॥ ಬಲವಾನಪ್ಯಶಕ್ತೋಸೌ ಧನವಾನಪಿನಿರ್ಧನಃ ।
ಶ್ರುತವಾನಪಿಮೂರ್ಖಶ್ಚ ಯೋಧರ್ಮವಿಮುಖೋಜನಃ ॥

ತಾ॥ ಯಾರಾದರೆ ಧರ್ಮಿಷ್ಠನಲ್ಲವೊ ಅವನು ಎಷ್ಟು ಬಲಿಷ್ಠನಾದರೂ ಬಲಹೀನನೇ. ಎಷ್ಟೇ ಹಣಗಾರನಾದರೂ ದರಿದ್ರನಂತೆಯೇ ಎಷ್ಟೇ ಓದಿದವನಾದರೂ ಮೂರ್ಖನೆಂದೇ ತಿಳಿಯಬೇಕು.

ಶ್ಲೋ॥ ಇಹೈವಸ್ವಜರಾವ್ಯಾಧೇಃ ಚಿಕಿತ್ಸಾಂನಕರೋತಿಯಃ ।
ಗತ್ವಾನಿರೌಷಧಸ್ಥಾನಂ ಸರೋಗೀಕಿಂಕರಿಷ್ಯತಿ ॥

ತಾ॥ ನರನು ತನ್ನ ಮುಪ್ಪೆಂಬ ವ್ಯಾಧಿಗೆ ಇಲ್ಲಿಯೇ ಧರ್ಮವೆಂಬ ಔಷಧಿಯನ್ನು ಮಾಡಿಕೊಳ್ಳಬೇಕು. ನಂತರ ಅವುಷಧಿ ಇಲ್ಲದ ಸ್ಥಳಕ್ಕೆ ಹೋಗಿ ದುಃಖಭಾಗಿಯಾಗುತ್ತಾನೆ.

ಶ್ಲೋ॥ ಜರಾಂಮೃತ್ಯುಂಭಯಂವ್ಯಾಧಿಂ ಯೋಜಾನಾತಿಸಪಂಡಿತಃ ।
ಸ್ವಸ್ಥಸ್ತಿಷ್ಠೇನ್ನಿಷೀದೇದ್ವಾ ಸ್ವಪೇದ್ವಾಕೇನಚಿದ್ಧಸೇತ್ ॥

ತಾ॥ ಮುಪ್ಪನ್ನೂ, ಸಾವನ್ನೂ, ಭಯವನ್ನೂ ಯಾವನು ತಿಳಿಯುವ

ರೂ ಅಪರೇ ಪಂಡಿತರು ಅಂಥವನು ಯೋಚನೆ ಇಲ್ಲದೆ ಸ್ವಸ್ಥನಾಗಿರುವನು, ಮಲಗಿರುವನು, ನಿದ್ರಿಸುವನು ಮತ್ತೊಬ್ಬನೊಡನೆ ಹಾಸ್ಯವಾಗಿ ಕಾಲಹರಣೆ ಮಾಡುವನು.

ಶ್ಲೋ॥ ತುಲ್ಯಜಾತಿ ವಯೋರೂಪಾನ್ ಹೃತಾನ್ಪಶ್ಯತಿ ಮೃತ್ಯುನಾ ।
ನಹಿಂತತ್ರಾಸ್ತಿತೇತ್ರಾಸೊ ವಜ್ರವದ್ಧೃದಯಂತವ ॥ ಇತಿ ॥

ತಾ॥ ತನಗೆ ಸಮಾನವಾದ ಜಾತಿ ವಯಸ್ಸು ರೂಪಗಳುಳ್ಳವರನ್ನು ಯಮನು ಹೊತ್ತುಕೊಂಡು ಹೋಗುತ್ತಿರುವದನ್ನು ನೋಡುತಲಿದ್ದರೂ ವಜ್ರ ಹೃದಯವುಳ್ಳ ನಿನಗೆ ಭಯವೇ ಯಿಲ್ಲವಲ್ಲ.

ಶ್ಲೋ॥ ಸೃಷ್ಟಃಪ್ರಾಣೀ ಭಗವತಾಸ್ವಾಯುಃಕ್ಷೀಣೇಪ್ರಣಶ್ಯತಿ ।
ಸ್ವತೋಪಿನಾಶ ಶೀಲಂತಂನಹಿ ಜೀವಯಿತುಂಕ್ಷಮಃ ॥

ತಾ॥ ಭಗವಂತನು ಸೃಷ್ಟಿಮಾಡಿದ ಪ್ರಾಣಿಯು ಆಯುಸ್ಸು ಕಮ್ಮಿಯಾಗಲು ಸಾಯುವನು ಅಂಥಾ ಸತ್ವವನ್ನು ಬದುಕಿಸಲು ಯಾರಿಂದಲೂ ಆಗಲಾರದು, ಯೆಂದು ಹೇಳಿದನು.

ಗ॥ ತತಸ್ಸೊ ವೈರಾಗ್ಯಮಾಪನ್ನೋ ವತ್ಸರಾಜಃ ಭೋಜಂಕ್ಷಮಸ್ವೇತ್ಯುಕ್ತ್ವಾಪ್ರಣಮ್ಯತಂಚ ರಥೇನಿವೇಶ್ಯನಗರಾದ್ಬಹಿರ್ಘನೇ ತಮಸಿಗೃಹಮಾಗಮ್ಯಭೂಮಿ ಗೃಹಾಂತರೇ ನಿಕ್ಷಿಪ್ಯಭೋಜಂಸಂರಕ್ಷ್ಯ ಸ್ವಯಂಶೀಘ್ರಮೇವ ಕೃತ್ರಿಮವಿದ್ಯಾವಸ್ತ್ರೈಃ ಸಕುಂಡಲಂ ಸ್ಫುರದ್ವಕ್ತ್ರಂ ನಿಮೀಲಿತನೇತ್ರಂ ಭೋಜಕುಮಾರ ಮಸ್ತಕಂಕಾರಯಿತ್ವಾ ತಚ್ಛಾಯಾಯ ಸಕನಿಷ್ಠೋ ವತ್ಸರಾಜಃ ರಾಜಭವನಂಗತ್ವಾ ರಾಜಾನಂ ನತ್ವಾಪ್ರಾಹ ಶ್ರೀಮತಾಯದಾದಿಷ್ಟಂತತ್ಸಾಧಿತಮಿತಿ ತತೋರಾಜಾಚ ಪುತ್ರವಧಂ ಜ್ಞಾತ್ವಾತಮಾಹ ವತ್ಸರಾಜ ಖಡ್ಗಪ್ರಹಾರಸಮಯೇ ತೇನ ಪುತ್ರೇಣಕಿಮುಕ್ತಮಿತಿ ವತ್ಸಃ ದೇವತವಕಿಂಚಿಪತ್ರೇ ಲಿಖಿತಮಸ್ತೀತಿ ದತ್ವಾಗ್ರಹಾಣ ಶಿರಶ್ಚಪಶ್ಯ ತತೋರಾಜಾ ತಥಾವಿಧಂ ಭೋಜಶಿರೋವಿಲೋಕ್ಯ ಮಂದಂರುರೋದ ವತ್ಸರಾಜ ಇದಂಶಿರಃ ಕ್ವಾಪಿಭೂಮೌ ನಿಕ್ಷಿಪ ತತೋವತ್ಸೋನಿಷ್ಕ್ರಾಂತಃ ರಾಜಾಪಿಸ್ವಭಾರ್ಯಾಕರೇಣ ದೀಪಮಾನಯಿತ್ವಾತಾನಿ ಪತ್ರಾಕ್ಷರಾಣಿ ವಾಚಯತಿ.

ತಾ॥ ಬಳಿಕ ವತ್ಸರಾಯನು ತಮ್ಮನ ಮಾತುಗಳಿಂದ ವೈರಾಗ್ಯವನ್ನು ತಾಳಿ ಭೋಜನನ್ನು ಕ್ಷಮಾಪಣೆಯಂ ಕೇಳಿ ಬಾಲಕನನ್ನು ರಥದಲ್ಲಿ ಕುಳ್ಳಿರಿಸಿ ಊರಹೊರಗೆ ಒಂದು ನೆಲಮಾಳಿಗೆಯನ್ನು ಮಾಡಿಸಿ ಅದರಲ್ಲಿಟ್ಟು ಕಾ

ಹೋಗುತ್ತಾ, ಆಗ ಮಾಯಾ ವಿದ್ಯೆಯನ್ನು ತಿಳಿದವರನ್ನು ಕರೆಸಿ ಭೋಜನ ತಲೆಯಂತ ದಿವ್ಯಕುಂಡಲ ಸಹಿತನಾದ ಕಣ್ಣುಗಳನ್ನು ಮುಚ್ಚಿರುವಂತೆ ಮನೋಹರವಾದ ಮುಖವನ್ನು ಮಾಡಿಸಿ ಆ ಮುಖವನ್ನು ತೆಗೆದುಕೊಂಡು ತನ್ನಸಂಗಡವೆ ಅರಮನೆಗೆ ಬಂದು ರಾಜನಿಗೆ ನಮಸ್ಕಾರಮಾಡಿ, ಮಹಾಸ್ವಾಮಿ ತಮ್ಮಪ್ಪಣೆಯಂತೆ ಸಾಧಿಸಿರುವೆನೆಂದು ಹೇಳಲಾಗಿ ಧೊರೆಯು ವತ್ಸರಾಯನೇ! ಭೋಜಕುಮಾರನು ಮರಣಕಾಲದಲ್ಲಿ ಏನಾದರೂ ಹೇಳಿದನೇ? ಎಂದು ಕೇಳಲು, ಮಹಾಸ್ವಾಮಿ ಏನೋ ಒಂದು ಬರೆದುಕೊಟ್ಟಿರುವನೆಂದು ಹೇಳಿ ಆ ಪತ್ರವನ್ನೂ ಆ ತಲೆಯನ್ನೂ ಮುಂದಿಟ್ಟನು. ತರುವಾಯ ಮುಂಜರಾಯನು ಅನ್ಯಾದೃಶವಾಗಿರುವ ಆ ತಲೆಯನ್ನು ನೋಡಿ ದುಃಖಪಟ್ಟು ಆ ತಲೆಯನ್ನು ಎಲ್ಲಿಯಾದರೂ ಭೂಮಿಯಲ್ಲಿ ಮುಚ್ಚಬೇಕೆಂದು ಹೇಳಿ ಆ ವತ್ಸರಾಯನನ್ನು ಕಳುಹಿಸಿಕೊಟ್ಟು ತಾನು ಹೆಂಡತಿಯಿಂದ ದೀಪವನ್ನು ತರಿಸಿ ಆ ಪತ್ರದಲ್ಲಿರುವ ಅಕ್ಷರಗಳನ್ನು ಓದಿದನು.

ಶ್ಲೋ॥ ಮಾಂಧಾತಾಚಮಹೀಪತಿಃಕೃತಯುಗಾಲಂಕಾರಭೂತೋಗತಃ ।
ಸೇತುರ್ಯೇನಮಹೋದಧೌ ವಿರಚಿತಃಕ್ವಾಸೌದಶಾಸ್ಯಾಂತಕಃ ॥
ಅನ್ಯೇಚಾಪಿಯುಧಿಷ್ಠಿರಪ್ರಭೃತಯೋಯಾತಾದಿವಂಭೂಪತೇ ।
ನೈಕೇನಾಪಿಸಮಂಗತಾವಸುಮತೀನೂನಂತ್ವಯಾಯಾಸ್ಯತಿ ॥

ತಾ॥ ಕೃತಯುಗಕ್ಕೆಲ್ಲಾ ಅಲಂಕಾರಪ್ರಾಯನಾದ ಮಾಂಧಾತರಾಯನೂ ದೊಡ್ಡ ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದ ರಾವಣನನ್ನು ಕೊಂದ ಶ್ರೀರಾಮನೂ, ಇನ್ನೂ ಅನೇಕರಾದ ಧರ್ಮರಾಯನೇ ಮೊದಲಾದವರೆಲ್ಲರೂ ಸತ್ತುಹೋದರು. ಆದರೆ ಅವರೊಬ್ಬರೊಡನೆಯೂ ಈ ಭೂಮಿಯು ಹೋಗಲಿಲ್ಲವು. ಈಗ ನಿನ್ನೊಬ್ಬನಿಂದ ಮಾತ್ರ ಈ ಭೂಮಿಯು ಬರುತ್ತೆ. ಎಂಬವಾಗಿ ಬರೆದಿತ್ತು.

ಗ॥ ರಾಜಾತದರ್ಥಂಜ್ಞಾತ್ವಾ ಶಯ್ಯಾತೋಭೂಮೌಪಪಾತತ ತತ್ರದೇವೀ ಕರಕಮಲಚಾಲಿತಚೇಲಾಂಚಲೇನಕ್ಷಣಾತ್ಸಂಜ್ಞೋಭೂತ್ವಾ ಆದೇವಿವಗಾಂವಾಸ್ಪೃಶ ಹಾಹಾಪುತ್ರಘಾತೀಚಂಡಾಲೋಹಮಿತಿ ಕುರರ ಇವವಿಲಪನ್‌ರಾಜಾದ್ವಾರಪಾಲಾ ನಾನಾಯ್ಯಬ್ರಾಹ್ಮಣಾನ್ ಶೀಘ್ರಮಾನಯತೇತ್ಯಾಹ ತತಸ್ತೈರಾಜ್ಞಯಾಸಮಾಗತಾನ್ ಬ್ರಾಹ್ಮಣಾನ್ನತ್ವಾ ರಾಜಾಪಪ್ರಚ್ಛಮಯಾಪುತ್ರೋಹತಃ ತಸ್ಯಪ್ರಾಯಶ್ಚಿತ್ತಂ ವದಥ, ವಿಪ್ರಾವದನ್ ತತ್ರ ತ್ವಮಾಶು ರಾಜನ್ ಸಹಸಾವಹ್ನಿಂ ಪ್ರವಿಶೇತಿ ತತ

ಸ್ವವೇತ್ಸ್ಯತ್ಯಬುದ್ಧಿಸಾಗರಃ ಪ್ರಾಹದೇವಯಥಾತ್ವಂ ರಾಜಾಧಮಸ್ತಥೈವಾತಿ
ಮಾತ್ಯಾಧಮೋನತ್ರರಾಜಃ। ತವರಾಜ್ಯಂದತ್ವಾಸಿಂಧುಲನೃಪೇಣತ್ವದು
ತ್ಸಂಗೆ ಭೋಜೋಸ್ಥಾಪಿತಃ ತಚ್ಚತ್ವಯಾಪಿತೃವ್ಯೇಣಾಪ್ಯಾಕ್ರಾಂತಂ ॥

ತಾ॥ ಧೊರೆಯಾದ ಮುಂಜನು ಆ ಶ್ಲೋಕಾರ್ಥವನ್ನು ತಿಳಿದುಕೊಂಡು ಮಲಗಿದ್ದ ಮಂಚದಿಂದ ಕೆಳಕ್ಕೆ ಬಿದ್ದು ಮೂರ್ಛಿತನಾಗಲು ಆಗ ಅವನ ಹೆಂಡತಿಯು ತನ್ನ ಶೆರಗಿನಿಂದ ಬೀಸಿ ಉಪಚರಿಸಲು ಸ್ವಲ್ಪ ಚೇತರಿಸಿಕೊಂಡು ಎಲೌ ದೇವಿಯೋ ಪುತ್ರಘಾತಿಯಾದ ಪರಮ ಚಂಡಾಲನಾದ ನನ್ನನ್ನು ಮುಟ್ಟಬೇಡ ಎಂದು ಹೇಳಿ ಆತಕ್ಷಣವೇ ದ್ವಾರಪಾಲಕರನ್ನು ಕರೆದು ಧರ್ಮಶಾಸ್ತ್ರಜ್ಞರಾದ ಬ್ರಾಹ್ಮಣರನ್ನು ಕರಿಸಿ ಎಲೌ ಬ್ರಾಹ್ಮಣೋತ್ತಮರುಗಳಿರಾ ನಾನು ಪುತ್ರನನ್ನು ಕೊಲ್ಲಿಸಿರುವೆನು, ನನಗೆ ಪ್ರಾಯಶ್ಚಿತ್ತವೇನೆಂದು ಕೇಳಲಾಗಿ, ಅವರು ಅಗ್ನಿಪ್ರವೇಶ ಮಾಡಬೇಕೆಂದು ವಿಧಿಸಿದರು. ಆಗ ಬುದ್ಧಿಸಾಗರನೆಂಬ ಮಂತ್ರಿಯು ಬಂದು ಎಲೌ ಧೊರೆಯೋ ನೀನು ಹ್ಯಾಗೆ ನೃಪಾಧಮನೋ ಹಾಗೆ ಮಂತ್ರಿಗಳಲ್ಲಿ ಆವನು ನೀಚನು. ಅದು ಹಾಗಿರಲಿ, ಸಿಂಧುಲರಾಯನು ನಿನಗೆ ರಾಜ್ಯವನ್ನು ಕೊಟ್ಟು ನಿನ್ನ ಬಳಿಯಲ್ಲಿ ಭೋಜಕುಮಾರನನ್ನು ಬಿಟ್ಟಿದ್ದನಷ್ಟೆ, ಚಿಕ್ಕ ತಂದೆಯಾದ ನೀನು ಹೀಗೆ ಮಾಡಿದುದು ಯಾವ ನ್ಯಾಯವೆಂದು ಅಂದುಕೊಂಡನು.

ಶ್ಲೋ॥ ಕತಿಪಯದಿವಸಸ್ಥಾಯಿನಿ ಮದಕಾರಿಣಿ ಯವ್ವನೆದುರಾತ್ಮಾನಃ। ವಿದ
ಧತಿತಥಾಪರಾಧಂ ಜನ್ಮೈವ ಯಥಾಸ್ಯ ವೃಥಾಭವತಿ ॥

ತಾ॥ ಕೆಲವು ದಿನಗಳುಮಾತ್ರ ನಿಲುವ ಮದವನ್ನುಂಟುಮಾಡುವ ಈ ಯವ್ವನದಲ್ಲಿ ಕೆಟ್ಟವರು ತಪ್ಪುಗಳನ್ನು ಮಾಡುವರು ಅವರ ಜನ್ಮವು ವ್ಯರ್ಥವು.

ಶ್ಲೋ॥ ಸಂತಸ್ತೃಣೋತ್ಸಾರಣ ಮುತ್ತಮಾಂಗಾ ತ್ಸುವರ್ಣಕೋಟ್ಯರ್ಪಣ
ಮಾಮನಂತಿ । ಪ್ರಾಣವ್ಯಯೇನಾಪಿಕೃತೋಪಕಾರಾಃ ಖಲಾಃ ಪರೆವೈ
ರಮಿವೋದ್ವಹಂತಿ ॥

ತಾ॥ ಲೋಕದಲ್ಲಿ ಸತ್ಪುರುಷರು ತಲೆಯ ಮೇಲಿದ್ದ ಒಂದು ಹುಲ್ಲನ್ನು ತೆಗೆದುಹಾಕಿದಾಗ್ಯೂ ಅದು ಮಹೋಪಕಾರವೆಂದೆಣಿಸುವರು. ನೀಚರಾದವರೊ ಪ್ರಾಣಗಳನ್ನಾದರೂ ಕೊಟ್ಟು ಉಪಕಾರ ಮಾಡಿದವರನ್ನು ದ್ವೇಷಿಸಿ ಅಪಕಾರ ಮಾಡುತ್ತಾರೆ.

ಶ್ಲೋ॥ ಉಪಕಾರಶ್ಚಾಪಕಾರೊ ಯಸ್ಯವ್ರಜತಿವಿಸ್ಮೃತಿಂ ।

ಪಾಷಾಣಹೃದಯಸ್ಯಾಸ್ಯ ಜೀವತೀತ್ಯಭಿಧಾಮುಧಾ ॥

ತಾ॥ ಯಾವ ಮನುಷ್ಯನಿಗೆ ಮಾಡಿದ ಉಪಕಾರವು ಮರೆತು ಹೋಗುವದೋ ಅಂಥಾ ಕಲ್ಲೆದೆಯುಳ್ಳ ಮನುಷ್ಯನು ಬದುಕಿದ್ದರೂ ಸತ್ತವನಂತೆಯೇ.

ಶ್ಲೋ॥ ಯಥಾಬೀಜಾಂಕುರಸ್ಸೂಕ್ಷ್ಮಃಪ್ರಯತ್ನೇನಾಭಿರಕ್ಷಿತಃ ।
ಫಲಪ್ರದೋಭವೇತ್ಕಾಲೇ ತಥಾಲೋಕಸ್ಸುರಕ್ಷಿತಃ ॥

ತಾ॥ ಬಹಳ ಚಿಕ್ಕದಾದ ಮೊಳಕೆಯನ್ನು ಪ್ರಯತ್ನದಿಂದ ನೀರು ಹಾಕಿ ಸಾಕಿದರೆ ದೊಡ್ಡದಾದಮೇಲೆ ಹೇಗೆ ಫಲ ಕೊಡುವದೊ ಹಾಗೆಯೇ ಜನಗಳನ್ನು ಸರಿಯಾಗಿ ಕಾಪಾಡಬೇಕು.

ಶ್ಲೋ॥ ಹಿರಣ್ಯಧಾನ್ಯರತ್ನಾನಿ ಧನಾನಿವಿವಿಧಾನಿಚ ।
ತಥಾನ್ಯದಪಿಯತ್ಕಿಂಚಿತ್ಪ್ರಜಾಭ್ಯಸ್ಸ್ಯಾನ್ಮಹೀಭೃತಾಂ ॥

ತಾ॥ ರಾಜರುಗಳಿಗೆ ಚಿನ್ನವೂ, ಧಾನ್ಯವೂ, ರತ್ನಗಳೂ ಇನ್ನೂ ಇತರ ಪದಾರ್ಥಗಳೂಕೂಡ ಪ್ರಜೆಗಳಿಂದಲೇ ಉಂಟಾಗುವವು.

ಶ್ಲೋ॥ ರಾಜ್ಞಿಧರ್ಮಿಣಿಧರ್ಮಿಷ್ಠಾಃ ಪಾಪೇಪಾಪಪರಾಸ್ಸದಾ ।
ರಾಜಾನಮನುವರ್ತಂತೇ ಯಥಾರಾಜಾತಥಾಪ್ರಜಾಃ ॥

ತಾ॥ ರಾಜನು ಧರ್ಮಿಷ್ಠನಾದರೆ ಪ್ರಜೆಗಳೂ ಧರ್ಮನಿರತರಾಗುವರು. ರಾಜನು ಪಾಪಿಷ್ಠನಾದರೆ ಪ್ರಜೆಗಳೂ ಪಾಪಿಗಳಾಗುತ್ತಾರೆ. ಅದ್ದರಿಂದ ರಾಜರನ್ನೇ ಪ್ರಜೆಗಳು ಅನುಸರಿಸುತ್ತಾರೆ, ಎಂದು ಹೇಳಿದನು.

ಗ॥ ತತೋರಾತ್ರೌ ವಹ್ನಿಪ್ರವೇಶ ನಿಶ್ಚಿತೇರಾಜ್ಞಿಸರ್ವೇ ಸಾಮಂತಾಃ
ಪೌರಾಶ್ಚಮಿಳಿತಾಃ ಸ್ವಪುತ್ರಂಹತ್ವಾ ಪಾಪಭಯಾದ್ಭೀತೋನೃಪತಿ
ರ್ವಹ್ನಿಂ ಪ್ರವಿಶತೀತಿಕಿಂವದಂತೀ ಸರ್ವತ್ರಾಜನಿ ॥

ತಾ॥ ಆ ಬಳಿಕ ಆ ರಾತ್ರಿಯಲ್ಲಿಯೇ ದೊರೆಯು ಅಗ್ನಿಪ್ರವೇಶ ಮಾಡ ನಿಶ್ಚಯಿಸಲಾಗಿ ಎಲ್ಲಾ ಸಾಮಂತರಾಜರೂ ಪ್ರಜೆಗಳೂ ಗುಂಪುಗುಂಪಾಗಿ ಸೇರಿದರು. ಪಟ್ಟಣದಲ್ಲಿಯಾದರೋ ರಾಯನು ಪುತ್ರನನ್ನು ಕೊಂದು ಆ ಪಾಪ ಪರಿಹಾರಕ್ಕೆ ಅಗ್ನಿಪ್ರವೇಶ ಮಾಡುತ್ತಾನೆಂಬ ವರ್ತಮಾನವು ಹರಡಿಕೊಂಡಿತು.

ಗ॥ ತತ್ರ ಬುದ್ಧಿಸಾಗರಃ ದ್ವಾರಪಾಲಮಾಹೂಯನ ಕೇನಾಪಿನ ಭೂಪಾಲ
ಭವನಂ ಪ್ರವೇಷ್ಟವ್ಯಮಿತ್ಯುಕ್ತ್ವಾ ನೃಪಮಂತಃ ಪ್ರರೆನಿವೇಶ್ಯಸಭಾ
ಯಾಮೇಕಾಕೀಸನ್ ಉಪವಿಷ್ಟಃ ತತೋದಾಹ ಮಾರಣವಾರ್ತಾಂ ಶ್ರು
ತ್ವಾವತ್ಸರಾಜೋರಾಜ ಗೃಹಮಾಗತ್ಯ ಬುದ್ಧಿಸಾಗರಂ ನತ್ವಾಶನೈಃ

ಪ್ರಾಹ ತಾತನುಯಾ ಭೋಜರಾಜೊತ್ರಸ್ಥಿತ ಇತಿ ಬುದ್ಧಿಸಾಗರಸ್ಯ
ಕರ್ಣೇತಸ್ಯಕಿಮಪ್ಯಕಥಯತ್ತಚ್ಛ್ರುತ್ವಾವತ್ಸರಾಜಸ್ಸಿಸ್ಮಿತಾಂತಃ॥

ತಾ॥ ತರುವಾಯ ಬುದ್ಧಿಸಾಗರನು ದ್ವಾರಪಾಲಕನನ್ನು ಅಂತಃಪುರಕ್ಕೆ ಕಳುಹಿಸಿ ಸಭೆಯಲ್ಲಿ ಒಬ್ಬನೇ ಕುಳಿತುಯೋಚಿಸುತ್ತಿರುವಲ್ಲಿ ವತ್ಸರಾಯನುಬಂದು ಬುದ್ಧಿಸಾಗರನೇ ನಾನು ಭೋಜಕುಮಾರನನ್ನು ಕಾಪಾಡುತ್ತಿಧೇನೆಂದು ಹೇಳಲಾಗಿ ಮಂತ್ರಿಯಾದ ಬುದ್ಧಿಸಾಗರನು ವತ್ಸರಾಜನ ಕಿವಿಯಲ್ಲಿ ಏನೋ ಹೇಳಲು ವತ್ಸರಾಯನು ತೆರಳಿದನು.

ಗ॥ ತತೋಮುಹೂರ್ತೇನ ಕೋಪಿಕರಕಲಿತದಂತೀಂದ್ರದಂತ ದಂಡೋವಿರ
ಚಿತಪ್ರತ್ಯಗ್ರಜಟಾಕಲಾಪಃ।ಕರ್ಪೂರಕರಂಬಿತ ಭಸಿತಾನನೋದ್ಧೂಳಿ
ತ ಸಕಲತನುವಲ್ಲರಿಃ ಮನ್ಮಥಇವ ಸ್ಫಟಿಕಕುಂಡಲ ಮಂಡಿತಕರ
ಯುಗಳಃ ಕೌಶೇಯ ಕೌಪೀನೋಪಮೂರ್ತಿರ್ವಾ ಚಂದ್ರಚೂಡ ಇವ
ಸಭಾಂ ಕಾಪಾಲಿಕಸ್ಸಮಾಗತಃ ತಂವೀಕ್ಷ್ಯಬುದ್ಧಿಸಾಗರಃ ಪ್ರಾಹ
ಯೋಗೀಂದ್ರಕುತ ಆಗಮ್ಯತೇ ಕುತ್ರತೇನಿವೇಶಸ್ತ್ವ ಕಾಪಾಲಿಕತ್ವಯಿ
ಯುಷ್ಮಚ್ಚಮತ್ಕಾರಕಾರೀಕಳಾ ವಿಶೇಷ ಔಷಧವಿಶೇಷೋಪ್ಯಸ್ತಿ ಯೋ
ಗೀಪ್ರಾಹ ॥

ತಾ॥ ಬಳಿಕ ಒಂದು ಮುಹೂರ್ತದಲ್ಲಿಯೇ ಒಬ್ಬಾನೊಬ್ಬ ಕಾಪಾಲಿಯು ಕೈಯಲ್ಲಿ ಮದ್ದಾನೆಯ ದಂತವನ್ನು ಧರಿಸಿಕೊಂಡು ಜಟೆಗಳನ್ನು ಸುತ್ತಿಕೊಂಡು ಕರ್ಪೂರಕ್ಕಿಂತಲೂ ಚೆನ್ನಾಗಿರುವ ವಿಭೂತಿಯನ್ನು ಬೊಳಿದುಕೊಂಡು ಸಾಕ್ಷಾತ್ ಮನ್ಮಥನಂತೆ ಸ್ಫಟಿಕಮಾಲೆಗಳನ್ನು ಕೈಲಿ ಧರಿಸಿಕೊಂಡು ಕೈಲಾಸದಿಂದಿಳಿದುಬಂದ ಸಾಕ್ಷಾತ್ಪರಮೇಶ್ವರನಂತೆ ಸಭೆಗೆ ಬರಲಾಗಿ ಆಗ ಬುದ್ಧಿಸಾಗರನು ನೋಡಿ ನೀನು ಯಾರು, ನಿನ್ನ ಸ್ಥಳವಾವುದು ಕಾಪಾಲಿಕನಾದ ನಿನ್ನಲ್ಲಿರುವ ಚಮತ್ಕಾರ ವಿದ್ಯೆಯಾವುದು, ಅಲ್ಲದೆ ಔಷಧಿಗಳೇನನ್ನಾದರೂ ಬಲ್ಲೆಯಾ ? ಎಂದು ಪ್ರಶ್ನೆಮಾಡಲಾಗಿ ಆ ಕಾಪಾಲಯೋಗಿಯು ಹೇಳುತ್ತಾನೆ.

ಶ್ಲೋ॥ ದೇಶೆದೇಶೇಭವನಂಭವನೇ ತಥೈವಭಿಕ್ಷಾನ್ನಂಸರಸಿಚ ।
ಸದ್ಯಾಂಸಲಿಲಂಶಿವಶಿವ ತತ್ವಾರ್ಥವೇದಿನಾಂಪುಂಸಾಂ ॥

ತಾ॥ ತತ್ವಾರ್ಥವನ್ನು ತಿಳಿದವರಿಗೆ ಯಾವ ದೇಶದಲ್ಲಿಯೂ ಯಾವ ಮನೆಯಲ್ಲಿಯೂ ಭಿಕ್ಷಾನ್ನವು ಸುಲಭವಾಗಿರುವುದು ಮತ್ತುನದಿ ಕೆರೆಗಳಲ್ಲಿಯೂ ನೀರು ಸುಲಭವಾಗಿ ಸಿಕ್ಕುವುದು.

ಶ್ಲೋ॥ ಗ್ರಾಮೇಗ್ರಾಮೇ ಕುಟೀರಮ್ಯಾ ನಿರ್ಝರೇ ನಿರ್ಝರೇಜಲಂ ।

ಭಿಕ್ಷಾಯಾಂ ಸುಲಭಂ ಚಾನ್ನಂ ವಿಭವೈಃ ಕಿಂ ಪ್ರಯೋಜನಂ ॥

ತಾ॥ ಯಾವ ಗ್ರಾಮದಲ್ಲಿಯೂ ಗುಡಿಸಲೂ ಯಾವ ನದಿ ಕೆರೆಗಳಲ್ಲಿಯೂ ನೀರು ಭಿಕ್ಷೆಗೆ ಹೋದರೆ ಅನ್ನವೂ ಸುಲಭವಾಗಿ ಶಿಕ್ಕುತ್ತಿರಲು ಐಶ್ವರ್ಯಗಳಿಂದೇನು ಪ್ರಯೋಜನವು.

ಗ॥ ದೇವ ವಿಸ್ಮಯಕಮಂತ್ರೋಪೇತಃ ಸಕಲಭೂಮಂಡಲಂ ಭ್ರಮಾಮಃ। ಗುರೂಪದೇಶತಃ ಸ್ವಾಮಿನ್ ಅಖಿಲಭುವನತಲಂ ಕರತಲಾಮಲಕವತ್ಪಶ್ಯಾಮಃ ಸರ್ಪದಷ್ಟಂ ವಿಷವ್ಯಾಕುಲಂ ರೋಗಗ್ರಸ್ತಂ ಶಸ್ತ್ರಭಿನ್ನಶಿರಸಂ ಕಾಲಶಿಥಿಲಂ ಚ ತತ್ಕ್ಷಣಾದೇವ ವಿಗತ ಸಕಲದುಃಖವ್ಯಾಧಿಸಂಚಯಂ ಕುರ್ಮಃ ಇತಿ। ರಾಜಾಪಿ ಕಾಪ್ಯಂತರೇ ತತ್ರ ಶ್ರುತಸಕಲವೃತ್ತಾಂತಃ ಸಭಾಮಾಗತ್ಯ ಕಾಪಾಲಿಕಂ ದಂಡವತ್ಪ್ರಣಮ್ಯ ಯೋಗೀಂದ್ರ ಸುರಕಲ್ಪ ಪರೋಪಕಾರಪರಾಯಣ ಮಹಾಪಾಪಿನಾ ಮಯಾ ಹತಸ್ಯ ಪುತ್ರಸ್ಯ ಪ್ರಾಣದಾನೇನ ಮಾಂ ರಕ್ಷ ರಕ್ಷೇತ್ಯಾಹ ಅಥ ಕಾಪಾಲಿಕೋಪಿ ರಾಜನ್ ಮಾ ಭೈಷೀಃ ಪುತ್ರಸ್ತೇ ಸಮುತ್ಥಾಸ್ಯತಿ ಶಿವಪ್ರಸಾದೇನ ಸ್ವಕಂ ಗೃಹಂ ಗಮಿಷ್ಯತಿ। ಪರಂ ಶ್ಮಶಾನಭೂಮೌ ಬುದ್ಧಿಸಾಗರೇಣ ಸಹ ಹೋಮದ್ರವ್ಯಾಣಿ ಪ್ರೇಷಯ ಇತ್ಯವೋಚತ್ ತತೋ ರಾಜಾ ಕಾಪಾಲಿಕೇನ ಯದುಕ್ತಂ ತತ್ಸರ್ವಂ ತಥಾ ಕಾರಿತಂ ಬುದ್ಧಿಸಾಗರಪ್ರೇಷಿತೇ ತತೋ ರಾತ್ರೌ ಗೂಢರೂಪೇಣ ಭೋಜೋಪಿ ತತ್ರ ನಿಪುಣೈರ್ನೀತಃ ಯೋಗಿನಾ ಭೋಜೋ ಜೀವಿತ ಇತಿ ಪ್ರಥಾ ಜನಸ್ಯಾಭೂತ್ ॥

ತಾ॥ ಕಾಪಾಲಿಯು ಬುದ್ಧಿಸಾಗರನನ್ನು ಕುರಿತು ಸ್ವಾಮಿ ನಮಗೆ ಒಂದು ಸವೇವೇ ಎಲ್ಲಾ ಭೂಮಂಡಲವನ್ನೂ ತಿರುಗುತ್ತೇವೆ ಗುರುವಿನ ಮಾತಿನಂತೆ ಇರುವೆವು. ಎಲ್ಲಾ ಪ್ರಪಂಚವನ್ನೂ ಅಂಗೈಲಿ ಇದ್ದಂತೆ ತಿಳಿದಿರುವೆವು. ನಾವು ಹಾವು ಕಚ್ಚಿದವನನ್ನೂ, ವಿಷಪಾನಮಾಡಿವವನನ್ನೂ ರೋಗಿಷ್ಠನನ್ನೂ ಆಯುಧದಿಂದ ಕತ್ತರಿಸಲ್ಪಟ್ಟ ಅವಯವಗಳುಳ್ಳವನನ್ನೂ ಮೊದಲಾದವರನ್ನು ಒಂದು ಕ್ಷಣಮಾತ್ರದಲ್ಲಿಯೇ ಬದುಕಿಸುವೆವು. ಎಂದು ಹೇಳಿದ ಕಾಪಾಲಿಕನ ಮಾತನ್ನು ರಾಜನು ಕೇಳಿಕೊಂಡಿದ್ದು ಸಭೆಗೆ ಬಂದು ಕಾಪಾಲಿಕನಿಗೆ ಅಡ್ಡಬಿದ್ದು ಯೋಗೀಂದ್ರರೇ ಪರೋಪಕಾರ ಪರಾಯಣರೇ ಪಾಪಿಷ್ಠನಾದ ನಾನು ಪುತ್ರವಧೆಯನ್ನು ಮಾಡಿರುವೆನು. ನಮ್ಮ ಕುಮಾರನನ್ನು ಬದುಕಿಸಿ ಪ್ರಾಣದಾನವನ್ನು ಮಾಡಬೇಕೆಂದು ಬೇಡಿಕೊಳ್ಳಲಾಗಿ ಎಲೈ ದೊರೆಯೇ ನಿನ್ನ ಮಗನು ಸಾಯುವದಿಲ್ಲವು ಶಿವನ ಅನುಗ್ರಹದಿಂದ ಬದುಕುತ್ತಾನೆ. ಆದರೆ ಬುದ್ಧಿಸಾಗರನಿಂದ ಶ್ಮಶಾನಕ್ಕೆ ಬೇಕಾದ ಹೋಮ

ದ್ರವ್ಯಗಳನ್ನು ಕಳುಹಿಸಲು ತಕ್ಷಣ ರಾಯನು ಬುದ್ಧಿಸಾಗರನಿಗೆ ಬೇಕಾದ ದ್ದನ್ನೆಲ್ಲಾ ಒದಗಿಸಿ ಕೊಡೆಂದು ಆಜ್ಞಾಪಿಸಿ ಕಳುಹಿಸಿದನು. ಬಳಿಕ ರಾತ್ರಿಯಲ್ಲಿ ಯಾರೂ ಕಾಣದ ತೆ ಅಲ್ಲಿದ್ದ ನದೀ ತೀರಕ್ಕೆ ಭೋಜನನ್ನು ಕರೆತಂದು ಯೋಗಿಯಾದ ಕಾಪಾಲಿಕನು ಬದುಕಿಸಿದನೆಂದು ಪ್ರಸಿದ್ಧಿಯುಂಟಾಯಿತು.

ಗ॥ ತತೋಗಜೇಂದ್ರಾರೂಢೋವನ್ದಿಭಿಸ್ತೂಯಮಾನೋ ಭೇರೀಮೃದಂಗಾ
ದಿಘೋಷೈರ್ಜಗದ್ಬಧಿರೀಕುರ್ವನ್ ಪೌರಾಮಾತ್ಯ ಪರಿವೃತೋಭೋಜೋ
ರಾಜಭವನಮಗಾತ್ । ರಾಜಾಚತಮಾಲಿಂಗ್ಯರೋದಿತಿ ಭೋಜೋಪಿ
ರುದಂತಂಮುಂಜಂನಿವಾರ್ಯಅಸ್ತೌಷೀತ್ ತತಸ್ಸಂತುಷ್ಟೋರಾಜಾನಿಜ
ಸಿಂಹಾಸನೇತಂನಿವೇಶ್ಯಛತ್ರಚಾಮರಾಭ್ಯಾಂಭೂಷಯಿತ್ವಾತಸ್ಮೈರಾ
ಜ್ಯಂದದೌನಿಜಪುತ್ರೇಭ್ಯಃ ಪ್ರತ್ಯೇಕಮೇಕೈಕಂಗ್ರಾಮಂದತ್ವಾಪರ
ಮ ಪ್ರೇಮಾಸ್ಪದಂಜಯಂತಂ ಭೋಜಂನಿಜಾಂಶೆ ನಿವೇಶಯಾಮಾಸ
ತತಃಪರಲೋಕಪರಿತ್ರಾಣ ಪರೋಮುಂಜೋಪಿ ನಿಜಪಟ್ಟರಾಜ್ಞೀಭಿ
ಸ್ಸಹ ತಪೋವನಭೂಮಿಂಗತ್ವಾ ಪರಂತಪಸ್ತೇಪೆ ॥

ತಾ॥ ಆಮೇಲೆ ಭೋಜಕುಮಾರನನ್ನು ಆನೆಯಮೇಲೆ ಕೂರಿಸಿಕೊಂಡು ಸ್ತುತಿಪಾಠಕರು ಪೊಗಳುತ್ತಿರಲು ನಗಾರೆ ಮದ್ದಳೆ ಮೊದಲಾದ ವಾದ್ಯಗಳು ಭೋರ್ಗರೆಯುತ್ತಿರಲು ಪ್ರಜೆಗಳು ಮಂತ್ರಿಗಳು ಮೊದಲ್ಗೊಂಡು ಅರಮನೆಗೆ ಕರತಂದರು. ಆಗ ಮುಂಜರಾಯನು ಕುಮಾರನನ್ನು ಆಲಿಂಗಿಸಿಕೊಂಡು ಅಳುತ್ತಿರಲು ಭೋಜನು ಸಮಾಧಾಯಿಸಿದನು. ಬಳಿಕ ಮುಂಜನು ಸಂತುಷ್ಟನಾಗಿ ತನ್ನ ಸಿಂಹಾಸನದಲ್ಲಿ ಭೋಜನನ್ನು ಕುಳ್ಳಿರಿಸಿ ಛತ್ರಚಾಮರಗಳಿಂದಲಂಕರಿಸಿ ಆ ಭೋಜನಿಗೆ ರಾಜ್ಯವನ್ನು ಕೊಟ್ಟು ತನ್ನ ಮಕ್ಕಳುಗಳಿಗೆ ಒಂದೊಂದು ಗ್ರಾಮವನ್ನು ಕೊಟ್ಟು ತನ್ನ ಪ್ರೀತಿಪಾತ್ರನಾದ ಜಯಂತನೆಂಬುವನನ್ನು ಭೋಜನ ಸಮೀಪದಲ್ಲಿಟ್ಟು ತಾನು ಪರಲೋಕ ಪುಣ್ಯ ಸಂಪಾದಿಸಲು ತನ್ನ ಪಟ್ಟಣದ ರಾಣಿಗಳೊಡನೆ ತಪೋವನವಂ ಪೊಕ್ಕು ತಪಸ್ಸು ಮಾಡುತ್ತಿದ್ದನು.

ಗ॥ ತತೋಭೋಜ ಭೂಪಾಲಶ್ಚ ದೇವಬ್ರಾಹ್ಮಣ ।
ಪ್ರಸಾದಾದ್ರಾಜ್ಯಂ ಪಾಲಯಾಮಾಸ ॥

ತಾ॥ ತರುವಾಯ ಭೋಜ ಭೂಪಾಲನು ದೇವಬ್ರಾಹ್ಮಣ ಅನುಗ್ರಹದಿಂದ ರಾಜ್ಯವನ್ನು ಕಾಪಾಡುತ್ತಿದ್ದನು.

ಗ॥ ಇತಿ ಭೋಜರಾಜಸ್ಯ ರಾಜ್ಯಪ್ರಾಪ್ತಿ ಪ್ರಬಂಧಸ್ಸಮಾಪ್ತಃ ॥
ಇಂತು ಭೋಜರಾಯನಿಗೆ ರಾಜ್ಯಲಾಭವಾಯಿತೆಂಬ ಭಾಗವು ಮುಗಿದದ್ದು.

## ಭೋಜರಾಜ ರಾಜ್ಯರಕ್ಷಣೆಯು.

ಗ॥ ತತೋಮುಂಜೇತಪೋವನಂಯಾತೇ ಬುದ್ಧಿಸಾಗರಂ ಮುಖ್ಯಾಮಾತ್ಯಂ ವಿಧಾಯಸ್ವರಾಜ್ಯಂಬುಭುಜೇ । ಏವಂಸ್ಥಿತೇಭೋಜಭೂಪತಿಃ ಕದಾಚಿತ್ಕ್ರೀಡೋದ್ಯಾನಂಗಚ್ಛನ್ ಕಮಪಿಧಾರಾನಗರವಾಸಿನಂ ವಿಪ್ರಂದೃಷ್ಟವಾನ್ ಸವಿಪ್ರಶ್ಚರಾಜಾನಂ ವೀಕ್ಷ್ಯನೇತ್ರೇನಿಮೀಲ್ಯ ಆಗಚ್ಛನ್ರಾಜ್ಞಾ ಪೃಷ್ಟಃ । ದ್ವಿಜತ್ವಂಮಾಂದೃಷ್ಟ್ವಾ ಸ್ವಸ್ತೀತಿನಜಲ್ಪಸಿ ವಿಶೇಷೇಣಲೋಚನೇ ನಿಮೀಲಯಸಿತತ್ರಕೋಹೇತುರಿತಿ ವಿಪ್ರಆಹ ದೇವತ್ವಂ ವೈಷ್ಣವೋಸಿವಿಪ್ರಾಣಾಂ ನೋಪದ್ರವಂ ಕರಿಷ್ಯಸಿತತಸ್ತ್ವತ್ತೋನ ಮೇಭೀತಿಃ ಕಿಂತುಕಸ್ಮೈಚಿತ್ಕಮಪಿನಪ್ರಯಚ್ಛಸಿತೇನ ತವದಾಕ್ಷಿಣ್ಯಮಪಿನಾಸ್ತಿ । ಅತಸ್ತೇಆಶೀರ್ವಚನೇ ಕಿಂಚಪ್ರಾತರೇವಕೃಪಣಮುಖಾವಲೋಕನಾತ್ ಪರತೋಲಾಭಹಾನಿಸ್ಸ್ಯಾತ್ । ಇತಿಲೋಕೋಕ್ತ್ಯೈಲೋಚನೇನಿಮೀಲಿತೇ ॥

ತಾ॥ ಆ ಮೇಲೆ ಮುಂಜರಾಯನು ತಪೋವನಕ್ಕೆ ಹೋಗಲಾಗಿ ಭೋಜರಾಯನು ಬುದ್ಧಿಸಾಗರನನ್ನು ಮುಖ್ಯಮಂತ್ರಿಯನ್ನಾಗಿ ಮಾಡಿಕೊಂಡು ರಾಜ್ಯವಾಳುತ್ತಿದ್ದನು. ಹೀಗಿರಲೊಂದಾನೊಂದು ದಿನ ಭೋಜರಾಯನು ಉದ್ಯಾನವನಕ್ಕೆ ಹೋಗುತ್ತಿರಲು ದಾರಿಯಲ್ಲಿ ಒಬ್ಬಾನೊಬ್ಬ ಧಾರಾನಗರವಾಸಸ್ಥನಾದ ಬ್ರಾಹ್ಮಣನು ರಾಜನನ್ನು ನೋಡಿ ಕಣ್ಣುಗಳನ್ನು ಮುಚ್ಚಿಕೊಂಡನು. ಅದನ್ನು ನೋಡಿ ರಾಜನು ಎಲಾ ಬ್ರಾಹ್ಮಣನೇ ನೀನು ಯಾಕೆ ನನ್ನನ್ನು ನೋಡುತಲೂ ಕಣ್ಣುಗಳನ್ನು ಮುಚ್ಚಿದೆ ಎಂದು ಕೇಳಲಾಗಿ ಬ್ರಾಹ್ಮಣನು ಅಯ್ಯಾ ಧೊರೆಯೇ ನೀನು ವಿಷ್ಣುವಿನ ರೂಪವುಳ್ಳವನು ನಾನು ಬ್ರಾಹ್ಮಣರಿಗೆ ಯೇನೂ ತೊಂದರೆಯನ್ನು ಮಾಡುವದಿಲ್ಲವು. ಆದ್ದರಿಂದ ನನ್ನ ಭಯವೇನೂ ಇಲ್ಲವಿದ್ದರೂ ನೀನು ಯಾರಿಗೂ ಏನೂ ಕೊಡದೆ ಕೃಪಣನಾಗಿದ್ದಿ ನಿನಗೆ ಆಶೀರ್ವಾದ ಮಾಡಿದರೆ ಏನು ಪ್ರಯೋಜನವು ಅಲ್ಲದೆ ಬೆಳಗ್ಗೆ ಯೆದ್ದು ಕೃಪಣರನ್ನು ನೋಡಿದರೆ ಇನ್ನೆಲ್ಲಿಯೂ ಏನೂ ಹುಟ್ಟುವದಿಲ್ಲ ಯೆಂಬಗಾಥೆ ಇರುವದ್ದರಿಂದ ನಾನು ಕಣ್ಣುಗಳನ್ನು ಮುಚ್ಚಿಕೊಂಡೆನು. ಯೆಂದು ಹೇಳಿದನು. ಅಲ್ಲದೆ,

ಶ್ಲೋ॥ ಪ್ರಸಾದೋನಿಷ್ಫಲೋಯಸ್ಯ ಕೋಪಶ್ಚಾಪಿನಿರರ್ಥಕಃ ।
ನತಂರಾಜಾನಮಿಚ್ಛಂತಿ ಪ್ರಜಾಃಷಂಡಮಿವಸ್ತ್ರಿಯಃ ॥

ತಾ॥ ಯಾವ ದೊರೆಯ ವಿಶ್ವಾಸವು ನಿಷ್ಪ್ರಯೋಜನವಾಗಿರುವದೊ ಯಾವರಾಯನ ಕೋಪವು ಸಾರ್ಥಕವಾಗುವದಿಲ್ಲವೊ ಅಂಥಾ ರಾಜನನ್ನು ಹೆಂಗಸರು ನಪುಂಸಕನನ್ನು ತೊರೆಯುವಂತೆ ಪ್ರಜೆಗಳು ಉದಾಸೀನ ಮಾಡುತ್ತಾರೆ.

ಶ್ಲೋ॥ ಅಶ್ವಸ್ಯಕ್ಲೀಬಸ್ಯಯಾವಿದ್ಯಾ ಕೃಪಣಸ್ಯಚಯದ್ಧನಂ ।
ಯಚ್ಚಬಾಹುಬಲಂಭೀರೋಃ ವ್ಯರ್ಥಮೇತತ್ರಯಂಭುವಿ ॥

ತಾ॥ ನಾಚಿಕೆಗೇಡಿನವನ, ವಿದ್ಯೆಯೂ ಜಿಪುಣನ ಹಣವೂ,ಹೆದರುವವನ ಬಾಹುಬಲವೂ ಈ ಮೂರು ಲೋಕದಲ್ಲಿ ವ್ಯರ್ಥವಾದವುಗಳು.

ಗ॥ ದೇವಮಾತ್ರಿಕಾಕಾಶೀಂಪ್ರತಿಗಚ್ಛತ ಮಯಾಶಿಕ್ಷಾಂಕೃಷ್ಟಃ । ತಾತ ಮಯಾಕಿಂಕರ್ತವ್ಯಮಿತಿ ॥

ತಾ॥ ಎಲೈ ರಾಯನೇ ನಮ್ಮ ತಂದೆಯು ಕಾಶಿಗೆ ಹೋಗುವಾಗ ನನಗೆ ಬುದ್ಧಿ ಹೇಳಿರುವದೇನಂದರೆ—

ಶ್ಲೋ॥ ಯಾತಿತಸ್ಯಪದಮುನ್ಮಿದ್ಯನ್ನುಕ್ಲೀಬಸ್ಯ ಷ್ಟ್ರೀಕಿವಾಸ್ಮಸೇವಿಪ್ಯಾ ।
ಸಚಿವಜಿತಂಬಿದ್ಧಿತಂ ಯುವತಿಜಿತಂಚೈವರಾಜಾನಂ ॥

ತಾ॥ ಎಲೈ ಮಗನೇ ಕೆಳಗಿನ ಅಧಿಕಾರಿಗಳ ಮಾತಿನಂತೆಯೇ ನಡೆಯುವ ನಪುಂಸಕರ ಸಲಹೆಯನ್ನು ಕೇಳುವ ಹೆಂಗಸರ ಇಷ್ಟದಂತೆ ನಡಿಯುವರಾಜನನ್ನು ಸೇವೆ ಎಂದಿಗೂ ಶೇವಿಸಬೇಡ. ಮತ್ತು—

ಶ್ಲೋ॥ ಅವಿವೇಕಮತಿರ್ನೃಪತಿಃ ಮಂತ್ರಿಷುಗುಣವತ್ಸುವಕ್ರಿತಗ್ರೀವಃ ।
ಯತ್ರಖಲಾಶ್ಚಪ್ರಬಲಾಃ ತತ್ರಕಥಂಸಜ್ಜನಾವಸತಃ ॥

ತಾ॥ ದೊರೆಗೆ ಬುದ್ಧಿಯಿಲ್ಲದಿರುವಿಕೆಯು ಮಂತ್ರಿಗಳು ಬುದ್ಧಿವಂತರಾಗಿದ್ದರೆ ಅವರ ಮಾತುಗಳು ಸರಿ ಬೀಳದೆ ಇರುವದು. ಮತ್ತು ದುಷ್ಟರುಹೆಚ್ಚಿರುವ ರಾಯನಲ್ಲಿ ಒಳ್ಳೆಯವರಿಗೆ ಅವಕಾಶವಾಗಿರುವದಿಲ್ಲವು.

ಶ್ಲೋ॥ ರಾಜಾಧನೈಶ್ವರ್ಯಹೀನೋಪಿ ಸೇವ್ಯಸೇವ್ಯಗುಣಾಶ್ರಯಃ ।
ಭವತ್ಯಾಜೀವನಂತಸ್ಮಾತ್ಫಲಂಕಾಲಾಂತರಾದಪಿ ॥

ತಾ॥ ಧೊರೆಯು ಐಶ್ವರ್ಯಹೀನನಾದರೂ ಒಳ್ಳೇ ಗುಣವಂತನಾಗಿದ್ದಲ್ಲಿ ಅಂಥವನನ್ನು ಸೇವಿಸಬಹುದು. ಅಂಥವನಿಂದ ಎಂದಿಗಾದರೂ ಜೀವನ ಉಂಟಾದೀತು.

ಗ॥ ಅಹೋತವ ದಾಕ್ಷಿಣ್ಯಂನಹಿಭವತಿ। ಪೂರ್ವಕರ್ಣದಧೀಚಿಶಿಬಿವಿಕ್ರಮ ಪ್ರಮುಖಾಃಕ್ಷಿತಿಪಾಃ ಯಥಾಪರಲೋಕಮಲಂಕುರ್ವಾಣಾಃ ನಿಜದಾನ ಸಮುದ್ಭೂತ ದಿವ್ಯಗುಣೈರ್ನಸಂತಿಮಹೀಮಂಡಲೇ ತಥಾಕೇಪರೇ ರಾಜಾನಃ ॥

ತಾ॥ ಆದ್ದರಿಂದ ಏನನ್ನೂ ಕೊಡದ ನಿನ್ನ ದಾಕ್ಷಿಣ್ಯವೇನಿರುವುದು. ಪೂರ್ವಕಾಲದೋಳ್ ಕರ್ಣ ದಧೀಚಿ ಶಿಬಿವಿಕ್ರಮಾರ್ಕನೇ ಮೊದಲಾದವರು ತಾವು ಮಾಡಿದ ಪುಣ್ಯದಾನಗಳ ಪ್ರಭಾವದಿಂದ ಪುಣ್ಯ ಲೋಕಗಳನ್ನು ಪಡೆದರೋ ಅಂಥವರು ಈಗ ಯಾರುತಾನೆ ಇರುವರು.

ಶ್ಲೋ॥ ದೇಹೇಪಾತಿನಿಕಾರಕ್ಷ್ಯಾ ಯಶೋರಕ್ಷ್ಯಮಪಾತವತ್ ।
ನರಃಪತಿತಕಾಯೋಪಿ ಯಶಃಕಾಯೇನಜೀವತಿ ॥

ತಾ॥ ದೇಹವು ಸಾಯಬೇಕಾಗಿರಲಾಗಿ ಯಾವದನ್ನು ಕಾಪಾಡಬೇಕು ? ಭದ್ರವಾಗಿ ಕೀರ್ತಿಯನ್ನೇ ಸಲಹತಕ್ಕದ್ದು. ಮನುಷ್ಯನ ಶರೀರವು ನಾಶವಾದರೂ ಕೀರ್ತಿಯು ನಾಶವಾಗುವದಿಲ್ಲವು.

ಶ್ಲೋ॥ ಪಂಡಿತೇಚೈವಮೂರ್ಖೇಚ ಬಲವತ್ಯಪಿದುರ್ಬಲೇ ।
ಈಶ್ವರೇಚದರಿದ್ರೇಚ ಮೃತ್ಯೋಸ್ಸರ್ವತ್ರತುಲ್ಯತಾ ॥

ತಾ॥ ಮೃತ್ಯು ಸಾವಿಗೆ ಪಂಡಿತನೂ, ದಡ್ಡನೂ, ಬಲಿಷ್ಟನೂ, ಬಲಹೀನನೂ, ಹಣಗಾರನೂ, ಬಡವನೂ ಎಲ್ಲರೂ ಒಂದೇ ಸಮಾನವು.

ಶ್ಲೋ॥ ನಿಮೇಷಮಾತ್ರಮಪಿತು ವಯೋಗಚ್ಛನ್ನತಿಷ್ಠತಿ ।
ತಸ್ಮಾದ್ದೇಹೇಷ್ವನಿತ್ಯೇಷು ಕೀರ್ತಿಮೇಕಾಮುಪಾರ್ಜಯೇತ್ ॥

ತಾ॥ ಒಂದು ನಿಮಿಷವೂ ಕೂಡ ನಿಲ್ಲದೆ ಈ ದೇಹವು ಅಸ್ಥಿರವಾಗಿರುವುದು. ಆದ್ದರಿಂದ ಮುಖ್ಯವಾಗಿ ಕೀರ್ತಿಸಂಪಾದಿಸಬೇಕು.

ಶ್ಲೋ॥ ಜೀವಿತಂತದಪಿಜೀವಿತಮಧ್ಯೇ ಗಣ್ಯತೇಸುಕೃತಿಭಿಃಕಿಮುಪುಂಸಾಂ ।
ಜ್ಞಾನವಿಕ್ರಮಕಲಾಕುಲಲಜ್ಜಾ ತ್ಯಾಗಭೋಗರಹಿತಂವಿಫಲಂಯತ್ ॥

ತಾ॥ ತ್ಯಾಗವೂ, ಭೋಗವೂ, ಜ್ಞಾನವೂ, ಶೌರ್ಯವೂ, ಪಾಂಡಿತ್ಯವೂ, ಸತ್ಕುಲವೂ, ನಾಚಿಕೆಯೂ ಇಂಥಾ ಗುಣಗಳಿಲ್ಲದವನ ಜೀವನವನ್ನು ಮೃತ ಜೀವನವೆಂದು ದೊಡ್ಡವರು ಹೇಳುವರು.

ಗ॥ ರಾಜಾಪಿತೇನವಾಕ್ಯೇನ ಪೀಯೂಷಪೂರಸ್ನಾತ ಇವಪರಬ್ರಹ್ಮಣಿಲೀನ ಇವಲೋಚನಾಭ್ಯಾಂ ಹರ್ಷಾಶ್ರೂಣಿಮುಮೋಚ ಪ್ರಾಹಚ ದ್ವಿಜಂ ವಿಪ್ರವರಶ್ರುಣು ॥

ತಾ॥ ಆ ಮಾತುಗಳನ್ನು ಕೇಳಿ ಧೊರೆಯಾದ ಭೋಜನು ಪರಬ್ರಹ್ಮ ನಲ್ಲಿ ಲೀನನಾದಂತೆ ಅಮೃತಾಭಿಷಿಕ್ತನಂತೆ ಸಂತೋಷಪಟ್ಟು ಬ್ರಾಹ್ಮಣನನ್ನು ಕುರಿತು ಹೇಳಿದ್ದೇನೆಂದರೆ:—

ಶ್ಲೋ॥ ಸುಲಭಾಃಪುರುಷಾಃಲೋಕೇ ಸತತಂಪ್ರಿಯವಾದಿನಃ ।
ಅಪ್ರಿಯಸ್ಯಚಪಥ್ಯಸ್ಯ ವಕ್ತಾಶ್ರೋತಾಚದುರ್ಲಭಂ ॥

ತಾ॥ ಎಲೌ ಬ್ರಾಹ್ಮಣನೇ ಈ ಲೋಕದಲ್ಲಿ ಯಾವಾಗಲೂ ಯಜಮಾನನ ಇಷ್ಟದಂತೆ ಮಾತನಾಡುವರು ಬಹಳ ಜನಗಳಿರುತ್ತಾರೆ. ಯಜಮಾನನಿಗೆ ಕೋಪಬಂದರೂ ಅವನ ಹಿತಕ್ಕೇನೆ ಒಳ್ಳೆಮಾತುಗಳನ್ನು ತಿಳಿಸತಕ್ಕವರು ಅಪರೂಪವು.

ಶ್ಲೋ॥ ಮನೀಷಿಣಸ್ಸಂತಿನತೇಹಿತೈಷಿಣೋ ಹಿತೈಷಿಣಸ್ಸಂತಿನತೇಮನೀಷಿಣಃ।
ಸುಹೃಚ್ಚವಿದ್ವಾನಪಿದುರ್ಲಭೋನೃಣಾಂ ಯಥೌಷಧಂಸ್ವಾದುಹಿತಂಚದುರ್ಲಭಂ ॥

ತಾ॥ ಲೋಕದಲ್ಲಿ ತಿಳಿದವರಾದರೂ ಹಿತವಾದಿಗಳಲ್ಲವು. ಹಿತವಾದಿಗಳಾಗಿದ್ದರೆ ಪಾಂಡಿತ್ಯವಿರುವದಿಲ್ಲವು. ಆದ್ದರಿಂದ ವಿದ್ವಾಂಸನಾಗಿಯೂ ಹಿತವಾದಿಯಾಗಿಯೂ ಇರುವುದು ರುಚಿಯಾಗಿಯೂ ರೋಗ ನಾಶಕವಾಗಿಯೂ ಇರುವ ಔಷಧಿಯಂತೆ ಅಪರೂಪವು.

ಗ॥ ವಿಪ್ರಾಯಲಕ್ಷಂದತ್ವಾದ್ವಿಜಕಿಂತೇನಾಮೇತ್ಯಾಹವಿಪ್ರಃ ಸ್ವನಾಮಭೂಮೌಲಿಖತಿಗೋವಿಂದ ಇತಿರಾಜಾವಾಚಯಿತ್ವಾ ವಿಪ್ರಪ್ರತ್ಯಹಂ ರಾಜಭವನಮಾಗಂತವ್ಯಂ ನತೇಕಶ್ಚಿನ್ನಿಷೇಧಃ ವಿದ್ವಾಂಸಃಕವಯಶ್ಚ ಕೌತುಕಾತ್ಸಭಾಮಾನೇತವ್ಯಾಃ । ಕೋಪಿವಿದ್ವಾನ್ನದುಃಖಭಾಗಸ್ತು ಇನಮಧಿಕಾರಂ ಪರಿಪಾಲಯೇತ್ಯಾಹ ॥

ತಾ॥ ಬ್ರಾಹ್ಮಣನ ಮಾತುಗಳನ್ನು ಕೇಳಿ ರಾಯನು ಅವನಿಗೆ ಲಕ್ಷ ವರಹಾಗಳನ್ನು ಕೊಟ್ಟು ನಿನ್ನ ಹೆಸರೇನೆಂದು ಕೇಳಲು ಹೆಸರನ್ನು ಭೂಮಿಯಲ್ಲಿ ಗೋವಿಂದನೆಂದು ಬರೆದನು. ಧೊರೆಯು ಅದನ್ನು ಓದಿಕೊಂಡು ಎಲೌ ಬ್ರಾಹ್ಮಣನೇ ನೀನು ನಿತ್ಯವೂ ಅರಮನೆಗೆ ಬರುತ್ತಾ ಎಲ್ಲಾ ಕವಿಗಳೂ ವಿದ್ವಾಂಸರೂ ಮೊದಲಾದವರನ್ನು ರಾಜಸಭೆಗೆ ಕರೆಸುತ್ತಾ ಯಾವ ಪಂಡಿತನೂ ದುಃಖಿಯಾಗದಂತೆ ನೋಡಿಕೊಂಡು ಅಧಿಕಾರದಲ್ಲಿರಬೇಕೆಂದು ನೇಮಿಸಿದನು.

ಗ॥ ಏವಂಗಚ್ಛತ್ಸುಕತಿಪಯದಿವಸೇಷು ರಾಜಾಪಿದ್ವತ್ಪ್ರಿಯಃ ದಾನವಿ

ತ್ಯೇಶ್ವರ ಇತಿಪ್ರಥಾಮಗಾತ್ ॥

ತಾ॥ ಈ ರೀತಿಯಾಗಿ ಕೆಲವು ದಿನಗಳು ಕಳಿಯುತ್ತಿರಲು ಭೋಜ ಭೂಪಾಲನು ವಿದ್ವಾಂಸರಿಗೆ ಆಶ್ರಯನು ದಾನಶೂರನು, ಎಂಬ ಪ್ರಸಿದ್ಧಿಯು ಎಲ್ಲೆಲ್ಲಿಯೂ ಹರಡಿತು.

ಗ॥ ತತೋ ರಾಜಾನಂ ದಿದೃಕ್ಷವಃ ಕವಯೋ ನಾನಾದಿಗ್ಭ್ಯಃ ಸಮಾಗತಾಃ । ಏನಂ ವಿತ್ತಾಭಿವ್ಯಯಂ ಕುರ್ವಾಣಂ ರಾಜಾನಂ ಪ್ರತಿ ಕದಾಚಿನ್ಮುಖ್ಯಾಮಾತ್ಯೇನೋಕ್ತಮಭ್ಯಧಾಯಿ ದೇವ ರಾಜ್ಞಾಂ ಕೋಶಬಲಾದೇವ ವಿಜಯೋ ನಾನ್ಯಃ ॥

ತಾ॥ ಅನಂತರದಲ್ಲಿ ಧೊರೆಯನ್ನು ಕಾಣಲು ನಾನಾ ದೇಶಗಳಿಂದ ಕವೀಶ್ವರರು ಬರುತಿದ್ದರು. ಆಗ ಹಣವನ್ನು ವೆಚ್ಚ ಮಾಡುತ್ತಿರುವ ರಾಜನನ್ನು ಕುರಿತು ಒಬ್ಬ ಮುಖ್ಯ ಮಂತ್ರಿಯು ಹೇಳಿದ್ದೇನಂದರೆ ಧೊರೆಗಳಿಗೆ ಮುಖ್ಯವಾಗಿ ಖಜಾನೆಯನ್ನು ಹೆಚ್ಚಿಸಬೇಕು.

ಶ್ಲೋ॥ ಸ ಜಯೀ ವರಮಾತಂಗಾ ಯಸ್ಯ ತಸ್ಯಾಸ್ತಿ ಮೇದಿನೀ ।
ಕೋಶೋ ಯಸ್ಯ ಸದುರ್ಧರ್ಷೋ ದುರ್ಗಾ ಯಸ್ಯ ಸದುರ್ಜಯಃ ॥

ತಾ॥ ಯಾವ ಧೊರೆಗೆ ಒಳ್ಳೆ ಆನೆಗಳುಂಟೋ ಭೂಮಿಯು ಇರುವದೋ ಅವನೇ ಜಯಶಾಲಿಯು ಖಜಾನೆಯು ಯಾವ ರಾಜನಿಗುಂಟೋ ಅವನೇ ಶೂರನು. ದುರ್ಗವಾರಿಗುಂಟೋ ಅವನನ್ನು ಯಾರೂ ಜಯಿಸಲಾರರು.

ಶ್ಲೋ॥ ಅರ್ಥಮೂಲಮಿದಂ ರಾಜ್ಯಂ ಸರ್ವೋಽಪ್ಯರ್ಥಪರೋ ಜನಃ ।
ನಿರರ್ಥಸ್ಯ ಕೃತಾ ವ್ಯರ್ಥಾ ಸರ್ವಮರ್ಥವತಾ ಜಿತಂ ॥

ತಾ॥ ರಾಜ್ಯಕ್ಕೆ ದ್ರವ್ಯವೇ ಮೂಲವಾದದ್ದು, ಎಲ್ಲಾ ಜನಗಳಿಗೂ ಹಣವು ಬೇಕಾಗಿರುವದು, ಹಣವಿಲ್ಲದವನ ಕೆಲಸವು ವ್ಯರ್ಥವು ಹಣವಂತನು ಯಲ್ಲರನ್ನೂ ಜಯಿಸುತ್ತಾನೆ.

ಶ್ಲೋ॥ ನಿರ್ಧನಸ್ಯ ನ ಸೇನಾಸ್ತಿ ನಿರ್ಧನೋ ನೈವ ಸೇವ್ಯತೇ ।
ನಿರ್ಧನೋ ನೀಚತಾಮೇತಿ ನಿರ್ಧನಸ್ಯ ಕುತಃ ಸುಖಂ ॥

ತಾ॥ ಹಣವಿಲ್ಲದವನಿಗೆ ಸೇನೆಯೂ ಇರುವದಿಲ್ಲವು. ಹಣವಿಲ್ಲದವನನ್ನು ಯಾರು ತಾನೇ ಸೇವಿಸುವರು, ಬಡವನು ನೀಚತ್ವವನ್ನು ಹೊಂದುವನು, ಬಡವನಿಗೆ ಸುಖವೆಲ್ಲಿಯದು.

ಶ್ಲೋ॥ ಪ್ರಾಯೋ ಧನವತಾಮೇವ ಧನೇ ತೃಷ್ಣಾ ಗರೀಯಸೀ ।
ಪಶ್ಯ ಕೋಟಿದ್ವಯಾಸಕ್ತಂ ಲಕ್ಷಾಯ ಪ್ರವಣಂ ಧನುಃ ॥

ತಾ॥ ಸಾಮಾನ್ಯವಾಗಿ ಹಣವುಳ್ಳವರಿಗೇನೆ ಹಣದಲ್ಲಿ ಹೆಚ್ಚಾದ ಆಶೆಯು ಹ್ಯಾಗೆಂದರೆ ? ಬಿಲ್ಲು ಎರಡು ಕೋಟಿಗಳಿಂದ ಕೂಡಿದ್ದರೂ (೨ ಕೊನೆಗಳು) ಒಂದು ಲಕ್ಷಕ್ಕೆ ಬಗ್ಗುವುದು (ಲಕ್ಷ್ಯ ಗುರಿಗೆ).

ಶ್ಲೋ॥ ಅರ್ಥಾಃ ಬಹಿಶ್ಚರಾಃ ಪ್ರಾಣಾಃ ಅರ್ಥವಾನೇವ ಭೂಪತಿಃ ।
ಪ್ರಾಣಾಸ್ತ್ಯಜಂತಿ ಚಾರ್ಥಾರ್ಥಂ ಪತಿನಾಪಸ್ಯ ಸೈನಿಕಾಃ ॥

ತಾ॥ ಐಶ್ವರ್ಯಗಳು ಮನುಷ್ಯನಿಗೆ ಹೊರಗಿನ ಪ್ರಾಣಗಳಾಗಿರುತ್ತವೆ. ಹಣ ಹೆಚ್ಚಾಗಿರುವನೇ ಭೂಪತಿಯು, ಹಣಕ್ಕೋಸ್ಕರ ಯೆಷ್ಟು ಸೈನಿಕರು ಪ್ರಾಣಗಳನ್ನು ಕಳಕೊಳ್ಳುವರು

ಶ್ಲೋ॥ ದಾತುರ್ನಹೀಯತೆ ವಿತ್ತಂ ದೀಯಮಾನಂ ಪ್ರವರ್ಧತೆ ।
ಯಥಾಧ್ರುವಾಂಬುನಃ ಕೂಪಾತ್ ನೀತಂ ನೀರೆಸಮುದ್ಭ್ರತೆ ॥

ತಾ॥ ದಾನಮಾಡುವ ಮನುಷ್ಯನ ಹಣವು ನಾಶವಾಗುವದಿಲ್ಲವು. ಕೊಡುತ್ತಲಿದ್ದರೆ, ಧ್ರುವಜಲವುಳ್ಳ ಭಾವಿಯಲ್ಲಿ ನೀರು ಎಷ್ಟು ಶೇದಿದಾಗ್ಯೂ ಹೇಗೆ ಹೆಚ್ಚುವದೋ ಹಾಗೆ ಹೆಚ್ಚುವುದು.

ಶ್ಲೋ॥ ದಾನಂಭೋಗೋ ನಾಶಸ್ತಿಸ್ರೋಗತಯೋಭವಂತಿ ವಿತ್ತಸ್ಯ ।
ಯೋನದದಾತಿ ನಭುಂಕ್ತೆ ತಸ್ಯತೃತೀಯಾಗತಿರ್ಭವತ್ಯೇವ ॥

ತಾ॥ ಹಣಕ್ಕೆ ದಾನಮಾಡುವುದು ಅನುಭವಿಸುವುದು ನಾಶವಾಗುವದೆಂಬ ಮೂರು ಗತಿಗಳುಂಟು ಯಾರಾದರೆ ದಾನಮಾಡದೆ ಅನುಭವಿಸದೆ ಯಿರುವರೋ ಅಂಥವನಿಗೆ ಮೂರನೇ ಗತಿಯುಂಟಾಗುವದು, ಅಂದರೆ ನಾಶವಾಗುತ್ತದೆ.

ಶ್ಲೋ॥ ಕ್ಷಣಶಃಕಣಶಶ್ಚೈವ ವಿದ್ಯಾಮರ್ಥಂಚಚಿಂತಯೇತ್ ।
ಅಕ್ಲೇಶಾದಾರ್ಜಯೇದ್ವಿತ್ತಂ ಕ್ಲೇಶಾದ್ವಿದ್ಯಾಂ ಸಮಭ್ಯಸೇತ್ ॥

ತಾ॥ ಒಂದು ಕ್ಷಣವೂ ವ್ಯರ್ಥಮಾಡದೆ ವಿದ್ಯೆಯನ್ನೂ ಸ್ವಲ್ಪವನ್ನೂ ಬಿಡದೆ ದ್ರವ್ಯವನ್ನೂ ಸಂಪಾದಿಸಬೇಕು. ದುಃಖವಿಲ್ಲದೆ ಹಣವನ್ನೂ ದುಃಖದಿಂದ ವಿದ್ಯೆಯನ್ನೂ ಸಂಪಾದಿಸಬೇಕು.

ಶ್ಲೋ॥ ಯಥಾಸಮುಪಚಿನ್ವಂತಿ ಪುಷ್ಪೇಭ್ಯೋಮಕ್ಷಿಕಾಮಧು ।
ರಾಜಾನಶ್ಚೈತಥಾಕೋಶಂ ಸ್ವಪ್ರಜಾಭ್ಯಂಕರಗ್ರಹಾತ್ ॥

ತಾ॥ ದುಂಬಿಗಳು ಹುವ್ವುಗಳಿಂದ ಜೇನನ್ನು ಹೇಗೆ ಕೂಡಿಹಾಕುವದೊ ಹಾಗೆ ದೊರೆಗಳು ಪ್ರಜೆಗಳು ಕೊಡುವ ಕಂದಾಯದಿಂದ ಖಜಾನೆಯನ್ನು ಭರ್ತಿ ಮಾಡುವರು.

ಶ್ಲೋ॥ ಅಜರಾಮರವತ್ಪ್ರಾಜ್ಞೋ ವಿದ್ಯಾಮರ್ಥಂಚಚಿಂತಯೇತ್ ।
ಗೃಹೀತಇವಕೇಶೇಷು ಮೃತ್ಯುನಾಧರ್ಮಮಾಚರೇತ್ ॥

ತಾ॥ ಬುದ್ಧಿವಂತನಾದವನು ತನಗೆ ಮುಪ್ಪು ಮರಣವೂ ಇಲ್ಲವೆಂದು ವಿದ್ಯೆಯನ್ನೂ ಹಣವನ್ನೂ ಸಂಪಾದಿಸಬೇಕು. ಈಗಲೇ ಸಾಯುವೆನೆಂದು ಅಂದುಕೊಂಡು ಧರ್ಮವನ್ನು ಮಾಡಬೇಕು.

ಶ್ಲೋ॥ ಸಫಲಾಹಿಧನೀಯಸ್ಯ ಸರ್ವಥಾಧನಮಾರ್ಜಿತಂ ।
ತ್ಯಾಗಾಯಾಪಿಚಸತ್ಪಾತ್ರೇ ಶುದ್ಧಭೋಗಾಯಚೇದ್ಭವೇತ್ ॥

ತಾ। ಯಾವ ಮನುಷ್ಯನ ಹಣವು ದಾನಮಾಡುವದಕ್ಕೂ ಮತ್ತು ನ್ಯಾಯವಾಗಿ ಅನುಭವಿಸುದಕ್ಕೂ ಉಪಯೋಗಿಸುವನೇ ಹಣಗಾರನು.

ಶ್ಲೋ॥ ಲೋಭಸ್ಸರ್ವಗುಣಾನ್ಹಂತಿ ಲುಬ್ಧಃಕೈರಪಿಪೂಜ್ಯತೇ ।
ಪ್ರಾಜ್ಞೋನಿರಾಕರೋದ್ರಾಜಾ ಧನಲುಬ್ಧಾನ್ಸ್ವಮಂತ್ರಿಣಃ ॥

ತಾ॥ ವಂಚನೆಯು ಎಲ್ಲಾ ಸುಗುಣಗಳನ್ನೂ ಕೆಡಿಸುತ್ತದೆ. ವಂಚಕನನ್ನು ಯಾರೂ ಮನ್ನಿಸಲಾರರು. ಲುಬ್ಧಮಂತ್ರಿಗಳನ್ನು ಬುದ್ಧಿವಂತರಾದ ರಾಜರು ಓಡಿಸಬೇಕು.

ಗ॥ ಇತ್ಯುಕ್ತ್ವಾರಾಜಾತಂ ಮಂತ್ರಿಣಂನಿಜಪದಾದ್ದೂರೀ ಕೃತ್ಯತತ್ಪ
ದೇನ್ಯಂನಿವೇಶ ॥

ತಾ॥ ಹೀಗೆ ನಿರ್ಧರಿಸಿ ಆ ಮಂತ್ರಿಯನ್ನು ತೆಗದು ಮತ್ತೊಬ್ಬನನ್ನು ನೇಮಿಸಿ, ಅಪ್ಪಣೆ ಮಾಡಿದ್ದೇನೆಂದರೆ—

ಶ್ಲೋ॥ ಲಕ್ಷಂಮಹಾಕವೇರ್ದೇಯಂ ತದರ್ಧಂವಿಬುಧಸ್ಯಚ ।
ದೇಯಂಗ್ರಾಮೈಕಮರ್ಧಸ್ಯ ತಸ್ಯಾಪ್ಯರ್ಧಂತದರ್ಥಿನಃ ॥

ತಾ॥ ಲಕ್ಷ ವರಹಾಗಳನ್ನು ಮಹಾಕವಿಗೂ ವಿದ್ವಾಂಸನಿಗೆ ಅರ್ಧ ಲಕ್ಷ ವರಹಗಳು ಅರ್ಧ ಪಂಡಿತನಿಗೆ ಒಂದು ಗ್ರಾಮವನ್ನೂ ಇನ್ನೂ ಕಮ್ಮಿ ಯಾದವನಿಗೆ ಇನ್ನೂ ಕಮ್ಮಿಯಾಗಿಯೂ ಕೊಡತಕ್ಕದೆಂದು ಆಜ್ಞಾಪಿಸಿದನು.

ಗ॥ ಯಶ್ಚಮೇತ್ರಮಾತ್ಯೇಷು ವಿತರಣನಿಷೇಧಂ ನಾಹಂತವ್ಯಃ ॥

ತಾ॥ ಯಾವನಾದರೂ ನನ್ನ ಮಂತ್ರಿಗಳಲ್ಲಿ ಇದನ್ನು ಒಪ್ಪದೆ ಇರುತ್ತಾನೆಯೋ ಅವನನ್ನು ಕೊಲ್ಲತಕ್ಕದ್ದು.

ಶ್ಲೋ॥ ಪ್ರಿಯಃಪ್ರಜಾನಾಂದಾತೈವ ನಪುನರ್ದ್ರವಿಣೇಶ್ವರಃ ।
ಅಗಚ್ಛನ್ಕಾಂಕ್ಷತೇಲೋಕೈರ್ವಾರಿದೋನತುವಾರಿಧಿಃ ॥

ತಾ॥ ಪ್ರಜೆಗಳ ಭಾಗಕ್ಕೆ ದಾನಮಾಡುವ ಧೊರೆಯೇ ಬೇಕಾದವನು

ಖಜಾನೆ ಹೆಚ್ಚಾಗಿರುವನಲ್ಲವು. ಹೇಗೆಂದರೆ ಮೇಘಗಳನ್ನು ಎಲ್ಲರೂ ಯೆದುರು ನೋಡುವರು. ಸಮುದ್ರವನ್ನು ಯಾರು ತಾನೆ ಯೆದುರು ನೋಡುವರು.

ಶ್ಲೋ॥ ಸಂಗ್ರಹೈಕಪರಪ್ರಾಯಃ ಸಮುದ್ರೋಪಿರಸಾತಲೇ ।
ದಾತಾರಂ ಜಲದಂ ಪಶ್ಯ ಗರ್ಜಂತಂ ಭುವನೋಪರಿ ॥

ತಾ॥ ಕೂಡಿಹಾಕುವ ಸ್ವಭಾವವುಳ್ಳ ಸಮುದ್ರನು ಪಾತಾಳಕ್ಕೆ ಇಳಿದಿರುವನು ತ್ಯಾಗಿಯಾದ ಮೇಘವು ಘರ್ಜನೆಯಿಂದ ಭೂಮಿಯ ಮೇಲೆ ಪ್ರಕಾಶಿಸುವದಿಲ್ಲವೇ.

ಗ॥ ಏವಂವಿತರಣಶಾಲಿನಂ ಭೋಜರಾಜಂ ಶ್ರುತ್ವಾ ಕಶ್ಚಿತ್ಕಲಿಂಗದೇಶಿಯಃ ಕವಿರುಪೇತ್ಯ ಮಾಸಮಾತ್ರಂ ತಸ್ಥೌ ನ ಚ ಕ್ಷೋಣೀಂದ್ರ ದರ್ಶನಂ ಭವತಿ ಆಹಾರಾರ್ಥಂ ಪಾಥೇಯಮಪಿ ನಾಸ್ತಿ ತತಃ ಕದಾಚಿದ್ರಾಜಾ ಮೃಗಯಾಭಿಲಾಷೀ ಬಹಿರ್ನಿರ್ಗತಃ ಸ ಕವಿರ್ದೃಷ್ಟ್ವಾ ರಾಜಾನಮಾಹ ॥

ತಾ॥ ಹೀಗೆ ಭೋಜರಾಯನು ಬಹಳ ತ್ಯಾಗಿ ಎಂದು ಕೇಳಿ ಒಬ್ಬನೊಬ್ಬ ಕಲಿಂಗದೇಶದ ಕವಿಯು ಬಂದು ರಾಜದರ್ಶನವಾಗದೆ ಒಂದು ತಿಂಗಳು ಅನ್ನಾಹಾರಗಳಿಗೂ ಕಷ್ಟವಾಗಿ ಒಂದು ದಿನ ದೊರೆಯು ಬೇಟೆಗಾಗಿ ಬರುತ್ತಿರಲು ಕವಿಯು ರಾಜನನ್ನು ನೋಡಿ.

ಶ್ಲೋ॥ ದೃಷ್ಟ್ವಾಶ್ರೀಭೋಜರಾಜೇಂದ್ರಗಳಂ ತಿತ್ರೀಣಿತತ್ಕ್ಷಣಾತ್ ।
ಶತ್ರೋಃ ಶಸ್ತ್ರಂ ಕವೇಃ ಕಷ್ಟಂ ನೀವೀಬಂಧೋ ಮೃಗೀದೃಶಾಂ ॥

ತಾ॥ ಎಲೈ ಭೋಜರಾಜೋತ್ತಮನೇ ನಿನ್ನನ್ನು ನೋಡಿದ ಮಾತ್ರದಿಂದಲೇ ಶತ್ರುಗಳಾಯುಧವೂ, ಕವಿಗಳ ಕಷ್ಟವೂ, ಹೆಂಗಸರ ಸೀರೆಯೂ, ಜಾರಿ ಕೆಳಕ್ಕೆ ಬಿದ್ದುಹೋಗುವುವು.

ಗ॥ ರಾಜಾ ಲಕ್ಷಂ ದದೌ ॥

ತಾ॥ ದೊರೆಯು ಆ ಕವಿಗೆ ಲಕ್ಷ ವರಹಗಳಂ ಕೊಟ್ಟನು.

ಗ॥ ತತಸ್ತಸ್ಮಿನ್ಮೃಗಯಾರಸಿಕೇ ರಾಜನಿ ಕಶ್ಚನ ಪುಳಿಂದಪುತ್ರೋ ಗಾಯತಿ ತೇನಗೀತಮಾಧುರ್ಯೇಣ ತುಷ್ಟೋ ರಾಜಾ ತಸ್ಮೈ ಪುಳಿಂದಪುತ್ರಾಯ ಪಂಚಲಕ್ಷಂ ದದೌ । ತದಾ ಕವಿಃ ತದ್ದಾನಮತ್ಯಂತಂ ಕಿರಾತಪೋತಂ ಚ ದೃಷ್ಟ್ವಾ ನರೇಂದ್ರ ಪಾಣಿಕಮಲಸ್ಥ ಪಂಕಜಮಿಷೇಣ ರಾಜಾನಂ ವದತಿ ॥

ತಾ॥ ಬಳಿಕ ರಾಯನು ಬೇಟೆಯಾಡುತ್ತಿರಲು ಒಬ್ಬ ವ್ಯಾಧನು ಇಂಪಾಗಿ ಹಾಡುತ್ತಿರುವವನ್ನು ಕೇಳಿ ಅವನಿಗೆ ಐದು ಲಕ್ಷ ವರಹಗಳನ್ನು ಕೊಡ

ಲಾಗಿ ಕವಿಯು ರಾಜನ ಔದಾರ್ಯವನ್ನು ನೋಡಿ ರಾಯನ ಕರಕಮಲ ವ್ಯಾಜದಿಂದ ವರ್ಣಿಸಿದ ನದೆಂತೆನೆ.

ಶ್ಲೋ॥ ಏತೇಗುಣಾಃ ಪಂಕಜಸಂತೋಪಿನತೇ ಪ್ರಕಾಶಮಾಯಾಂತಿ ।
ಯಲ್ಲಕ್ಷ್ಮೀವಸತಿಸ್ತವ ಮಧುಪೈರುಪಭುಜ್ಯತೇ ಕೋಶಃ ॥

ತಾ॥ ಎಲೈ ಕಮಲವೇ ನಿನ್ನಲ್ಲಿಂಥಾ ಗುಣಗಳಿದ್ದರೂ ಪ್ರಕಾಶಿಸಲಾರವು ಯಾಕಂದರೆ ಲಕ್ಷ್ಮಿಗೆ ವಾಸಸ್ಥಾನವಾದ ನಿನ್ನ (ಕೋಶವು) ಮೊಗ್ಗು, ಖಜಾನೆ ಭೃಂಗಗಳಿಂದ ಅನುಭವಿಸಲ್ಪಡುತ್ತದೆ. ಅಂದರೆ ರಾಜನಕೈಗಳೆಂಬ ಕಮಲದಲ್ಲಿನ ಐಶ್ವರ್ಯ ಲಕ್ಷ್ಮಿಯು ಮದ್ಯಪಾನಮಾಡುವವರಿಗೆ ಸೇರುತ್ತಿದೆ ಯೆಂದು ಗೂಢಾರ್ಥವು.

ಗ॥ ಭೋಜಸ್ತದಭಿಪ್ರಾಯಂಜ್ಞಾತ್ವಾಪುನರ್ಲಕ್ಷಮೇಕಂ ದದೌ ॥

ತಾ॥ ಭೋಜನು ಆ ಅಭಿಪ್ರಾಯವನ್ನು ತಿಳಿದು ಆ ಕವಿಗೆ ತಿರುಗಿ ಒಂದು ಲಕ್ಷ ವರಹಗಳನ್ನು ಕೊಟ್ಟನು.

ಶ್ಲೋ॥ ಪ್ರಭುಭಿಃಪೂಜ್ಯತೇವಿಪ್ರ ಕಲೈವನಕುಲೀನತಾ ।
ಕಲಾವಾನ್ಮಾನ್ಯತೇಮೂರ್ಧ್ನಿ ಸತ್ಸುದೇವೇಷುಶಂಭುನಾ ॥

ತಾ॥ ಎಲೈ ವಿಪ್ರನೇ ದೊರೆಗಳು ಕಲಾವಂತರನ್ನು ಅಂದರೆ ವಿದ್ಯಾವಂತರನ್ನೆ ಪೂಜಿಸುವರು. ಕುಲವು ಮುಖ್ಯವಲ್ಲವು. ಹ್ಯಾಗೆಂದರೆ ಜಗದೀಶನಾದ ಶಿವನು ದೇವತೆಗಳನ್ನೆಲ್ಲಾ ಬಿಟ್ಟು ಕಲಾನಿಧಿಯಾದ ಚಂದ್ರನನ್ನು ಧರಿಸಿಕೊಂಡಿಲ್ಲವೆ ?

ಗ॥ ಏವಂವದತಿಭೋಜೇ ಕುತೋಪಿಪಂಚಷಾಃಕವಯಸ್ಸಮಾಗತಾಃ ತಾನ್ದೃಷ್ಟ್ವಾರಾಜಾವಿಲಕ್ಷಣ ಇವಾಸೀತ್ ಅದ್ಯೈವಮಯಾಏತಾವದ್ವಿತ್ತಂ ದತ್ತಮಿತಿತತಃಕವಿಃ ತದಭಿಪ್ರಾಯಂ ಜ್ಞಾತ್ವಾನೃಪಂ ಪದ್ಮಮಿಷೇಣಪುನಃಪ್ರಾಹ ॥

ತಾ॥ ಹೀಗೆ ಭೋಜನು ಹೇಳುತ್ತಿರಲು ಯಲ್ಲಿಂದಲೋ ಐದಾರು ಕವಿಗಳು ಬರಲಾಗಿ ರಾಯನು ಈಗತಾನೆ ಇಷ್ಟು ದ್ರವ್ಯವನ್ನು ಕೊಟ್ಟೆನಲ್ಲಾ ಎಂದು ಸುಮ್ಮನಿರಲು, ಕವಿಯು ತಿರುಗಿ ರಾಯನನ್ನು ಕಮಲದ ಮೂಲಕವಾಗಿ ಬಣ್ಣಿಸಿದನದೆಂತೆನೆ.

ಶ್ಲೋ॥ ಕಿಂಕುಪ್ಯಸಿಕಸ್ಮೈಚನವಾನವ ಸೌರಭಸಾರಾಯಹಿಂಸಿಜ
ಮಧುನೇ॥ಯಸ್ಯಶತಪತ್ರತೇದ್ಯಪ್ರತಿ ಹತ್ರಮ್ಯಗ್ರತೇಭ್ರಮರ್ಯೈಃ ॥

ತಾ॥ ಎಲೌ ನೂರು ಎಸಳುಗಳುಳ್ಳ ಕಮಲವೇ ಬಹಳ ಸುವಾಸನೆ

ಯುಳ್ಳ ನಿನ್ನ ಮಕರಂದವನ್ನು ಹೀರುವದಕ್ಕೆ ಬಂದ ದುಂಬಿಗಳು ನಿನ್ನ ಪ್ರತಿ ಎಸಳನ್ನೂ ಹೀರುತ್ತಲೇ ಇರುತ್ತವೆ. ಯಾವ ದುಂಬಿಯು ಮೇಲೆ ತಾನೆ ನೀನು ಕೋಪಮಾಡಲಾದೀತು ಅಂದರೆ ನೀನು ಹಿಳ್ಳೆರಸಿಕನಾಗಿಯೂ, ದ್ರವ್ಯವಂತನಾಗಿಯೂ, ತ್ಯಾಗಿಯಾಗಿಯೂ ಇರುವದ್ದರಿಂದ ಅನೇಕರು ಬರುತ್ತಲೇ ಇರುವರು. ಅವರಲ್ಲಿ ಅಸಮಾಧಾನಪಡಲಾಗದೆಂದರ್ಥವು.

ಶ್ಲೋ॥ ಸದಾ ತಂ ಸೋಪಭೋಕ್ತುಂಚ ಶಕ್ನೋತಿ ಕೃಪಣಃ ಶ್ರಿಯಂ ।
ಕಿಂತು ಸ್ಪೃಶತಿ ಹಸ್ತೇನ ನಪುಂಸಕ ಇವ ಸ್ತ್ರಿಯಂ ॥

ತಾ॥ ನಪುಂಸಕನು ಹ್ಯಾಗೆ ರೂಪವುಳ್ಳ ಸ್ತ್ರೀಯನ್ನು ಅನುಕೂಲವಾಗಿ ಅನುಭವಿಸಲಾರದೆ ಸುಮ್ಮನೆ ಮುಟ್ಟಿ ಸಂತೋಷಪಡುವನೊ, ಹಾಗೆ ಜಿಪುಣನು ತನ್ನ ಹಣವನ್ನು ದಾನಮಾಡುವದಕ್ಕೂ ತಾನು ಅನುಭವಿಸುವದಕ್ಕೂ ಸ್ವಾರ್ಥನಾಗುವನು.

ಶ್ಲೋ॥ ಯಾಚಿತೋ ಯಃ ಪ್ರಹೃಷ್ಯೇತ ದತ್ವಾ ಚ ಪ್ರೀತಿಮಾನ್ ಭವೇತ್ ।
ತಂ ದೃಷ್ಟ್ವಾಪ್ಯಥವಾ ಶ್ರುತ್ವಾ ನರಸ್ಸ್ವರ್ಗಮವಾಪ್ನುಯಾತ್ ॥

ತಾ॥ ಯಾರಾದರು ತನ್ನನ್ನು ಬೇಡಿದರೆ ಸಂತೋಷಪಡುತ್ತಾನೆಯೋ ಅಂಥವನಿಗೆ ಕೊಟ್ಟು ಬಳಿಕ ಸಂತೋಷಪಡುವನೊ ಅಂಥವನನ್ನು ನೋಡಿದರೂ ಕೇಳಿದಾಗ್ಯೂ ಸದ್ಗತಿಯುಂಟಾಗುತ್ತದೆ,

ಗ॥ ತತಸ್ತುಷ್ಟೋ ರಾಜಾ ಕಳಿಂಗದೇಶವಾಸಕವಯೇ ಲಕ್ಷಂ ದದೌ ॥

ತಾ॥ ರಾಯನು ಅದನ್ನು ಕೇಳಿ ಸಂತೋಷಪಟ್ಟು ಕಳಿಂಗ ದೇಶವಾಸಿಯಾದ ಆ ಕವಿಗೆ ತಿರುಗೂ ಒಂದು ಲಕ್ಷವನ್ನು ಕೊಟ್ಟನು.

ಗ॥ ತತಃ ಪ್ರಾಕ್ತನಃ ಕವಿಃ ಪುರಸ್ಸ್ಥಿತಾನ್ ಷಟ್ಕವೀಂದ್ರಾನ್ ದೃಷ್ಟ್ವಾ ಹೇ ಕವಿಯೋ ತ್ರ ಮಹಾಸರಸ್ತೀರಭೂಮೌ ವಾಸೀ ರಾಜಾ ಯದಾ ಭವನಂ ಗಮಿಷ್ಯತಿ ತದಾ ಕಿಮಪಿ ಬ್ರೂತೇತಿ ಯೋಚ ಸರ್ವೇ ಮಹಾಕವಯೋಪಿ ಸರ್ವಂ ರಾಜ್ಞಃ ಪ್ರಥಮಚೇಷ್ಟಿತಂ ಜ್ಞಾತ್ವಾ ವರ್ತಂತೇ ತೇಷ್ವೇಕಸ್ಸರೋ ವಿಶೇಷೇಣಾನ್ವಕಂಪಯತ್ ॥

ತಾ॥ ಬಳಿಕ ಮೊದಲನೇ ಕವಿಯು ಮುಂದಿರುವ ಆರು ಕವಿಗಳನ್ನೂ ನೋಡಿ ಎಲೈ ಕವಿಗಳಿರಾ ? ರಾಯನು ಈ ಸರೋವರದ ದಡದಿಂದ ಮನೆಗೆ ಹೊರಡುವಾಗ ಏನಾದರೂ ಹೇಳಿ, ಎನ್ನಲಾಗಿ ಆ ಕವಿಗಳೆಲ್ಲರೂ ರಾಜನು ಮೊದಲು ಮಾಡಿದ ಕೆಲಸಗಳನ್ನು ಕುರಿತು ಯೋಚಿಸುತ್ತಿರಲು ಒಬ್ಬನು ರಾಜನನ್ನು ಒಂದು ಸರೋವರಕ್ಕೆ ಹೋಲಿಸಿ ವರ್ಣಿಸುತ್ತಾನೆ, ಹೇಗೆಂದರೆ.

ಶ್ಲೋ॥ ಆಗತಾನಾಮಪೂರ್ಣಾನಾಂ ಪೂರ್ಣಾನಾಮಪ್ಯಗಚ್ಛತಾಂ .
ಯದಧ್ವನಿನಸಂಘಟ್ಟೋ ಘಟಾನಾಂತತ್ಸರೋವರಂ ॥

ತಾ॥ ಹೊಸದಾಗಿ ಬಂದ ಗಡಿಗೆಗಳು ತುಂಬದೆ, ತುಂಬಿದರೂ ಹೋಗದೆ, ದಾರಿಯಲ್ಲಿ ಒಂದಕ್ಕೊಂದು ಎದುರಾಗದೆ ಇದ್ದರೇನೇ ಸರೋವರಕ್ಕೆ ಪ್ರಾಶಸ್ತ್ಯವು ಅಂದರೆ ಸರೋವರದಂತೆ ರಾಯನ ಹತ್ತರಕ್ಕೆ ಬಂದು ಎಷ್ಟು ಹಣವನ್ನು ತೆಗದುಕೊಂಡಾಗ್ಯೂ ಅಲ್ಲಿಯೇ ನಿಂತು ಒರುವರು ಬರುತ್ತಾ ಹೋಗುವರು ಹೋಗುತ್ತಾ ಇರಬೇಕೆಂದರ್ಥವು.

ಗ॥ ತತೋಗೋವಿಂದ ಪಂಡಿತಸ್ತಾನ್ ಕವೀಂದ್ರಾನ್ ದೃಷ್ಟ್ವಾಚುಕೋಪ
ತಸ್ಯಕೋಪಾಭಿಪ್ರಾಯಂಜ್ಞಾತ್ವಾ ದ್ವಿತೀಯಃಕವಿರಾಹ ॥

ತಾ॥ ತರುವಾಯ ಗೋವಿಂದಪಂಡಿತನು ಆ ಕವಿಗಳನ್ನು ಕುರಿತು ಕೋಪಗೊಳ್ಳಲಾಗಿ ಆ ಅಭಿಪ್ರಾಯವನ್ನು ತಿಳಿದುಕೊಂಡು ಎರಡನೆಯವನು ಹೇಳಿದನು.

ಶ್ಲೋ॥ ಕಸ್ಯತೃಣಂನಾಕ್ಷಪಯಸಿಪಿಬತಿನಕಸ್ತೋಯಮಯಃಪ್ರವಿಶ್ರಾಂತಃ ।
ಯದಿಸನ್ಮಾರ್ಗಸರೋವರನ ಕ್ರೋನಕ್ರೋಧವಷಿಪಸತಿಚಪರಂ ॥

ತಾ॥ ಎಲೈ ಒಳ್ಳೆ ದಾರಿಯುಳ್ಳ ಸರೋವರವೇ ಯಾರುತಾನೆ ನಿನ್ನಲ್ಲಿ ಬಾಯಾರಿಕೆಯನ್ನು ಹೋಗಲಾಡಿಸಿಕೊಳ್ಳುವದಿಲ್ಲವು. ಆದರೆ ಒಂದು ಮೊಸಳೆಯು ಮಾತ್ರ ವಾಸವಾಗಿಕೊಂಡಿರುತ್ತದೆ. ಅಂದರೆ ಎಲೈ ರಾಯನೇ ನೀನು ಸರೋವರದಂತೆ ಎಲ್ಲರಿಗೂ ಹಿತವನ್ನು ಬಯಸುವನಾದರೂ ನಿನ್ನಲ್ಲಿ ಒಬ್ಬನು ಕೆಟ್ಟವನಿರುವನು.

ಗ॥ ರಾಜಾತಸ್ಮೈ ಲಕ್ಷದ್ವಯಂದತ್ವಾ ತಂಚಗೋವಿಂದ ಪಂಡಿತಂ ವ್ಯಾ
ಪಾರಪದಾದ್ದೂರೀಕೃತ್ಯತ್ವಯಾಪಿ ಸಭಾಯಾಮಾಗಂ ತವ್ಯಂಪರಂತು
ಕೇನಾಪಿಪಾಷ್ಟ್ಯಂನಕರ್ತವ್ಯಂ ಇತ್ಯುಕ್ತ್ವಾ ತತಸ್ತೇಭ್ಯಃ ಪ್ರತ್ಯೇ
ಕಂಲಕ್ಷಂದತ್ವಾಸ್ವ ನಗರಮಾಗತಃ । ತೇಚಯಥಾಗತಂಗತಾಃ ॥

ತಾ॥ ದೊರೆಯು ಆ ಕವಿಗೆ ಲಕ್ಷವನ್ನು ಕೊಟ್ಟು ಆ ಗೋವಿಂದ ಪಂಡಿತನನ್ನು ಅಧಿಕಾರದಿಂದ ಬಿಡುಗಡೆ ಮಾಡಿ ಮತ್ತೊಬ್ಬನನ್ನು ನೇಮಿಸಿ ನೀನು ಇನ್ನುಮೇಲೆ ಯಾರಿಗೂ ಕೆಡಕನ್ನು ಮಾಡಕೂಡದೆಂದು ಹೇಳಿ ಮಿಕ್ಕ ಕವಿಗಳಿಗೆ ಒಬ್ಬೊಬ್ಬರಿಗೆ ಲಕ್ಷ ಪ್ರಕಾರವಾಗಿ ಕೊಟ್ಟು ತನ್ನ ಪಟ್ಟಣಕ್ಕೆ ತೆರಳಿದನು. ಉಳಿದವರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರು.

ಗ॥ ತತಃ ಕದಾಚಿದ್ರಾಜಾ ಮುಖ್ಯಾಮಾತ್ಯಂ ಪ್ರಾಹ ॥

ತಾ॥ ಬಳಿಕ ಒಂದಾನೊಂದು ಸಮಯದಲ್ಲಿ ತನ್ನ ಮುಖ್ಯ ಮಂತ್ರಿಯನ್ನು ಕುರಿತು ಹೇಳಿದ್ದೇನಂದರೆ—

ಶ್ಲೋ॥ ವಿಪ್ರೋಽಪಿ ಯೋ ಭವೇನ್ಮೂರ್ಖಃ ಸ ಪುರಾದ್ಬಹಿರಸ್ತು ಮೇ ।
ಕುಂಭಕಾರೋಽಪಿ ಯೋ ವಿದ್ವಾನ್ ಸ ತಿಷ್ಠತು ಪುರೇ ಮಮ ॥

ತಾ॥ ಎಲೈ ಮಂತ್ರಿಯೇ ಏನೂ ತಿಳಿಯದೆ ಮೂರ್ಖನಾದವನು ಬ್ರಾಹ್ಮಣನಾಗಿದ್ದರೂ ಅವನು ನನ್ನ ಪಟ್ಟಣದ ಹೊರಗೇ ಇರಬೇಕು. ವಿದ್ವಾಂಸನಾಗಿದ್ದಲ್ಲಿ ಕುಂಬಾರನಾದವನೂ ಸರಿಯೇ ನನ್ನ ನಗರದಲ್ಲಿರಬಹುದು.

ಗ॥ ತತಃ ಕ್ರಮೇಣ ಪಂಚಶತಾನಿ ವಿದುಷಾಂ ವರರುಚಿಬಾಣಮಯೂರ । ಭಸ್ತ್ರಹರಿಶಂಕರಕಳಿಂಗ ಪೂರ್ಣವಿನಾಯಕ ಮದನವಿದ್ಯಾವಿನೋದ । ಕೋಕಿಲತಾರೇಂದ್ರ ದಂಡಿಭವಭೂತಿ ಕಾಳಿದಾಸಕುಟುಂಬ ಚಿತ್ರಕವಿಪ್ರಮುಖಾಃ ಸರ್ವಶಾಸ್ತ್ರವಿಚಕ್ಷಣಾಃ ಸರ್ವೇ ಸರ್ವಜ್ಞಾಃ ಶ್ರೀಭೋಜರಾಜ ಸಭಾಮಲಂಚಕ್ರುಃ ॥

ತಾ॥ ತರುವಾಯ ಕ್ರಮವಾಗಿ ವರರುಚಿ, ಬಾಣ, ಮಯೂರನೇ ಮೊದಲಾಗಿ ಐನೂರುಮಂದಿ ಕವಿಗಳು ಸಕಲ ಶಾಸ್ತ್ರಜ್ಞರಾದ ದೊಡ್ಡ ದೊಡ್ಡ ಕವಿಗಳು ಭೋಜರಾಯನಸಭೆಯನ್ನು ಅಲಂಕರಿಸುತ್ತಿದ್ದರು.

ಗ॥ ಏವಂ ಸ್ಥಿತೇ ಕದಾಚಿ ದ್ವಿದ್ವದ್ಬೃಂದವಂದಿತೇ ಸಿಂಹಾಸನಾಸೀನೇ ಕವಿಶಿರೋಮಣೌ ಕವಿತ್ವಪ್ರಿಯೇ ವಿಪ್ರಪ್ರಿಯಬಾಂಧವೇ ಭೋಜನರೇಶ್ವರೇ ದ್ವಾರಪಾಲಸ್ಸತ್ವರಪ್ರಣಮ್ಯವ್ಯಜ್ಞಾಪಯತ್ ದೇವ ಕೋಽಪಿ ವಿದ್ವಾನ್ ದ್ವಾರಿ ತಿಷ್ಠತೀತಿ ಅಥರಾಜಾ ಪ್ರವೇಶಯತಾಮಿತಿ ಆಜ್ಞಪ್ತೋ ಸೋಽಪಿ ದಕ್ಷಿಣೇನ ಪಾಣಿನಾ ಸಮುನ್ನತೇನ ವಿರಾಜಮಾನೋ ವಿಪ್ರಃ ಪ್ರಾಹ ॥

ತಾ॥ ಹೀಗಿರುತ್ತಿರಲೊಂದುದಿನ ಎಲ್ಲರಿಗೂ ಇಷ್ಟನಾದ ಬ್ರಾಹ್ಮಣಪ್ರಿಯನಾದ ಕವಿಕುಲೋತ್ತಂಸನಾದ ಭೋಜರಾಯನ ಹತ್ತಿರಕ್ಕೆ ದ್ವಾರಪಾಲಕನೊಬ್ಬನು ಬಂದು ಮಹಾಸ್ವಾಮಿ ಯಾರೊ ಒಬ್ಬ ವಿದ್ವಾಂಸನು ಬಾಗಿಲಲ್ಲಿರುತ್ತಾನೆಂದು ತಿಳಿಸಲು ಧೊರೆಯು ಆತನನ್ನು ಒಳಕ್ಕೆ ಬಿಡಬಹುದೆನ್ನಲು ಒಳಕ್ಕೆ ಬಂದ ಬ್ರಾಹ್ಮಣನು ಬಲಕೈಯನ್ನು ಮೇಲಕ್ಕೆತ್ತಿಕೊಂಡು ವಿಜೃಂಭಣೆಯಿಂದ ಹೇಳುತ್ತಾನೆ.

ಶ್ಲೋ॥ ರಾಜನ್ನಭ್ಯುದಯೋಽಸ್ತು ಶಂಕರಕವೇಃ ಕಿಂ ಪತ್ರಿಕಾಯಾಮಿದಂ ಪದ್ಯಂ
ಕಸ್ಯ ತವೈವ ಭೋಜನೃಪತೇ ಸೋಪಸ್ಕೃತಂ ಪಠ್ಯತೇ । ಏತಾಸಾಮುರ

ವಿಪಂಚಿಸಾಂದ್ರಪದ್ಯಶಾರದಾಕ್ಷ್ಯಾಮುರಾಂದೋಳನಾಮುಷ್ಯೇಲ್ಲಬ್ಧಭಜಪಲ್ಲ
ಕಂಕಣಝಣತ್ಕಾರಃ ಕ್ಷಣಂವಾರ್ಯತಾಂ ॥

ತಾ॥ ಎಲೈ ಮಹಾರಾಜನೇ ನಿನಗೆ ಮಂಗಳವಾಗಲಿ ರಾಯನು ಎಲೈ ಶಂಕರಕವಿಯೆ ನಿನ್ನ ಕೈಯಲ್ಲಿರುವ ಕಾಗದವೇನು ? ನಿನ್ನ ಮೇಲೆ ಮಾಡಿರುವ ಪದ್ಯವು, ಹಾಗಾದರೆ ಓದು ಕವಿಯು ಹೇಳುತ್ತಾನೆ. ಕಮಲಗಳಂತೆ ಮನೋಹರವಾದ ಕಣ್ಣುಗಳುಳ್ಳ ಈ ಹೆಂಗಸರು ಜೇಗಟೆಗ ಚಾಮರಗಳನ್ನು ಹಾಕುತ್ತಿರುವದರಿಂದುಂಟಾದ ಕೈ ಕಡಗಗಳ ಶಬ್ದವನ್ನು ಒಂದು ಕ್ಷಣ ನಿಲ್ಲಿಸಿದರೆ ಈ ಪದ್ಯವನ್ನು ಓದುತ್ತೇನೆ ಎಂದು ಹೇಳಿ ಮರ್ಮವನ್ನು ತಿಳಿದು ಶಬ್ದವನ್ನು ನಿಲ್ಲಿಸಿದಬಳಿಕ—

ಶ್ಲೋ॥ ಯಥಾಯಥಾಭೋಜ ಯಶೋವಿವರ್ಧತೇ ಸಿತಾಂತ್ರಿಲೋಕೀಮಿವ
ಕರ್ತುಮುದ್ಯತಂ । ತಥಾತಥಾಮೇಹೃದಯಂ ವಿದೂಯತೆಪ್ರಿಯಾಲ
ಕಾಳೀಧವಳತ್ವಶಂಕಯಾ ॥

ತಾ॥ ಎಲೈ ಭೋಜರಾಯನೇ ನಿನ್ನ ಕೀರ್ತಿಯು ಮೂರು ಲೋಕಗಳನ್ನು ಬೆಳ್ಳಗೆ ಮಾಡಲು ಪ್ರಯತ್ನಪಡುವಹಾಗೆಲ್ಲಾ ನನ್ನ ಮನಸ್ಸು ನನ್ನ ಪ್ರಿಯಳ ಮುಂಗುರುಲುಗಳು ಬೆಳ್ಳಗಾದಾವೆಂಬದಾಗಿ ದುಃಖಪಡುತ್ತಿರುವದು. ಅಂದರೆ ಬೆಳ್ಳಗಿರುವ ನಿನ್ನ ಕೀರ್ತಿಯು ಲೋಕವನ್ನೆಲ್ಲಾ ಬೆಳ್ಳಗೆ ಮಾಡುತ್ತಿರುವಲ್ಲಿ ನನ್ನ ಹೆಂಡತಿಯು ಕೂದಲು ಬೆಳ್ಳಗಾದರೆ ನನಗೆ ಸುಖಪಡಲು ಅನುಕೂಲವಿಲ್ಲದಂತಾದೀತೆಂದು ಚಮತ್ಕಾರವು.

ಗ॥ ತತೋರಾಜಾಶಂಕರಕವಯೆ ದ್ವಾದಶಲಕ್ಷಂದದೌಸರ್ವೇಪಿದ್ವಾಂಸಸ್ತ
ವಿಚ್ಛಾಯವದನಾಬಭೂವುಃ ಪರಂಕೋಪಿರಾಜ ಭಯಾನ್ನಾವದತ್ ।
ರಾಜಾಚಕಾರ್ಯ ವಶಾದ್ಗೃಹಂಗತಃ ತತೋವಿಬುಧಗಣಸ್ತಂಸಿನಿಂದ ಅ
ಹೋನೃಪತೇರಜ್ಞತಾ ಕಿಮಸ್ಯನೇನಯದಾವೇದ ಶಾಸ್ತ್ರವಿಚಕ್ಷಣೇಭ್ಯಃ
ಸ್ವಾಶ್ರಯಕವಿಭ್ಯಃ ಲಕ್ಷಮದಾತ್ಕಿಮನೇನವಿತರಣೇನಾಪಿ ಅಸೌ
ಚಕೋರಲಂಗ್ರಾಮ್ಯಃ ಕವಿಶ್ಶಂಕರಃ ಕಿಮಸ್ಯಪ್ರಾಗಲ್ಭ್ಯಂ ಇತ್ಯೇವಂ
ಕೋಲಾಹಲಃ ಪ್ರೋಜಾತಃ ॥

ತಾ॥ ಬಳಿಕ ಧೊರೆಯು ಶಂಕರಕವಿಯ ಪದವನ್ನು ಕೇಳಿ ಸಂತೋಷಪಟ್ಟು ಹನ್ನೆರಡು ಲಕ್ಷಗಳನ್ನು ಕೊಟ್ಟು ತಾನು ಸಭೆಯಿಂದ ಅಂತಃಪುರಕ್ಕೆ ಹೋದಬಳಿಕ ಸಭೆಯಲ್ಲಿದ್ದ ಆಸ್ಥಾನಕವಿಗಳು ರಾಜನು ಬಹಳ ಮೂರ್ಖನು. ಇಂಥಾ ಮೂರ್ಖನನ್ನು ಸೇವಿಸಿದರೆ ವೇದ ಶಾಸ್ತ್ರಜ್ಞರಾದ

ಕವೀಶ್ವರರಿಗೇನು ಸ್ವರ್ಣೋಪಾಯನವು ರಾಯನು ಎಷ್ಟು ಸಂತೋಷಪಟ್ಟರೂ ತನ್ನನ್ನಾಶ್ರಯಿಸಿರುವ ಕವಿಗಳಿಗೆ ಒಂದೇ ಲಕ್ಷವಮಾತ್ರ ಕೊಟ್ಟಿರುವನು. ಈ ಶಂಕರ ಕವಿಯಾದರೂ ಶಬ್ದಗ್ರಾಹ್ಯವನ್ನು ಇವನಿಗೇನು ತಿಳಿಯುತ್ತದೋ ಎಂಬದಾಗಿ ಎಲ್ಲೆಲ್ಲಿಯೂ ಗಲಭೆಯು ಟಯಿತು.

## ಕಾಳಿದಾಸನು ಭೋಜಸಭೆಯನ್ನು ಪ್ರವೇಶಿಸಿದ್ದು.

ಗ॥ ಕದಾಚಿದಭ್ಯಾಗಾತ್ ಕನಕಮಣಿ ಕುಂಡಲಶಾಲೀ ದಿವ್ಯಾಂಶುಕಪ್ರಾವರಣೋ ನೃಪಕುಮಾರ ಇವ ಮೃಗಮದಪಂಕಕಳಂಕಿತಗಾತ್ರಃ ನವಕುಸುಮಸಮಭ್ಯರ್ಚಿತಶಿರಾಃ ಚಂದನಾಂಗರಾಗೇಣ ವಿರೋಚಮಾನಃ ವಿಲಾಸ ಇವ ಮೂರ್ತಿಮಾನ್ ಕವಿತೇವ ತನುಮಾಪ್ತಃ ಶೃಂಗಾರರಸಸ್ಯಂದ ಇವ ಸಸ್ಪಂದೋ ಮುಖೇಂದ್ರದ್ರಾವಮಾಧುರೀನಿಲಯಃ ಪ್ರಾಪ್ತೋ ದ್ವಾರಿ ತಂ ದೃಷ್ಟ್ವಾ ಸ ವಿದ್ವತ್ಪರಿಷತ್ ಭಯ ಕೌತುಕಯೋಃ ಪಾತ್ರಮಾಸೀತ್ ಸ ಚ ಸರ್ವಾನ್ ಪ್ರಣಿಪತ್ಯ ಪ್ರಾಹ ಕುತ್ರ ಭೋಜನೃಪ ಇತಿ ತೇ ತಮುಚ್ಚಾರಿದಾಸೀನ ಏವ ಸೌಧಾಂತರಂಗತ ಇತಿ ತತೋ ಸೌಪ್ರತ್ಯೇಕಂ ತೇಭ್ಯಃ ತಾಂಬೂಲಂ ದತ್ವಾ ಗಜೇಂದ್ರಕುಂಭಗತ ಮೃಗೇಂದ್ರ ಇವಾಸ್ತೇ । ತತಸ್ಸಮಾಹೂಯ ಸ ಶಂಕರಕವಿಪ್ರದಾನೇನ ಕುಪಿತಾನ್ ಬುಧಾನ್ ಪ್ರಾಹ ಭವಂತಃ ಶಂಕರಕವಯೇ ದ್ವಾದಶಲಕ್ಷಾಣಿ ಪ್ರದತ್ತಾನೀತಿ ನ ಮಂತವ್ಯಂ ಅಭಿಪ್ರಾಯಸ್ತು ರಾಜ್ಞೋ ನ ಬುದ್ಧಃ ಯತಶ್ಶಂಕರಕವಪ್ರಜನಸಾರಬ್ದೇ ಶಂಕರಕವಿಸ್ತು ಏಕೇನೈವ ಲಕ್ಷೇಣ ಪೂರಿತಃ ಕಿಂತು ತಸ್ಮಿನ್ ಪ್ರಸನ್ನೇ ಸರ್ವೇ ಪ್ರಸನ್ನಾ ಭವಂತೀತಿ ಏಕಾದಶರುದ್ರಾನ್ ಪ್ರತ್ಯಕ್ಷಾನ್ ಜ್ಞಾತ್ವಾ ತೇಷಾಂ ಪ್ರತ್ಯೇಕಮೇಕೈಕಂ ಲಕ್ಷಂ ತಸ್ಮೈ ಶಂಕರಕವಯೇ ಏವ ಶಂಕರಮಾಂತರ್ಯೋ ಪ್ರದತ್ತಮಿವ ರಾಜ್ಞೋಭಿಪ್ರಾಯ ಇತಿ ಸರ್ವೇಪಿ ಚಮತ್ಕೃತಾಸ್ತೇನ ತತಃ ಕೋಪಿ ರಾಜಪುರುಷಃ ತದ್ವಿದ್ವತ್ಸ್ವರೂಪಂ ದ್ವಾರಸ್ಥಾನಿವೇದಯಾಮಾಸ ರಾಜಾ ಚ ಸ್ವಮಭಿಪ್ರಾಯಂ ಸಾಕ್ಷಾದ್ವಿದಿತವಂತಂ ತಂ ಮಹೇಶಮಿವ ಮಹಾಪುರುಷಂ ಮನ್ಯಮಾನಃ ಸಭಾಮಭ್ಯಾಗಾತ್ ॥ ಸ ಚ ಸ್ವಸ್ತೀತ್ಯಾಹ ರಾಜಾನಂ ರಾಜಾ ಚ ತಮಾಲಿಂಗ್ಯ ಪ್ರಣಮ್ಯ ಸ್ವಕರಕಮಲೇನ ತತ್ಕರಕಮಲಮವಲಂಬ್ಯ ಸೌಧಾಂತರಂಗತ್ವಾ ಪ್ರೋ

ತ್ರ್ಯಂಗಗನಾಕ್ಷ ಉಪವಿಷ್ಟಃ ಪ್ರಾಕ್ಪವಿಶ್ರೇಷ್ಠನನ್ಯಗ್ನಾ ಶಾನ್ಯಪ್ರಾ
ಣಿ ಸೌಭಾಗ್ಯಾನಿ ಬಿತಾನಿ ಕಸ್ಯವಾದೇಶಃ ಭಾಷ್ಯವಿಹಸ್ಸ್ಯಜನಾ
ಬಾಧತ ಇತಿ ತತಶ್ಶಿಕಪಲಿಗ ಖಿತಿರಾತಿ ಸ್ಫೀಹಸ್ತೇ ಕಾಳಿದಾಸ ಇತಿ ರಾಜಾ
ವಾಚಯಿತ್ವಾ ಪಾದಯೋಃ ಪತತಿ ತತಸ್ತತ್ರಾಸೀನಯೋಃ ಕಾಳಿದಾಸ
ಭೋಜರಾಜಯೋಃ ಅಪ್ಯೇತ್ಸಂಧ್ಯಾ ಗಾಜಾಸಖೇ ಸಾಧ್ಯಾಪಣಾ
ಯೋತ್ಯವಾದೀತ್ ॥

ತಾ॥ ಹೀಗೆ ಶಂಕರಕವಿಯ ವಿಷಯದಲ್ಲಿ ಕವಿಗಳೆಲ್ಲರೂ ಸಂಶಯಪ
ಡುತ್ತಿರಲು, ಒಬ್ಬನೊಬ್ಬ ಕವಿಯು ಚಿನ್ನದ ಕುಂಡಲಗಳನ್ನು ಕಿವಿಯಲ್ಲಿ
ಟ್ಟುಕೊಂಡು ಶ್ರೇಷ್ಠವಾದ ವಸ್ತ್ರವನ್ನು ಹೊದ್ದುಕೊಂಡು ರಾಜಪುತ್ರ
ನಂತೆ ಕಸ್ತೂರೀ ಬೊಟ್ಟನಿಟ್ಟುಕೊಂಡು, ದಿವ್ಯವಾದ ಹೂವನ್ನು ಮುಡಿದು
ಕೊಂಡು ಸುವಾಸನೆಯುಳ್ಳ ಗಂಧವನ್ನು ಲೇಪನಮಾಡಿಕೊಂಡು, ಕವಿತ್ವ
ವೇನೆ ಶರೀರವನ್ನು ಹೊಂದಿ ಬಂದಿಧೆಯೋ ಎಂಬಂತೆ ಇರುವನಾಗಿಯೂ,
ಶೃಂಗಾರ ರಸದಿಂದ ತುಳುಕುತ್ತಿರುವನಾಗಿ ಮಹೇಂದ್ರನೇನಾದರೂ ಭೂಲೋ
ಕಕ್ಕೆ ಬಂದಿರುವನೋ ಏನೋ ಎಂಬಂತೆ ಇರುವವನಾಗಿ ಭೋಜರಾಯನ
ಸಭೆಗೆ ಬರಲು ಆ ಸಭೆಯಲ್ಲಿದ್ದ ವಿದ್ವಾಂಸರು ಈತನನ್ನು ನೋಡಿ, ಆಶ್ಚರ್ಯ
ಪಡುತ್ತಿರಲು ಆತನು ವಿದ್ವಾಂಸರನ್ನು ನಮಸ್ಕರಿಸಿ ಮಹಾರಾಜ ಭೋಜರಾ
ಜರೆಲ್ಲಿರುವರೆಂದು ಕೇಳಲಾಗಿ ಈಗತಾನೆ ಸೌಧಾಂತರಕ್ಕೆ ಹೋಗಿರುವ
ರೆಂದು ಹೇಳಿದರು. ಬಳಿಕಾ ಕವಿಯು ಅವರೆಲ್ಲರಿಗೂ ಒಬ್ಬರಿಗೇನೆ ತಾಂಬೂಲ
ವನ್ನು ಕೊಟ್ಟು, ರಾಯನು ಶಂಕರಕವಿಗೆ ಹನ್ನೆರಡು ಲಕ್ಷಗಳನ್ನು ಕೊಟ್ಟ
ದ್ದರಿಂದ ವಿದ್ವಾಂಸರೆಲ್ಲರೂ ಹೊಟ್ಟೆಕಿಚ್ಚು ಪಟ್ಟಿರುವರೆಂದು ತಿಳಿದು, ಅಯ್ಯಾ
ಕವೀಶ್ವರರೇ ರಾಯನು ಈ ಶಂಕರಮಹಾಕವಿಗಳಿಗೆ ಹನ್ನೆರಡು ಲಕ್ಷಗಳನ್ನು
ಕೊಡಲು ಕಾರಣವೇನಂದರೆ ಈತನು ಶಿವಪೂಜಾಧುರಂಧರನು ಆದ್ದರಿಂದಲೇ
ಈತನು ಶಂಕರಸ್ವರೂಪನು. ಮತ್ತು ಶಂಕರನು ಈತನು ಏಕಾದಶರು
ದ್ರಾತ್ಮಕನಾದ ಪರಮೇಶ್ವರನನ್ನು ಹೃದಯದಲ್ಲಿಟ್ಟುಕೊಂಡು ಭಕ್ತಿಯಿಂದ
ಶಿವಪೂಜೆಯನ್ನು ಮಾಡುತ್ತಿರುವ ಸಮಯದಲ್ಲಿ ರಾಜನು ಈತನಿಗೆ ಒಂದೇ
ಲಕ್ಷವನ್ನು ಮಿಕ್ಕ ಏಕಾದಶರುದ್ರರಿಗೂ, ಪ್ರತ್ಯೇಕವಾಗಿ ಹನ್ನೊಂದು
ಲಕ್ಷಗಳನ್ನು ಕೊಟ್ಟಿರುವನು. ಇದೇ ರಾಜನ ಅಭಿಪ್ರಾಯವೆಂದು ಸಭೆ
ಯಲ್ಲಿ ವಿವರಿಸಲು ಸಭಿಕರೆಲ್ಲರೂ ಅಚ್ಚರಿಗೊಂಡರು. ಆಗ ಇದನ್ನು ಕೇಳಿದ
ರಾಜಪುತ್ರನೊಬ್ಬನು ಬೇಗ ರಾಜನ ಬಳಿಯನ್ನೈದಿ ಈ ಮಹಾಪುರುಷನ

ಸ್ವರೂಪವನ್ನೂ ಈತನು ಸಭೆಯಲ್ಲಿ ವಿವರಿಸಿದರ್ಥವನ್ನೂ ರಾಯನಿಗೆ ತಿಳಿಸಲು, ಭೋಜರಾಯನು ತನ್ನ ಮನಸ್ಸಿನಲ್ಲಿದ್ದ ಅಭಿಪ್ರಾಯವನ್ನು ತಿಳಿದು ಕೊಂಡದ್ದರಿಂದ ಆತನನ್ನು ಮಹಾಪುರುಷನೆಂದು ತಿಳಿದು ಸಭೆಗೆ ಬರಲು, ಕವಿಯು ರಾಜನಿಗೆ ಮಂಗಳವಾಗಲೆಂದು ಆಶೀರ್ವಾದಮಾಡಿದನು. ರಾಜನು ಆನಂದದಿಂದ ಆತನನ್ನಾಲಿಂಗಿಸಿಕೊಂಡು ತನ್ನ ಕೈಯಿಂದ ಆ ಕವಿಯ ಕೈಯನ್ನು ಹಿಡಿದುಕೊಂಡು ಮತ್ತೊಂದು ಸೌಧವನ್ನೇರಿ ಹಿಂದು ಕಿಟಕಿಯ ಹತ್ತಿರ ದಿವ್ಯಾಸನಗಳಲ್ಲಿ ಕುಳಿತುಕೊಂಡು ಎಲೈ ಬ್ರಾಹ್ಮಣನೇ ನಿನ್ನ ಹೆಸರೇನು, ನಿನ್ನ ದೇಶವಾವುದು ನಿನಗಲಿರುವದ್ದರಿಂದ ಯಾವ ಸತ್ಪುರುಷರು ವ್ಯಸನಪಡುತ್ತಿರುವರು, ಎಂಬದಾಗಿ ಕೇಳಲು ಕವಿಯು ರಾಜನ ಕೈಯಲ್ಲಿ ಕಾಳಿದಾಸ ಎಂಬದಾಗಿ ಬರದನು ರಾಯನದನ್ನೋದಿಕೊಂಡು ಪಾದಕ್ಕೆರಗಿ ಇಬ್ಬರೂ ಸರಸವಾಗಿ ಮಾತಾಡುತ್ತಿರಲು ಸಂಧ್ಯಾಕಾಲವಾಗಲು ರಾಜನು ಕಾಳಿದಾಸನನ್ನು ಕುರಿತು ಎಲೈ ಸ್ನೇಹಿತನೇ ಸಂಧ್ಯಾಕಾಲವನ್ನು ಬಣ್ಣಿಸೆಂದನು.

ಶ್ಲೋ॥ ವ್ಯಸನಿನಇವವಿದ್ಯಾಕ್ಷೀಯತೇಪಂಕಜಶ್ರೀಃ ।
ಗುಣಿನಇವವಿದೇಶೇ ದೈನ್ಯಮಾಯಾಂತಿಭೃಂಗಾಃ ॥
ಕುನೃಪತಿರಿವಲೋಕಂ ಪೀಡಯತ್ಯಂಧಕಾರಃ ।
ಕೃಪಣಧನಮಿವಾರ್ಥಂ ಹಾವೋಽತಿಚಕ್ಷುಃ ॥

ತಾ॥ ಈ ಸಾಯಂಕಾಲವಾಗಲು ಕಮಲಗಳ ಕಾಂತಿಯು ವ್ಯಸನವುಳ್ಳವನ ವಿದ್ಯೆಯು ಹೇಗೆ ಕಮ್ಮಿಯಾಗುವದೊ ಹಾಗೆ ಕಮ್ಮಿಯಾಗುತ್ತಿರುವುದು. ದುಂಬಿಗಳು ಎಲ್ಲೋ ಗುಣವಂತರಾದವರೂ ಪರಸ್ಥಳದಲ್ಲಿ ಹೇಗೆ ದೈನ್ಯವನ್ನು ಹೊಂದುವರೊ ಹಾಗೆ ಉತ್ಸಾಹವಿಲ್ಲದಿರುವುವು. ಕತ್ತಲೆಯದರೋ ಕೆಟ್ಟರಾಜನಂತೆ ಲೋಕವನ್ನು ತೊಂದರೆ ಪಡಿಸುತ್ತಿರುವುದು. ಕಣ್ಣುಗಳು ಜಿಪುಣನ ಹಣದಂತೆ ಪ್ರಯೋಜನವಿಲ್ಲದಂತಿರುವುದು.

ಗ॥ ಪುನಸ್ತ್ವಾರಾಜಾನಂಸ್ತೌತಿಕವಿಃ ॥

ತಾ॥ ತಿರುಗೂ ರಾಜನನ್ನು ವರ್ಣಿಸುತ್ತಾನೆ.

ಶ್ಲೋ॥ ಉಪಚಾರಃಕರ್ತವ್ಯೋ ಯಾವದನುತ್ಪನ್ನಸೌಹೃದಾ ಪುರುಷಾಃ ।
ಉತ್ಪನ್ನಸೌಹೃದಾನಾಂ ಉಪಚಾರಃಕೈತವಂಭವತಿ ॥

ತಾ॥ ಯಾರುವರಿಗೂ ಸ್ನೇಹವುಂಟಾಗುವದಿಲ್ಲವೊ ಅದುವರಿಗೂ ಉಪಚಾರ ಮಾಡಬೇಕು ಸ್ನೇಹವು ಉಂಟಾದಬಳಿಕ ಹೆಚ್ಚು ಉಪಚಾರಗ

ಳನ್ನು ಮಾಡಿದರೆ ಅದು ವ್ಯಾಜವೆಂದು ಎಣ್ಣಿಸಿಕೊಳ್ಳುವುದು.

ಶ್ಲೋ॥ ದತ್ತಾತೇನಕವಿಭ್ಯಃ ಪೃಥಿವೀಸಕಲಾಪಿಕನಕಸಂಪೂರ್ಣಾ ।
ದಿವ್ಯಾಂಸುಕಾವ್ಯರಚನಾಂ ಕ್ರಮುಂಕವೀನಾಂಚಯೋವಿಜಾನಾತಿ ॥

ತಾ॥ ಯಾವ ರಾಜನು ಕವಿಗಳ ಯೋಗ್ಯತೆಯನ್ನೂ ಅವರು ಮಾಡಿದ ಕಾವ್ಯಗಳ ಸ್ವಾರಸ್ಯವನ್ನೂ ನೋಡಿ ಸಂತೋಷಪಡುವನೊ ಅಂಥವನು ತನ್ನ ಕನಕ ಸಮೃದ್ಧಿಯಾದ ಸಕಲ ಭೂಮಿಯನ್ನೂ ಕೊಟ್ಟಂತೆಯೇ.

ಶ್ಲೋ॥ ಸುಕವೇಶ್ಶಬ್ದಸೌಭಾಗ್ಯಂ ಸತ್ಕವಿರ್ವೇತ್ತಿನಾಪರಃ ।
ವಂಧ್ಯಾನಹಿವಿಜಾನಾತಿ ಪರಂಪ್ರೌಹ್ರದಸಂಪದಂ ॥

ತಾ॥ ಒಳ್ಳೆ ಕವೀಶ್ವರನ ಕವಿತ್ವದಧಾಟಿಯನ್ನು ಅಂಥ ಸತ್ಕವಿಯೇ ತಿಳಿದುಕೊಳ್ಳಬೇಕೇಹೊರ್ತು ಮತ್ತಾರಿಗೂ ಗೊತ್ತಾಗಲಾರದು ಹೇಗೆಂದರೆ ಗರ್ಭಿಣಿಯಾದ ಹೆಂಗಸಿಗಾಗುವ ಸಂತೋಷವನ್ನು ಬಂಜೆಯು ಹೇಗೆ ತಿಳಿದಾಳು.

ಗ॥ ತತಃಕ್ರಮೇಣಭೋಜಕಾಳಿದಾಸಯೋಃ ಪ್ರೀತಿರಜಾಯತ ತತಃಕಾ
ಳಿದಾಸಂವೇಶ್ಯಾಲಂಪಟಂಜ್ಞಾತ್ವಾ ತಸ್ಮಿನ್ಸರ್ವೇದ್ವೇಷಂಚಕ್ರುಃ ।
ನಕೋಪಿತಂಸ್ಪೃಶತಿ ಅಥಕಥಂಚಿತ್ಸಭಾಮಧ್ಯೇ ಕಾಳಿದಾಸಮಾಲೋ
ಕ್ಯಭೋಜೇನಮನಸಾಚಿಂತಿತಂ ಕಥಮಸ್ಯಪ್ರಾಜ್ಞಸ್ಯಾಪಿಸ್ಮರಪೀಡಾ
ಪ್ರಭವಾಇತಿ । ಸೋಪಿತದಭಿಪ್ರಾಯಂಜ್ಞಾತ್ವಾಪ್ರಾಹ ॥

ತಾ॥ ಬಳಿಕ ಭೋಜ ಕಾಳಿದಾಸರಿಗೆ ವಿಶ್ವಾಸವು ಹೆಚ್ಚಿತು ಕಾಳಿದಾಸನು ಯಾವಾಗಲೂ ಸೂಳೆ ಮನೆಗಳಲ್ಲಿರುವನೆಂದು ಎಲ್ಲರೂ ಅವನನ್ನು ದ್ವೇಷಿಸುತ್ತಾ ಮುಟ್ಟುವದಕ್ಕೂ ಹಿಂತೆಗೆಯುತ್ತಿದ್ದರು. ಹೀಗಿರಲು ರಾಯನು ಸಭೆಯಲ್ಲಿ ಕೂತುಕೊಂಡು ಇಂಥಾ ಪ್ರಾಜ್ಞನಾದ ಕಾಳಿದಾಸನಿಗೂ ಕಾಮಬಾಧೆಯುಂಟಾಗಿರುವದಲ್ಲಾ ಎಂದು ಯೋಚಿಸುತ್ತಿರಲು ಕಾಳಿದಾಸನು ರಾಯನ ಅಭಿಪ್ರಾಯವನ್ನು ತಿಳಿದುಕೊಂಡು.

ಶ್ಲೋ॥ ಚೇತೋಭುವಶ್ಚಾಪಲತಾ ಪ್ರಸಂಗೇ ಶಿವಸ್ತಥಾಮಾನುಷ ಲೋಕಭಾ
ಜಾಂ ॥ ಯದ್ವಾಹಶೀಲಸ್ಯಪುರಾವಿಜೇತುಂ ತಥಾವಿಧಂ ಪೌರುಷ
ಮರ್ಧಮಾಸೀತ್ ॥

ತಾ॥ ಮನ್ಮಥ ಚಾಪಲ್ಯ ವಿಷಯದಲ್ಲಿ ಸಾಕ್ಷಾತ್ ಪರಮೇಶ್ವರನು ಮನ್ಮಥನನ್ನು ಸುಟ್ಟುಹಾಕಿದಾಗ್ಯೂ ಅವನ ಪೌರುಷವು ಅರ್ಧವಾಗಿ ಹೋಯಿತು. ಅರ್ಧನಾರೀಶ್ವರನಾದನು. ಹೀಗಿರುವಲ್ಲಿ ಮಾನುಷ್ಯಮಾತ್ರದವ ಇನ್ನು ಹೇಗಿರಬೇಕು.

ಗ॥ ತತಸ್ತುಷ್ಟೋ ಭೋಜರಾಜಃ ಪ್ರತ್ಯಕ್ಷರಲಕ್ಷಂದದೌ ॥

ತಾ॥ ಬಳಿಕ ಭೋಜರಾಯನು ಸಂತೋಷಪಟ್ಟು ಅಕ್ಷರ ಲಕ್ಷವನ್ನು ಕೊಟ್ಟನು ಬಳಿಕ ಕಾಳಿದಾಸನು ರಾಜನನ್ನು ಬಣ್ಣಿಸುತ್ತಾನೆ.

ಶ್ಲೋ॥ ಮಹಾರಾಜಶ್ರೀಮನ್ ಜಗತಿಯಶಸಾತೇಧವಳಿತೇ ।
ಪಯಃಪಾರಾವಾರಂ ಪರಮಪುರುಷೋಯಂಮೃಗಯತೇ ॥
ಕಪರ್ದೀಕೈಲಾಸಂಕರಿವರಂ ಮಭೌಮಂಕುಲಿಶಭೃತ್ಕಳಾನಾ ।
ಥಂರಾಹುಃಕಮಲಭವನೋಹಂಸಮಧುನಾ ॥

ತಾ॥ ಎಲೌ ಮಹಾರಾಜನಾದ ಭೋಜರಾಯನೇ ನಿನ್ನ ಕೀರ್ತಿಯು ಪ್ರಪಂಚವನ್ನೆಲ್ಲಾ ಬೆಳ್ಳಗೆ ಮಾಡಿರುವದ್ದರಿಂದ ಶ್ರೀ ಮಹಾವಿಷ್ಣುವು ತನ್ನ ಕ್ಷೀರ ಸಮುದ್ರವನ್ನು ಹುಡುಕುತ್ತಿರುವನು. ಪರಮೇಶ್ವರನು ಕೈಲಾಸವನ್ನು ಹುಡುಕುತ್ತಿರುವನು. ಇಂದ್ರನು ಐರಾವತವನ್ನೂ, ರಾಹುವು ಚಂದ್ರನನ್ನೂ, ಬ್ರಂಹದೇವರು ತನ್ನ ಹಂಸಪಕ್ಷಿಯನ್ನೂ ಹುಡುಕುತ್ತಿರುವರು. ಅಂದರೆ ನಿನ್ನ ಕೀರ್ತಿಯು ಲೋಕವನ್ನೆಲ್ಲಾ ಬೆಳ್ಳಗೆ ಮಾಡಲಾಗಿ ಯಾವಾಗಲೂ ಬಿಳುಪಾಗಿದ್ದದ್ದನ್ನ ಕಂಡುಹಿಡಿಯಲು ಅಸಾಧ್ಯವಾಯಿತೆಂಬರ್ಥವು.

ಶ್ಲೋ॥ ನೀರಕ್ಷೀರೇಗೃಹೀತ್ವಾನಿಖಿಲಖಗತತೀರ್ಯಾತಿನಾಳೀಕ । ಜನ್ಮಾತಕ್ರಂ
ಧೃತ್ವಾತುಸರ್ವಾನಟತಿಜಲನಿಧೀಂಶ್ಚಕ್ರಪಾಣಿರ್ಮುಕುಂದಃ ॥
ಸರ್ವಾನುತ್ತುಂಗಶೈಲಾಂದಹತಿ ಪಶುಪತಿಃಫಾಲನೇತ್ರೇಣ ।
ಪಶ್ಯನ್ವ್ಯಾಪ್ತಾತ್ವತ್ಕೀರ್ತಿಕಾಂತಾತ್ರಿ ಜಗತಿನೃಪತೇಭೋಜರಾಜ
ಕ್ಷಿತೀಂದ್ರ ॥

ತಾ॥ ತರುಣಾಯ ಬ್ರಹ್ಮನು ಹಾಲೂ ನೀರುಗಳನ್ನು ಬೆರಸಿ ಪ್ರತಿ ಪಕ್ಷಿಗಳಿಗೂ ಇಡುತ್ತಾ ಹಾಲನ್ನುಮಾತ್ರ ತಗದುಕೊಂಡದ್ದನ್ನ ಹಂಸವೆಂದು ತಿಳಿದುಕೊಂಡನು. ಚಕ್ರಧರನಾದ ವಿಷ್ಣುವು ಮಜ್ಜಿಗೆಯನ್ನು ತಗದು ಕೊಂಡು ಹಾಕುತ್ತಾ ಹೆತ್ತದ್ದನ್ನು ಹಾಲು ಕಡಲೆಂದು ತಿಳಿದನು. ಈಶ್ವರನು ಎಲ್ಲಾ ದೊಡ್ಡ ಬೆಟ್ಟಗಳನ್ನು ಸುಡುತ್ತಾ ಕರಗಿದ್ದನ್ನೇ ತನ್ನ ಬೆಳ್ಳೀ ಬೆಟ್ಟವೆಂದು ತಿಳಿದುಕೊಂಡನು. ಎಲೈ ಭೋಜರಾಯನೇ ನಿನ್ನ ಕೀರ್ತಿಯು ಎಲ್ಲೆಲ್ಲಿಯೂ ವ್ಯಾಪಿಸಿರುವದು.

ಶ್ಲೋ॥ ವಿದ್ವದ್ರಾಜಶಿಖಾಮಣೇ ತುಲಯಿತುಂಧಾತಾತ್ವದೀಯಂಯಶಃ ।
ಕೈಲಾಸಂಚನಿರೀಕ್ಷ್ಯತತ್ರ ಲಘುತಾಂನಿಕ್ಷಿಪ್ತವಾನ್ಪೂರ್ತಯೇ ॥
ಉಕ್ಷಾಣಂತದುಪರ್ಯುಮಾಸಹಚರಂತನ್ಮೂರ್ಧ್ನಿಗಂಗಾಜಲಂ ।

ತಸ್ಯಾಗ್ರೇಫಣಿಪುಂಗವಂತ ದುಪರಿಸ್ಫಾರಂಸುಧಾದೀಧಿತಿಂ ॥

ತಾ॥ ಎಲೈ ವಿದ್ವಾಂಸನಾಗಿಯೂ, ರಾಜಶ್ರೇಷ್ಠನಾಗಿಯೂ, ಇರುವ ಭೋಜರಾಯನೇ ಬ್ರಹ್ಮದೇವನು ನಿನ್ನ ಕೀರ್ತಿಯನ್ನು ತೂಕಮಾಡಬೇಕೆಂದು ತಕ್ಕಡಿಯಲ್ಲಿ ಒಂದು ಕಡೆ ಕೀರ್ತಿಯನ್ನಿಟ್ಟು ಮತ್ತೊಂದು ಕಡೆ ಕೈಲಾಸವನ್ನಿಡಲು ಕಮ್ಮಿಯಾಗಲು ಸರಿಮಾಡುವದಕ್ಕಾಗಿ ಕೈಲಾಸದ ಮೇಲೆ ವೃಷಭವನ್ನೂ ಅದರ ಮೇಲೆ ಪಾರ್ವತೀಪರಮೇಶ್ವರರನ್ನೂ ಆ ಪರಮೇಶ್ವರನ ಮೇಲೆ ಗಂಗಾನದಿಯನ್ನೂ ಇಟ್ಟು ತೂಕಮಾಡಿದನು.

ಶ್ಲೋ॥ ಸ್ವರ್ಗಾದ್ಗೋಪಾಲಕುತ್ರ ವ್ರಜಸಿಸುರಮುನೇಭೂತಲೇ । ಕಾಮಧೇ
ನೋರ್ವತ್ಸಸ್ಯಾನೇತುಂ ಕವಮಸ್ತೃಣಚಯಮಧುನಾಮುಗ್ಧದುಗ್ಧಂ
ನತಸ್ಯಾಃ ॥ ಶ್ರುತ್ವಾಶ್ರೀಭೋಜರಾಜಪ್ರಚುರವಿತರಣಂವ್ರೀಡಶುಷ್ಕ
ಸ್ತನೀಸ್ಯಾಥೋರ್ಗ। ಹಿಸ್ಯಾತ್ತದಪಿತದರಿಭಿಶ್ಚರ್ವಿತಂಸರ್ವಮುರ್ವ್ಯಾಂ॥

ತಾ॥ ನಾರದರು ಗೋಪಾಲನನ್ನು ಕುರಿತು ಎಲೈ ಗೋಪಾಲನೇ ಸ್ವರ್ಗದಿಂದ ಎಲ್ಲಿಗೆ ಹೋಗುವಿ? ಎಂದು ಕೇಳಲು ಗೋಪಾಲನು ಎಲೈ ಋಷಿಗಳೇ ಕಾಮಧೇನುವಿನ ಕರುವಿಗೆ ಹುಲ್ಲುತರಲು ಭೂಲೋಕಕ್ಕೆ ಹೋಗುವೆನೆಂದನು. ಆಗ ನಾರದನು ಎಲೈ ಗೋಪಾಲನೇ ಕಾಮಧೇನುವಿನ ಕರುವಿಗೆ ಹಾಲಿಲ್ಲವೇ ಎಂದು ಆಶ್ಚರ್ಯದಿಂದ ಕೇಳಲು ಗೋಪಾಲನು ಎಲೈ ಋಷಿಯೇ ಶ್ರೀ ಭೋಜರಾಯನ ಪ್ರಸಿದ್ಧವಾದ ಔದಾರ್ಯವನ್ನು ಕೇಳಿ ನಾಚಿಕೆಪಟ್ಟು ಕಾಮಧೇನುವಿನ ಮೊಲೆಗಳು ಒಣಗಿಹೋಗಿವೆ ಎಂದು ಹೇಳಲಾಗ ಎಲೈ ಗೋಪಾಲನೇ ಹಾಗಾದರೆ ಭೂಲೋಕದಲ್ಲಿದ್ದ ತೃಣವನ್ನೆಲ್ಲವನ್ನೂ ಭೋಜನ ಶತ್ರುಗಳೆಲ್ಲರೂ ಬಾಯಲ್ಲಿಟ್ಟುಕೊಂಡು ಶರಣಾಗತರಾದ್ದರಿಂದ ಆ ಹುಲ್ಲೂ ಈಗ ಸಿಕ್ಕಲಾರದೆಂದನು. ಅಂದರೆ ಜ್ಞಾನಶೌರ್ಯೋದಾರ್ಯಯುಳ್ಳವನೆಂದರ್ಥವು.

ಗ॥ ತುಷ್ಟೋರಾಜಾಪ್ರತ್ಯಕ್ಷರಲಕ್ಷಂದದೌ ॥

ಭೋಜರಾಯನು ಸಂತೋಷಪಟ್ಟು ಅಕ್ಷರಕ್ಕೊಂದು ಲಕ್ಷದಂತೆ ಕೊಟ್ಟನು.

ಗ॥ ತತಃ ಕದಾಚಿತ್ ಶ್ರುತಿಸ್ಮೃತಿಪಾರಂಗತಾಃ ಕೇಚಿದ್ರಾಜಾನಂ ಕವಿತ್ವ
ಪ್ರಿಯಂಜ್ಞಾತ್ವಾ ಕ್ವಚಿನ್ನಗರಾದ್ಬಹಿಃ ಭುವನೇಶ್ವರೀಪ್ರಸಾದೇನ ಕ
ವಿತ್ವಂಕರಿಷ್ಯಾಮ ಇತ್ಯುಪವಿಷ್ಟಾಃ ತೇಷ್ವೇಕೇನ ಪಂಡಿತಮ್ಮನ್ಯೇ
ನ ಏಕಶ್ಶ್ಲೋಕಪಾದಃ ಭೋಜನಂ ದೇಹಿರಾಜೇಂದ್ರ ಇತಿ॥ ಅನ್ಯೋ

ನಾಹಾರಿ ಘೃತಸೂಪಸಮನ್ವಿತಮಿತಿ ॥ ಉತ್ತರಾರ್ಧಂ ನಸ್ಫುರತಿ ತತೋದೇವತಾಭವನಂ ಕಾಳಿದಾಸಃ ಪ್ರಣಾಮಾರ್ಥಮಾಗಾತ್ ತಂವೀಕ್ಷ್ಯ ದ್ವಿಜಾ ಊಚುಃ ಅಸ್ಮಾಕಂಸಮಗ್ರವೇದವಿದಾಮಪಿ ಭೋಜಃ ಕಿಮಪಿ ನಾರ್ಪಯತಿ ಭವಾದೃಶಾಂತು ಮನೇಪ್ಸಿತಂದತ್ತೆ ತತೋಽಸ್ಮಾಭಿಃ ಕವಿತ್ವ ವಿಧಾನಧಿಯಾತ್ರಾಗತಂ ಚಿರಂವಿಚಾರ್ಯ ಪೂರ್ವಾರ್ಧಮಭ್ಯಧಾಯಿ ಉತ್ತರಾರ್ಧಂಕೃತ್ವಾ ದೇಹೀತಿತತೋಽಸ್ಮಭ್ಯಂಕಿಮಪಿ ಪ್ರಯಚ್ಛತೀ ತ್ಯುಕ್ತ್ವಾತತ್ಪುರಸ್ತಾದರ್ಧಮಭಾಣಿ ಸಚಾತಚ್ಛ್ರುತ್ವಾ ಮಾಹಿಷಂಚ ಶರಚ್ಚಂದ್ರ ಚಂದ್ರಿಕಾಧವಳಂ ದಧೀತ್ಯಾಹ ತೇಜರಾಜಭವನಂಗತ್ವಾ ದೌವಾರಿಕಾನೂಚುಃ ಪರ್ಯಂಕಪನಂಕೃತ್ವಾ ಸಮಾಗತಾಃ ರಾಜಾನಂ ದರ್ಶಯತೇತಿ ತೇಚಕೌತುಕಾತ್ ಹಸಂತೋಗತ್ವಾರಾಜಾನಂ ಪ್ರಣಮ್ಯಾಪ್ರಾಹುಃ ॥

ತಾ॥ ಆ ಬಳಿಕ ಒಂದಾನೊಂದು ದಿನ ಕೆಲವರು ಅಧ್ಯಾಪಕರು ರಾಜನು ಕವಿತ್ವಪ್ರಿಯನೆಂಬದಾಗಿ ತಿಳಿದುಬಂದು ಪಟ್ಟಣದ ಹೊರಗಿರುವ ಭುವನೇಶ್ವರೀ ದೇವಾಲಯವನ್ನು ಹೊಕ್ಕು ಆ ದೇವೀ ಪ್ರಸಾದದಿಂದ ಕವಿತ್ವವನ್ನು ಮಾಡಲು ಪ್ರಯತ್ನಪಟ್ಟು ಅವರಲ್ಲೊಬ್ಬನು ಎಲೈ ರಾಜನೇ ಭೋಜನವನ್ನುಕೊಡು ಎಂಬರ್ಥವುಳ್ಳ ಭೋಜನಂ ದೇಹಿರಾಜೇಂದ್ರ ಎಂಬದಾಗಿ ಒಂದು ಪಾದವನ್ನು ಹೇಳಲಾಗಿ, ಮತ್ತೊಬ್ಬನು ತುಪ್ಪ ತೊವ್ವೆಗಳಿಂದ ಕೂಡಿದ ಅನ್ನವನ್ನುಕೊಡು ಎಂಬರ್ಥವುಳ್ಳ 'ಘೃತಸೂಪಸಮನ್ವಿತಂ' ಯೆಂದು ಯೆರಡನೇ ಪಾದವನ್ನು ಹೇಳಿದನು, ಇಲ್ಲಿಗೆ ಪೂರ್ವಾರ್ಧವಾದುದು. ಉತ್ತರಾರ್ಧವನ್ನು ಹೇಳುವದಕ್ಕೆ ಮಿಕ್ಕವರಿಗೆ ಕೈಲಾಗದೆ ಯೋಚಿಸುತ್ತಿರಲಾಗಿ ಅಲ್ಲಿಗೆ ದೇವತಾದರ್ಶನಕ್ಕಾಗಿ ಕಾಳಿದಾಸನು ಬರಲು ಅವರೆಲ್ಲರೂ ಆತನಿಗೆ ತಮ್ಮ ಸಂಗತಿಯನ್ನು ತಿಳಿಸಿ ಉತ್ತರಾರ್ಧವನ್ನು ಮಾಡಿಕೊಡಬೇಕೆಂದು ಬೇಡಿಕೊಳ್ಳಲು ವೇದಗಳನ್ನುಮಾತ್ರ ಒದಿಕೊಂಡಿರುವ ಆ ಬ್ರಾಹ್ಮಣರಿಗೆ 'ಮಾಹಿಷಂಚಶರಚ್ಚಂದ್ರ ಚಂದ್ರಿಕಾಧವಳಂದಧಿ' ಎಂಬದಾಗಿ ಉತ್ತರಾರ್ಧವನ್ನು ಬರೆದುಕೊಟ್ಟರು. ಅಂದರೆ ಶರತ್ಕಾಲದ ಚಂದ್ರನ ಬೆಳದಿಂಗಳಿನಂತೆ ಧವಳವಾಗಿಯೂ ಎಮ್ಮೆ ಸಂಬಂಧವಾದದ್ದಾಗಿಯೂ ಇರುವ ಮೊಸರಿನಿಂದ ಕೂಡಿದ ಭೋಜನವನ್ನು ಕೊಡೆಂದರ್ಥವು. ಬಳಿಕ ಆ ಬ್ರಾಹ್ಮಣರು ಆ ಶ್ಲೋಕವನ್ನು ಬಾಯಿಪಾಠಮಾಡಿ ಅರಮನೆಗೆ ಬಂದು ದ್ವಾರಪಾಲಕರನ್ನು ಕುರಿತು ಅಯ್ಯಾ ನಾವುಗಳೂ ಕವಿತ್ವಮಾಡಿಕೊಂಡು ಬಂದಿರುವೆವು ರಾಯನ ಭೇಟಿ

ಯಂ ಮಾಡಿಸಬೇಕೆನಲು ಅವರು ತಮಾಷೆಯಿಂದ ನಕ್ಕು, ರಾಜನ ಬಳಿಯು ಸ್ನೈವಿ ಹೇಳಿದ್ದೇನಂದರೆ.—

ಶ್ಲೋ॥ ರಾಜಮಾಷನಿಭೈರ್ದಂತೈಃ ಕಟಿವಿನ್ಯಸ್ತಪಾಣಯಃ ।
ದ್ವಾರಿತಿಷ್ಠಂತಿರಾಜೇಂದ್ರ ಛಾಂದಸಾಶ್ಲೋಕಶತ್ರವಃ ॥

ತಾ॥ ಮಹಾರಾಜರೇ ಕೆಲವರು ಛಾಂದಸರು ಕಾರೇಮಣಿ ಕಾಳುಗಳಂತೆ ಹಲ್ಲುಗಳುಳ್ಳವರಾಗಿ ಕೈಗಳನ್ನು ಸೊಂಟದಲ್ಲಿ ಊರಿಕೊಂಡು ಶ್ಲೋಕಗಳ ವಾಸನೆಯೇ ತಿಳಿಯದವರಾಗಿ ಬಾಗಿಲಲ್ಲಿ ನಿಂತಿರುವರೆಂದು ತಿಳಿಸಿದರು.

ಗ॥ ತತಃರಾಜ್ಞಾಪ್ರವೇಶಿತಾಃ ತೇರಾಜಸಂಸದಿಮಿಳಿತಾ ಸ್ಸ್ವೈಕಕವಿತ್ವಂ ಪಠಂತಿಸ್ಮ ॥

ತಾ॥ ಬಳಿಕ ರಾಜನ ಅಪ್ಪಣೆಯಂತೆ ಬ್ರಾಹ್ಮಣರು ಸಭೆಗೆ ಬಂದು ಸಾಲಾಗಿ ಕೂತುಕೊಂಡು ಎಲ್ಲರೂ ಒಂದೇ ಧ್ವನಿಯಿಂದ ತಮ್ಮ ಕವಿತ್ವ ಶ್ಲೋಕವನ್ನು ಹೇಳುತ್ತಿದ್ದರು.

ಶ್ಲೋ॥ ಭೋಜನಂದೇಹಿರಾಜೇಂದ್ರ ಘೃತಸೂಪಸಮನ್ವಿತಂ ।
ಮಾಹಿಷಂಚಶರಚ್ಚಂದ್ರಚಂದ್ರಿಕಾಧವಳಂದಧಿ । ಎಂದು ಹೇಳುತ್ತಿದ್ದರು.

ಗ॥ ರಾಜಾತಚ್ಛ್ರುತ್ವಾಉತ್ತರಾರ್ಧಂಕಾಳಿದಾಸೇನ ಕೃತಮಿತಿಜ್ಞಾತ್ವಾ ವಿಪ್ರಾನಾಹೂಯಯೇನ ಪೂರ್ವಾರ್ಧಂಕಾರಿತಂ ತನ್ಮುಖಾತ್ಕವಿತ್ವಂ ಕದಾಚಿದಪಿನಕರಣೀಯಂ। ಉತ್ತರಾರ್ಧಸ್ಯಕಿಂಚಿದ್ದೀಯತೇನ ಪೂರ್ವಾರ್ಧಸ್ಯೇತ್ಯುಕ್ತ್ವಾ ಪ್ರತ್ಯಕ್ಷರಲಕ್ಷಂದದೌ। ತೇಷುಚದಕ್ಷಿಣಾಮಾದಾಯಗತೇಷು ಕಾಳಿದಾಸಂವೀಕ್ಷ್ಯ ರಾಜಾಪ್ರಾಹಕವೇಉತ್ತರಾರ್ಧಂತ್ವಯಾಪಠಿತಮಿತಿಕವಿರಾಹ ॥

ತಾ॥ ದೊರೆಯು ಆ ಶ್ಲೋಕವನ್ನು ಕೇಳಿ ಉತ್ತರಾರ್ಧವನ್ನು ಕಾಳಿದಾಸನು ಮಾಡಿದ್ದೆಂದು ಊಹಿಸಿ ಬ್ರಾಹ್ಮಣರನ್ನು ಕುರಿತು ಪೂರ್ವಾರ್ಧವನ್ನು ಯಾರು ಹೇಳಿದರೋ ಅವರಿಗೆ ಕವಿತ್ವವೇ ತಿಳಿಯದು. ಉತ್ತರಾರ್ಧಕ್ಕೆ ಮಾತ್ರ ಅಕ್ಷರಲಕ್ಷ ಕೊಡುವೆನೆಂದು ಬಹುಮಾನವನ್ನು ಕೊಟ್ಟನು. ಬಳಿಕ ಅವರು ದಕ್ಷಿಣೆಯನ್ನು ತೆಗೆದುಕೊಂಡು ಹೋದಮೇಲೆ ದೊರೆಯು ಕಾಳಿದಾಸನನ್ನು ಕುರಿತು ಉತ್ತರಾರ್ಧವನ್ನು ನೀನೇ ಹೇಳಿರುವಿಯೆಂದನು. ಅದಕ್ಕೆ ಕಾಳಿದಾಸನು—

ಶ್ಲೋ॥ ಅಧರಸ್ಯಮಧುರಿಮಾಣಂ ಕುಚಕಾಠಿನ್ಯಂದೃಶೋಶ್ಚತೈಕ್ಷ್ಣ್ಯಂಚ।

ಕವಿತಾಯಾಃಪರಿಪಾಕಾನ್ಯನುಭವರಸಿಕೋವಿಜಾನಾತಿ ॥

ತಾ॥ ಹೆಂಗಸರ ಕೆಳತುಟಿಯಲ್ಲಿನ ಮಾಧುರ್ಯವನ್ನೂ ಮೊಲೆಗಳು ಘಟ್ಟಿಯಾಗಿರುವಿಕೆಯನ್ನೂ ಹೆಂಗಸರ ನೋಟಗಳ ಕ್ರೂರತ್ವವನ್ನೂ ಕವಿತ್ವದ ಸ್ವಾರಸ್ಯವನ್ನೂ ಅನುಭವವುಳ್ಳ ಮನುಷ್ಯನು ತಿಳಿದಾನೇಹೊರ್ತು ಮಿಕ್ಕವರಿಗೆ ಹೇಗೆ ಗೊತ್ತಾದೀತು.

ಶ್ಲೋ॥ ಅಪೂರ್ವೋಭಾತಿಭಾರತ್ಯಾಃ ಕಾವ್ಯಾಮೃತಫಲೇರಸಃ ।
ಚರ್ವಣೇಸರ್ವಸಾಮಾನ್ಯೇ ಸ್ವಾದುವಿತ್ಕೇವಲಂಕವಿಃ ॥

ತಾ॥ ಸರಸ್ವತಿಯ ಕಾವ್ಯಾಮೃತವೆಂಬ ಫಲದಲ್ಲಿರುವ ಸ್ವಾರಸ್ಯವು ಎಲ್ಲರಿಗೂ ತಿಳಿಯುವದಕ್ಕಿಂತಲೂ ಕವಿಯು ಸರಿಯಾಗಿ ತಿಳಿದುಕೊಳ್ಳುವನು.

ಶ್ಲೋ॥ ಸಂಚಿಂತ್ಯಸಂಚಿಂತ್ಯಜಗತ್ಸಮಸ್ತಂ ತ್ರಯಃಪದಾರ್ಥಾಹೃದಯಂಪ್ರವಿಷ್ಟಾಃ । ಇಕ್ಷೋರ್ವಿಕಾರಾಮತಯಃ ಕವೀನಾಂಮುಗ್ಧಾಂಗನಾಪಾಂಗತರಂಗಿತಾನಿ ॥

ತಾ॥ ಚನ್ನಾಗಿ ಆಲೋಚಿಸಿ ನೋಡಿದರೆ ಈ ಲೋಕದಲ್ಲಿ ಮೂರು ಪದಾರ್ಥಗಳು ಮಾತ್ರ ಮನೋಹರಗಳಾಗಿರುವವು ಅವಾವುವೆಂದರೆ ? ಕಬ್ಬುಗಳ ಪರಿಣಾಮಗಳು ಕವಿಗಳ ಬುದ್ಧಿಗಳು ಸುಂದರ ಸ್ತ್ರೀಯರುಗಳ ಕಡೆಗಣ್ಣಿನ ನೋಟಗಳು ಇವುಗಳೇ ಒಂದೊಬ್ಬರಿಗೊಬ್ಬರು ಸರಸವಾಗಿ ಮಾತಾಡುತ್ತಿರಲು.

ಗ॥ ತತಃಕದಾಚಿದ್ದ್ವಾರಪಾಲ ಆಗತ್ಯಪ್ರಣಮ್ಯಭೋಜಂ ಪ್ರಾಹರಾಜನ್ ದ್ರವಿಡದೇಶಾತ್ ಕೋಪಿಲಕ್ಷ್ಮೀಧರನಾಮಾ ಕವಿರ್ದ್ವಾರಮಧ್ಯಾಸ್ತಇತಿ ರಾಜಾಪ್ರವೇಶಯೇತ್ಯಾಹ ಪ್ರವಿಷ್ಟಸ್ಸೋವಸೂರ್ಯಮಿವವಿಭ್ರಾಜಮಾನಂ ಚಿರಾದಪ್ಯವಿದಿತ ವೃತ್ತಾಂತಂ ಪ್ರೇಕ್ಷ್ಯರಾಜಾವಿಚಾರಯಾಮಾಸ ಆಹ ॥

ತಾ॥ ಆವೇಳೆಯೊಂದು ಸಮಯದಲ್ಲಿ ದ್ವಾರಪಾಲಕನು ರಾಜನೆಡೆಗೆ ಬಂದು ಮಹಾಸ್ವಾಮಿಯಾ ತಮ್ಮ ಭೇಟಿಗಾಗಿ ಲಕ್ಷ್ಮೀಧರನೆಂಬ ಕವಿಗಳು ಬಂದು ಬಾಗಿಲಲ್ಲಿ ನಿಂತಿರುವರೆಂದು ಅರಿಕೆಮಾಡಿಕೊಳ್ಳಲಾಗಿ ಧೊರೆಯು ಪ್ರವೇಶವನ್ನಿಡೆಂದು ಅಪ್ಪಣೆ ಮಾಡಿದನು. ಆಗ ಸಭೆಗೆ ಬಂದಮಾತ್ರದಿಂದಲೇ ಸೂರ್ಯನಂತಿರುವ ಆತನ ತೇಜಸ್ಸನ್ನು ಕಂಡು ಬೆರಗಾಗಿ ಹೀಗೆಂದನು.

ಶ್ಲೋ॥ ಆಕಾರಮಾತ್ರವಿಜ್ಞಾನ ಸಂಪಾದಿತಮನೋರಥಾಃ ।
ಧನ್ಯಾಸ್ತೇಯೇನಶೃಣ್ವಂತಿ ದೀನಾಃಕ್ವಾಪ್ಯರ್ಥಿನಾಂಗಿರಃ ॥

ತಾ॥ ಲೋಕದಲ್ಲಿ ಯಾರಾದರೆ ಒಬ್ಬರನ್ನು ನೋಡುವ ಮಾತ್ರದಿಂದಲೇ ತಿಳಿದುಕೊಂಡು ಅವರ ಕೋರಿಕೆಗಳನ್ನು ನೆರವೇರಿಸಿಕೊಡುವರೋ, ಯಾವಾದರೆ ಯಾಚಕರ ದೀನವಾಕ್ಯಗಳನ್ನು ಎಂದಿಗೂ ಕೇಳದಿರುವರೋ, ಅವರೇ ಕೃತಾರ್ಥರು.

ಗ॥ ಸಭಾಮಾಗತ್ಯ ತತ್ರ ರಾಜಾನಂ ಸ್ವಸ್ತೀತ್ಯುಕ್ತ್ವಾ ತದಾಜ್ಞಯೋಪವಿಷ್ಟಃ
ಪ್ರಾಹ ದೇವ ಇಯಂ ತೇ ಪಂಡಿತಮಂಡಿತಾ ಸಭಾ ತ್ವಂ ಚ ಸಾಕ್ಷಾದ್ವಿಷ್ಣು
ರಸಿ. ಅತಃ ಕಿಂ ನಾಮ ಪಾಂಡಿತ್ಯಂ ಮಮ ತಥಾಪಿ ಕಿಂಚಿದ್ವಚ್ಮಿ॥

ತಾ॥ ಆ ತೇಜಸ್ವಿಯಾದ ಕವಿಯು ಸಭೆಗೆ ಬಂದು ರಾಜನಿಗೆ ಮಂಗಳವಾಗಲಿಂದು ಹರಸಿ, ಅಯ್ಯಾ ಭೋಜರಾಯನೇ ನಿನ್ನ ಸಭೆಯು ಬಹು ಪಂಡಿತರಿಂದ ಕೂಡಿರುವದು. ನೀನೋ ಸಾಕ್ಷಾದ್ವಿಷ್ಣುವೇ ನನಗೇನು ಪಾಂಡಿತ್ಯವಿರುವದು, ಆದರೂ ಸ್ವಲ್ಪ ಹೇಳುವೆನೆಂದು.

ಶ್ಲೋ॥ ಭೋಜಪ್ರತಾಪಂ ತು ವಿಧಾಯ ಧಾತ್ರಾ ಶೇಷೈರ್ನಿರಸ್ತೈಃ ಪರಮಾಣು
ಭಿಃ ಕಿಂ । ಹರೇಃ ಕರೇಽಭೂತ್ಪವಿರಂಬರೇ ಚ ಭಾನುಃ ಪಯೋಧೇರು
ದರೇ ಕೃಶಾನುಃ ॥

ತಾ॥ ಬ್ರಹ್ಮದೇವನು ಮೊದಲು ಭೋಜನ ಪರಾಕ್ರಮವನ್ನು ನಿರ್ಮಾಣಮಾಡಿ ಅದರಿಂದ ಉಳಿದ ಧೂಳಿಗಳ ಚೂರುಗಳಿಂದ ಇಂದ್ರನ ವಜ್ರಾಯುಧವನ್ನು, ಆಕಾಶದಲ್ಲಿ ಸೂರ್ಯನನ್ನು, ಸಮುದ್ರದಲ್ಲಿ ಬಡಬಾಗ್ನಿಯನ್ನು ನಿರ್ಮಿಸಿರಬಹುದೆಂದು ಊಹಿಸುವೆನೆಂದು ವರ್ಣಿಸಿದನು.

ಗ॥ ಇತಿ ತತಃ ಶ್ಲೋಕೇನ ಪರಿತುಷ್ಟಮಾತ್ರಾ ರಾಜಾ ಚ ತಸ್ಮೈ ಪ್ರತ್ಯಕ್ಷರಲಕ್ಷಂ
ದದೌ ॥

ತಾ॥ ಹೀಗೆ ರಾಜನನ್ನು ಬಣ್ಣಿಸಲಾಗಿ ಸಭಿಕರೆಲ್ಲರೂ ಆಶ್ಚರ್ಯಪಟ್ಟರು ಭೋಜನು ಆತನಿಗೆ ಅಕ್ಷರಲಕ್ಷವನ್ನು ಕೊಟ್ಟನು.

ಗ॥ ಪುನಃ ಕವಿರಾಹ. ದೇವ ಕುಟುಂಬೇನಾತ್ರ ನಿವಾಸಾಯ ಸಮಾಗ
ತೋಽಹಂ ॥

ತಾ॥ ತಿರುಗಿ ಕವಿಯು ಹೇಳಿದ್ದೇನೆಂದರೆ—ದೊರೆಯೇ ನಾನು ಕುಟುಂಬ ಸಹಿತನಾಗಿ ಇಲ್ಲಿಯೇ ಇರಬೇಕೆಂದು ಬಂದಿರುವೆನೆಂದನು.

ಶ್ಲೋ॥ ಕ್ಷಮೀ ದಾತಾ ಗುಣಗ್ರಾಹೀ ಸ್ವಾಮೀ ಪುಣ್ಯೇನ ಲಭ್ಯತೇ ।
ಅನುಕೂಲಃ ಶುಚಿರ್ದಕ್ಷಃ ಕವಿರ್ವಿದ್ವಾನ್ಸುದುರ್ಲಭಃ ॥

ತಾ॥ ಸೈರಣೆಯುಳ್ಳ ದಾತೃವಾದ ಗುಣಗ್ರಾಹಿಯಾದ ದೊರೆಯನ್ನು

ಪುಣ್ಯವಾಡಿದ್ದರೆ ಹೊಂದಬಹುದು. ಅನುಕೂಲನಾಗಿಯೂ, ಶುಚಿಯುಳ್ಳವನಾಗಿಯೂ, ಸಮರ್ಥನಾಗಿಯೂ, ಕವಿಯಾಗಿಯೂ, ವಿದ್ವಾಂಸನಾಗಿಯೂ ಇರುವುದು ಅಸಾಧ್ಯವು.

೧॥ ತತೋರಾಜಾಮುಖ್ಯಾಮಾತ್ಯಂ ಪ್ರಾಹಅಸ್ಮೈಗೃಹಂದೀಯತಾಮಿತಿ ॥

ತಾ॥ ಬಳಿಕ ಧೊರೆಯು ಮುಖ್ಯ ಮಂತ್ರಿಯಂನು ಕರೆದು ಈತನಿಗೆ ಒಂದು ಮನೆಯಂನು ಕೊಡಬೇಕೆಂದು ಹೇಳಿದನು.

೯॥ ತತೋಽಖಿಲನುಪಿನಗರಂವಿಲೋಕ್ಯ ಕಮಪಿಮೂರ್ಖಂವಮಾತ್ಯೋನಾಪಶ್ಯತ್ । ಯಂಸಿರಕ್ಷ್ಯವಿದುಷೇಗೃಹಂದೀಯತೇತತ್ರಸರ್ವತು । ಭ್ರಮಂಸಸ್ಯಪಿಕ್ಕುವಿಂದಸ್ಯ ಗೃಹಂವೀಕ್ಷ್ಯಕುವಿಂದಂಪ್ರಾಹ ॥ ಕುವಿಂದಗೃಹಂನಿಸ್ಸರತಸಗೃಹಂವಿದ್ವಾನೇಷ್ಯತೀತಿ ತತಃಕುವಿಂದೋ ರಾಜಭವನಂಗಾಸಾಧ್ಯರಾಜಾನಂ ಪ್ರಣಮ್ಯಪ್ರಾಹ । ದೇವಭವದಮಾತ್ಯೋ ಮಾಂಮೂರ್ಖಂಕೃತ್ವಾಗೃಹಾಂನಸಾರಯತಿ ತ್ವಂತುಪಶ್ಯಮೂರ್ಖಂ ಪಂಡಿತಂವೇತಿ ॥

ತಾ॥ ಬಳಿಕಾ ಮಂತ್ರಿಯು ಪಟ್ಟಣವೆಲ್ಲವನೂ ಹುಡುಕಿದರೂ ಮೂರ್ಖನೊಬ್ಬನೂ ಕಾಣಿಸಲಿಲ್ಲವು. ವಿದ್ವಾಂಸನಿಗೆ ಹೇಗಾದರೂ ಒಂದು ಮನೆಯಂನು ಮಾಡಿಕೊಡಬೇಕೆಂದು ಪುನಃ ಶೋಧಿಸುತ್ತಾ ಒಬ್ಬಾನೊಬ್ಬ ನೇಯುವವನ ಮನೆಗೆ ಬಂದು ಯೆಲಾ ಕುವಿಂದನೇ ನೀನು ಮನೆಯಂನು ಬಿಡು ನಿಂನ ಮನೆಗೆ ಒಬ್ಬ ವಿದ್ವಾಂಸನು ಬರಬೇಕೆನಲು ನೇಯ್ಯುವನನ ತಕ್ಷಣದಲ್ಲಿಯೇ ರಾಯನ ಸಮೀಪವಂನೈದಿ ದೊರೆಗೆ ನಮಸ್ಕಾರವಂಮಾಡಿ ಹೇಳಿದ್ದೇನಂದರೆ ಮಹಾಸ್ವಾಮಿ ತಮ್ಮ ಮಂತ್ರಿಗಳು ನಂನಂನು ಧಡ್ಡನೆಂವು ತಿಳಿದು ಮನೆಯಿಂದ ಹೊರಡಿಸುತಾರೆ. ತಾವು ಪರೀಕ್ಷಿಸಬೇಕು.

ಶ್ಲೋ॥ ಕಾವ್ಯಂಕರೋಮಿನಹಿಚಾರುತರಂಕರೋಮಿಯತ್ನಾತ್ಕರೋಮಿ ।
ಯದಿಚಾರುತರಂಕರೋಮಿ ಭೂಪಾಲಮೌಳಿಮಣಿಮಂಡಿತ ॥
ಪಾದಪೀಠಹೇಸಾಹಸಾಂಕಕವ ಯಾಮಿವಯಾಮಿಯಾಮಿ ॥

ತಾ॥ ಯೆಲೈ ಸಕಲ ಸಾಮಂತರಾಜರುಗಳ ಕಿರೀಟದಲ್ಲಿರುವ ರತ್ನಗಳಿಂದಲಂಕರಿಸಲ್ಪಟ್ಟ ಪಾದಪೀಠವುಳ್ಳ ಭೋಜರಾಯನೇ ನಾನು ಕಾವ್ಯಗಳಂನು ಮಾಡುವೆನು. ಆದರೆ ಅಷ್ಟು ಚಂನಾಗಿಲ್ಲದಿದ್ದರೂ ಪ್ರಯತ್ನಪಟ್ಟು ಮಾಡಿದರೆ ಚಂನಾಗಿಯೇ ಮಾಡುವೆನು, ಆದ್ದರಿಂದ ನಂನಂನು ಕವಿತ್ವಮಾಡಲು ಅಪ್ಪಣೆ ಮಾಡಿದರೆ ಕವಿತ್ವಮಾಡುತ್ತೇನೆ. ನೇಯ್ಯುವವಕ್ಕೆ ಒಪ್ಪಿದರೆ

ನೇಯ್ಯುತ್ತೇನೆ. ಮನೆಬಿಟ್ಟು ಹೋಗೆಂದರೆ ಹೊರಟುಹೋಗುತ್ತೇನೆಂಬದಾಗಿ ಹೇಳಿದನು.

ಗ॥ ತತೋರಾಜಾತ್ವತ್ಕಾರವಾದೇನಪದಂತಂಕುವಿಂದಂಪ್ರಾಹ ಲಲಿತಾತೇ ಪದಪಂಕ್ತಿಃ ಕವಿತಾಮಾಧುರ್ಯಂಚಶೋಭನಂ ಪರಂತುಕವಿತ್ವಂವಿಚಾರ್ಯವಕ್ತವ್ಯಮಿತಿ ತತಃಕುಪಿತಃಕುವಿಂದಃಪ್ರಾಹ ದೇವಅತ್ಯಂತರಂಭಾತಿಕಿಂತುನಮಯಾವಿರಾಜಧರ್ಮಾಃ ಪೃಥಕ್ವಿದ್ವದ್ಧರ್ಮಾ ಇತಿ। ರಾಜಾಪ್ರಾಹ ಅಸ್ತಿಚೇದುತ್ತರಂ ಬ್ರೂಹೀತಿದೇವ ಕಾಳಿದಾಸಾದೃತೇ ನ್ಯಂಕವಿಂಸಮನ್ಯೇಕೋಸ್ತಿತೇಸಭಾಯಾಂ ಕಾಳಿದಾಸಾದೃತೇ ಕವಿತಾತತ್ವವಿದ್ವಿದ್ವಾನ್ ॥

ತಾ॥ ಬಳಿಕ ರಾಯನು ಕುವಿಂದನು ಜಂಭದಿಂದ ಹೇಳಿದ್ದನ್ನು ಕೇಳಿ ಎಲೌ ಕುವಿಂದನೇ ನೀನು ಹೇಳಿದ ಕವಿತ್ವವು ಲಲಿತವಾಗಿದೆ ಕವಿತಾಮಾಧುರ್ಯವೂ ಚನ್ನಾಗಿಯೇ ಇರುವುದು ಆದರೆ ಕವಿತ್ವವನ್ನು ವಿಚಾರಮಾಡಿ ಹೇಳಬೇಕಾಗಿದೆ ಎನ್ನಲಾಗಿ ಕುವಿಂದನು ಕೋಪಿಸಿಕೊಂಡು ಎಲೈ ಧೊರೆಯೇ ಹಾಗೆ ಹೇಳಲೂಕೂಡ ಕಾರಣವುಂಟು ಆದರೆ ಆ ಕಾರಣವನ್ನು ಹೇಳಲಾರೆ ರಾಜಧರ್ಮವುಬೇರೆ ಪಾಂಡಿತ್ಯಧರ್ಮವೇ ಬೇರೆ ಎಂದು ಹೇಳಲಾಗಿ ಧೊರೆಯು ಉತ್ತರ ಹೇಳೆಂದನು. ಆಗ ಕುವಿಂದನು ನಿನ್ನ ಸಭೆಯುಲ್ಲಿ ಕಾಳಿದಾಸನು ಹೊರತಾಗಿ ಕವಿತ್ವದ ಮರ್ಮವನ್ನು ತಿಳಿದವರಿನ್ನೊಬ್ಬರಿಲ್ಲವು ಎಂದನು.

ಶ್ಲೋ॥ ಯತ್ಸಾರಸ್ವತವೈಭವಂ ಗುರುಕೃಪಾ ಪೀಯೂಷಪಾಕೋ ।
ದ್ಭವಂತಲ್ಲಭ್ಯಂಕವಿನೈವನೈವಹಠತಃ ಪಾಠಪ್ರತಿಷ್ಠಾಜುಷಾ ॥
ಕಾಸಾರೇದಿವಸಂವಸನ್ನಪಿಪಯಃ ಪೂರಂಪರಂಪಂಕಿಲಂ ।
ಕುರ್ವಾಣಃ ಕಮಲಾಕರಸ್ಯಲಭತೇಕಿಂಸೌರಭಂಸೈರಿಭಃ ॥

ತಾ॥ ಗುರುಕೃಪಾ ಕಟಾಕ್ಷದಿಂದುಂಟಾಗುವ ವಿದ್ಯೆಯ ಆನಂದವು ಕವಿಗೆ ಮಾತ್ರವೇ ಉಂಟಾಗುತ್ತದೆ. ಹೇಗಂದರೆ ಎಮ್ಮೆಕೋಣವು ಹಗಲೆಲ್ಲಾ ಸರೋವರದಲ್ಲಿದ್ದರೂ ಆ ನೀರನ್ನು ಕಪಡಿ ಕೆಸರುಮಾಡಿ ಕೆಡಿಸಿತೇ ಹೊರತು ಅದರಲ್ಲಿನ ಕಮಲಗಳ ಇಂಪಾದ ಸುಗಂಧವನ್ನು ಗ್ರಹಿಸಲಾರದಂತೆ.

ಶ್ಲೋ॥ ಅಯಂಮೇವಾಗ್ಗುಂಭೋವಿಶದಪದವೈದಗ್ಧ್ಯಮಧುರಃ ।
ಸ್ಫುರದ್ಬಂಧೋವಂಧ್ಯಃ ಪರಹೃದಿಕೃತಾರ್ಥಃಕವಿಹೃದಿ ॥
ಕಟಾಕ್ಷೋವಾಮಾಕ್ಷ್ಯಾದರ ದಳಿತನೇತ್ರಾಂತಗಳಿತಃ ॥

ಕಾಮಾರ್ತಸಿಸ್ನಾರಃಸತ್ರಾಕಿ ಮುಪಿಯೋನಸ್ಸುಖಯತಿ ॥

ತಾ॥ ನನ್ನ ವಿರಳವಾದ ಪದಗಳಿಂದ ಕೂಡಿ ರಸ ಚಮತ್ಕಾರಗಳಿಂದ ರಾರಾಜಮಾನವಾದ ನನ್ನ ವಾಕ್ಸರಣಿಯು ಸಾಧಾರಣ ಜನಗಳ ಭಾಗಕ್ಕೆ ಪ್ರಯೋಜನವಿಲ್ಲದೆ ಹೋದರೂ ಕವಿಗಳಿಗೆ ಪ್ರಯೋಜನವನ್ನುಂಟುಮಾಡುತ್ತದೆ. ಹೇಗೆಂದರೆ ರೂಪವತಿಯಾದ ತರುಣಿಯ ಕಡೆಗಣ್ಣೋಟವು ಬಾಲಕರ ವಿಷಯದಲ್ಲಿ ವ್ಯರ್ಥವಾದರೂ ರಸಿಕನಾದ ಯೌವನಸ್ಥನಿಗೆ ಉಪಯೋಗವಾಗುವಂತೆ.

ಗ॥ ವಿದ್ವಜ್ಜನವಂದಿತಾಸೀತಾಪ್ರಾಹ ॥

ಶ್ಲೋ॥ ವಿಪುಲಹೃದಯಾಭಿಯೋಗ್ಯೇ ಖಿದ್ಯತಿಕಾವ್ಯೇಜಡೋನಮೌರ್ಖ್ಯೇಸ್ವೇ ।
ನಿಂದತಿಕಂಚುಕಮೇವ ಪ್ರಾಯಶ್ಶುಷ್ಕಸ್ತನೀನಾರೀ ॥

ತಾ॥ ವಿದ್ವಾಂಸರಿಂದಲೂ ಹೊಗಳಲ್ಪಡುವ ಸೀತೆಯು ಹೇಳಿದಳು. ಬಹಳ ಬುದ್ಧಿಯುಳ್ಳವರಿಗೆಮಾತ್ರ ತಿಳಿಯುವಂಥಾ ಕಾವ್ಯವನ್ನು ಬುದ್ಧಿ ಇಲ್ಲದವರೇ ನಿಂದಿಸಬೇಕಾದರೆ ಹೇಗೆಂದರೆ ಒಣಗಿದ ಮೊಲೆಗಳುಳ್ಳ ಕುರೂಪಿಯಾದ ಹೆಂಗಸೇ ದೊಡ್ಡ ಕುಪ್ಪಸವನ್ನು ಹೀಯ್ಯಾಳಿಸಬೇಕಾದರೆ ಕುಂಭಸ್ತನಿಯು ನಿಂದಿಸಲಾರಳು.

ಗ॥ ತತಃಕುವಿಂದಃಪ್ರಾಹ ॥

ಶ್ಲೋ॥ ಬಾಲ್ಯೇಸುತಾನಾಂ ಸುರತೇಂಗನಾನಾಂ । ಸ್ತುತೌಕವೀನಾಂಸಮರೇ ಭಟಾನಾಂ ॥ ತ್ವಂಕಾರಯುಕ್ತಾಹಿಗಿರಃ ಪ್ರಶಸ್ತಾಃ ಕಸ್ತೇಪ್ರಭೋ ಮೋಹಕರಸ್ಮರತ್ವಂ ॥

ತಾ॥ ಬಾಲ್ಯವಲ್ಲಿ ಹುಡುಗರಿಗೂ, ರತಿಸಮಯದಲ್ಲಿ ಹೆಂಗಸರಿಗೂ, ಸ್ತೋತ್ರಮಾಡುವಾಗ ಕವಿಗಳಿಗೂ, ಯುದ್ಧದಲ್ಲಿಭಟರಿಗೂ ಏಕವಚನಯುಕ್ತವಾದ ಮಾತುಗಳು ಭೂಷಣವಾಗಿರುವಲ್ಲಿ ನಿನಗೇಕೆ ಜ್ಞಾಪಕ ಬರಲಿಲ್ಲವು.

ಗ॥ ತತೋರಾಜಾಸಾಧುಭೋಃಕುವಿಂದೇತ್ಯುಕ್ತ್ವಾತಸ್ಯ । ಅಕ್ಷರಲಕ್ಷಂದದೌ ರಾಜಾ ಮಹಾಜ್ಞೈಷೀಃ ಶ್ರೀಪುನಃಕುವಿಂದಂಪ್ರಾಹ ॥

ತಾ॥ ಬಳಿಕ ದೊರೆಯು ಕುವಿಂದನನ್ನು ಹೊಗಳಿ ಅವನಿಗೆ ಅಕ್ಷರ ಲಕ್ಷವನ್ನು ಕೊಟ್ಟನು,

ಗ॥ ಏವಂಕ್ರಮೇಣಶಾಂತಿ ಕ್ರಾಂತೇಷ್ವೇಯತ್ಸ್ವಪಿಕಾಲೇಬಾಣಃ ಪಂಡಿತವರಃ ಪರಂರಾಜ್ಞಾಮಾನ್ಯಮಾನೋಪಿಪ್ರಾಕ್ತನಕರ್ಮತೋದಾರಿದ್ರ್ಯಮನುಭವತಿ ॥

ತಾ॥ ಹೀಗೆ ಕೆಲವು ದಿವಸಗಳಾದಮೇಲೆ ಪಂಡಿತೋತ್ತಮನಾದ ಬಾ

ಣನು ರಾಯನಿಂದ ಬಹಳವಾಗಿ ಮನ್ನಿಸಲ್ಪಟ್ಟರೂ ಪೂರ್ವ ಕರ್ಮಪರಿಪಾಕ ದಿಂದ ದರಿದ್ರವನ್ನೇ ಅನುಭವಿಸುತ್ತಿದ್ದನು.

ಗ॥ ಏವಂಸ್ಥಿತೇನೃಪತಿಃ ಕದಾಚಿದ್ರಾತ್ರಾವೇಕಾಕೀ ಪ್ರಚ್ಛನ್ನವೇಷಸ್ಸ್ವಪು
ರೇಚರನ್ ಬಾಣಗೃಹಮೇತ್ಯಾತಿಷ್ಠತ್ ತದಾನಿಶೀಥೇಬಾಣೋಪದಾರಿದ್ರ್ಯ
ಕಾಲಿತಯಾಕಾಂತಾಂವಕ್ತಿ ದೇವಿರಾಜಾಕಿಯದ್ವಾರಂ ಮಮಮನೋ
ರಥಮಪೂರಯತ್ ಅದ್ಯಾಪಿಪುನಃಪ್ರಾರ್ಥಿತೋ ದದಾತ್ಯೇವಂಪರಂತು
ನಿರಂತರಪ್ರಾರ್ಥನಾರಸೇ ಮೂರ್ಖಸ್ಯಾಪಿಜಿಹ್ವಾಜಡೀ ಭವತೀತ್ಯು
ಕ್ತ್ವಾ ಮೌಹೂರ್ತ್ಯಮೌನೇನಸ್ಥಿತಃ ॥

ತಾ॥ ಹೀಗಿರಲಾಗಿ ಒಂದು ದಿನ ಧೊರೆಯು ವೇಷಧಾರಿಯಾಗಿ ಒಬ್ಬನೇ ಪಟ್ಟಣದಲ್ಲಿ ತಿರುಗುತ್ತಾ ಬಾಣನ ಮನೆಯ ಹತ್ತಿರ ನಿಂತಿರಲು, ಬಾಣನು ಅರ್ಧರಾತ್ರಿಯಲ್ಲಿ ಬಡತನ ದುಃಖದಿಂದ ಹೆಂಡತಿಯೊಡನೆ ಹೇಳು ತ್ತಿದ್ದುದೇನಂದರೆ, ಎಲೌ ಕಾಂತೆಯೇ ಧೊರೆಯು ಎಷ್ಟೋಸಲ ನನಿಗೆ ಸಹಾಯಮಾಡಿರುವನು. ಇನ್ನೂ ಕೇಳಿದಾಗ್ಯೂ ಕೊಟ್ಟೇಕೊಡುತ್ತಾನೆ. ಆದರೆ ಬಾರಿಬಾರಿಗೂ ಎಂಥಾ ಮೂರ್ಖರಾದಾಗ್ಯೂ ಕೇಳುವದಕ್ಕೆ ಹಿಂಜರಿ ಯಲಾರರು ? ಎಂದು ಹೇಳಿಟ್ಟು ಸುಮ್ಮನಾದನು.

ಶ್ಲೋ॥ ಹರಹರಪುರಹರಪರುಷಕಹಾಲಾಹಲಫಲ್ಗುಯಾಚನಾವಚನೇ ।
ಏಕೈವತವರಸಜ್ಞಾತ ದುಭಯರಸತಾರತಮ್ಯಜ್ಞಾ ॥

ತಾ॥ ಪುರಹರನಾದ. ಜಗನ್ನೊಡೆಯನಾದ, ಹರನೇ ಕ್ರೂರವಾದ ವಿಷ, ಮತ್ತು, ಬೇಡುವಿಕೆ, ಇವುಗಳಿಗಿರುವ ವ್ಯತ್ಯಾಸವನ್ನು ತಿಳಿದಿರುವುದು. ನಿನ್ನ ನಾಲಿಗೆಯೊಂದೇ ಸ್ರೊಂದು ಅಂದರೆ ವಿಷವೂ, ಯಾಚನೆಯೂ ಸಮಾನವು.

ದೇವೀ ಶ್ಲೋ॥ ದಾರಿದ್ರ್ಯಸ್ಯಪರಾಮೂರ್ತಿಃ ಯಾಚ್ಞಾನದ್ರವಿಣಪ್ರತಾಃ ।
ಅಪಿಕೌಪೀನವಾನ್ಶಂಭುಃ ತಥಾಪಿಪರಮೇಶ್ವರಃ ॥

ತಾ॥ ದರಿದ್ರತ್ವಕ್ಕೆ ಬೇಡುವಿಕೆಯೇ ಲಕ್ಷಣವು. ಹಣವಿಲ್ಲದೇ ಇರುವ ದಲ್ಲ ಪುರಶಿವನು ಲಂಗೋಟಿಯನ್ನಿಟ್ಟುಕೊಂಡಿದ್ದರೂ ಪರಮೇಶ್ವರನೆಂದೆನ್ನಿ ಸಿಕೊಂಡಿರುವನು.

ಶ್ಲೋ॥ ಸೇವಾಸುಖಾನಾಂವ್ಯಸನಂ ಧನಾನಾಂಯಾಚ್ಞಾಗುಣಾನಾಂಕ್ಷ್ನೃಪಃ
ಪ್ರಜಾನಾಂ । ಪ್ರಣಷ್ಟಶೀಲಶ್ಚಸುತಃಕುಲಾನಾಂ ಮೂಲಾವಘಾತಃ
ಕಠಿನಃಕುಠಾರಃ ॥

ತಾ॥ ಸೌಖ್ಯಗಳಿಗೆ ಸೇವೆಯೂ, ದ್ರವ್ಯಗಳಿಗೆ ವ್ಯಸನವೂ, ಗುಣಗೆ

ಳಿಗೆ ಯಾಚನೆಯೂ, ಪ್ರಾಣಿಗಳಿಗೆ ಕೆಟ್ಟ ಧೊರೆಯೂ, ವಂಶಗಳಿಗೆ ಕುಪುತ್ರನೂ, ಇವುಗಳೆಲ್ಲವೂ, ಬುಡವನ್ನು ಕಡಿದುಹಾಕಲು ಕೊಡ್ಲಿಯಂತೆ ಇರುತ್ತಾರೆ.

ಶ್ಲೋ॥ ತತ್ಸತ್ಯಪಿದಾರಿದ್ರ್ಯೇರಾ ಜ್ಞೋವಕ್ತುಂನಾಯಾಸ್ಯಯಮುಶಕ್ಯಂ ।
ಸತ್ಯಾವಿಪಿಕಾಪೂಪದಿನಸ್ಯಯು ವಿಂಸ್ತೈಯುಥೈವಕುಲಕಾಂತಾ ॥

ತಾ॥ ಆದ್ದರಿಂದ ನನಿಗೆ ಬಡತನವಿದ್ದರೂ, ಧೊರೆಯುನ್ನು ನಾನಾಗಿ ಕೇಳಲು ಪತಿವ್ರತೆಯು ಮದನಪೀಡಿತಳಾದಾಗ್ಯೂ ತಾನಾಗಿ ಹೇಗೆ ಬಯಿಸಲಾರಳೊ ಹಾಗೆ ನಾನು ಕೇಳಲಾರೆನು.

ಶ್ಲೋ॥ ಗಚ್ಛತ್ಕ್ಷಣಮಪಿಜಲದೊ ವಲ್ಲಭತಾಮೇತಿಸರ್ವಲೋಕಸ್ಯ ।
ನಿತ್ಯಪ್ರಸಾರಿತಕರಃ ಕರೋತಿಸೂರ್ಯೋಪಿಸಂತಾಪಂ ॥

ತಾ॥ ಮೇಘವು ಒಂದು ಕ್ಷಣಮಾತ್ರ ಇದ್ದು ಹೋದಾಗ್ಯೂ ಮಳೆ ಸುರಿಯೋಣದರಿಂದ ಎಲ್ಲರೂ ಆದನ್ನೇ ಎದುರುನೋಡುತ್ತಾರೆ. ಸೂರ್‍ಯನು ಯಾವಾಗಲೂ ತನ್ನ ಕರಗಳನ್ನು ಚಾಚಿಕೊಂಡಿದ್ದರೂ ಜನಗಳಿಗೆ ತಾಪವನ್ನುಂಟು ಮಾಡುವನು.

ಗ॥ಕಿಂಚದೇವಿವೈಶ್ವದೇವಾ ವಸರೆಪ್ರಾಪ್ತಾಃಕ್ಷುಧಾರ್ತಾಃ ಪಶ್ಚಾದ್ಯಾಂತೀತಿ
ತದೇವಮೇಹೃದಯಂಧುನೋತಿಃ ॥

ತಾ॥ ಮತ್ತು ಎಲೈ ದೇವಿಯೇ ನಾನು ವೈಶ್ವದೇವಮಾಡುವ ಸಮಯದಲ್ಲಿ ಹಸಿವುಗೊಂಡು ಬಂದ ಬ್ರಾಹ್ಮಣರು ಹಿಂತಿರುಗಿ ಹೋಗುವರಲ್ಲಾ ಎಂದು ದುಃಖವುಂಟಾಗಿರುವುದು.

ಶ್ಲೋ॥ ದಾರಿದ್ರ್ಯಾನಲಸಂತಾಪ ಶ್ಯಾಂತಸ್ಸಂತೋಷವಾರಿಣಾ ।
ಯಾಚಕಾಶಾವಿಘಾತಾಂತ ರ್ದಾಹಃಕೇನೋಪಶಾಮ್ಯತಿ ॥

ತಾ॥ ದರಿದ್ರದಿಂದುಂಟಾದ ದುಃಖವು ಸಂತೋಷದಿಂದ ನಾಶವಾಗುತ್ತದೆ. ಅತ್ಯಾಶೆಯಿಂದ ಬಂದ ಯಾಚಕರಿಗೆ ಇಲ್ಲವೆಂದು ಹೇಳೋಣದರಿಂದುಂಟಾದ ದುಃಖವು ಯಾವದರಿಂದಲೂ ನಾಶವಾಗಲಾರದು ಎಂದು ಹೇಳಿದನು.

ಗ॥ ರಾಜಾಚೈತತ್ಸರ್ವಂ ಶ್ರುತ್ವಾವೇದಾನೀಂ ಕಿಮಪಿದಾತುಮಶಕ್ಯಂ ಪ್ರಾತರೇನಬಾಣಂ ಪೂರ್ಣಮನೋರಥಂ ಕರಿಷ್ಯಾಮೀತಿಸಿಸ್ವಾಕ್ರಾಂತಃ ॥

ತಾ॥ ಧೊರೆಯು ಅದನ್ನೆಲ್ಲವನ್ನೂ ಕೇಳಿಕೊಂಡಿದ್ದು ಈಗ ಈತನಿಗೆ ನಾನೇನೂ ಕೊಡಲು ಆಗದಿದ್ದರೂ ನಾಳೆ ಈತನ ಕೋರಿಕೆಯನ್ನು ನೆರವೇ

ರಿಸುವೆನೆಂಬಡಾಗಿ ಹೊರಟುಹೊದನು.

ಶ್ಲೋ॥ ಕೃತೊಯೈರ್ನಚನಾಗ್ನಿಃ ಪ್ರಾಪನೀತಂನಯೈಃಪದಂ ।
ಯೈರಾತ್ಮಸಪ್ರಶೋನಾರ್ಥಿ ಕಿಂತೈಕಾವ್ಯೈ ರ್ಬಲೈರ್ಧನೈಃ ॥

ತಾ॥ ಯಾವ ಕಾವ್ಯಗಳಿಂದ ಚನ್ನಾಗಿ ಮಾತನಾಡುವ ಶಕ್ತಿಯುಂಟಾಗು ವನಿಲ್ಲವೋ ಯಾವ ಸೈನ್ಯಗಳಿಂದ ಶತ್ರುಸ್ಥಾನವನ್ನು ಬಿಡುಗಡೆಯಾಗಲಾರ ದೊ ಯಾವ ದ್ರವ್ಯದಿಂದ ಯಾಚಕನು ತನ್ನಂತೆ ಆಗುವನಿಲ್ಲವೋ ಅಂಥಾವುಗ ಳಿಂದ್ದೂ ಪ್ರಯೋಜನವಿಲ್ಲವು.

ಗ॥ ಏವಂ ಪುರೇಪರಿಭ್ರಮಮಾಣೆ ರಾಜನಿವರ್ತ್ಮನಿಚೋರದ್ವಯಂ ಗಚ್ಛ ತಿ ತಯೋರೇಕಃ ಪ್ರಾಹ ॥

ತಾ॥ ಹೀಗೆ ಅಂದುಕೊಂಡು ಪಟ್ಟಣದಲ್ಲಿ ಬರುತ್ತಿರಲು ದಾರಿಯಲ್ಲಿ ಇ ಬ್ಬರು ಕಳ್ಳರಿದ್ದರು, ಅವರಲ್ಲಿ ಒಬ್ಬನು ಹೇಳಿದನು.

ಗ॥ ಶಕುಂತ ಸಖೆಸ್ಫಾರಾಂಧಕಾರೇ ಏತತೇಪಿ ಗತ್ಯಂಜನ ವಶಾತ್ಸರ್ವಂ ಪರಮಾಣುಪ್ರಾಯಮಪಿ ವಸುಸರ್ವತ್ರಪಶ್ಯಾಮಿ ಪರಂತುಸಂಭಾರಗೃ ಹಾತ್ ಕನಕಜಾತಮಪಿನಮೇಸುಖಾಯತಿ ॥

ಎಲೈ ಸ್ನೇಹಿತನೇ ಈಗ್ಗತ್ತಲೆಯು ಜಗತ್ತನ್ನು ವ್ಯಾಪಿಸಿದ್ದಾಗ್ಯೂನನ್ನ ಲ್ಲಿರುವ ಸಿದ್ಧಾಂಜನದ ಸಾಮರ್ಥ್ಯದಿಂದ ಎಲ್ಲೆಲ್ಲಿದ್ದ ಹಣವನ್ನೂ ನೋಡುತ್ತಿ ರುವೆನು. ಆದ್ದರಿಂದ ಅರಮನೆಯಲ್ಲಿರುವದ್ರವ್ಯವು ನನಗೇನೂ ಲಕ್ಷ್ಯವಿಲ್ಲವು

ಗ॥ ದ್ವಿತೀಯೋ ಮರಾಳೋನಾಮಚೋರ ಆಹ ॥

ತಾ॥ ಎರಡನೆಯವನಾದ ಮರಾಳನೆಂಬ ಕಳ್ಳನು ಹೇಳುತ್ತಾನೆ.

ಗ॥ ಆಹೃತಂ ಸಂಭಾರಗೃಹಾತ್ಕನಕಜಾತಮಪಿ ನಹಿತಮಿತಿ ಕಸ್ಮಾದ್ಧೇ ತೋರುಚ್ಯತ ಇತಿತತಃ.

ಎಲೆ ಸ್ನೇಹಿತನೇ ಅರಮನೆಯಿಂದ ತಂದ ಸುವರ್ಣವನ್ನು ಯಾವ ಕಾರಣದಿಂದ ಧೂಷಿಸುತ್ತೀಯೇ.

ಗ॥ ಶಕುಂತಃಪ್ರಾಹ ಸರ್ವತೊನಗರರಕ್ಷಕಾಃ ಪರಿಭ್ರಮು ತೊರಪ್ಯೇಪಿ ಜಾಗರಿಷ್ಯತಿಪಿಷಾಂಭೇರೀಪಟಹಾದೀನಾಂ ನಿನಾದೇನತಸ್ಮಾದಾಹೃ ತಂವಿಭಜ್ಯಸ್ವಸ್ವಭಾಗಗತಂಘನಮಾದಾಯಶೀಘ್ರಮೇಗಚ್ಛಾಮಿತಿ

ತಾ॥ ಶಕುಂತನು ಹೇಳುತ್ತಾನೆ. ಎಲ್ಲೆಲ್ಲಿಯೂ ಪೋಲೀಸಿನವರು ಸುತ್ತುತ್ತಿರುವರು. ಎಲ್ಲರೂ ಎಚ್ಚರಿಕೆಯಾಗಿದ್ದಾರೆ ಆದ್ದರಿಂದ ಕದ್ದಿರುವ

ದ್ರವ್ಯವನ್ನು ಹಂಚಿಕೊಂಡು ಅವರವರ ಭಾಗವನ್ನು ತೆಗೆದುಕೊಂಡು ಬೇಗ ಹೊರಡಬೇಕೆಂದು ಹೇಳುತ್ತಾನೆ.

ಗ॥ ಮರಾಳಃಪ್ರಾಹ ಸಖೇತ್ವಮನೇನಕೋಟಿದ್ರವ್ಯೇಣ ಪರಿಮಿತಮಣಿಕ
ನಕಜಾತೆ ನಕಿಂಕರಿಷ್ಯಸೀತಿ ॥

ತಾ॥ ಯೆಲೌ ಸ್ನೇಹಿತನೆ ಈ ಯರಡುಕೋಟಿ ದ್ರವ್ಯದಿಂದ ನೀನು ಏನು ಮಾಡುವಿ ಅಂದನು.

ಗ॥ ಶಕುಂತಃ॥ ಏತದ್ಧನಂಕಸ್ಮೈಚಿದ್ವಿಪ್ರಾಯದಾಸ್ಯಾಮಿ ಯಥಾಯಂವೇದ
ವೇದಾಂಗಪಾರಗೋನ್ಯಂನಪ್ರಾರ್ಥಯತಿ ॥

ತಾ॥ ವೇದ ವೇದಾಂಗಗಳನ್ನು ಓದಿದ ಯೋಗ್ಯನಾದ ಬ್ರಾಹ್ಮಣನು ಮತ್ತೊಬ್ಬನನ್ನು ಯೆಂದಿಗೂ ಯಾಚಿಸದೆ ಇರುವಹಾಗೆ ಅತನಿಗೆ ಇದೆಲ್ಲವನ್ನೂ ಕೊಡುತ್ತೇನೆ ಯೆಂದು.

ಗ॥ ಮರಾಳಃ ಸಖೇಚಾರು ॥

ಶ್ಲೋ॥ ದದತೋಯುಧ್ಯಮಾನಸ್ಯ ಪಠತಃಪುಲಕೋಥಚೇತ್ ।
ಆತ್ಮನಶ್ಚಪರೇಷಾಂಚ ತದ್ಧನಂಪೌರುಷಂಸ್ಮೃತಂ ॥

ತಾ॥ ಯುದ್ಧಮಾಡುವನ ಪರಾಕ್ರಮವೂ ದಾನಮಾಡುವನ ದ್ರವ್ಯವೂ ಓದುವವನ ವಿದ್ಯೆಯೂ, ನೋಡುವವರಿಗೂ, ತನಗೂಕೂಡ ಪುಳಕಾಂಕಿತ ನವನನ್ನುಂಟುಮಾಡಿದ್ದರೇನೇ ಪ್ರಯೋಜನವು.

ಮರಾಳಃ॥ ಅನೇನದಾನೇನತವಕಂಪುಣ್ಯಂಭವತೀತಿ ॥

ತಾ॥ ಈ ದಾನದಿಂದ ನಿನಗೇನು ಪುಣ್ಯ ಉಂಟಾಗುವುದೆನಲು.

ಗ॥ ಅಸ್ಮಾಕಂಪಿತೃಪೈತಾಮಹೋಯಂ ಧರ್ಮೋಯಚ್ಛಾದ್ಯವಿತ್ತಮಾನೀ
ಯತೆ ॥

ತಾ॥ ಇದು ಅಂದರೆ ಕೊಡುವುದು ನಮ್ಮತಾತನ ಕಾಲದಿಂದಲೂ ಬಂದ ಧರ್ಮವು.

ಶಕುಂತಃ॥ ಶಿರಚ್ಛೇದಮಂಗೀಕೃತ್ಯ ಆರ್ಜಿತಂ ದ್ರವ್ಯಂ ನಿಖಿಲಮಪಿ
ಕಥಂದೀಯತೆ॥

ಯೆಲೌ ಸ್ನೇಹಿತನೇ ಪ್ರಾಣಗಳನ್ನೂ ಲಕ್ಷ್ಯಮಾಡದೆ ತಂದ ಹಣವನ್ನು ಹೇಗೆ ಇನ್ನೊಬ್ಬರಿಗೆ ಕೊಡುತ್ತೀಯೆ.

ಶಕುಂತಃ॥ ಮೂರ್ಖೋನಹಿದದಾತ್ಯರ್ಥಂ ನರೋದಾರಿದ್ರ್ಯಶಂಕಯಾ ।
ಪ್ರಾಜ್ಞಸ್ತುವಿತರತ್ಯರ್ಥಂ ನರೋದಾರಿದ್ರ್ಯಶಂಕಯಾ ॥

ತಾ॥ ಮೂರ್ಖನಾದವನು ತಾನು ಎಲ್ಲಿ ಬಡವನಾಗುವನೋ ಎಂಬ ಭಯದಿಂದ ಹಣವನ್ನು ಮತ್ತೊಬ್ಬರಿಗೆ ಕೊಡಲಾರನು. ಬುದ್ಧಿವಂತನಾದರೋ ಇರುವಾಗ ಕೊಡದಿದ್ದರೆ ತಾನೆಲ್ಲಿ ಬಡವನಾಗಿ ಹೋಗುವನೋ ಎಂದು ಕೊಡುತ್ತಾನೆ.

ಶ್ಲೋ॥ ಕಿಂಚಿದ್ವೇದಮಯಂಪಾತ್ರಂ ಕಿಂಚಿತ್ಪಾತ್ರಂತಪೋಮಯಂ ।
ಪಾತ್ರಾಣಾಮುತ್ತಮಂಪಾತ್ರಂ ಶೂದ್ರಾನ್ನಂಯಸ್ಯನೋದರೇ ॥

ತಾ॥ ವೇದಾಧ್ಯಯನವನ್ನು ಮಾಡಿದ ಬ್ರಾಹ್ಮಣನು ಸತ್ಪಾತ್ರವೆನ್ನಿಸುವನು ಮತ್ತು ತಪಸ್ವಿಯಾದವನು ಸತ್ಪಾತ್ರನೆನ್ನಿಸಿಕೊಳ್ಳುವನು ಅಲ್ಲದೆ ಶೂದ್ರಾನ್ನವನ್ನು ಯಾರು ಅಪೇಕ್ಷಿಸುವದಿಲ್ಲವೋ ಅವರೇ ಸತ್ಪಾತ್ರದಲ್ಲಿ ಶ್ರೇಷ್ಠರೆಂನಿಸಿಕೊಳ್ಳುವರು.

ಶಕುಂತಃ॥ ಅನೇನವಿತ್ತೇನಕಿಂಕರಿಷ್ಯತಿಭವಾನ್ ॥

ತಾ॥ ಎಲೈ ಶಕುಂತನೇ ಈ ದ್ರವ್ಯದಿಂದ ನೀನೇನು ಮಾಡುತ್ತೀಯೆ.

ಮರಾಳಃ॥ ಸಖೇ ಕಾಶೀವಾಸೀಕೋಪಿ ದ್ವಿಜವರಸ್ತತ್ರಾಗಾತ್ ।
ತೇನಾಸ್ಮತ್ಪಿತುಃಪುರಃ ಕಾಶೀವಾಸಫಲಂವ್ಯಾವರ್ಣಿತಂ ॥
ತತೋಸ್ಮತ್ತಾತಃಬಾಲ್ಯಾದಾರಭ್ಯಚೌರ್ಯ್ಯಂಕುರ್ವಾಣೋ ।
ದೈವವಶಾತ್ಸ್ವಪಾಪಾನ್ನಿವೃತ್ತೋ ವೈರಾಗ್ಯಾತ್ಸಕುಟುಂಬಃ
ಕಾಶೀಂಗಮಿಷ್ಯತಿ ತದರ್ಥಮಿದಂದ್ರವಿಣಮಾನೀತಂ ॥

ತಾ॥ ಎಲೈ ಸ್ನೇಹಿತನಾದ ಮರಾಳನೇ ಕಾಶೀಕ್ಷೇತ್ರವಾಸಿಯಾದ ಒಬ್ಬ ಬ್ರಾಹ್ಮಚಾರಿಯು ನಮ್ಮ ತಂದೆಯಮುಂದೆ ಕಾಶೀವಾಸದ ಮಹಿಮೆಯನ್ನು ಕುರಿತು ಹೇಳಲು ನಮ್ಮ ತಂದೆಯು ಕಾಶೀಯಾತ್ರೆ ಮಾಡಬೇಕೆಂದಿರುವನು. ಅದಕ್ಕೆ ಈ ಹಣವನ್ನು ಉಪಯೋಗಿಸುವೆನೆಂದನು.

ಗ॥ ಮಹದ್ಭಾಗ್ಯಂತವಪಿತುಃ ತಥಾಹಿ ॥

ಶ್ಲೋ॥ ವಾರಣಾಸೀಪುರೀವಾಸ ವಾಸನಾವಾಸಿತಾತ್ಮನಾ ।
ಕಿಂತುನಾಸಮತಾಂಯಾತಿ ವರಾಕಃಪಾಕಶಾಸನಂ ॥

ತಾ॥ ದೇವೇಂದ್ರನೂ ಕೂಡ ಕಾಶಿಯಲ್ಲಿ ವಾಸಮಾಡುವ ಬಡನಾಯಿಯೊಡನೆಯೂ ಸಮನಾಗಲಾರನು.

ಶ್ಲೋ॥ ಊಷರಂಕರ್ಮಸಸ್ಯಾನಾಂ ಕ್ಷೇತ್ರಂವಾರಾಣಸೀಪುರೀ ।
ಯತ್ರತಲ್ಲಭ್ಯತೇಮೋಕ್ಷಃ ಸಮಂಚಂಡಾಲಪಂಡಿತೈಃ ॥

ತಾ॥ ಕಾಶೀಕ್ಷೇತ್ರವು ಪಾಪಪುಣ್ಯ ಕರ್ಮಗಳೆಂಬ ಪೈರುಗಳಿಗೆ ಊ

ಪರಕ್ಷೇತ್ರವಾಗಿದೆ, ಯಾಕಂದರೆ ಚಂಡಾಲನಿಗೂ ವಿದ್ವಾಂಸನಿಗೂ ಕೂಡ ಸಮಾನವಾಗಿ ಮೋಕ್ಷ ಉಂಟಾಗುತ್ತೆ.

ಶ್ಲೋ॥ ಮರಣಂಮಂಗಳಂಯತ್ರ ವಿಭೂತಿಶ್ಚವಿಭೂಷಣಂ ।
ಕೌಪೀನಂಯತ್ರಕೌಶೇಯಂ ಸಾಕಾಶೀಕೇನಮೀಯತೇ ॥

ತಾ॥ಯಾವ ಕಾಶಿಯಲ್ಲಾದರೊ ಸಾಯುವದುಪರಮಮಂಗಳವಾಗಿರುವದೊ, ಭಸ್ಮವು ಭೂಷಣವಾಗಿರುವದೋ, ಲಂಗೋಟಿಯೋ ಪೀತಾಂಬರವಾಗಿರುವದೊ, ಆ ಕಾಶೀಕ್ಷೇತ್ರದಲ್ಲಿ ಮರಣವು ಯಾರಿಗೆ ಲಭಿಸೀತು.

ಗ॥ ಏವಮುಭಯೋಸ್ಸಂವಾದಂ ಶ್ರುತ್ವಾರಾಜಾತುತೋಷ ಅಚಿಂತಯಚ್ಚಮನಸಿ ಕರ್ಮಣಾಂಗತಿಸ್ಸರ್ವಥೈವಚಿತ್ರಾ ಉಭಯೋರಪಿಪವಿತ್ರಾಮತಿರಿತಿತತತೋರಾಜಾ ವಿನಿವೃತ್ಯಭವನಾಂತರೆ ಪಿತೃಪುತ್ರಾವಪಶ್ಯತ್ ತತ್ರಪಿತಾಪುತ್ರಂಪ್ರಾಹ ॥

ತಾ॥ ಈರೀತಿಯಾಗಿ ಅವರಿಬ್ಬರ ವಿವಾದವನ್ನು ಕೇಳಿ ಧೊರೆಯು ಸಂತೋಷಪಟ್ಟು ಕರ್ಮಪರಿಪಾಕವು ವಿಚಿತ್ರವಾದುದೆಂದು ತಿಳಿದು, ಇವರಿಬ್ಬರ ಬುದ್ಧಿಯೂ ಪರಿಶುದ್ಧವಾದದ್ದೆಂದು ಅಂದುಕೊಂಡು ಬರುತ್ತಾ ತಂದೆ ಮಕ್ಕಳನ್ನು ನೋಡಿ ತಂದೆಯು ಮಗನನ್ನು ಕುರಿತು ಹೇಳುತ್ತಿದ್ದುದೇನಂದರೆ;—

ಗ॥ ಇದಾನೀಂಪರಿಜ್ಞಾತ ಶಾಸ್ತ್ರತತ್ವೋಪಿನೃಪತಿಃ ಕಾರ್ಪಣ್ಯೇನಕಿಮಪಿನಪ್ರಯಚ್ಛತಿ ॥

ತಾ॥ ಈಗ ರಾಜನು ಸಕಲಶಾಸ್ತ್ರಸಾರಗಳನ್ನು ತಿಳಿದವನಾದರೂ ಜಿಪುಣತನದಿಂದ ಏನನ್ನೂ ಕೊಡುವದಿಲ್ಲವು.

ಕಿಂತು॥ ಅರ್ಥಿನಿಕವಯತಿಕವಯತಿ ಪಠತಿಚಪಠತಿಸ್ತವೋನ್ಮುಖೇಸ್ತೌತಿ।ಪಶ್ಚಾದ್ಯಾಮೀತ್ಯುಕ್ತೇ ಮೌನೀದೃಷ್ಟಿಂನಮೀಲಯತಿ ॥

ತಾ॥ ಯಾರಾದರೂ ಯಾಚಕರು ತನ್ನನ್ನು ಕುರಿತು ಕವಿತ್ವ ಹೇಳಿದರೆ ತಾನೂ ಕವಿತ್ವ ಹೇಳುತ್ತಾನೆ. ಓದಿದರೆ ತಾನೂ ಓದುತ್ತಾನೆ. ಹೊಗಳಿದರೆ ತಾನೂ ಹೊಗಳುತ್ತಾನೆ. ಬಳಿಕ ಹೋಗುವೆನೆಂದರೆ ಸುಮ್ಮನಿರುತ್ತಾನೆ.

ಗ॥ ರಾಜಾಪ್ಯೇತಚ್ಛ್ರುತ್ವಾ ಸವಿಷಾದಂಪ್ರಾಪ್ಯವ್ಯೈವಂಪದೇತಿ ಸ್ವಗಾತ್ರಾತ್ಸರ್ವಾಭರಣಾನಿ ಉತ್ತಾರ್ಯದತ್ವಾ ತಸ್ಮೈತತೋಗೃಹಮಾಸಾದ್ಯಕಾಲಾಂತರೆ ಸಭಾಮುಪವಿಷ್ಟಃ ಕಾಳಿದಾಸಂಪ್ರಾಹ ॥

ತಾ॥ ಧೊರೆಯು ಅದನ್ನೆಲ್ಲವೂ ಕೇಳಿ ಅವರ ಹತ್ತಿರಕ್ಕೆ ಬಂದು ನನ್ನನ್ನು ಹಾಗೆ ಹೇಳಬೇಡವೆಂದು ತನ್ನ ಶರೀರದ ಮೇಲಿದ್ದ ಒಡವೆ ಗಳನ್ನೆಲ್ಲಾ ತೆಗದುಕೊಟ್ಟು ಮನೆಗೆ ಬಂದನು. ಬಳಿಕ ಒಂದುದಿನ ಸಭೆ ಯಲ್ಲಿ ಕಾಳಿದಾಸನನ್ನು ಕುರಿತು ಹೇಳುತ್ತಾನೆ.

ಶ್ಲೋ॥ ಕವೀನಾಂಮಾನಸಂನೌಮಿತರತಿ ಪ್ರತಿಭಾಂಭಸಾ॥ತತಃಕವಿರಾಹ ।
ಯುತ್ತೋತ್ತೇನಪಯಾಂಸೀವ ಭುವನಾನಿಚತುರ್ದಶ ॥

ತಾ॥ ಕವಿಕಳ ಹೊಸಹೊಸದಾಗಿ ಹುಟ್ಟುತ್ತಿರುವ ಬುದ್ಧಿಯಿಂದ ಹದಿನಾಲ್ಕು ಲೋಕಗಳನ್ನೂಕೂಡ ಹಸಗಿನಿಂದ ಸಮುದ್ರಗಳನ್ನು ದಾಟು ವಂತೆ ದಾಟುತ್ತಾರೊ ಅಂಥಾ ಕವಿಗಳ ಬುದ್ಧಿಗೆ ನಮಸ್ಕಾರವು.

ಗ॥ ತತೋರಾಜಾಪ್ರತ್ಯಕ್ಷರಂಮುಕ್ತಾಫಲಲಕ್ಷಂದದೌ ॥

ತಾ॥ ಬಳಿಕ ಧೊರೆಯು ಪ್ರತಿ ಅಕ್ಷರಕ್ಕೂ ಮುತ್ತುಗಳನ್ನು ಲಕ್ಷ ಪ್ರಕಾರವಾಗಿ ಕೊಟ್ಟನು.

ಗ॥ ತತ್ರಃಪ್ರವಿಶತಿದ್ವಾರಪಾಲಃ॥ದೇವಕೋಪಿಕೌಪೀನಾವಶೇಷೋವಿದ್ವಾನ್
ದ್ವಾರತಿಷ್ಠತೀತ್ರಿ ॥ ರಾಜಾಪ್ರವೇಶಯಾತತಃಪ್ರವೇಶಿತಃ ॥

ತಾ॥ ಬಳಿಕದ್ವಾರಪಾಲಕನು ಬಂದು ಮಹಾಸ್ವಾಮಿ ಕೌಪೀನಧಾರಿ ಯಾದ ವಿದ್ವಾಂಸನು ಬಾಗಿಲಲ್ಲಿರುವನೆನಲು ಕರೆದುಕೊಂಡು ಬರುವಂತೆ ಅಪ್ಪಣೆ ಮಾಡಿದನು.

ಗ॥ ಕವಿರಾಗತ್ಯ ಸ್ವಸ್ತೀತ್ಯುಕ್ತ್ವಾನುಕ್ತ್ವಾಪಿವಿಪ್ರೋಪವಿಷ್ಟಃಪ್ರಾಹ ॥

ತಾ॥ ಬಳಿಕ ಕವಿಯು ಸಭೆಗೆ ಬಂದು ಮಂಗಳವಾಗಲೆಂದು ಹೇಳಿ ಕೂತು ಹೇಳಿದನು.

ಶ್ಲೋ॥ ಇಹನಿಸಸತಿಮೇರುಶ್ಶೇಖರೋಭೂಧರಾಣಾಂಇಹಹಿ । ನಿಹಿತಭಾರಾ
ಸಾಗರಾಸ್ಸಪ್ತಚೈವ ॥ ಇದಮತುಲಮನಂತಂಭೂತಲಂ ಭೂರಿಭೂ
ತೋದ್ಭವಧರಣಸಮರ್ಥಂಸ್ಥಾನಮಸ್ಮದ್ವಿಧಾನಾಂ ॥

ಗ॥ ರಾಜಾ॥ ಮಹಾಕವೇಕಿಂತೇನಾಮ ಅಭಿಧತ್ಸ್ವ ಕವಿಃನಾಮಗ್ರಹಣಂ
ನೋಚಿತಂಪಂಡಿತಾನಾಂ ತಥಾಪಿವದಾಮೋಯವಿಜಾನಾಸಿ॥

ತಾ॥ ಎಲ್ಲಾ ಬೆಟ್ಟಗಳಿಗೂ ಒಡೆಯನಾದ ಮೇರು ಪರ್ವತವು ಈ ಭೂಮಿಯಮೇಲೆಯೇ ಇರುತ್ತೆ. ಸಪ್ತಸಮುದ್ರಗಳ ಭಾರವನ್ನೂ ಈ ಭೂ ಮಿಯೇ ಹೊತ್ತಿರುವುದು ಇದಕ್ಕೆ ಸಾಮ್ಯವು ಮತ್ತೊಂದಿಲ್ಲ. ಅಲ್ಲದೆ ಇದೇ ಸಕಲ ಪ್ರಾಣಿಗಳನ್ನೂ ಹೊತ್ತುಕೊಂಡಿರುವುದು. ನಮ್ಮಂಥವರಿಗೂ ಇ

ದೇ ಸ್ಥಳವಾಗಿದೆ. ಎಂದು ಕೂತುಕೊಳ್ಳಲು ಧೊರೆಯು ಎಲೌ ಕವಿಗಳೇ ನಿಮ್ಮ ಹೆಸರೇನೆನ್ನಲಾಗಿ ಕವಿಯು ಅಯ್ಯಾ ದೊರೆಯೇ ನನ್ನ ಹೆಸರನ್ನು ನಿಮ್ಮಂಥವರು ಹೇಳಬಾರದು. ಆದರೂ ನೀನು ತಿಳಿದುಕೊಳ್ಳುವುದಾದರೆ ಹೇಳುವೆನೆಂದನು.

ಶ್ಲೋ॥ ನಹಿಸ್ತನಂಧಯೀಬುದ್ಧಿಃ ಗಂಭೀರಂಗಾಹತೇವಚಃ ।
ತಲಂತೋಯನಿಧೇರ್ದ್ರಷ್ಟುಂ ಯಷ್ಟಿರಸ್ತಿನವೈಣವೀ ॥

ತಾ॥ ಸಾಧಾರಣವಾದ ಬುದ್ಧಿಯು ಗಂಭೀರವಾದ ಮಾತುಗಳನ್ನು ತಿಳಿದುಕೊಳ್ಳಲಾರದು, ಹ್ಯಾಗೆಂದರೆ, ಸಮುದ್ರದ ಆಳವನ್ನು ನೋಡಲು ತಕ್ಕ ಬಿದುರು ಸಿಕ್ಕದಂತೆಯೇ.

ಗ॥ ದೇವಾಕರ್ಣಯ ॥

ಶ್ಲೋ॥ ಚ್ಯುತಾಮಿಂದೋರ್ಲೇಖಾಂರತಿಕಲಹಭಗ್ನಂಚವಲಯಂ ।
ಸಮಂಚಕ್ರೀಕೃತ್ಯಪ್ರಹಸಿತಮುಖೀಶೈಲತನಯಾ ॥
ಅವೋಚದ್ಯಂಪಶ್ಯೇತ್ಯವತುಗಿರಿಶಸ್ಯಾಚಗಿರಿಜಾ ।
ಸಚಕ್ರೀಡಾಚಂದ್ರೋದಶನಕಿರಣಾಪೂರಿತತನುಃ ॥

ತಾ॥ ಎಲೈ ಧೊರೆಯೇ ಕೇಳು ಶಿವಪಾರ್ವತಿಯರ ರತಿಕಾಲದಲ್ಲಿ ಶಿವನ ತಲೆಯಿಂದ ಜಾರಬಿದ್ದ ಅರ್ಧಚಂದ್ರನನ್ನೂ ಪಾರ್ವತಿಯು ಒಡೆದು ಹೋದ ಬಳೆಯನ್ನೂ ಜೋಡಿಸಿ ಚಕ್ರದಂತೆ ಮಾಡಿ ಶಿವನಿಗೆ ತೋರಿಸಿ ನಗುತ್ತಿರಲು ಹಲ್ಲುಗಳ ಕಾಂತಿಯಿಂದ ತುಂಬಿರುವ ಆ ಕ್ರೀಡಾಚಂದ್ರನೂ, ಶಿವನೂ ಪಾರ್ವತಿಯೂ ನಿನ್ನನ್ನು ಕಾಪಾಡಲಿ.

ಕಾಳಿದಾಸಃ॥ ಸಭೋಃಕ್ರೀಡಾಚಂದ್ರ ಚಿರಾದ್ದೃಷ್ಟೋಽಪಿ ಕಥಮಿಹಾದ್ಯಶೀತೋದಶಾ ।
ಮಂಡಲೇಮಂಡಲೇಪಿರಾಜ ತ್ಯಪಿರಾಜನಿಬಹುಧನಪತಿ ॥

ತಾ॥ ಕಾಳಿದಾಸನು ಸ್ನೇಹಿತನಾದ ಕ್ರೀಡಾಚಂದ್ರನೆ ಪ್ರತಿಮಂಡಲವಲ್ಲಿ ಧನವಂತನಾದ ರಾಜನು ರಾರಾಜಿಸುತ್ತಿರುವಲ್ಲಿ ನಿನಿಗೇನು ಈ ಅವಸ್ಥೆ.

ಕ್ರೀಡಾಚಂದ್ರ॥ ಶ್ಲೋ॥ ಧನಿನೋಽಪ್ಯದಾನವಿಭವಾಗಣ್ಯಂತೇಧುರಿಮಹಾದರಿದ್ರಾಣಾಂ । ಹಂತಿನಯತಃಪಿಪಾಸಾಮತಸ್ಸಮುದ್ರೋಪಿಮರುರೇವ ॥

ತಾ॥ ದಾನಮಾಡದೆ ಇರುವವರು ಹಣವಂತರಾದರೂ ಅವರನ್ನು ಬಡವರು ಮನ್ನಿಸಲಾರರು. ಸಮುದ್ರದಲ್ಲಿ ಎಷ್ಟು ನೀರಿದ್ದರೂ ಬಾಯಾರಿಕೆಯನ್ನೂ ಹೋಗಲಾಡಿಸದೆ ಇರುವದರಿಂದ ಮರುಭೂಮಿಯಂತೆಯೇ.

ಶ್ಲೋ॥ ಉಪಭೋಗಕಾತರಾಣಾಂ ಪುರುಷಾಣಾಮರ್ಥಸಂಚಯಪರಾಣಾಂ ।
ಕನ್ಯಾಮಣೀರಿವಸದನೇತಿಷ್ಠತ್ಯರ್ಥಃಪರಸ್ಯಾರ್ಥೇ ॥

ತಾ॥ ದ್ರವ್ಯವನ್ನು ತಾನು ಅನುಭವಿಸಲು ಹೆದರಿ ಕೂಡಿಹಾಕುತ್ತಿರುವರ ಹಣವು ತನ್ನ ಮನೆಯಲ್ಲಿ ಹುಟ್ಟಿಬೆಳೆದ ಹೆಣ್ಣುಮಗುವು ಹೇಗೆ ಇನ್ನೊಬ್ಬರಿಗೆ ಆಗುವುದೂ ಹಾಗೆಯೇ ತನ್ನ ಹಣವೂ ಪರರಿಗೆ ಉಪಯೋಗವಾಗುತ್ತದೆ.

ಶ್ಲೋ॥ ಸುವರ್ಣಮಣಿಕೇಯೂರಾ ಡಂಬರೈರನ್ಯಭೂಭೃತಃ ।
ಕಲಯನ್ತ್ಯಪದಂಭೋಜಃ ತೇಷಾಂ ವಾಪ್ನೋತಿಸಾರವಿತ್ ॥

ತಾ॥ ರತ್ನಖಚಿತಗಳಾದ ಸುವರ್ಣದ ಭುಜಕೀರ್ತಿಗಳಿಂದ ಇತರರು ರಾಜರೆನ್ನಿಸಿಕೊಳ್ಳುತ್ತಾರೆ. ಭೋಜರಾಯನಾದರೋ ವಿದ್ಯೆಗಳಿಂದಲೇ ಅವುಗಳ ಸಾರವನ್ನು ತಿಳಿದಿರುವನು.

ಶ್ಲೋ॥ ಸುಧಾಮಯಾನೀವಸುಧಾಂಗಳಂತಿ ವಿದಗ್ಧಸಂಯೋಜನಮಂತ
ರೇಣ । ಕಾವ್ಯಾನಿನಿರ್ವ್ಯಾಜಮನೋಹರಾಣಿ ವಾರಾಂಗನಾನಾಮಿ
ವಯೌವನಾನಿ ॥

ತಾ॥ ಸೂಳೆಯರ ಯೌವನಗಳಂತೆ ಸ್ವಭಾವವಾಗಿ ಸುಂದರಗಳಾದ ಕಾವ್ಯಗಳು ರಸಿಕರ ಸಂಯೋಗವಿಲ್ಲದೇನೆ ಸ್ವತಃ ಅಮೃತಮಯಗಳಾದಂತೆ ಅಮೃತವನ್ನು ಸುರಿಸುವುದು ಅಂದರೆ, ಇಂಪಾಗಿರುವುದು.

ಶ್ಲೋ॥ ಜ್ಞಾಯತೇಜಾತುನಾಮಾಪಿನರಾಜ್ಞಃಕವಿತಾಂವಿನಾ ।
ಕವೇಸ್ತದ್ವ್ಯತಿರೇಕೇಣ ನಕೀರ್ತಿಃಸ್ಫುರತಿಕ್ಷಿತೌ ॥

ತಾ॥ರಾಜನು ಪ್ರಸಿದ್ಧನಾಗಬೇಕಾದರೆ ಕವಿಗಳು ವರ್ಣಿಸಬೇಕು. ಕವಿಗಳಿಂದ ವರ್ಣಿಸಲ್ಪಡದ ರಾಜನಕೀರ್ತಿಯು ಭೂಮಿಯಲ್ಲಿ ವ್ಯಾಪಿಸಲಾರದು.

ಮಯೂರಃ॥ ತೇವಂದ್ಯಾಸ್ತೇಮಹಾತ್ಮಾನಃ ತೇಷಾಂಲೋಕೇಸ್ಥಿರಂಯಶಃ ।
ಯೈರ್ನಿಬದ್ಧಾನಿಕಾವ್ಯಾನಿ ಯೇಚಕಾವ್ಯೇಪ್ರಕೀರ್ತಿತಾಃ ॥

ತಾ॥ ಯಾರು ಕಾವ್ಯಗಳನ್ನು ಮಾಡುವರೊ, ಯಾರ ಕೀರ್ತಿಯು ಕಾವ್ಯಗಳಲ್ಲಿ ತುಂಬಿರುತ್ತದೆಯೋ, ಅಂಥವರೇ ವಂದನಾರ್ಹರು ಮಹಾತ್ಮರೂ ಆಗಿರುತ್ತಾರೆ.

ವರರುಚಿ॥ ಶ್ಲೋ॥ ಪದವ್ಯಕ್ತಿವ್ಯಕ್ತೀಕೃತಸಹೃದಯಾ ಬಂಧಲಲಿತೇಕವೀನಾಂ
ಮಾರ್ಗೇಸ್ಮಿನ್ ಸ್ಫುರತಿಬುಧಮಾತ್ರಸ್ಯಧಿಷಣಾ । ನಚಕ್ರೀ
ಡಾಲೇಶವ್ಯಸನಪಿಶುನೋಯಂ ಕುಲವಧೂಕಟಾಕ್ಷಾಣಾಂ

ಪಂಥಾಃನಖಲುಗಣಿಕಾನಾಮವಿಷಯಃ ॥

ತಾ॥ ಲಲಿತಪದಗಳ ಪ್ರಯೋಗದಿಂದ ಚನ್ನಾಗಿರುವ ಗುಣಜ್ಞರಿಗೆ ಲಲಿತವಾಗಿರುವ ಕವಿಗಳ ಮಾರ್ಗದಲ್ಲಿ ವಿದ್ವಾಂಸರಿಗೆ ಅವಕಾಶವಿದ್ದೇ ಇದೆ, ಇತರರಿಗೆ ಇರುವದಿಲ್ಲವು ಹೇಗೆಂದರೆ, ಸ್ವಲ್ಪ ಕ್ರೀಡಾಸೂಚಕವಾದ ಕುಲ ಸ್ತ್ರೀಯು ಕಡೆಗಣ್ಣಿನ ನೋಟದ ಮಾರ್ಗವು ಸೂಳೆಯರಿಗೆ ಬರುವದೇನು ಬರಲಾರದು.

ಗ॥ ರಾಜಾಕ್ರೀಡಾಚಂದ್ರಾಯ ವಿಂಶತಿಗಜೇಂದ್ರಾನ್ಗ್ರಾಮಾನ್ ಪಂಚ ಕಂಚದದೌ ॥

ತಾ॥ ರಾಯನು ಆ ಕ್ರೀಡಾಚಂದ್ರನಿಗೆ ಇಪ್ಪತ್ತು ಆನೆಗಳನ್ನು ಐದು ಗ್ರಾಮಗಳನ್ನೂ ಕೊಟ್ಟನು.

ಗ॥ ತತೋರಾಜಾನಂಕವಿಸ್ತೌತಿ ॥

ಶ್ಲೋ॥ ಕಂಕಣಂನಯನದ್ವಂದ್ವೇ ತಿಲಕಂಕರಪಲ್ಲವೇ ।
ಅಹೋಭೂಷಣವೈಚಿತ್ರ್ಯಂ ಭೋಜಪ್ರತ್ಯರ್ಥಿಯೋಷಿತಾಂ ॥

ತಾ॥ ಬಳಿಕ ರಾಜನನ್ನು ವರ್ಣಿಸುತ್ತಾನೆ. ಎಲೈ ಭೋಜರಾಯನೇ ನಿನ್ನ ಶತ್ರು ಸ್ತ್ರೀಯರಿಗೆ ಕಣ್ಣುಗಳಲ್ಲಿ ಕಂಕಣವೂ ಕಣ್ಣೀರೂ ಕೈಗಳಲ್ಲಿ ತಿಲಕವೂ ಎಳ್ಳುನೀರೂ ಇರುತ್ತದೆ, ಇದು ಆಶ್ಚರ್ಯವು.

ಗ॥ ತುಷ್ಟೋರಾಜಾ ಪುನರ್ಲಕ್ಷಂದದೌ ॥

ತಾ॥ಧೊರೆಯು ಸಂತೋಷಪಟ್ಟು ತಿರಿಗೂ ಒಂದು ಲಕ್ಷ ಕೊಟ್ಟನು.

ಗ॥ ತತಃಕದಾಚಿತ್ಕೋಪಿ ಜರಾಜೀರ್ಣಾಂಗಸಂಧಿಃ ಪಂಡಿತೋರಾಮೇಶ್ವರ ನಾಮಾಸಭಾಮಭ್ಯಗಾತ್ ॥

ಆಮೇಲೊಂದುದಿನ ಒಬ್ಬ ಮುದುಕನಾದ ರಾಮೇಶ್ವರನೆಂಬ ಪಂಡಿತನು ಸಭೆಗೆ ಬಂದನು. ಸಚಾಹ-ಅವನು ಹೇಳುತ್ತಾನೆ.

ಶ್ಲೋ॥ ಪಂಚಾನನಸ್ಯ ಸುಕವೇರ್ಗಜಮಾಂಸೈರ್ನೃಪಶ್ರಿಯಾ ।
ಪಾರಣಾ ಜಾಯತೇಕ್ವಾಪಿ ಸರ್ವತ್ರೈವೋಪವಾಸಿನಃ ॥

ತಾ॥ ಸಿಂಹಕ್ಕೆ ಆನೆ ಮಾಂಸಗಳಿಂದಲೂ ಒಳ್ಳೆ ಕವಿಗೆ ರಾಜನ ಹಣದಿಂದಲೂ ತೃಪ್ತಿಯಾದೀತೇ ಹೊರತು, ಇಲ್ಲವಿದ್ದರೆ ಉಪವಾಸವಿದ್ದಂತೆ ಆಗುತ್ತದೆ.

ಶ್ಲೋ॥ ವಾಹಾನಾಂ ಪಂಡಿತಾನಾಂಚ ಪರೇಷಾಮುಪರೋಜನಃ ।
ಕವೀಂದ್ರಾಣಾಂ ಗಜೇಂದ್ರಾಣಾಂ ಗ್ರಾಹಕೋನೃಪತಿಃಪರಃ ॥

ತಾ॥ ಸಾಧಾರಣರು ಕುದುರೆ ಮೊದಲಾದ ವಾಹನಗಳನ್ನೂ ಪಂಡಿತರನ್ನೂ ಗ್ರಹಿಸುವರು. ರಾಜರು ಕವೀಶ್ವರನ್ನೂ ಗಜೇಂದ್ರಗಳನ್ನೂ ಗ್ರಹಿಸುವರು. ಏವಂಹೀ॥

ಶ್ಲೋ॥ ಸುವರ್ಣೈಃಪಲ್ಲವೈಶ್ಚೈತ್ರೈಃ ಶೋಭಾಸ್ಯಾದ್ವಾರಯೋಷಿತಾಂ ।
ಪರಾಕ್ರಮೇಣದಾನೇನ ರಾಜಂತೇರಾಜನಂದನಾಃ ॥

ತಾ॥ ಚಿನ್ನದ ಒಡವೆಗಳಿಂದಲೂ ಒಳ್ಳೆ ಶೀರೆಗಳಿಂದಲೂ ಸೂಳೆಯರು ಪ್ರಕಾಶಿಸುತ್ತಾರೆ ರಾಜಪುತ್ರರಾದರೊ ಶೌರ್ಯದಿಂದಲೂ ಔದಾರ್ಯದಿಂದಲೂ ಪ್ರಕಾಶಿಸುವರು.

ಗ॥ ಇತ್ಯಾಕರ್ಣ್ಯರಾಜಾ ರಾಮೇಶ್ವರಪಂಡಿತಾಯ ॥
ಸರ್ವಾಭರಣಾನ್ಯುತ್ತೀರ್ಯಲಕ್ಷದ್ವಯಂ ಪ್ರಾಯಚ್ಛತ್ ॥

ತಾ॥ ಹೀಗೆಂದುದನ್ನು ಕೇಳಿ ಧೊರೆಯು ರಾಮೇಶ್ವರ ಪಂಡಿತನಿಗೆ ಎಲ್ಲಾ ಒಡವೆಗಳನ್ನೂ ಕೊಟ್ಟು ಎರಡು ಲಕ್ಷಗಳನ್ನೂ ಕೊಟ್ಟನು.

ಸ್ತೌತಿಕವಿಃ॥ ಶ್ಲೋ॥ ಭೋಜತ್ವತ್ಕೀರ್ತಿ ಕಾಂತಾಯಾಃನಭಃ ಫಾಲಸ್ಥಿತಂ
ನಭತ್ । ಕಸ್ತೂರೀತಿಲಕಂರಾಜನ್ ಗುಣಾಕರವಿರಾಜತೇ॥

ತಾ॥ ಎಲೌ ಸುಗುಣಾಶ್ರಯನಾದ ಭೋಜರಾಯನೆ ನಿನ್ನ ಕೀರ್ತಿಯೆಂಬ ತರುಣಿಗೆ ಆಕಾಶವು ಕಸ್ತೂರೀ ಬೊಟ್ಟನಂತಿರುವುದು.

ಶ್ಲೋ॥ ಬುಧಾಗ್ರೇನಗುಣಾನ್ಬ್ರೂಯಾತ್ ಸಾಧುವೇತ್ತಿಯತಸ್ಸ್ವಯಂ ।
ಮೂರ್ಖಾಗ್ರೇಪಿಚನಬ್ರೂಯಾತ್ ಬುಧಃಪ್ರೋಕ್ತಾನವೇತ್ತಿಸಃ ॥

ತಾ॥ ಅಂದರೆ ತಿಳಿದವರೆದುರಿಗೂ ತಿಳಿಯದ ಮೂರ್ಖರೆದುರಿಗೂ ಗುಣಗಳನ್ನು ಹೇಳಬೇಕಾಗುವದಿಲ್ಲವು. ಯಾಕಂದರೆ ತಿಳಿದವನು ಹೇಳದಿದ್ದರೂ ತಾನೇ ತಿಳಿದುಕೊಳ್ಳುವನು. ಮೂರ್ಖನಿಗೆ ಹೇಳಿದರೂ ಪ್ರಯೋಜನವಿಲ್ಲವು.

ರಾಮೇಶ್ವರಕವಿಃ॥ ಖ್ಯಾತಿಂಗಮಯತಿ ಸುಜನಸ್ಸುಕವಿರ್ವಿದಧಾತಿಕೇವಲಂ
ಕಾವ್ಯಂ । ಪುಷ್ಣಾತಿಕಮಲಮಂಭೋಲಕ್ಷ್ಮ್ಯಾತುರವಿರ್ನಿ
ಯೋಜಯತಿ ॥

ತಾ॥ ಒಳ್ಳೆ ಕವಿಯು ಕಾವ್ಯವನ್ನು ಮಾತ್ರ ಮಾಡುತ್ತಾನೆ ಅದನ್ನು ಪ್ರಸಿದ್ಧಪಡಿಸತಕ್ಕವನು ಸತ್ಪುರುಷನು. ಹೇಗೆಂದರೆ ಕಮಲ ಹುಟ್ಟುವದಕ್ಕೆ ನೀರೇ ಆಧಾರವಾದರೂ ಸೂರ್ಯನ ವಿನಹಾ ಅದಕ್ಕೆ ಕಾಂತಿಯುಂಟಾಗಲಾರದು.

ಗ॥ ತತಸ್ತುಷ್ಟೋ ರಾಜಾ ಪ್ರತ್ಯಕ್ಷರ ಲಕ್ಷಂದದೌ ॥

ತಾ॥ ಅದಕ್ಕೆ ಮೆಚ್ಚಿ ರಾಜನು ಅಕ್ಷರ ಲಕ್ಷವನ್ನು ಕೊಟ್ಟನು.

ರಾಜೇಂದ್ರಕವಿಃ ಪ್ರಾಹ ॥

ಶ್ಲೋ॥ ಕವಿತ್ವಂ ನಶ್ರುಣೋತ್ಯೇವ ಕೃಪಣಃ ಕೀರ್ತಿವರ್ಜಿತಃ ।
ನಪುಂಸಕಃ ಕಿಂಕುರುತೇ ಪುರಸ್ಸ್ಥಿತ ಮೃಗೀದೃಶಾ ॥

ತಾ॥ ಕೀರ್ತಿ ಇಲ್ಲದವನು ಕವಿತ್ವವನ್ನು ಕೇಳುವದಿಲ್ಲವು, ಹೇಗಂದರೆ ನಪುಂಸಕನಿಗೆ ಚಲುವಾದ ಹೆಣ್ಣು ಯಾತಕ್ಕೆ ?

ಸೀತಾಪ್ರಾಹ. ಹತಾಪ್ಯೈವೇನಕವಯೋ ಪರಾಕಾಷ್ಠಾ ಗಜಾಅಪಿ ।
ಶೋಭಾ ನ ಜಾಯತೇಹ್ಯೇಷಾಂ ಮಂಡಲೇಂದ್ರ ಗೃಹಂವಿನಾ ॥

ತಾ॥ ಅಂದರೆ ಕವಿಗಳಿಗೂ ಆನೆಗಳಿಗೂ ಅರಮನೆಗಳನ್ನು ಬಿಟ್ಟರೆ ಗತಿಯಿಲ್ಲವೆಂದನು.

ಕಾಳಿದಾಸಃಪ್ರಾಹ-ಕಾಳಿದಾಸನು ಹೇಳುತ್ತಾನೆ.

ಅದಾತೃಮಾನಸಂಕ್ವಾಪಿ ನಸ್ಪೃಶಂತಿಕವೇರ್ಗಿರಃ ।
ದುಃಖಾಯೈವಾತಿವೃದ್ಧಸ್ಯವಿಲಾಸಾಸ್ತರುಣೀಕೃತಾಃ ॥

ತಾ॥ ಪ್ರಾಯದ ಹುಡಿಗಿಯ ಹಾವಭಾವ ವಿಲಾಸಗಳು ಮುದಕನನ್ನು ಹೇಗೆ ಹೊಂದಲಾರವೋ ಹಾಗೆ ಕವಿಗಳ ಸರಸವಾಕ್ಯಗಳು ಲೋಭಿಯನ್ನು ಹೊಂದಲಾರವು.

ಗ॥ ತತಃ ಕದಾಚಿದ್ರಾಜಾ ಸಮಸ್ತಾದಪಿ ಕವಿಮಂಡಲಾದಧಿಕಂ ಕಾಳಿದಾಸ ಮವಲೋಕ್ಯ ಅಯಾಂತಂಪರಂ ವೇಶ್ಯಾಲೋಲತ್ವೇನ ಚೇತಸಿಖೇದ ಲವಂಚಕ್ರೇ ತದಾಸೀತಾ ವಿದ್ವದ್ಬೃಂದವಂದಿತಾ ತದಭಿಪ್ರಾಯಂ ಜ್ಞಾತ್ವಾ ಪ್ರಾಹ.

ತಾ॥ ತರುವಾಯ ಒಂದು ಸಮಯದಲ್ಲಿ ಎಲ್ಲಾ ಕವಿಗಳಿಗಿಂತಲೂ ಕಾಳಿದಾಸನೇ ಹೆಚ್ಚೆಂದು ತಿಳಿದು, ಬರುತ್ತಿರುವ ಕಾಳಿದಾಸನನ್ನು ನೋಡಿ, ಸೂಳೆಗಿರಿಕೆ ಮಾಡುವನಾದ್ದರಿಂದ ಮನಸ್ಸಿನಲ್ಲಿ ಸ್ವಲ್ಪ ದುಃಖಪಡುತ್ತಿರಲು ಅಲ್ಲಿದ್ದ ಸೀತಾ ಎಂಬಾಕೆಯು ಆ ಅಭಿಪ್ರಾಯವನ್ನು ತಿಳಿದು ಹೇಳುತ್ತಾಳೆ.

ಶ್ಲೋ॥ ದೋಷಮಪಿ ಗುಣವತಿಜನೇ ದೃಷ್ಟ್ವಾಗುಣರಾಶಿನೋ ನಭಿದ್ಯಂತೆ ।
ಪ್ರೀತ್ಯೈವಶಶಿನಿಪತಿತಂ ಪಶ್ಯತಿಲೋಕಃ ಕಳಂಕಮಪಿ ॥

ತಾ॥ ಗುಣವಂತರಾದವರಲ್ಲಿ ಗುಣಗ್ರಹಣೆಯುಳ್ಳವನು ತಪ್ಪನ್ನು ನೋಡಿದಾಗ್ಯೂ ಆ ತಪ್ಪನ್ನು ಎಣಿಸುವದಿಲ್ಲವು. ಹೇಗಂದರೆ ಚಂದ್ರನಲ್ಲಿ ಕಳಂಕವಿದ್ದರೂ ಜನಗಳು ಆದರದಿಂದ ನೋಡುವಂತೆ.

ಗ॥ ತಥಾಪಿ ಕಾಳಿದಾಸಂ ಯಥಾಪೂರ್ವಂ ನವಮಾನಯತಿ ಯದಾತದಾಸಚ ಕಾಳಿದಾಸೊ ರಾಜ್ಞೋಭಿಪ್ರಾಯಂವಿದಿತ್ವಾತುಲಾವಿಷಯೇಪ್ರಾಹ ॥

ತಾ॥ ಸೀತೆಯು ಹಾಗೆ ಹೇಳಿದರೂ ಧೊರೆಯು ಕಾಳಿದಾಸನಲ್ಲಿ ಮೊದಲಿನಂತೆ ಪ್ರೀತಿ ಇಲ್ಲದಿರುವದನ್ನು ಕಂಡು ಕಾಳಿದಾಸನು ತಕ್ಕಡಿಯು ನೆವದಿಂದ ಹೇಳುತ್ತಾನೆ.

ಶ್ಲೋ॥ ಪ್ರಾಪ್ಯಪ್ರಮಾಣಪದವೀಂ ಕೋನಾವನಾಸ್ತೆತುಲೇವಲೇಪಸ್ತೇ ॥
ನಯಸಿಗರಿಷ್ಠಮಧಸ್ತಾತ್ತದಿತರ ಮುಚ್ಚೈಸ್ತರಾಂಕುರುಷೇ ।

ತಾ॥ ಎಲೆ ತ್ರಾಸೇ ಸಕಲರ ಯೋಗ್ಯತೆಯನ್ನು ತೂಕ ಮಾಡುವೆನೆಂಬ ಗರ್ವದಿಂದ ದೊಡ್ಡವನನ್ನು ತಗ್ಗಿಸಿ ಚಿಕ್ಕವನನ್ನು ಮೇಲಕ್ಕೆತ್ತುತ್ತೀಯೆ.

ಶ್ಲೋ॥ ಯಸ್ಯಾಸ್ತಿಸರ್ವತ್ರಗತಿಸ್ಸಕಸ್ಮಾತ್ಸ್ವದೇಶರಾಗೇಣಹಿಯಾತಿಖೇದಂ।
ತಾತಸ್ಯಕೂಪೋಯಮಿತಿ ಬ್ರುವಾಣಾಕ್ಷಾರಂಜಲಂಕಾಪುರುಷಾಃಪಿಬಂತಿ ॥

ತಾ॥ ಯಾರಿಗೆ ಯೆಲ್ಲಿಯೂ ಪ್ರವೇಶವಿರುತ್ತದೆಯೋ ಆವನು ತನ್ನವರೆಂಬಾ ಸಕ್ತಿಯಿಂದ ಯಾಕೆ ದುಃಖಪಟ್ಟಾನು. ನಮ್ಮಪ್ಪನು ತೆಗಿಸಿದ ಭಾವಿಯೆಂದು ಉಪ್ಪುನೀರು ಕುಡಿದಾನೋ.

ಗ॥ ತತೊರಾಜ್ಞಾಕೃತಾಮವಜ್ಞಾಂ ಮನಸಿವಿದಿತ್ವಾ ಕಾಳಿದಾಸೊದುರ್ಮನಾಃ ನಿಜವೇಶ್ಮಯಯೌ ॥

ತಾ॥ ಬಳಿಕ ರಾಜನು ಮಾಡಿದ ಅವಮಾನವನ್ನು ತಿಳಿದುಕೊಂಡು ಕಾಳಿದಾಸನು ಅಸಮಾಧಾನಪಟ್ಟು ಮನೆಗೆ ಹೋದನು.

ಶ್ಲೋ॥ ಅವಜ್ಞಾಸ್ಫುರಿತಂಪ್ರೇಮ ನವೀಕರ್ತುಂಕಈಶ್ವರಃ ।
ಸಂಧಿಂನಯಾತಿಸ್ಫುಟಿತಂ ಲಾಕ್ಷಾಲೇಪೇನಮೌಕ್ತಿಕಂ ॥

ತಾ॥ ಅವಮಾನದಿಂದ ಕಮ್ಮಿಯಾದ ಪ್ರೀತಿಯನ್ನು ಸರಿಮಾಡಲು ಯಾರಿಂದತಾನೆ ಆದೀತು ಮುತ್ತು ಹೊಡೆದು ಹೋದರೆ ಅದನ್ನು ಅರಗಿನಿಂದ ಸೇರಿಸುವದಕ್ಕೆ ಹೇಗೆತಾನೆ ಆದೀತು.

ಗ॥ ತತೋರಾಜಾಪಿಖಿನ್ನಃಸ್ಥಿತಃ ತತೋಲೀಲಾವತೀಖಿನ್ನಂದೃಷ್ಟ್ವಾರಾಜಾನಂ ವಿಷಾದಕಾರಣಮಪೃಚ್ಛತ್ । ರಾಜಾಚರಹಸಿಸರ್ವಂತಸ್ಯೈಪ್ರಾಹ ಸಾಚರಾಜಮುಖೇನ ಕಾಳಿದಾಸಾವಜ್ಞಾಂಜ್ಞಾತ್ವಾಪುನಃಪ್ರಾಹದೇವಪ್ರಾಣನಾಥಸರ್ವಜ್ಞೋಸಿ ॥

ತಾ॥ ಬಳಿಕ ರಾಜನೂಕೂಡ ದುಃಖವುಳ್ಳವನಾಗಿದ್ದನು. ಬಳಿಕ ಧೊರೆಯ ದುಃಖಕ್ಕೆ ಕಾರಣವೇನೆಂದು ಹೆಂಡತಿಯಾದ ಲೀಲಾವತಿಯು ಕೇಳಲಾಗಿ ರಾಜನು ರಹಸ್ಯವಾಗಿ ಆಕೆಗೆ ಯೆಲ್ಲಾ ಸಂಗತಿಯನ್ನೂ ತಿಳಿಸಿದನು. ಆಕೆಯು ರಾಜನಿಂದ ಸಂಗತಿಯನ್ನು ಕೇಳಿ ಎಲೈ ಪ್ರಾಣನಾಥನೆ ತನಗೆ ತಿಳಿಯಪಡಿಸುವದಿಲ್ಲವು.

ಶ್ಲೋ॥ ಸ್ನೇಹೋಹಿಪರಮೋವಟಿತರೋಸವರಂ ಸಂಜಾತವಿಘಟಿತಸ್ನೇಹಃ ।
ಹೃತನಯನೋಹಿವಿಷಾದೀ ಭವತಿಸಖಲುಜಾತ್ಯಂಧಃ ॥

ತಾ॥ ಸ್ನೇಹ ಉಂಟಾಗಿ ವ್ಯಾಜ್ಯ ಬರುವದಕ್ಕಿಂತಲೂ ಸ್ನೇಹವೇ ಆಗದಿರುವುದು ಒಳ್ಳೆಯದು. ಇದ್ದ ಕಣ್ಣು ಹೋಗುವದಕ್ಕಿಂತಲೂ ಕಣ್ಣೇ ಇಲ್ಲದಿರುವುದು ಒಳ್ಳೇದು.

ಗ॥ ಪರಂತುಕಾಳಿದಾಸಃ ಕೋಪಿಭಾರತ್ಯಾ ಅವತಾರಃತತ್ಸರ್ವ್ವ ಭಾವೇನ ಸರ್ವ್ವಾನತ್ಯೇತಿನಂವಿದ್ವದ್ಭ್ಯಃ ॥

ತಾ॥ ಮತ್ತು ಕಾಳಿದಾಸನು ಸರಸ್ವತಿಯ ಪುರುಷಾವತಾರವೆನ್ನಬಹುದು ಆದ್ದರಿಂದ ಎಲ್ಲರಿಗಿಂತಲೂ ಹೆಚ್ಚಾಗಿ ಆತನನ್ನು ಕಾಣಬೇಕೆಂದಳು.

ಶ್ಲೋ॥ ದೋಷಾಕರೋಪಿಕುಟಿಲೋಪಿಕಳಂಕಿತೋಪಿಮಿತ್ರಾವಸಾನಸಮಯೇ ವಿಹಿತೋದಯೋಪಿ । ಚಂದ್ರಃತಥಾಪಿಹರವಲ್ಲಭತಾಮುಪೈತಿ ನೈವಾ ಶ್ರಿತೇಷುಮಹತಾಂ ಗುಣದೋಷಚಿಂತಾ ॥

ತಾ॥ ದೋಷಾಕರನಾದರೂ, ಕುಟಿಲನಾದರೂ, ಕಳಂಕವುಳ್ಳವನಾದರೂ, ಮಿತ್ರನ ಅವಸಾನದಲ್ಲಿ ತಾನು ಉದಯಿಸುವನಾದರೂ, ಚಂದ್ರನನ್ನು ಶಿವನು ತಲೆಯಮೇಲೆ ಹೊತ್ತುಕೊಂಡಿರುವನು ಅದರಿಂದ ದೊಡ್ಡವರು ತಮ್ಮ ಆಶ್ರಿತರಲ್ಲಿ ಗುಣದೋಷಗಳನ್ನೆಣಿಸಲಾರರು.

ಗ॥ ರಾಜಾಪಿಪ್ರಿಯೇ ಸರ್ವ್ವಮೇತತ್ಸತ್ಯಮೇವೇತ್ಯಂಗೀಕೃತ್ಯಶ್ವಃ ಕಾಳಿದಾಸಂಪ್ರಾತರೇವ ಸಂತೋಷಯಿಷ್ಯಾಮಿ ಇತ್ಯವೋಚತ್ ॥

ತಾ॥ ಬಳಿಕರಾಜನು ಎಲೈ ಪ್ರಿಯಳೆ ನೀನು ಹೇಳಿದುದೆಲ್ಲವೂ ನಿಜವೆಂದು ನಾಳೆ ಕಾಳಿದಾಸನನ್ನು ಸಂತೋಷಪಡಿಸುವೆನೆಂದನು.

ಗ॥ ಅನ್ಯೇದ್ಯೂರಾಜಾದಂತಧಾವನಾದಿವಿಧಿಂವಿಧಾಯ ನಿರ್ವ್ವರ್ತ್ತಿತ ನಿತ್ಯಕೃತ್ಯಃ ಸಭಾಂಪ್ರಾಪ । ಪಂಡಿತಾಃಕವಯಶ್ಚಗಾಯಕಾ ಅನ್ಯೇಪ್ರಕೃತಯಶ್ಚ ಸರ್ವೇಸಮಾಜಗ್ಮುಃ । ಕಾಳಿದಾಸಮೇಕಮನಾಗತಂ ವೀಕ್ಷ್ಯ ರಾಜಾಸ್ವಸೇವಕಮೇಕಂ ತದಾಕಾರಣಾಯ ವೇಶ್ಯಾಗೃಹಂ ಪ್ರೇಷ

ಯಾವನ್ಮಾಸಸಚಗತ್ವಾಕಾಳಿದಾಸಂತ್ವಾಪ್ರಾಹ। ಕವೀಂದ್ರತ್ವಾಮಾಕಾರ
ಯತಿಭೋಜನರೇಂದ್ರಇತಿ। ತತಃಕವಿರ್ವ್ಯಚಿಂತಯತ್ ಗತೇಽಸ್ಮಿನ್ನೃ
ಪೇಣಾಪಮಾನಿತೋಽಹಮಸ್ಯ ಪ್ರಾತರೇವಾಕಾರಣೇಕಿಂಕಾರಣಮಿತಿ॥

ತಾ॥ ಮಾರನೇದಿನ ದೊರೆಯು ದಂತಧಾವನಾದಿ ಕೃತ್ಯಗಳನ್ನು ನೆರವೇರಿಸಿಕೊಂಡು ಸಭಾಪ್ರವೇಶ ಮಾಡುವಾಗ್ಯೆ ಎಲ್ಲಾ ಪಂಡಿತರೂ ಕವೀಶ್ವರರೂ ನಟ್ಟುವಿಟ್ಟ ಗಾಯಕರೆಲ್ಲರೂ ತುಂಬಿದ್ದರು, ಆ ಸಭೆಯಲ್ಲಿ ಕಾಳಿದಾಸನೊಬ್ಬನಿಲ್ಲದಿರುವುದನ್ನು ಕಂಡು ತನ್ನ ಭೃತ್ಯನೊಬ್ಬನನ್ನು ವೇಶ್ಯಾಗೃಹಕ್ಕೆ ಕಳುಹಿಸಿ ಕಾಳಿದಾಸನನ್ನು ಕರೆದುಕೊಂಡು ಬರುವಂತೆ ಅಪ್ಪಣೆ ಮಾಡಲು ಆ ಸೇವಕನು ಹೋಗಿ ಕಾಳಿದಾಸನಿಗೆ ರಾಜನಪ್ಪಣೆಯನ್ನು ಹೇಳಲು, ಕಾಳಿದಾಸನು ಇದೇನು ನಿನ್ನೆ ರಾಜನು ನನಗೆ ಅಪಮಾನಮಾಡಿ ಈಗ ಕರಿಸಲು ಕಾರಣವೇನಿರಬಹುದೆಂದು ಆಲೋಚಿಸಿದನು.

ಶ್ಲೋ॥ ಯಂಯಂನೃಪೋಽನುರಾಗೇಣಸಂಮಾನಯತಿಸಂಸದಿ।
ತಸ್ಯತಸ್ಯೋತ್ಸಾರಣಾಯ ಯತಂತೇರಾಜವಲ್ಲಭಾಃ॥

ತಾ॥ ರಾಜನು ಯಾರಾರನ್ನು ಸಭೆಯಲ್ಲಿ ಪ್ರೀತಿಯಿಂದ ಕಾಣುವನೋ ಅಂಥವರನ್ನು ರಾಜನೆಡೆಯಲ್ಲಿರುವವರು, ಪ್ರಯತ್ನಿಸುತ್ತಾರೆ.

ಶ್ಲೋ॥ ಅವಿವೇಕಮತಿರ್ನೃಪತಿಃ ಮಂತ್ರಿಷುಗುಣವತ್ಸುವಕ್ರಿತಗ್ರೀವಃ।
ಯತ್ರಖಲಾಶ್ಚಪ್ರಬಲಾಃ ತತ್ರಕಥಂಸಜ್ಜನಾವಸರಃ॥

ತಾ॥ ಯಲ್ಲಿ ರಾಜನಿಗೆ ಬುದ್ಧಿಯಿಲ್ಲದಿರುವದೋ, ಯಾರು ಗುಣವಂತರಾದ ಮಂತ್ರಿಗಳಲ್ಲಿ ಅಸಮಾಧಾನಪಡುವರೋ, ಯಲ್ಲಿಯಾದರೆ ಕೆಟ್ಟವರು ಪ್ರಬಲಿಸಿರುತ್ತಾರೆಯೋ, ಅಲ್ಲಿ ಸಜ್ಜನರಿಗೆ ಅವಕಾಶವಿರುವದಿಲ್ಲವು.

ಗ॥ ಇತಿವಿಚಾರಯನ್ಸಭಾಮಾಗಚ್ಛತ್॥

ತಾ॥ ಹೀಗೆ ಅಂದುಕೊಂಡು ಸಭೆಗೆ ಬಂದನು.

ಗ॥ ತತೋದೂತಿಸಮಾಯಾಂತಂ ವೀಕ್ಷ್ಯಸಾನಂದಮಾಸನಾದುತ್ಥಾಯಾಸ್ಯ
ಕವೇಃ ಸ್ತುತಿಪ್ರಯತಮಾನಃ ಕಥಂವಿಲಂಬಃ ಕ್ರಿಯತಇತಿ ಭಾಷಮಾ
ಣಃಪಂಚ ಷಟ್ಪದಾನಿಸಮ್ಮುಖೋಗಚ್ಛತಿ ತತೋಽಖಿಲಾಪಿಸಭಾಸ್ವಾಸ
ನಾದುತ್ಥಿತಾ ಸರ್ವೇಸಭಾಸದಶ್ಚಮುತ್ಕ್ರಾಂತಾಃ ವೈರಿಣಶ್ಚಾಸ್ಯವಿಚ್ಛಾ
ಯವದನಾಬಭೂವುಃ ತತೋರಾಜಾನಿಜಕರಕಮಲೇನ ಅಸ್ಯಕರಕಮಲ
ಮವಲಂಬ್ಯಸ್ವಾಸನದೇಶಂ ಪ್ರಾಪ್ಯತಂಚಸಿಂಹಾಸನೆ ಉಪವೇಶ್ಯಸ್ವ
ಯಂಚ ತದಾಜ್ಞಯಾತತ್ಪ್ರೋಪವಿಷ್ಟಃ॥

ತಾ|| ಬಳಿಕ ಭೋಜರಾಯನು ದೂರದಲ್ಲಿ ಬರುತ್ತಿದ್ದ ಕಾಳಿದಾಸನನ್ನು ನೋಡಿ ಸಂತೋಷದಿಂದ ಸಿಂಹಾಸನದಿಂದೆದ್ದು ಎಲೈ ಕವಿಶ್ರೇಷ್ಠನೇ ನನಗೆ ಇಷ್ಟನಾದವನೇ ಯಾಕಿಷ್ಟು ಸಾವಕಾಶವು, ಎಂಬದಾಗಿ ಸ್ವಲ್ಪ ಮುಂದಕ್ಕೆ ಬಂದು ಆತನ ಕೈಯನ್ನು ತನ್ನ ಕೈಯಿಂದ ಹಿಡಿದು ಕರೆತರುತ್ತಿರಲು ಸಭಿಕರೆಲ್ಲರೂ ಆಶ್ಚರ್ಯಗೊಂಡರು. ಶತ್ರುಗಳ ಮುಖಗಳು ಬಾಡಿದವು. ಆಗ ಕಾಳಿದಾಸನನ್ನು ಸಿಂಹಾಸನದಲ್ಲಿ ಕೂಡಿಸಿ ಬಳಿಕ ತಾನೂ ಕುಳಿತುಕೊಳ್ಳಲು ಸಭಾಸದರೆಲ್ಲರೂ ಕುಳಿತವರಾದರು.

ಗ|| ತತೋರಾಜ್ಞಾಸಿಂಹಾಸನಾರೂಢೇ ಕಾಳಿದಾಸೇಭಾಣಕವಿರ್ದಕ್ಷಿಣಂ ಬಾಹುಮುದ್ಧೃತ್ಯೋವಾಚ ||

ತಾ|| ಬಳಿಕ ರಾಯನು ಕಾಳಿದಾಸನನ್ನು ಸಿಂಹಾಸನದ ಮೇಲೆ ಕೂಡಿಸಲು ಭಾಣನೆಂಬ ಕವಿಯು ಭುಜವನ್ನೆತ್ತಿ ಹೇಳುತ್ತಾನೆ.

ಶ್ಲೋ|| ಭೋಜಃಕಲಾವಿದ್ರುದ್ರೋವಾ ಕಾಳಿದಾಸಸ್ಯಮಾನನಾತ್ ।
ವಿಬುಧೇಷುಕೃತೋರಾಜಾ ಯೇನದೋಷಾಕರೋಪ್ಯಸೌ ||

ತಾ|| ಯಾವ ಈಶ್ವರನಿಂದ ಚಂದ್ರನು ದೊರೆಯಾಗಿ ಮಾಡಲ್ಪಟ್ಟನೋ, ಅಂಥ ಕಲೆಗಳನ್ನು ತಿಳಿದ ಭೋಜರಾಯನು ಸಾಕ್ಷಾತ್ ಈಶ್ವರನೇ ಯಾಕಂದರೆ ಕಾಳಿದಾಸನಿಗೆ ತನ್ನ ಸಿಂಹಾಸನದಲ್ಲಿ ಅವಕಾಶ ಕೊಟ್ಟದ್ದರಿಂದ.

ಗ|| ತತೋಸ್ಯವಿಶೇಷೋ ವಿದ್ವದ್ಭಿಸ್ಸಹವೈರಾನಲಃ ಪ್ರದೀಪ್ತಃ ||

ತಾ|| ಆ ಮೇಲೆ ಕಾಳಿದಾಸನಿಗೆ ವಿದ್ವಾಂಸರೊಡನೆ ದ್ವೇಷವು ಹೆಚ್ಚಿತು.

ಗ|| ತತ್ರೈಕೈಶ್ಚಿದ್ಬುದ್ಧಿಮದ್ಭಿಃ ಮಂತ್ರಯಿತ್ವಾ ಸರ್ವೈರಪಿವಿಪ್ರೈಃ ಭೋಜಸ್ಯತಾಂಬೂಲವಾಹಿನೀ ದಾಸೀಧನಕನಕಾದಿನಾಸಮ್ಮಾನಿತಾ ತೇಚ ತಾಂಪ್ರತ್ಯೇವಮೂಚುಃ ಸುಭಗೇ ಅಸ್ಮತ್ಕೀರ್ತಿಂ ಕಾಳಿದಾಸೋಗಳಯತಿ ಅಸ್ಮಾಸುಕೋಪಿನೈತೇನಕಳಾ ಸಾವದ್ಯಂಪ್ರಸಹತೇ ವತ್ಸೇಯಥೈನಂರಾಜಾದೇಶಾಂತರಂ ಉತ್ಸಾರಯತಿತಥಾ ಭವತ್ಯಾಕರ್ತವ್ಯಮಿತಿ ||

ತಾ|| ಬಳಿಕ ಕೆಲವರು ಬುದ್ಧಿವಂತರು ಸೇರಿ ಯೋಚಿಸಿ ಭೋಜರಾಯನಿಗೆ ತಾಂಬೂಲವನ್ನು ತಂದುಕೊಡುತ್ತಿದ್ದ ಒಬ್ಬ ದಾಸಿಯನ್ನು ಕುರಿತು ಮಾತನಾಡಿ ಅವಳಿಗೆ ಬೇಕಾದ ವಸ್ತ್ರಾಭರಣಗಳನ್ನು ಕೊಟ್ಟು ಎಲೈ ದಾಸಿಯೇ ಹೇಗಾದರೂ ದೊರೆಯು ಕಾಳಿದಾಸನನ್ನು ಪಟ್ಟಣವಂ ಬಿಟ್ಟು ಆಚೆಗೆ ಅಟ್ಟುವಂತೆ ಮಾಡಬೇಕೆಂದು ಹೇಳಿದರು.

ಗ॥ ದಾಸೀಪ್ರಾಹ ॥

ಭವದ್ಭ್ಯೋಹಾರಂಪ್ರಾಪ್ಯ ಮಯಾಯುಷ್ಮತ್ಕಾರ್ಯಂಕ್ರಿಯತೇ ।
ತಸ್ಮೈ ಪ್ರಥಮಾಹಾರೋ ದಾತವ್ಯ ಇತಿ ॥

ತಾ॥ ನಾನು ನಿಮ್ಮಗಳಿಂದ ಹಾರವನ್ನು ಪಡೆದು ಬಳಿಕ ನಿಮ್ಮ ಕೆಲಸವನ್ನು ಮಾಡುತ್ತೇನೆ. ಆದ್ದರಿಂದ ನನಗೆ ಮೊದಲು ಹಾರವನ್ನು ಕೊಡಬೇಕೆಂದಳು.

ಗ॥ ತತಸ್ತಾಸ್ತಾಂಬೂಲವಾಹಿನೀ ತ್ಯೈರ್ದತ್ತಂ ಹಾರಮಾದಾಯವ್ಯಚಿಂತಯತ್ ॥ ತಥಾಹಿ.

ತಾ॥ ಬಳಿಕ ತಾಂಬೂಲವಾಹಿನಿಯರಾದ ದಾಸಿಯು ಅವರು ಕೊಟ್ಟ ಹಾರವನ್ನು ತೆಗೆದುಕೊಂಡು ಆಲೋಚಿಸಿ ಸಮಯವನ್ನು ನೋಡುತ್ತಿದ್ದಳು.

ಗ॥ ಬುದ್ಧ್ಯೈಕಸಾಧ್ಯಂ ಕಿಂನಾಸ್ತಿ ತತಸ್ಸಾತಿಕ್ರಾನ್ತೇಷು ಕತಿಪಯವಾಸರೇಷುದ್ಯೈಕದೈಕಾಕಿನಿ ಪ್ರಸುಪ್ತೇ ರಾಜನಿ ಚರಣಸಂವಾಹನಸೇವಾಮಸ್ಯವಿಧಾಯ ತತ್ರೈಕಪಟೇನ ನೇತ್ರೇ ನಿಮೀಲ್ಯಸುಪ್ತಾ ತತಶ್ಚಾರಣಚಲನೇನ ಸಾ ರಾಜಾನಮೀಷಜ್ಜಾಗರೂಕಂ ಸಮ್ಯಜ್ಜ್ಞಾತ್ವಾ ಪ್ರಾಹ ॥ ಸಖಿಮಂದನಮಾಲಿನಿ ಸದುರಾತ್ಮಾ ಕಾಳಿದಾಸಃ ದಾಸಿ ವೇಷೇಣ ಅಂತಃಪುರಂ ಪ್ರಾಪ್ಯ ಲೀಲಾದೇವ್ಯಾಸಹರಮತ ಇತಿ ರಾಜಾ ತಚ್ಛ್ರುತ್ವಾ ಉತ್ಥಾಯ ಪ್ರಾಹ ತರಂಗವತಿ ಕಿಂ ಜಾಗರ್ಷೀತಿ ಸಾಚ ನಿದ್ರಾನ್ವಾಕುಲೇವ ನಶೃಣೋತಿ ರಾಜಾಚ ತಸ್ಯಾ ಅಪಭ್ರಂಶಂ ಶ್ರುತ್ವಾ ಅಚಿಂತಯತ್ ಇಯಂ ತರಂಗವತೀ ನಿದ್ರಾಯಾಂ ಸ್ವಪ್ನವಶಂಗತಾ ವಾಸನಾವಶಾದ್ದೇವ್ಯಾಃ ದುಶ್ಚರಿತಂ ಪ್ರಾಹ ಸಾಚ ಸ್ತ್ರೀವೇಷೇಣಾಂತಃಪುರಮಾಗಚ್ಛತೀವ್ಯೇ ತದಪಿ ಸಂಭಾವ್ಯತೇ ಕೋಜಾನಾಸುಚರಂತಂ ನೇದೇತಿ ತತಶ್ಚೋತ್ಥಾಯ ವಿಚಾರ್ಯ್ಯ ರಾಜಾಪರೇದ್ಯುಃ ಪ್ರಾತರಾತ್ಮನಿ ಕೃತ್ರಿಮಜ್ವರಂ ವಿಧಾಯ ಶಯಾನಃ ಕಾಳಿದಾಸಂ ದಾಸೀಮುಖೇನ ಆನಾಯ್ಯ ತದಾಗಮನಾನಂತರಂ ತಸ್ಮೈ ಲೀಲಾದೇವೀಂ ಚಾನಾಯ್ಯ ದೇವೀಂ ಪ್ರತ್ಯವದತ್ ಪ್ರಿಯೇ ಇದಾನೀಮೇವ ಮಯಾ ಪಥ್ಯಂ ಭೋಕ್ತವ್ಯಮಿತಿ ಇತ್ಯುಕ್ತೇ ಸಾಪಿ ತಥ್ಯೈ ನೇತಿ ಪಥ್ಯಂ ಗೃಹೀತ್ವಾ ರಾಜ್ಞೇ ರಜತಪಾತ್ರೇ ದತ್ವಾ ತತ್ರ ಮುದ್ಗದಾಳಿಂ ಪರ್ಯವೇಷಯತ್ ॥

ತಾ॥ ಬಳಿಕ ಕೆಲವು ದಿನಗಳಾದಮೇಲೆ ಒಂದುದಿನ ದೊರೆಯು ಒಬ್ಬನೇ ವಿಸ್ತೃತತಲ್ಪದಮೇಲೆ ಮಲಗಿರಲು ಈ ದಾಸಿಯು ರಾಯನ ಪಾದಗಳನ್ನು

ಪ್ರೊತ್ತುತ್ತಾ ಅಲ್ಲಿಯೇ ನಿದ್ರೆ ಬಂದವಳಂತೆ ಕಣ್ಣನ್ನು ಮುಚ್ಚಿಕೊಂಡಿರಲು ರಾಯನು ಕಾಲನ್ನಲ್ಲಾಡಿಸಲು ಅದರಿಂದಎದ್ದವಳಂತೆ ಧೊರೆಯು ಸ್ವಲ್ಪ ಎಚ್ಚರಿಕೆಯಾಗಿರುವನೆಂದು ತಿಳಿದು ದಾದಿಯು ತನ್ನ ಸಖಿಯನ್ನು ಕುರಿತು ಎಲೌ ಸಖಿಯೇ ಮದನಮಾಲಿನಿ ಆ ಕಾಳಿದಾಸನೆಂಬ ದುರಾತ್ಮನು ದಾಸೀ ವೇಷ್ಷದಿಂದ ಅಂತಃಪುರವನ್ನು ಪ್ರೊಕ್ಸ್ಕಿ ದೇವಿಯಾದ ಲೀಲಾದೇವಿಯೊಡನೆ ರಮಿಸುವನು: ಎಂಬು ಹೇಳಿದ್ದನ್ನು ಧೊರೆಯು ಕೇಳಿ ಎದ್ದು ಎಲೈ ತರಂಗವತಿಯೇ ಯುಚ್ಚರಿಕೆಯಿಂದಿರುವೆಯಾ ಯೆಂದು ಕೇಳಲು ಆವಳು ನಿದ್ದೆ ಹೋದವಳಹಾಗೆ ಕೇಳಿಸದಂತೆ ಇದ್ದಳು. ಧೊರೆಯಾದರೊ ಅವಳಾಡಿದ ಕೆಟ ಮಾತನ್ನು ಕೇಳಿ ಯೋಚಿಸುತ್ತಾ ಇವಳು ನಿದ್ರೆ ಮಾಡುತ್ತಿರುವಳು ಆದರೆ ಈ ಮಾತನ್ನು ಸ್ವಪ್ನದಲ್ಲಿ ಆಡಿದಂತೆ ಇರುವುದು ಇದು ಇವಳಿಗೆ ಚನ್ನಾಗಿ ಮನಸ್ಸಿನಲ್ಲಿ ನೆಟ್ಟಿರುವುದರಿಂದ ಈಗಲೂ ಈಮಾತು ಹೊರಗೆಬಂದುದು ಒಂದುವೇಳೆ ಹಾಗೆ ದಾಸೀ ವೇಷದಿಂದ ಅಂತಃಪುರಕ್ಕೆ ಹೋಗಿದ್ದರೂ ಹೋಗಿರಬಹುದು. ಯಾರುತಾನೆ ನೋಡುವರು ಎಂದುಕೊಂಡು ಆ ಮರುದಿನ ಪ್ರಾತಃಕಾಲದಲ್ಲಿ ತಾನು ಜ್ವರ ಬಂದವನಂತೆ ಮಲಗಿಕೊಂಡು ಆ ದಾಸಿಯಿಂದ ಕಾಳಿದಾಸನನ್ನು ಕರೆಕಳಿಸಿ ಅವಳ ಮೂಲಕವಾಗಿಯೇ ಲೀಲಾ ದೇವಿಯನ್ನೂ ಕರಿಸಿ ಆ ಲೀಲಾ ದೇವಿಯನ್ನು ಕುರಿತು ಎಲೌ ಪ್ರಿಯಳೆ ನನಗೆ ಪಥ್ಯವನ್ನು ತೆಗದುಕೊಂಡು ಬಾಯೆಂದು ಹೇಳಲಾಗಿ ಆಕೆಯು ತೆಗೆದುಕೊಂಡು ಬಂದು ಒಂದು ಬೆಳ್ಳಿ ಪಾತ್ರೆಯಲ್ಲಿರಿಸಿ ಅದರಮೇಲೆ ಹೆಸರುಬೇಳೆಯ ತೊವ್ವೆಯನ್ನು ಬಡಿಸಿದಳು.

ಗ॥ ತತೋರಾಜಾಪಿತಯೋರಭಿಪ್ರಾಯಂ ಜಿಜ್ಞಾಸಮಾನಃ ಶ್ಲೋಕಾರ್ಧಂ ಪ್ರಾಹ ॥

ತಾ॥ ಬಳಿಕ ರಾಜನಾದರೊ ಅವರಿಬ್ಬರ ಅಭಿಪ್ರಾಯವನ್ನು ತಿಳಿಯಬೇಕೆಂದು ಅರ್ಧ ಶ್ಲೋಕವನ್ನು ಹೇಳುತ್ತಾನೆ.

ಶ್ಲೋ॥ ಮುದ್ಗದಾಳೀಗದವ್ಯಾಳೀ ಕವೀಂದ್ರ ವಿತುಷಾಕಥಂ ॥

ಗ॥ ತತಃಕಾಳಿದಾಸಃ ದೇವ್ಯಾಂ ಸಮೀಪವರ್ತಿನ್ಯಾಮಪಿ ಉತ್ತರಾರ್ಧಂ ಪ್ರಾಹ ॥

ತಾ॥ಎಲೌ ಕವೀಂದ್ರನಾದ ಕಾಳಿದಾಸನೆ ಪದ್ಯಕ್ಕೆ ತಂದಿರುವ ಈ ಹೆಸರು ಬೇಳೆಯು ಹೊಟ್ಟು ರೋಗೆದಂತೆ ಹೇಗೆ ಹೋಗಿದೆ, ಎನಲು ಕಾಳಿದಾಸನು ಧೊರೆಯ ರಾಣಿಯು ಹತ್ತಿರದಲ್ಲಿಯೇ ಇದ್ದಾಗ್ಯೂ ಉತ್ತರಾರ್ಧವನ್ನು

ಹೇಳಿದನು.

ಶ್ಲೋ॥ ಅಂಭೋವಲ್ಲಭಸಂಯೋಗೇ ಜಾತಾವಿಗತಕಂಚುಕಾ ॥

ತಾ॥ ಕುರುಡನಾದ ತನ್ನ ಗಂಡನ ಸಂಪರ್ಕದಲ್ಲಿ ಕುಪ್ಪಸವನ್ನು ತೆಗೆದಿರುವ ನಾರಿಯಂತೆ ಇರ್ದುದೆಂದು ಹೇಳಿದನು.

ಗ॥ ದೇವೀತಚ್ಛ್ರುತ್ವಾ ಪರಿಜ್ಞಾತಾರ್ಥಾ ಸ್ವರೂಪಾಸರಸ್ವತೀವತದರ್ಥಂ
ಜ್ಞಾತ್ವಾಸ್ಮೇರಮುಖೀಸುನಾಗಿವಬಭೂವ ರಾಜಾಪ್ಯೇತದ್ದೃಷ್ಟ್ವಾವಿ
ಚಾರಯಾಮಾಸ ಇಯಂಪುರಾಕಾಳಿದಾಸೇನ್ನಿಹ್ಯತಿ ಅನೇನ ಪಠಸ್ಯಂ
ಸಮೀಪಪನ್ನ್ಯಾಪಿ ಇತ್ಥಂಸುಭ್ಯೇಥಾಯಾ ಇಯಂಚಸ್ಮೇರಮುಖೀ
ಬಭೂವಸ್ತ್ರೀಣಾಂಚ ಚಿತ್ತಂಕೋವೇದ ॥

ತಾ॥ ರಾಣಿಯು ಅದನ್ನು ಕೇಳಿ ಎಲ್ಲರ ಅರ್ಥವನ್ನು ತಿಳಿವ ಸರಸ್ವತಿಯಂತೆ ಆ ಅರ್ಥವನ್ನು ತಿಳಿದು ಮುಗುಳು ನಗೆಯುಳ್ಳವಳಾದಳು. ರಾಜನು ಅದನ್ನು ನೋಡಿ ಯೋಚಿಸಿದನು. ಇವಳು ಕಾಳಿದಾಸನೊಡನೆ ಸ್ನೇಹಮಾಡಿರಬಹುದು, ಇಲ್ಲದಿದ್ದರೆ ಈಕೆ ಇಲ್ಲಿಯೇ ಇರುತ್ತಿರಲು ಇಂಥಾ ಶ್ಲೋಕವನ್ನು ಆತನು ಹೇಳುತ್ತಲೂ ಇರಲಿಲ್ಲ, ಇವಳು ನಗುತ್ತಲೂ ಇರಲಿಲ್ಲ, ಹೆಂಗಸಿನ ಮನಸ್ಸನ್ನು ಯಾರು ತಾನೇ ತಿಳಿದಿರುವರು.

ಶ್ಲೋ॥ ಅಶ್ವಪ್ಲುತಂವಾಸವಗರ್ಜಿತಂಚ ಸ್ತ್ರೀಣಾಂಚಚಿತ್ತಂ ಪುರುಷಸ್ಯ
ಭಾಗ್ಯಂ ಅವರ್ಷಣಂ ಚಾಪ್ಯತಿವರ್ಷಣಂಚದೇವೋ ನಜಾನಾತಿ ಕು
ತೋ ಮನುಷ್ಯಃ ॥

ತಾ॥ ಕುದುರೆಯ ನಡಿಗೆಯನ್ನೂ, ಗುಡುಗನ್ನೂ, ಹೆಂಗಸರ ಮನಸ್ಸನ್ನೂ, ಮನುಷ್ಯನ ಸಂಪತ್ತನ್ನೂ ಮಳೆ ಬರುವುದನ್ನೂ ಬಾರದ್ದನ್ನೂ ದೇವರೇನೇ ತಿಳಿಯಲಾರನು, ಮನುಷ್ಯನೇನು ತಿಳಿದಾನು.

ಗ॥ ಕಿಂತ್ವಯಂ ಬ್ರಾಹ್ಮಣಃಪಾಪಾಚರಣಾಪರಾಧಿತ್ವೇಪಿ ನಹಂತವ್ಯ ಇತಿ ವಿ
ಶೇಷೇಣ ಸರಸ್ವತ್ಯಾಃ ಪುರುಷಾವತಾರ ಇತಿವಿಚಾರ್ಯ ಕಾಳಿದಾಸಂ
ಪ್ರಾಹಕವೇ ಅಸ್ಮದ್ದೇಶಿಸರ್ವ್ಯಥಾನ ಸ್ಥಾತವ್ಯಂ ಕಿಂಬಹುನೋಕ್ತೇನ
ಪ್ರತಿವಾಕ್ಯಂ ಕಿಮಪಿನವಕ್ತವ್ಯಂ ॥

ತಾ॥ ಆದ್ದರಿಂದ ಇವನಾದರೋ ಬ್ರಾಹ್ಮಣನಾಗಿದ್ದಾನೆ. ಅಲ್ಲದೆ ಸರಸ್ವತಿಯ ಪುರುಷಾವತಾರನು. ಆದ್ದರಿಂದ ಇವನನ್ನು ಕೊಲ್ಲಬಾರದೆಂದು ಕಾಳಿದಾಸನನ್ನು ಕುರಿತು ಎಲಾ ಕವಿಯೇ ನೀನು ನಿಶ್ಚಯವಾಗಿ ನಮ್ಮ ದೇಶವನ್ನು ಬಿಟ್ಟು ಹೊರಡತಕ್ಕದು. ಬೇರೆ ಉತ್ತರ ಹೇಳಕೂ

ಡಣ. ಕಾನೆ ಮಾತ್ರೆನಿಂದೇನು ಪ್ರಯೋಜನವೆಂದನು.

ಗ॥ ತತಃಕಾಳಿದಾಸೋಪಿವೇಗೇನೊ ತ್ಥಾಯವೇಶ್ಯಾಗೃಹಾನ್ನಿತ್ಯತಾಂಪ್ರ
ತ್ಯಾಹಪ್ರಿಯೇ ಅನುಜ್ಞಾಂದೇಹಿಮಯಿಭೋಜಃ ಕುಪಿತಸ್ಸ್ವದೇಶೇನಸ್ಥಾ
ತವ್ಯಮಿತಿಉವಾಚ ॥

ತಾ॥ ಬಳಿಕ ಕಾಳಿದಾಸನು ಜಾಗ್ರತೆಯಾಗಿ ಎದ್ದು ಹೊರಟು ತನ್ನ ಸೂಳೆಯ ಮನೆಗೆಬಂದು ಎಲೆ ಪ್ರಿಯೇ ನನಗೆ ಅಪ್ಪಣೆಯನ್ನುಕೊಡು ನನ್ನಲ್ಲಿ ಧೊರೆಯು ಕೋಪಗೊಂಡಿರುವನು. ಅಲ್ಲದೆ ನನ್ನ ದೇಶದಲ್ಲಿರಕೂಡದೆಂದು ಹೇಳಿದನು.

ಅಹಹಾ-ಆಶ್ಚರ್ಯವು.

ಶ್ಲೋ॥ ಅಘಟಿತಘಟಿತಾನಿ ಘಟಯತಿ ಘಟಿತಘಟಿತಾನಿ ದುರ್ಘಟೀಕುರುತೇ।
ವಿಧಿರೇವತಾನಿಘಟಯತಿ ಯಾನಿಪುಮಾನ್ನೈವಚಿಂತಯತಿ ॥

ತಾ॥ ವಿಧಿಯು ಆಗದೇ ಇರುವದನ್ನಾಗಮಾಡುವದು ಆಗುವ ಕಾರ್ಯವನ್ನು ಆಗದಂತೆ ಮಾಡುತ್ತದೆ. ಮನುಷ್ಯನ ಯಾವ ಕಲ್ಪಗಳನ್ನು ಯೋಚಿಸಲೂ ಆಗುವದಿಲ್ಲವೋ ಅವುಗಳನ್ನೆಲ್ಲಾ ಮಾಡಬಲ್ಲದು.

ಅಲ್ಲಿ ವಿದ್ವಾಂಸರೆಲ್ಲರೂ ಏಕವಾಗಿ ಏನಾದರೂ ತಂತ್ರಮಾಡಿರಬಹುದೇ ಇರಬಹುದು.

ಶ್ಲೋ॥ ಬಹೂನಾಮಪ್ಯಸಾರಾಣಾಂ ಸಮವಾಯೋಹಿದುರತ್ಯಯಃ । ತೃಣೈರ್ವಿ
ಧೀಯತೇರಜ್ಜುಃ ಬಧ್ಯಂತೇ ತೇನದಂತಿನಃ ॥

ತಾ॥ ಬಲಹೀನರಾದವರೂ ಕಾನೆಜನ ಗುಂಪುಕೂಡಿದರೆ ದೊಡ್ಡ ಕೆಲಸವನ್ನು ಮಾಡಬಹುದು. ಹ್ಯಾಗೆಂದರೆ ಸಣ್ಣಹಾರಗಳಿಂದಲೇ ಆಗುವ ಹಗ್ಗವು ಆನೆಯನ್ನೂ ಕಟ್ಟುವದಾಗುವದು.

ಗ॥ ತತೋವಿಲಾಸವತೀ ನಾಮವೇಶ್ಯಾತಂ ಪ್ರಾಹ ॥

ಬಳಿಕ ವಿಲಾಸವತಿಯೆಂಬ ಆ ಸೂಳೆಯು ಹೇಳುತ್ತಾಳೆ.

ಶ್ಲೋ॥ ತದೇವಾಸ್ಯಪರಂಮಿತ್ರಂ ಯತ್ರಸಂಕ್ರಾಮತಿದ್ವಯಂ ।
ದೃಷ್ಟ್ವಾಸುಖಂಚದುಃಖಂಚ ಪ್ರತಿಚ್ಛಾಯೇವದರ್ಪಣೇ ॥

ತಾ॥ ಯಾವ ಸ್ನೇಹಿತನನ್ನು ನೋಡಿದರೆ ತನ್ನ ಸುಖ ದುಃಖಗಳು ಅವನಲ್ಲಿ ಕನ್ನಡಿಯಲ್ಲಿ ನೆಳಲಂತೆ ಕಾಣುವವೋ ಅವನೇ ಮುಖ್ಯ ಸ್ನೇಹಿತನು.

ಗ॥ ಮಯಿತವಮುಖವಿದ್ಯಮಾನಾಯಾಂ ಕಿಂತೇರ ಪ್ರಾಃಕರಿಂಮಾರಾಜ ದ
ತ್ತೇನವಿತ್ತೇನಕಾರ್ಯಂ ಸುಖೇನಸ್ಥಿತ್ವಂಕಿಂ ತಿಷ್ಠಮದ್ಗೃಹಾಂತಃ

ಕ್ಷುಧರ ಇತಿ ॥

ತಾ॥ ಎಲೌ ಕಾಂತನೆ ನಾಸಿರಲೀಕಾಗಿ ಧೊರೆಯಿಂದಲೂ ಅವನು ಕೊಡುವ ಹಣದಿಂದಲೂ ಏನಾಗೀತು. ನನ್ನ ಮನೆಯಲ್ಲಿರುವ ನೆಲಸಾಳಿಗೆ ಮನೆಯಲ್ಲಿ ಸುಖವಾಗಿದೆ ಎಂದಳು.

ಗ॥ ತತಃ ಕಾಳಿದಾಸಃ ಕತಿಪಯದಿನಾನಿ ಗಮಯಾಮಾಸ ॥

ತಾ॥ ತರುವಾಯ ಕಾಳಿದಾಸನು ಕೆಲವು ದಿನಗಳಲ್ಲಿಸೊ ಕಳೆದನು.

ಗ॥ ತತಃ ಕಾಳಿದಾಸೇ ಗೃಹಾನ್ನಿರ್ಗತೇ ರಾಜಾನಂ ಲೀಲಾದೇವೀ ಪ್ರಾಹ ದೇವ
ಕಾಳಿದಾಸಕವಿನಾ ಸಾಕಂ ನಿತಾಂತಂ ವಿಹಿತಸ್ಯಾಪಿ ಮೈತ್ರೀ ತದಾಸೀ
ಮನುಚಿತಂ ಕಸ್ಮಾತ್ಕೃತಂ ಯಸ್ಯ ದೇಶೇನ್ನಿವಸನಂ ನಿಷಿದ್ಧಂ ॥

ತಾ॥ ಕಾಳಿದಾಸನು ಅರಮನೆಯಿಂದ ಹೊರಟು ಹೋದ ಮೇಲೆ ಲೀಲಾದೇವಿಯು ದೊರೆಯನ್ನು ಕುರಿತು ಕಾಳಿದಾಸನೊಡನೆ ಎಡೆಬಿಡದೆ ಇದ್ದ ನಿನ್ನ ಸ್ನೇಹವನ್ನು ಯಾರಗಲಿಸಿದರು ಆತನನ್ನು ದೇಶದಿಂದಲೇ ಹೊರಡಿಸಿದ್ದು ಅನುಚಿತವಾದುದು.

ಶ್ಲೋ॥ ಇಕ್ಷೋರಗ್ರಾತ್ಕ್ರಮಶಃ ಪರ್ವಣಿ ಪರ್ವಣಿ ಯಥಾ ರಸವಿಶೇಷಃ ।
ತದ್ವತ್ಸುಜನಮೈತ್ರೀ ವಿಪರೀತಾನಾಂತು ವಿಪರೀತಾ ॥

ತಾ॥ ಹ್ಯಾಗೆ ಕಬ್ಬಿನ ಜಳೆಯು ಕೊನೆಯಿಂದ ಮೊದಲಿನವರೆಗೂ ಗೆಣ್ಣುಗೆಣ್ಣಿಗೂ ರಸವು ಹೆಚ್ಚುವದೊ ಹಾಗೆ ಸುಜ್ಜನರ ಸ್ನೇಹವು ಹೆಚ್ಚುತ್ತಿರುವದು. ದುಷ್ಟರ ಸ್ನೇಹವು ದಿನೂ ಕ್ರಮವಾಗಿ ಮೊದಲಿಗಿಂತಲೂ ಕಮ್ಮಿಯಾಗುತ್ತಿರುವದು.

ಶ್ಲೋ॥ ಶೋಕಾರಾತಿಪರಿತ್ರಾಣಂ ಪ್ರೀತಿವಿಸ್ರಂಭಭಾಜನಂ ।
ಕೇನ ರತ್ನಮಿದಂ ಸೃಷ್ಟಂ ಮಿತ್ರಮಿತ್ಯಕ್ಷರದ್ವಯಂ ॥

ತಾ॥ ದುಃಖವನ್ನೂ ಶತ್ರುಗಳನ್ನೂ ಹೋಗಲಾಡಿಸುವ ವಿಶ್ವಾಸಕ್ಕೆ ನೆಲೆಯಾಗಿರುವ (ಮಿತ್ರ) ಎಂಬ ರತ್ನಪ್ರಾಯವಾದ ಎರಡಕ್ಷರಗಳನ್ನು ಯಾರು ಸೃಷ್ಟಿಸಿದರೋ ?

ಗ॥ ರಾಜಾಪ್ಯೇತಲ್ಲೀಲಾದೇವೀವಚನಮಾಕರ್ಣ್ಯ ಪ್ರಾಹ ದೇವಿ ಕೇನಾಪಿತ್ವ
ಮುಖ್ಯದಾಯಿ ಕಾಳಿದಾಸೋ ದಾಸೀವೇಷೇಣಾಂತಃಪುರಂ ತೊಸಾದ್ಯದೇ
ವ್ಯಾಸಹಗಮತ ಇತಿ ॥

ತಾ॥ ರಾಯನು ಈ ಲೀಲಾದೇವಿಯ ಮಾತನ್ನು ಕೇಳಿ ಹೇಳಿದ್ದೇನೆಂದರೆ, ಎಲೌ ದೇವಿಯೇ ಕಾಳಿದಾಸನು ಲೀಲಾವತಿಯೊಡನೆ ಅಂತಃಪುರದಲ್ಲಿ

ರವಿಸುತ್ತಿದ್ದನೆಂದು ಯಾರೊ ಹೇಳಿದರೆಂದನು.

ಗ॥ ಮಯಾಚೈತದ್ವ್ಯಾಪಾರಜಿಜ್ಞಾಸಯಾಕಷ್ಟಪ್ರವ್ಯಾಜೇನಾಯುಂ ಭವತೀಚ ವೀಕ್ಷಿತೌ ತತಸ್ಸವಿನಾಪವರ್ತ್ತಿನ್ಯಾಮಪಿತ್ವಯ್ಯುತ್ತರಾರ್ಧ ಮಿತ್ಥಂ ದ್ಯಾಹ । ತಚ್ಛ್ರುತ್ವಾ ಕರ್ಣ್ಯಾತ್ವಯಾ ಪಿಕ್ಕತೋಹಾಸಕಿ । ಇತ್ಯೇತತ್ಸರ್ವ ಮೇತಸ್ಯ ಬ್ರಾಹ್ಮಣಸ್ಯ ವೃತ್ತಾಂತಂ ಜ್ಞಾತ್ವಾನನ್ನತೀರುಜ್ಞಾ । ಮಾಯಾದೇಶಾನ್ನಿಸ್ಸಾರಿತಃ ತ್ವಾಂಚ ನದಾಕ್ಷಿಣ್ಯೇನ ಹನ್ಮೀತಿ । ತತಃಹಾಸಸರಾದೇವಿ ಚವು ತ್ಕೃತಾಪ್ರಾಹ । ಶಿಷ್ಯಂಕಂದೇವ ಅಹ ನೋವಧನ್ಯಾ । ಯಸ್ಯಾಸ್ತ್ವಂ ಪ್ರತಿರೀದೃಶಃ ಯುತ್ಪಯಾಭುಕ್ತ್ತಶೀಲಾಯಾಃ ಸುಮುಮನಃ ಕಥಮನ್ಯತ್ರಗಚ್ಛತಿ । ಯತ್ರಃ ಸರ್ವ್ಯಕಾಮಿನೀ ಭಿರಪಿಕಾಂತೋಪಭೋಗೇ ಸ್ಮರ್ತಿಷ್ಯೋಪಿ ಅಹಹ ದೇವತ್ಯಂ ಯುವಿನಾಂ ಪತೀಮಪತೀಂನಾ ಅಕೃತ್ವಾಪ್ತುರಿಷ್ಯಾಮೀತಿ ॥

ತಾ॥ ಅದನ್ನು ಕೇಳಿ ನಾನು ಆ ಸಂಗತಿಯನ್ನು ತಿಳಿಯಬೇಕೆಂದು ಜ್ವರ ಬಂದವನಂತೆ ನಟಿಸಿ ನಿನ್ನನ್ನೂ ಅವನನ್ನೂ ಪರೀಕ್ಷಿಸಿದೆನು. ನೀನು ಹತ್ತಿರದಲ್ಲಿಯೇ ಇದ್ದರೂ ಅವನು ಉತ್ತರಾರ್ಧವನ್ನು ಹಾಗೆ ಹೇಳಿದನು. ಅದನ್ನು ಕೇಳಿ ನೀನೂ ನಕ್ಕಪಳಾದಿ ಇದನ್ನೆಲ್ಲಾ ತಿಳಿದು ಆ ನನು ಬ್ರಾಹ್ಮಣನೆಂದು ಕೊಲ್ಲದೆ ದೇಶದಿಂದ ಹೊರಡಿಸಿದೆನು. ನಿಂನಮೇಲಿನ ದಯೆಯಿಂದ ನಿಂನಂನು ಕೊಲ್ಲಿಸಲಿಲ್ಲವು ಯೆನಲು ಆಕೆಯು ನಕ್ಕು ಆಶ್ಚರ್ಯಪಟ್ಟು ನಾನೇ ಧನ್ಯಳು. ನಿಂನೊಡನೆ ಸುಖಿಸುತ್ತಿರುವ ನಂನ ಮನಸ್ಸು ಹೇಗೆ ಮತ್ತೊಬ್ಬರಂನು ಬಯಸೀತು, ಯಲ್ಲಾ ಹೆಂಗಸರಿಗೂ ತಮ್ಮ ಗಂಡಂದಿರ ಸಂಭೋಗವೇ ಮುಖ್ಯವಾಗಿರುವುದು ಸ್ವಾಮಿಯೇ ನಾನು ಪತಿವ್ರತೆಯೂ ಅಲ್ಲದೆ ವ್ಯಭಿಚಾರಿಣಿಯೂ ದೃಷ್ಟಪಡಿಸಿದ್ದರೆ ನಾನು ಖಂಡಿತನಾಗಿ ಸಾಯುವೆನೆಂದು ಹೇಳಿದಳು.

ಗ॥ ತತೋರಾಜಾಪಿಪ್ರಿಯೇ ಸತ್ಯಂತಥ ಪ್ರೀತಿಸ್ಯಾಸುಯುವಾಸ । ತಸ್ಮಿಂಲೋಹಗೋಳಕಂ ಕಾರಯಿತ್ವಾ ಧನುಷ್ಯಸಜ್ಯಾಚಕ್ರೇ । ತತೋದೇವೀಸ್ನಾತ್ವಾ ನಿಜಪಾತಿವ್ರತ್ಯಾನಲೇನ ದೇದೀಪ್ಯಮಾನಾ ಸುಕುಮಾರಗಾತ್ರಿ ಸೂರ್ಯ್ಯಮಾಲೋಕ್ಯಪ್ರಾಹ ಜಗಚ್ಚಕ್ಷುಸ್ತ್ವಂ ಸರ್ವಸಾಕ್ಷೀ ಸರ್ವಂವೇದ್ಯೈ ॥

ತಾ॥ ತರುವಾಯ ರಾಯನು ನಿಶ್ಚಂನು ನ್ಯಾಯವಾಗಿ ಪರೀಕ್ಷಿಸುವೆನೆಂದು ಕಬ್ಬಿಣದ ಗುಂಡನ್ನು ಕಾಯಿಸಿ ಧನುಸ್ಸಿನಲ್ಲಿ ಬಾಣ ಸಂಧಾನ ಮಾಡಲು ಆಕೆಯು ತನ್ನ ಪಾತಿವ್ರತ್ಯದ ಕಾಂತಿಯಿಂದ ಪ್ರಕಾಶಿಸುತ್ತಾ ಸ್ನಾನ

ಪಾದ್ದಿ ಮಡಿಯುಟ್ಟು ಪೂರ್ವದಿಗೆದುರಾಗಿ ನಿಂತು ಕೈಮುಗಿದು ಎಲ್ಲವನ್ನೂ ತಿಳಿದ ಎಲ್ಲಕ್ಕೂ ಕಾರಣಭೂತನಾದ ಸೂರ್ಯನೇ.

ಶ್ಲೋ॥ ಜಾಗ್ರತಿಸ್ವಪ್ನಕಾಲೇಚ ಸುಷುಪ್ತ್ಯಾಮಪಿಮೇಪತಿಃ ।
ಭೋಜಏವಪರಂನಾನ್ಯೋ ಮುಚ್ಯತೇಭಾಷಿತೋಪಿನ ॥
ಇತ್ಯುಕ್ತ್ವಾದಿವ್ಯತ್ರಯಂಚಕ್ರೇ.

ತಾ॥ ನಿದ್ರಿಸುವಾಗಲೂ ಎಚ್ಚರಿಕೆಯಿಂದಿರುವಾಗಲೂ ಸ್ವಪ್ನದಲ್ಲೂ ಕೂಡ ನನಗೆ ಭೋಜನೇ ಗಂಡನು ಮತ್ತೊಬ್ಬರನ್ನು ಮನಸ್ಸಿನಿಂದಲೂ ಭಾವಿಸಿಲ್ಲವೆಂದು ಆ ಕಾದ ಕಬ್ಬಿಣವನ್ನು ಕೈಯ್ಯಲ್ಲಿ ಮೂರುಸಲ ಇಟ್ಟು ಕೊಂಡಳು.

ಗ॥ ತತಶ್ಚಾದ್ಭುತಯಸ್ಮಾದಂತಃಪುರೇ ಲೀಲಾವತ್ಯಾಂ ಲಜ್ಜಾನತಶಿರಾಃ ಸ್ವಪತ್ನೀಃ ಪಶ್ಚಾತ್ತಾಪಾತುರೋ ದೇವಿ ಕ್ಷಮಸ್ವ ಪಾಪಿಷ್ಠಂ ಮಾಂ ಕಿಂವದಾಮೀತಿ ಕ್ಷಮಯಿತ್ವಾ ಸಾ ಸರಾಜಾ ಚ ತದಾಪ್ರಭೃತಿ ನಸಿದ್ರಾತಿ ನಚ ಭುಂಕ್ತೇ ನಕೇನಚಿದ್ವಕ್ತಿ ಕೇವಲಮುದ್ವಿಗ್ನಮನಾಃ ಸ್ಥಿತ್ವಾ ದಿವಾನಿಶಂ ಪ್ರವಿಲಪತಿ। ಕಿನ್ನಾಮ ಮಮ ಲಜ್ಜಾ ಕಿನ್ನಾಮ ದಾಕ್ಷಿಣ್ಯಂ । ಕ್ವ ಗಾಂಭೀರ್ಯಂ । ಹಾಹಾಕವೇ ಕವಿಕೋಟಿಮುಕುಟಮಣೇ ಕಾಳಿದಾಸ ಮಮಪ್ರಾಣ ಸಮ ಹಾ ಮೂರ್ಖೇಣ ಕಿಮಶ್ರಾವ್ಯಂ ಶ್ರಾವಿತೋಸಿ ಅವಾಚ್ಯಮುಕ್ತೋಸೀ ಪ್ರಸುಪ್ತ ಇವ ಗ್ರಹಗ್ರಸ್ತ ಇವ ಮಾಯಾವಿಧ್ವಸ್ತ ಇವ ಪಪಾತ ತತಃ ಪ್ರಿಯಾ ಕರಕಮಲಸಿಕ್ತ ಜಲಸಂಜಾತ ಸಂಜ್ಞಃ ಕಥಮುಷಿತಾಮೇವ ಪ್ರಿಯಾಂ ವೀಕ್ಷ್ಯ ಸ್ವಾತ್ಮನಿಂದಾಪರಃ ಪರಮಾತಿಷ್ಠತ್ ॥

ತಾ॥ ಆವೇಳೆ ರಾಜನು ಲೀಲಾವತಿಯನ್ನು ಅಂತಃಪುರದಲ್ಲಿ ಸಮಾಧಾನಮಾಡುತ್ತಾ ನಾಚಿಕೆಯುಳ್ಳವನಾಗಿ ಅನುತಾಪಪಟ್ಟು ಎಲೈ ದೇವಿಯೆ ಪಾಪಿಷ್ಠನಾದ ನನ್ನನ್ನು ಕ್ಷಮಿಸು ಎಂದು ಬೇಡಿಕೊಂಡು ಅದುಮೊದಲ್ಗೊಂಡು ಯಾರೊಡನೆಯೂ ಮಾತನಾಡದೆ ರಾತ್ರಿ ಹಗಲು ದುಃಖಪಡುತ್ತಾ ತನಗೆ ತಾನೆ ನನಗೆ ನಾಚಿಕೆಯೆಂದರೇನು, ನನಗೆ ದಾಕ್ಷಿಣ್ಯವೆಲ್ಲಿಯದು, ಗಾಂಭೀರ್ಯವೆಲ್ಲಿಬಂತು ಎಂದು ಪ್ರಲಾಪಿಸುತ್ತಾ ಎಲಾ ಕವಿಗಳ ಕಿರೀಟಪ್ರಾಯನಾದ ಕಾಳಿದಾಸನೇ ನನ್ನ ಪ್ರಾಣಗಳಿಗೆ ಸಮಾನನಾದವನೇ ಮೂರ್ಖನಾದ ನನ್ನ ತಿಳುವಳಿಕೆಗೇನು ತಿಳಿಸೆ ಆಡಬಾರದ್ದನ್ನಾಡಿದೆ ಎಂದು ನಿದ್ರಿಸುವನಂತೆಯೆ ಪಿಶಾಚ ಹಿಡಿದವನಂತೆಯೂ ಮಾಯೆಗೊಳಗಾದವನಂತೆ ಕೆಳಕ್ಕೆ ಬಿದ್ದು ಹೋದನು. ಆಗ ದೇವಿಯು ತನ್ನ ಕರಕಮಲಗಳಿಂದ ತಣ್ಣೀರನು

ತಪ್ಪಲು ಮೂರ್ಛೆಯಿಂದೆದ್ದು ಅವಳನ್ನೇ ನೋಡುತ್ತಾ ಮಂಕು ಹಿಡಿದವ ನಂತೆ ಇರುತ್ತಿದ್ದನು.

ಗ॥ ತತಶ್ಚ ನಿಶಾಥಹೀನೇವ ನಿಶಾ । ದಿನಕರಹೀನೇವ ದಿನಶ್ರೀರ್ವಿಯೋಗಿನೀ ವಮಹೇಂದ್ರರಹಿತೇವ ಸುಧರ್ಮ್ಮಾ ನಭಾತಿ ಭೋಜಭೂಪಾಲಸಭಾ ರಹಿತಾ ಕಾಳಿದಾಸೇನ ತದಾಪ್ರಭೃತಿ ನಕಸ್ಯಾಪಿ ಚಮತ್ಕೃತಿಕಾವ್ಯಂ । ನ ಕೋಽಪಿ ವಿನೋದವಚೋವಕ್ತಿ

ತಾ॥ ಬಳಿಕ ಭೋಜರಾಯನ ಸಭೆಯು ಚಂದ್ರನಿಲ್ಲದ ರಾತ್ರಿಯಂತೆಯೂ, ಸೂರ್ಯನಿಲ್ಲದ ಹಗಲಿನಂತೆಯೂ, ವಿರಕ್ತಳಾದ ಹೆಂಗಸಿನಂತೆಯೂ, ಇಂದ್ರನಿಲ್ಲದಿರುವ ಸುಧರ್ಮ ಎಂಬ ಸಭೆಯಂತೆಯೂ ಇದ್ದಿದ್ದಲ್ಲದೆ ಯಾರ ಬಾಯಿಯಲ್ಲಿಯೂ ಸವಿಯಾದ ನವಾದ ಕವಿತ್ವವೇ ಹೊರಡುತ್ತಿರಲಿಲ್ಲ. ಸರಸ ಚಮತ್ಕಾರವಾದ ಮಾತುಗಳನ್ನಾಡುವವರೇ ಇರಲಿಲ್ಲಾ.

ಗ॥ ತತ್ರಗತೇಷುಕೇಷು ಚಿದ್ದಿನೇಷು ಕದಾಚಿದ್ರಾಜಾ ಪೂರ್ಣೇಂದು ಮಂಡಲಂ ವಿಲೋಕ್ಯ ಪುರಸ್ಥ್ಸಲೀಲಾದೇವಿಮುಖೇಂದುಂಚವೀಕ್ಷ್ಯಪ್ರಾಹ॥

ಶ್ಲೋ॥ ತುಲಿತಾಅಭೋರುರಾಇಗ್ರ್ಯ ಸೋಮಮುಖಚಂದಸಖಿವಿಹಾಯೋ । ಕಾ ತ್ರಚಪೂರ್ಣೇಪಿಚಂದ್ರನ ಪಿನೇತ್ರವಿಳಾಸಾಃಕವಾಮಾಚೋವಿಲಸಿತಂ॥

ತಾ॥ ತರುವಾಯ ಕೆಲವು ದಿನಗಳಾದಮೇಲೆ ಒಂದು ದಿನ ದೊರೆಯು ಪೂರ್ಣಚಂದ್ರನನ್ನು ನೋಡುತ್ತಾ ಎದುರಾಗಿರುವ ಲೀಲಾದೇವಿಯ ಮುಖ ಚಂದ್ರನನ್ನು ನೋಡಿ ಆಕಾಶದಲ್ಲಿರುವ ಪೂರ್ಣಚಂದ್ರನು ಈಕೆಯ ಮುಖ ಚಂದ್ರನ ಸಾದೃಶ್ಯಕ್ಕೆ ಯೋಗ್ಯನಾಗಿದ್ದಾನೆ. ಎಂದು ಹೇಳಿದನು.

ಗ॥ ಪ್ರಾತಸ್ತೋಕ್ತಿ ತತಃ ಪ್ರತೃಪ್ಯಥಿನ್ಯಾ ಧಾಯಸಭಾಂಪ್ರಾಪ್ಯರಾಜಾವಿದ್ವ ದ್ವರಾನ್ಪ್ರಾಹ ಅಹಿ ಕವಯಃ ಇಯಂಸಮಸ್ಯಾಪೂರ್ಯತಾಂ ।

ತಾ॥ ಬಳಿಕ ಪ್ರಾತಃಕಾಲದಲ್ಲಿದ್ದು ಕರ್ಮಗಳನ್ನು ನೆರವೇರಿಸಿ ಸಭೆ ಗೆ ಬಂದು ದೊರೆ ವಿದ್ವಾಂಸರನ್ನು ಕುರಿತು ಎಲೈ ಕವಿಗಳಿರಾ ಈ ಸಮ ಸ್ಯೆಯನ್ನು ಪೂರ್ತಿಮಾಡೆಂದನು.

ತುಳತಂ॥ ಇಯಂಚೇತ್ಸಮಸ್ಯಾನ ಪೂರ್ವತೇಭವದ್ಭಿಃ ಮದ್ದೇಶೇನ ಸ್ಥಾತವ್ಯಮಿತಿ ॥

ತಾ॥ ಈ ಸಮಸ್ಯೆಯನ್ನು ಪೂರ್ತಿ ಮಾಡದಿದ್ದರೆ ನೀವು ನನ್ನ ದೇಶ ಬಿಟ್ಟು ಹೋಗತಕ್ಕದು ಎನ್ನಲಾಗಿ ಆ ಕವಿಗಳೆಲ್ಲರೂ ಭಯಗ್ರಸ್ತರಾಗಿ ಅದರ ಅರ್ಥವನ್ನು ಎಷ್ಟು ವಿಚಾರಿಸಿದರೂ ತೋರಲೇಯಿಲ್ಲ.

ಗ॥ ತತೋಭೀತಾಸ್ತೇ ಕವಯಃ ಸ್ವಾನಿಗೃಹಾಣಿಜಗ್ಮುಃ ಚಿರಂವಿಚಾರ್ಯಾಪಿ ತೇಪ್ಯರ್ಥೇ ಕಸ್ಯಚಿನ್ನಾರ್ಥಸಂಗತಿಸ್ಫುರತಿ ತತಸ್ತೈಃ ಸರ್ವೈರ್ಮಿಳಿತ್ವಾ ಬಾಣಃ ಪ್ರೇಷಿತಃ ತತಸ್ಸಭಾಂಡಾಗಾರಸ್ಯ ಅಹಂ ರಾಜಸ್ಥಾನಂ ದೇವ ಸರ್ವೈರ್ವಿಪ್ರೈರ್ದ್ವಾರಿ ರಹಂ ಪ್ರೇಷಿತಃ ಅಷ್ಟೌದಿನಾನಿ ಸರಾಸನವಧಿಂ ಅಭಿಧೇಹಿ ನಸಮನೋಪಿ ಪೂರ್ವ ಇದಪ್ಯಂತಿತೇನ ಚೇದ್ದೇಶಾನ್ನಿರ್ಗಚ್ಛಾಮ ಇತಿ ॥

ತಾ॥ ಬಳಿಕ ಆ ಕವಿಗಳೆಲ್ಲರೂ ಭಯಪಟ್ಟು ತಮ್ಮ ತಮ್ಮ ಮನೆಗಳಿಗೆ ತೆರಳಿ ಬಹಳವಾಗಿ ಯೋಚಿಸಿದಾಗ್ಯೂ ಆ ಶ್ಲೋಕಾರ್ಥವು ಸರಿಯಾಗಿ ತಿಳಿಯದಿರಲು, ಎಲ್ಲರೂ ಒಗ್ಗಟ್ಟಾಗಿ ಬಾಣನನ್ನು ಸಭೆಗೆ ಕಳುಹಲು, ಆತನು ಎಲೆ ದೊರೆಯೇ ಎಲ್ಲರೂ ನನ್ನನ್ನಿಲ್ಲಿ ಕಳುಹಿಸಿರುವರು. ಎಂಟು ದಿನಗಳು ವಾಯಿದೆ ಕೊಟ್ಟರೆ ಸಮಸ್ಯಾಪೂರಣ ಮಾಡುವೆವು. ಇಲ್ಲದಿದ್ದರೆ ನಿನ್ನ ದೇಶವನ್ನು ಬಿಟ್ಟು ತೆರಳುವೆವೆಂದು ಹೇಳಿದನು.

ರಾಜಾಪ್ಯಸ್ತ್ವಿತ್ಯಾಹ ॥ ದೊರೆಯು ಹಾಗೆಯಾಗಲೆಂದನು.

ಗ॥ ತತೋಬಾಣಃ ತೇಷಾಂ ವಿಜ್ಞಾಪ್ಯರಾಜಸಂದೇಶಂ ಸ್ವಗೃಹಮಗಾತ್ ॥

ತಾ॥ ಬಳಿಕ ಬಾಣನು ರಾಜನಪ್ಪಣೆಯನ್ನು ಅವರೆಲ್ಲರಿಗೂ ತಿಳುಹಿಸಿ ತಾನು ಮನೆಗೆ ತೆರಳಿದನು.

ಗ॥ ತತೋಷ್ಟೌದಿವಸಾಃ ಅತೀತಾಃ ಅಷ್ಟಮದಿನರಾತ್ರೌ ಮಿಳಿತೇಷು ತೇಷು ಕವಿಷು ಬಾಣಃ ಪ್ರಾಹ ಅಹೋ ತಾರುಣ್ಯಮದೇನ ರಾಜಸನ್ಮಾನಮದೇನ ಕಿಂಚಿದ್ವಿದ್ಯಾಮದೇನ ಕಾಳಿದಾಸೋ ನಿಸ್ಸಾರಿತೋಭವತ್ ಸಹಿ ಭವಂತಸ್ಸರ್ವ ಏವ ಕವಯಃ ವಿಷಮೇ ಸಮಾಗತೇ ತು ಸಹಕಾರಕಃ ಕವಿಃ ಇತಃ ಪರಂ ಸ್ವಾರ್ಥ್ಯ ಇದಾನೀಂ ಕಿಂನಾಮ ಮಹತ್ತ್ವಮಾಸೀತ್ ಸ್ಥಿತಸ್ತಸ್ಮಿನ್ಕಥಮಿಯಮಸ್ಮಾಕಂ ಭವೇತ್ ತನ್ನಿಸ್ಸಾರಣೇನ ಬುದ್ಧಿಃ ಕೃತಾ ಸಾ ಭವದ್ಭಿರೇವ ಅನುಭೂಯತೇ ॥

ತಾ॥ ಬಳಿಕ ಎಂಟನೇದಿನ ರಾತ್ರಿಯಲ್ಲಿ ಕವಿಗಳೆಲ್ಲರೂ ಸೇರಲು ಅವರಲ್ಲಿ ಬಾಣನೆಂಬುವನು ಹೇಳುತ್ತಾನೆ. ಅಯ್ಯಾ ನಾವು ಯೌವನ ಮದದಿಂಲೂ, ರಾಜಸನ್ಮಾನದ ಹೆಮ್ಮೆಯಿಂದಲೂ, ಸ್ವಲ್ಪ ವಿದ್ಯಾಗರ್ವದಿಂದಲೂ ಕಾಳಿದಾಸನನ್ನು ಹೊರಡಿಸಿದೆವು. ಆದರೆ ಸರಿಯಾಗಿ ನಡೆಯುತ್ತಿದ್ದರೇನೆ ನಾವೆಲ್ಲರೂ ಕವಿಗಳು ಏನಾದರೂ ಒಂದು ಕಷ್ಟ ಬಂದರೆ ಆ ಕಾಳಿದಾಸನೊಬ್ಬನು ದವಾತ್ರ ಕವಿಯು ಹೀಗಿರುವಲ್ಲಿ ಅವನನ್ನು ಹೊರಡಿಸಿದ್ದರಿಂದ ಏನು ಸುಹತ್ಪ್ರಂಟಾಯಿತು, ಅವನೊಬ್ಬನಿದ್ದಿದ್ದರೆ ನಮಗೆ ಈ ಗತಿ ಬರುತಿತ್ತೇ ? ಆವ

ನನ್ನು ಹೊರಡಿಸಿದ ಫಲವನ್ನು ಈಗ ಅನುಭವಿಸಿರಿ ಎಂದನು.

ಶ್ಲೋ॥ ಸಾಮಾನ್ಯವಿಪ್ರದ್ವೇಷೇ ಚ ಕುಲನಾಶೋ ಭವೇತ್ಕಿಲ ॥
ಉಮಾರೂಪಸ್ಯ ವಿದ್ವೇಷೇ ನಾಶಃ ಕವಿಕುಲಸ್ಯ ಹಿ ॥

ತಾ॥ ಸಾಧಾರಣವಾಗಿ ಬ್ರಾಹ್ಮಣನನ್ನು ದ್ವೇಷಿಸಿದರೆ ಕುಲಕ್ಕೆ ನಾಶ ಉಂಟಾಗುತ್ತದೆ. ಹೀಗಿರಲು ದೇವೀಸ್ವರೂಪನಾದ ಕಾಳಿದಾಸನನ್ನು ದ್ವೇಷಿಸಿದ್ದರಿಂದ ಕವಿಕುಲಕ್ಕೇನೆ ನಾಶ ಉಂಟಾಗಿದೆ.

ಗ॥ ತತ್ರ ಸರ್ವೇ ಗಾಢಂ ಕಲಹಾಯಂತೇ ಸ್ಮ ಮಯೂರಾದಯಸ್ತು ತತ್ರಸ್ಥೇ ಸರ್ವಾನ್ ಕಲಹಾನ್ನಿವಾರ್ಯ ಸದ್ಯೋ ಬ್ರೂಹುಃ ಅದ್ಯೈವಾವಧಿಃ ಪೂರ್ಣಃ ಕಾಳಿದಾಸಮಂತರೇಣ ಕಸ್ಯಾಪಿ ತತ್ಸಾಮರ್ಥ್ಯಮಸ್ತಿ ಸಮಸ್ಯಾಪೂರಣೇ ॥

ತಾ॥ ಹೀಗೆಂದು ಎಲ್ಲರೂ ಕೂಗಾಡಿಕೊಂಡು ಜಗಳವಾಡುತ್ತಿದ್ದರು ಹೀಗಿರಲು ಮಯೂರನೇ ಮೊದಲಾದವರು ಆ ಗಡಬಡಿಯನ್ನು ನಿಲ್ಲಿಸಿ ಜಗಳವು ಹಾಗಿರಲಿ, ನಮ್ಮ ವಾಯಿದೆಯು ಮುಗಿಯುತ್ತಾ ಬಂತು, ಕಾಳಿದಾಸನನ್ನು ಬಿಟ್ಟರೆ ಈ ಸಮಸ್ಯಾಪೂರ್ತಿ ಮಾಡಲು ಯಾರಿಂದ ಆಗುವುದು ಎಂದರಿದುಕೊಂಡು,

ಶ್ಲೋ॥ ಸಂಗ್ರಾಮೇಷು ಭಟೇಂದ್ರಾಣಾಂ ಕವೀನಾಂ ಕವಿಮಂಡಲೇ ।
ದೀಪ್ತಿರ್ವಾ ದೀಪ್ತಿಹಾನಿರ್ವಾ ಮುಹೂರ್ತೇನೈವ ಜಾಯತೇ ॥

ತಾ॥ ಯುದ್ಧದಲ್ಲಿ ಭಟರಿಗೂ, ಕವಿಗಳ ಗುಂಪಿನಲ್ಲಿ ಕವೀಶ್ವರರಿಗೂ ಮಾನವಾದರೂ ಅಪಮಾನವಾದರೂ ಒಂದೇ ಕ್ಷಣದಲ್ಲಿ ಗೊತ್ತಾಗುವುದು ನೋಡು ಹೇಳ.

ಗ॥ ಯದಿ ರೋಚತೇ ತರ್ಹ್ಯದ್ಯೈವ ಮಧ್ಯರಾತ್ರೇ ಪ್ರಮುದಿತ ಚಂದ್ರಮಸಿ ನಿಗೂಢಮೇವ ಗಚ್ಛಾಮಃ ಸಂಪತ್ತಿಸಂಭಾರಸಮಾದಾಯ ಯದಿ ನ ಗಮ್ಯತೇ ಶ್ವೋ ರಾಜಸೇವಕಾ ಅಸ್ಮಾನ್ ಬಲಾನ್ನಿಸ್ಸಾರಯಂತಿ ತದಾ ದೇಹಮಾತ್ರೇಣೈವ ಅಸ್ಮಾಭಿರ್ಗಂತವ್ಯಂ ತದದ್ಯ ಮಧ್ಯರಾತ್ರೇ ಗಮಿಷ್ಯಾಮಃ ಇತಿ ಸರ್ವೇ ನಿಶ್ಚಿತ್ಯ ಗೃಹಮಾಗತ್ಯ ಬಲೀವರ್ದಯೋಕ್ತೇಷು ಶಕಟೇಷು ಸಂಭಾರಮಾರೋಪ್ಯ ರಾತ್ರಾವೇವ ನಿಷ್ಕ್ರಾಂತಾಃ ॥

ತಾ॥ ನಿಮಗೆಲ್ಲರಿಗೂ ಸಮಾಧಾನವಾಗಿದ್ದರೆ ಈದಿನವೇ ಅರ್ಧರಾತ್ರಿಯಾದಮೇಲೆ ಚಂದ್ರೋದಯವಾಗುತಲೂ ಗುಟ್ಟಾಗಿ ಹೊರಟುಹೋಗೋಣ ನಮ್ಮ ಮುಖ್ಯ ಸಾಮಾನುಗಳನ್ನು ತೆಗೆದುಕೊಂಡು ಹೋಗದಿದ್ದರೆ ನಾಳೆ ರಾಜನ ಕಡೆಯ ಆಳುಗಳು ಬಂದು ಬಲಾತ್ಕಾರವಾಗಿ ಹೊರಡಿಸುವರು. ಆಗ

ನಾವು ಸಾಮಾನುಗಳನ್ನೆಲ್ಲಾ ಬಿಟ್ಟು ಬರೀ ಕೈಲಿ ಹೋಗಬೇಕಾದೀತು, ಆದ್ದರಿಂದ ಈ ಹೊತ್ತೇ ಅರ್ಧರಾತ್ರಿಯಲ್ಲಿ ಎದ್ದು ಹೊರಡೋಣವೆಂದು ನಿಶ್ಚಯಿಸಿಕೊಂಡು ಮನೆಗಳಿಗೆ ಹೋಗಿ ಗಾಡಿಗಳನ್ನು ತಂದು ಸಾಮಾನುಗಳನ್ನು ಏರಿಕೊಂಡು ರಾತ್ರಿಯೇ ಹೊರಟುಹೋದರು.

ಗ॥ ತತಃಕಾಳಿದಾಸಃ ತಸ್ಯಾಮೇವ ರಾತ್ರ್ಯಾಂ ವಿಲಾಸವತೀಸದನೋದ್ಯಾನಸ್ಯ
ಪಾರ್ಶ್ವೇ ಗಚ್ಛತಾಂ ತೇಷಾಂ ಗಂಗರವಂ ಶ್ರುತ್ವಾ ವೇಶ್ಯಾಚೇಟೀಂ ಪ್ರೇಷಿತವಾನ್ ಪ್ರಿ
ಯೇ ಪಶ್ಯ ಕ ಏತೇ ಗಚ್ಛಂತಿ ಬ್ರಾಹ್ಮಣಾ ಇವ ತತಸ್ಸಾಗಮೇತ್ಯ ಸರ್ವಾನ
ಪಶ್ಯತ್ ಉಪೇತ್ಯ ಚೇಟಿಕಾ ಕಾಳಿದಾಸಂ ಪ್ರಾಹ ॥

ತಾ॥ ಬಳಿಕ ಕಾಳಿದಾಸನು ಅದೇ ರಾತ್ರಿಯಲ್ಲಿ ತನ್ನ ಸೂಳೆಯ ಉದ್ಯಾನವನದಲ್ಲಿ ಇರುವವನಾಗಿ ದಾರಿಯಲ್ಲಿ ಹೋಗುತ್ತಿದ್ದ ಅವರುಗಳ ಶಬ್ದವನ್ನು ಕೇಳಿ, ಒಬ್ಬ ದಾಸಿಯನ್ನು ಕರೆದು ಅವರ್ಯಾರು ಹೋಗುತ್ತಿರುವವರು ನೋಡಿದರೆ ಬ್ರಾಹ್ಮಣರಂತಿರುವುದು, ನೋಡು ಎಲ್ಲಿಗೆ ಹೋಗುವರು ಎಂದು ಕಳುಹಿಸಲು ಅವಳು ಹೋಗಿ ಅವರನ್ನು ನೋಡಿಬಂದು ಹೇಳುತ್ತಾಳೆ.

ಶ್ಲೋ॥ ಏಕೇನ ರಾಜಹಂಸೇನ ಯಾಶೋಭಾ ಸರಸೋ ಭವೇತ್ ।
ನಸಾ ಬಕಸಹಸ್ರೇಣ ಪರಿತಸ್ತೀರವಾಸಿನಾ ॥

ತಾ॥ ಒಂದು ರಾಜಹಂಸದಿಂದ ಸರೋವರವು ಹೇಗೆ ಪ್ರಕಾಶಿಸುವುದೋ ಅದರಂತೆ ಸಾವಿರ ಕೊಕ್ಕರೆಗಳಿದ್ದರೂ ಪ್ರಕಾಶಿಸುವದೇನು.

ಗ॥ ಸರ್ವೇಬಾಣಮಯೂರಪ್ರಮುಖಾಃ ಪಲಾಯಂತೇ ಸಾತ್ರಸಭಾಯಾ ಇತಿ ॥

ತಾ॥ ಬಾಣ ಮಯೂರನೇ ಮೊದಲಾದ ಕವಿಗಳೆಲ್ಲರೂ ಓಡಿಹೋಗುತ್ತಿರುವರು, ಎಂದು ಹೇಳಿದಳು.

ಗ॥ ಕಾಳಿದಾಸಃ ಪ್ರಿಯೇ ವೇಗೇನ ವಸನಾನಿ ಭೂಷಣಾನಿ ಯಥಾ ಪಲಾ
ಯಮಾನಾನ್ ವಿಪ್ರಾನ್ ರಕ್ಷಾಮಿ ॥

ತಾ॥ ಎಲಾ ಸ್ನೇಹಿತಳೇ ಬೇಗ ಮನೆಗೆ ಹೋಗಿ ನನ್ನ ಬಟ್ಟೆಗಳನ್ನು ತೆಗೆದುಕೊಂಡು ಬಾ ಆ ಬ್ರಾಹ್ಮಣರನ್ನು ಕಾಪಾಡುವೆನೆಂದು ಕಾಳಿದಾಸನು ಹೇಳಿದನು.

ಶ್ಲೋ॥ ಕಿಂ ಪೌರುಷಂ ರಕ್ಷತಿ ಯೋ ನ ವಾರ್ತಾನ್ ಕಿಂ ವಾ ಧನಂ ನಾರ್ಥಿಜನಾಯ
ನಸ್ಯಾತ್ । ಸಾ ಕಿಂ ಕ್ರಿಯಾ ಯಾ ನ ಹಿತಾನುಬದ್ಧಾ ಕಿಂ ಜೀವಿತಂ ಸಾಧು
ವಿರೋಧಿ ಯದ್ವೈ ॥

ತಾ॥ ದುಃಖಿತರನ್ನು ಕಾಪಾಡದ ಪೌರುಷದಿಂದಲೇನು ಪ್ರಯೋಜನ.

ಯಾಚಕರಿಗೆ ಕೊಡದ ಹಣದಿಂದಲೂ ಪ್ರಯೋಜನವಿಲ್ಲವು. ಮತ್ತೊಬ್ಬರಿಗೆ ಉಪಕಾರವಿಲ್ಲದ ಕೆಲಸವುತಾನೇ ಯಾತಕ್ಕೆ ? ಸಜ್ಜನರನ್ನು ದ್ವೇಷಿಸಿ, ಬದುಕಿರುವುದುತಾನೆ ಏನು ಪ್ರಯೋಜನವು.

ಗ॥ ತತಸ್ಸಕಾಳಿದಾಸಶ್ಚಾರಣವೇಷಂ ವಿಧಾಯ ಖಡ್ಗಮುದ್ವಹನ್ಕೋಶಾರ್ಧಮುತ್ತರಂಗತ್ವಾ ತೇಷಾಮಭಿಮುಖಮಾಗತ್ಯ ಸರ್ವಾನ್ನಿರೂಪ್ಯ ಜಯೇತ್ಯಾಶೀರ್ವಚನಮುದೀರ್ಯ ಪಪ್ರಚ್ಛ ಚಾರಣಭಾಷಯಾ ಅಹೋ ವಿದ್ವಾಂಸೋ ಯೂಯಂ ಭೋಜ ಸಭಾಯಾಂ ಸಂಪ್ರಾಪ್ತ ಮುಕ್ತಾಶಯಾಃ ಬೃಹಸ್ಪತಯ ಇವ ಸಂಭಾವ್ಯಮಾನಾ ಜಿಗಮಿಷವೋ ಭಾಸಂತೇ ಕಚ್ಚಿತ್ಕಿಲಂ ವೋ ರಾಜಾ ಚ ಕುಶಲೀ ಅಸ್ಮಾಭಿಃ ಕಾಶೀದೇಶಾದಾಗಮ್ಯತೇ ಭೋಜದರ್ಶನಾಯ ವಿತ್ತಸ್ಪೃಹಯಾ ॥

ತಾ॥ ಬಳಿಕ ಕಾಳಿದಾಸನು ಚಾರಣವೇಷವನ್ನು ತಾಳಿ ಕತ್ತಿಯನ್ನು ಧರಿಸಿಕೊಂಡು ಅರ್ಧ ಹರದಾರಿ ಮುಂದಕ್ಕೆ ಹೋಗಿ ಅವರಿಗೆದುರಾಗಿ ಬಂದು ಆ ಕವಿಗಳನ್ನು ಕುರಿತು ಜಯಶಬ್ದ ಪುರಸ್ಸರವಾಗಿ ಆಶೀರ್ವಾದ ಮಾಡಿ ಅವರ ಮತ್ತು ಭೋಜನ ಕ್ಷೇಮವನ್ನು ಕೇಳಿ ಎಲೈ ವಿದ್ವಾಂಸರುದ್ರರೇ ಭೋಜಸಭೆಯಲ್ಲಿ ಮನ್ನಣೆಯುಳ್ಳವರೇ ನೀವ್ರುಗಳಲ್ಲಿ ಹೋಗುವಿರಿ ನಾನು ಕಾಶೀ ದೇಶದಿಂದ ನಿಮ್ಮ ರಾಜನನ್ನು ಕಾಣಲು ದ್ರವ್ಯಾಭಿಲಾಷೆಯಿಂದ ಬಂದಿರುವೆನು ಅಂದನು.

ಗ॥ ತತಃ ಪರಿಹಾಸಂ ಕುರ್ವಂತಃ ಸರ್ವೇ ನಿಷ್ಕ್ರಾಂತಾಃ ತತಸ್ತೇಷು ಕಶ್ಚಿತ್ಕವಿರವಾಕರ್ಣ್ಯ ತಂಚ ಚಾರಣಂ ಮನ್ಯಮಾನಃ ಕುತೂಹಲೇನ ವಿಪಶ್ಚಿತ್ಪ್ರಪ್ರಚ್ಛ ಅಹೋ ಚಾರಣ ಶ್ರೂಯತಾಂ ತ್ವಯಾ ಪಶ್ಚಾದ್ದಶಿಶ್ಲೋಕ್ಯತ್ರ ಪಠ ಅತೋ ಮಾಸಾ ಅದ್ಯಾಪ್ಯೋಚ್ಯತೇ ರಾಜ್ಞಾ ಸರ್ವೇಭ್ಯೋ ವಿದ್ವದ್ಭ್ಯಃ ಪೂರಣಾಯ ಸಮಸ್ಯೈಕಾ ತತ್ಪೂರಣಾಶಕ್ತ್ಯಾ ಕುಪಿತೇನ ರಾಜ್ಞಾ ದೇಶಾಂತರೇಭ್ಯೋ ಜಿಗಮಿಷವ ಏತೇ ನಿಷ್ಕ್ರಾಸಾಃ ॥

ತಾ॥ ತರುವಾಯ ಚಾರಣನ ಮಾತುಗಳಿಗೆ ಹಾಸ್ಯ ಮಾಡುತ್ತಾ ಹೊರಟುಹೋಗುತ್ತಿರಲವರಲ್ಲಿ ಒಬ್ಬನು ಅವನ ಮಾತನ್ನು ಕೇಳಿ ಅವನನ್ನು ಚಾರಣನೆಂದು ತಿಳಿದು ಹೇಳಿದ್ದೇನಂದರೆ ಎಲೈ ಚಾರಣನೇ ಕೇಳು ನಿನಗೆ ಆವೇಳೆ ತಿಳಿಯಲೀ ತಿಳಿಯುತ್ತದೆ ಆದಾಗ್ಯೂ ನಾನೀಗಲೇ ತಿಳಿಸುವೆನು ರಾಜನು ನಮ್ಮೆಲ್ಲರಿಗೂ ಒಂದು ಸಮಸ್ಯೆಯನ್ನು ಕೊಟ್ಟಿರಲಾಗಿ ನಾವುಗಳು ಅದನ್ನು ಪೂರ್ತಿ ಮಾಡದಿರಲು ರಾಜನು ಕೋಪಗೊಂಡು ನಮ್ಮನ್ನು

ದೇಶಬಿಟ್ಟು ಹೊರಡಿಸಿದನು ಎಂದನು.

ಗ॥ ಚಾರಣಃರಾಜ್ಞಾಃಕಾವ್ಯಸಮಸ್ಯಾಂ ಶ್ರುತ್ವಾ ತತ್ರ ಪತ್ರೇನ್ಯವಿಶಿಷ್ಟಾತ್

ತಾ॥ ಚಾರಣನು ರಾಜನೀಸು ಸಮಸ್ಯೆ ಕೊಟ್ಟನೆಂದು ಕೇಳಿ ಇದಕ್ಕೆ ಆಸಮಸ್ಯೆ ಓದಿದನು.

ಗ॥ ಚಾರಣಃ ಪತ್ರತ್ರಾಪ್ಯೇಸಗೂರಾರ್ಧಂ । ಪತ್ರತ್ರ್ಯೂರ್ಧ್ವಭಾಗಮಂಡಲಂವೀಕ್ಷ್ಯರಾಜ್ಞಾಪಾತ್ರ ಪತ್ರಸ್ಯೋತ್ತರಾರ್ಧಮಿದಂ ಭವಿತುಮರ್ಹತಿ ॥

ತಾ॥ ಚಾರಣನು ಇದು ಹೇಳುತ್ತಾನೆ. ಇದರೊಳಗಣ ಅರ್ಥವು ಸ್ಪಷ್ಟವಾಗಿಯೇ ಇರುತ್ತದೆ. ಧೊರೆಯು ಪೂರ್ಣ ಚಂದ್ರನನ್ನು ನೋಡಿ ಈ ಸಮಸ್ಯೆ ಕೊಟ್ಟಿರುವನು ಅದರ ಉತ್ತರಾರ್ಧವಿದು ಇರಬಹುದು.

ಶ್ಲೋ॥ ಅಣುಇವಿಬಿಂಬ್ಯಯುಮಿಕಂ ಹ ಅಣಂಕಿಃ ತಸ್ಯಪ್ರತಿಪದಿಚಂದ್ರಮಸಃ ।
ಸರ್ವೇಶ್ರುತ್ವಾಚಮತ್ಕೃತಾಃ ॥

ತಾ॥ ಎಂದು ಹೇಳಲು ಎಲ್ಲರೂ ಆಶ್ಚರ್ಯಪಟ್ಟರು.

ಗ॥ ತತಸ್ಸರ್ವೇವಿಚಾರಯಂತಿಸ್ಮ ಅಹೋಇಯಂ ಸಾಕ್ಷಾತ್ಸರಸ್ವತೀಪುಂರೂಪೇಣ ಸಹೇಶಾಂಅಸ್ಮಾಕಂ ಪರಿತ್ರಾಣಾಯಾಗತಾನಾಯಂ ಭವಿತುಮರ್ಹತಿಮನುಷ್ಯಃ ಅದ್ಯಾಪಿಕಿಮಪಿಕೇನಾಪಿ ನಜ್ಞಾಯತೇತತಶ್ಶೀಘ್ರಂ ಸ್ವಗೃಹಮಾಸಾದ್ಯ ಶಕಟೇಭ್ಯೋಭಾರಮುತ್ತಾರ್ಯ ಮಾತ್ರಸ್ಸರ್ವೈರಪಿರಾಜಭವನಂಗಂತವ್ಯಂ ನಚೇಚ್ಚಾರಣಏವ ನಿವೇದಯಿಷ್ಯತಿ ತತಸ್ತೇಗಚ್ಛಂತು ಇತಿಭೋಜಮಿತ್ವಾಕಥಾಚಕ್ರುಃ ॥

ತಾ॥ ಬಳಿಕ ಎಲ್ಲರೂ ಆಶ್ಚರ್ಯದಿಂದ ಈತನು ಮನುಷ್ಯನಲ್ಲವು ಸಾಕ್ಷಾತ್ ಸರಸ್ವತಿಯೇ ಪುರುಷರೂಪವನ್ನು ತಾಳಿ ನಮ್ಮನ್ನು ಕಾಪಾಡಲು ಬಂದಿರಬಹುದು, ಇದುವರೆಗೂ ಯಾರಿಗೂ ಈ ವಿಷಯ ಗೊತ್ತಾಗಲಿಲ್ಲವು. ಆದ್ದರಿಂದ ನಾವುಗಳು ಬೇಗ ಮನೆಗೆ ಹೋಗಿ ಗಾಡಿಗಳಿಂದ ಸಾಮಾನುಗಳನ್ನು ಇಳಿಸಿ ರಾಜಸಭೆಗೆ ಹೋಗಬೇಕು. ಹಾಗೆ ನಾವು ಹೋಗದಿದ್ದರೆ ಈ ಚಾರಣನೇ ಉತ್ತರವನ್ನು ಹೇಳಿಯಾನೆಂದು ಹಿಂದಕ್ಕೆ ಹೊರಡಲು ಸಿದ್ಧರಾದರು.

ಗ॥ ತತೋರಾಜಸಭಾಂಗತ್ವಾ ರಾಜಾನಮಾಲೋಕ್ಯ ಸ್ವಸ್ತೀತ್ಯುಕ್ತ್ವಾವಿವಿಶುಃ ತತಃಬಾಣಃಪ್ರಾಹದೇವ ಸರ್ವಜ್ಞೇನಯುತ್ತ್ವಯಾಪಶ್ಯತೇ ತದೀಶ್ವರಪದನೇವಕೇನಿನಾವರಾಕಾಃಉದರಂಭರಯಃ ದ್ವಿಜಾಃಕಿಂಭಾಷ್ಯಸ್ಯತೇ॥

ತಾ॥ ಬಳಿಕ ರಾಜಸಭೆಯನ್ನು ಹೊಕ್ಕು ರಾಜನನ್ನು ನೋಡಿ ಸ್ವಂ

ಗಳವಾಗಲೆಂದು ಕೂತುಕೊಂಡ ಮಂತ್ರಿ ಬಾಣಕವಿಯು ದೊರೆಯನ್ನು ಕುರಿತು ಸ್ವಾಮಿ ಸರ್ವಜ್ಞರಾದ ತಮ್ಮಿಂದ ಹೇಳಲ್ಪಟ್ಟ ವಿಷಯವು ದೇವರಿಗೇ ಗೊತ್ತು ನಮ್ಮಂಥಾ ಹೊಟ್ಟೆ ಹೊರಿಕೊಳ್ಳುವವರಿಗೆ ಯೇನೂ ತಿಳಿದೀತು ? ಆದಾಗ್ಯೂ ಹೇಳುವೆವು.

ಶ್ಲೋ॥ ತುಲನಾಮನ್ವನುಸರತಿಗ್ಲೌ ಸ್ತನ್ಮುಖಚಂದ್ರಸ್ಯಚಕ್ಷೀತಸ್ಯಾಃ ।
ಅಸ್ತಿತಿವರ್ಣ್ಯತೇಕಥಮನುಕೃತಿ ಸ್ತಸ್ಯಪ್ರತಿಪಚ್ಚಂದ್ರಸ್ಯ ॥

ತಾ॥ ಚಂದ್ರನು ಈ ನನ್ನ ಪ್ರಿಯಳ ಮುಖಚಂದ್ರನ ಸಾಮ್ಯವನ್ನು ಹೊಂದುತ್ತಿರುವನೆಂಬು ಸಮಸ್ಯೆಯು ಆದರೆ ಪಾಡ್ಯಮಿಯಲ್ಲಿ ಆಚಂದ್ರಸಾಮ್ಯವು ಹೇಗೆ ಆದೀತೆಂದು ಪೂರಣವು.

ಗ॥ ರಾಜಾಯಥಾವ್ಯವಸಿತ ಸ್ಯಾಭಿಪ್ರಾಯಂವಿಜ್ಞಾತ್ವಾಸರ್ವಥಾ ಕಾಳಿದಾಸಃ ಅತ್ಯರ್ಥವಿವಸಪ್ರಸ್ಯ ಸ್ಥಾನೇನಿವಸತಿ ಉಪಾಯೈಶ್ಚಸರ್ವಂಸಾಧ್ಯಂ ತತೋಬಾಣಾಯಯುಕ್ತಾನಾಂ ಪಂಚದಶಲಕ್ಷಾಣಿಪ್ರಾದಾತ್ ಸಂತೋಷಮಿಮೇಸ್ವೈನವಿದ್ವದ್ವೃಂದಂ ಸ್ವಂಸ್ವಂಸದನಂ ಪ್ರತಿಪ್ರೇಷಿತ॥

ತಾ॥ ದೊರೆಯು ನಿಶ್ಚಯವಾದ ತನ್ನ ಸಮಸ್ಯಾಭಿಪ್ರಾಯವನ್ನು ತಿಳಿದು ಖಂಡಿತವಾಗಿ ಸ್ವಲ್ಪ ದೂರದಲ್ಲಿಯೇ ಕಾಳಿದಾಸನು ವಾಸಮಾಡುತ್ತಿರುವನೆಂದೂನೂ ಉಪಾಯದಿಂದ ಎಲ್ಲವೂ ಸುಲಭವೆಂದು ತಿಳಿದು ಬಾಣಕವಿಗೆ ಹದಿನೈದುಲಕ್ಷ ಚಿನ್ನದ ನಾಣ್ಯಗಳನ್ನು ಕೊಟ್ಟು ಸಂತೋಷಪಟ್ಟವನಂತೆ ಯೆಲ್ಲಾ ಕವಿಗಳನ್ನೂ ತಮ್ಮ ತಮ್ಮ ಮನೆಗಳಿಗೆ ಕಳುಹಿಸಿಕೊಟ್ಟನು.

ಗ॥ ಗತೇಷುವಿದ್ವನ್ಮಂಡಲೇಷುನೈದ್ವಾರಪಾಲಾಯಾದಿಷ್ಟಂರಾಜ್ಞಾಯದಿ ಕೇಚಿದ್ವಿಜನ್ಮಾನ ಆಯಾಸ್ಯಂತಿ ತದಾಗೃಹಮಧ್ಯಮಾನೇತವ್ಯಾಃ ॥

ತಾ॥ ಆ ಕವಿಗಳೆಲ್ಲರೂ ಹೊರಟುಹೋದಮೇಲೆ ರಾಜನು ದ್ವಾರಪಾಲಕನನ್ನು ಕುರಿತು ಇನ್ಯಾರಾದರೂ ಬ್ರಾಹ್ಮಣರು ಬಂದರೆ ಮನೆಯೊಳಕ್ಕೆ ಕರೆತರಬೇಕೆಂದು ಅಪ್ಪಣೆ ಮಾಡಿದನು.

ಗ॥ ತತಸ್ಸರ್ವಮಪಿವಿತ್ತಮಾದಾಯ ಸ್ವಗೃಹಂಗತೇಬಾಣೇಕೇಚಿತ್ಪಂಡಿತಾಃ ಊಚುಃ ಅಹೋಬಾಣೇನಾನುಚಿತಂ ವ್ಯವಹಾರಿಯದಸ್ಮಾಸ್ವಪಿ ಅಸ್ಮಾಭಿಸ್ಸಹನಗತಾ ನಿಷ್ಕ್ರಾಂತೋಪಿ ಸರ್ವಮೇವಧನಂ ಗೃಹೀತ್ವಾಗಸ್ಸ ಭೋಜಸ್ಯ ಬಾಣಸ್ವರೂಪಂ ಜ್ಞಾಪಯಿಷ್ಯಾಮಃ ಯಥಾಕೋಪಿ ನಾನ್ಯಾಯಂ ವಿಧತ್ತೇವಿದ್ವತ್ಸು ತತಸ್ತೇ ರಾಜಾನಮಾಸಾದ್ಯವದಂತಿ

ರಾಜಾ ತತ್ರಾಗತ್ಯಾಹ ಏತತ್ಸ್ವರೂಪಂ ಜ್ಞಾತಮೇವ ಭವದ್ಭಿಃಯಥಾರ್ಥತಯಾ ವಾಚ್ಯಂ ತತಸ್ತೈಸ್ಸರ್ವಮೇವ ನಿವೇದಿತಂ ತತಃರಾಜಾ ವಿಚಾರಿತವಾನ್ ಸರ್ವಥಾ ಕಾಳಿದಾಸಶ್ಚಾರಣವೇಷೇಣ ಮದ್ಭಯಾನ್ಮದೀಯ ನಗರಂ ಅಧ್ಯಾಸ್ತೆ.

ತಾ॥ ಬಳಿಕ ಬಾಣಕವಿಯು ಎಲ್ಲಾ ಹಣವನ್ನೂ ತೆಗೆದುಕೊಂಡು ತನ್ನ ಮನೆಗೆ ಹೊರಟುಹೋಗಲು ಪಂಡಿತರೆಲ್ಲರೂ ಬಾಣನು ಅನ್ಯಾಯ ಮಾಡಿದನು ಅವನೂ ನಮ್ಮೊಡನೆ ಪಟ್ಟಣವಂನು ಬಿಟ್ಟು ಓಡಿಬಂದಿದ್ದರೂ ಹಣವಂನೆಲ್ಲಾ ತೆಗೆದುಕೊಂಡು ಹೋಗಿರುವನು. ಇವನ ಸ್ವರೂಪವಂನು ಧೊರೆಗೆ ತಿಳಿಸಬೇಕೆಂದು ರಾಜನೆಡೆಗೆ ಬಂದು ಕಾಣಲಾಗಿ ದೊರೆಯು ಇವರಂನು ನೋಡಿ ನಿಜವನ್ನು ಹೇಳಬೇಕೆಂನಲಾಗಿ ನಡೆದದ್ದಂನೆಲ್ಲಾ ತಿಳಿಸಿದರು ಆಗ ಧೊರೆಯು ಕಾಳಿದಾಸನು ನಂನ ಭಯದಿಂದ ನಗರವಂನು ಬಿಟ್ಟು ಚಾರಣವೇಷದಿಂದಿರುವನೆಂದು ಅಂದುಕೊಂಡನು.

ಗ॥ ತತಶ್ಚಾಂಗರಕ್ಷಕಾನಾದಿದೇಶ ಅಹೋ ಆನೀಯಂತಾಂ ತುರಂಗಾಃ ತತಃ ಕ್ರೀಡೋದ್ಯಾನಪ್ರಯಾಣಪಟಹಧ್ವನಿರಭವತ್ ಅಹೋ ಇದಾನೀಂ ರಾಜಾ ದೇವಪೂಜಾವ್ಯಗ್ರ ಇತಿ ಶುಶ್ರುಮಃ ಪುನರಿದಾನೀಂ ಕ್ರೀಡೋದ್ಯಾನಂ ಗಮಿಷ್ಯತೀತಿ ವ್ಯಾಕುಲಾಸ್ಸರ್ವೇ ಭಟಾಃ ಸಂಭೂಯ ಪಶ್ಚಾದ್ಯಾಂತಿ ತತೋ ರಾಜಾ ತೈರ್ವಿದ್ವದ್ಭಿಸ್ಸಹ ಅಶ್ವಮಾರುಹ್ಯ ರಾತ್ರೌ ಯತ್ರ ಚಾರಣಪ್ರಸಂಗಃ ಸಮಜನಿ ತತ್ಪ್ರದೇಶಂ ಪ್ರಾಪ್ತಃ । ತತೋ ರಾಜಾ ಚರತಾಂ ಚೋರಾಣಾಂ ಪದಜ್ಞಾನ ನಿಪುಣಾನಾಹೂಯ ಪ್ರಾಹ ಅನೇನ ವರ್ತ್ಮನಾ ನಾಃ ಕೋಪಿ ರಾತ್ರೌ ನಿರ್ಗತಃ ತಸ್ಯ ಪದಾನಿ ಅದ್ಯಾಪಿ ದೃಶ್ಯಂತೇ ತಾನಿ ಪಶ್ಯಂತ್ವಿತಿ ತತೋ ರಾಜಾ ಪ್ರತಿಪಂಡಿತಂ ಲಕ್ಷಂ ದತ್ವಾ ತಾನ್ ಪ್ರೇಷಯಿತ್ವಾ ಚ ಸ್ವಭವನಮಗಾತ್ ॥

ತಾ॥ ಬಳಿಕ ರಾಯನು ಭಟರಿಗೆ ಕುದುರೆಗಳನ್ನು ಕರೆತರುವಂತೆ ಆಜ್ಞಾಪಿಸಲು ಆಗ ಕ್ರೀಡೋದ್ಯಾನ ಪ್ರಯಾಣ ಸೂಚಕವಾದ ಭೇರೀಧ್ವನಿಯುಂಟಾಯಿತು. ಆಗ ಭಟರೆಲ್ಲರೂ ವ್ಯಾಕುಲಪಡುತ್ತ ಹಿಂದೆ ಬರುತ್ತಿರಲು ಧೊರೆಯು ಕುದುರೆಯನ್ನೇರಿ ಆ ವಿದ್ವಾಂಸರೊಂದಿಗೆ ಆ ಚಾರಣನೊಡನೆ ಯಲ್ಲಿ ಸಂಭಾಷಣೆಯುಂಟಾಯಿತೊ ಆ ಸ್ಥಳಕ್ಕೆ ಬಂದನು. ಆಗ ಧೊರೆಯು ಅಲ್ಲಿ ತಿರುಗಾಡುತ್ತಿದ್ದ ಕಳ್ಳರನ್ನು ಹಿಡಿಯುವಂಥ ಚಾರರನ್ನು ಕರೆದು ಹೇಳಿದ್ದೇನಂದರೆ ಎಲೈ ಚಾರರೇ ರಾತ್ರಿ ಯಾವನೊ ಒಬ್ಬನು ಚಾರಣನು ಈ

ದಾರಿಯಿಂದ ಹೋಗಿರುವನು ಅವನನ್ನು ಪತ್ತೆ ಮಾಡಬೇಕೆಂದು ಹೇಳಿ ಸಂಗಡ ಬಂದಿದ್ದ ವಿದ್ವಾಂಸರಿಗೆ ಒಬ್ಬೊಬ್ಬರಿಗೆ ಒಂದೊಂದು ಲಕ್ಷವನ್ನು ಕೊಟ್ಟು ಕಳುಹಿಸಿದನು. ತಾನು ಅರಮನೆಗೆ ತೆರಳಿದನು.

ಗ॥ ತೇಚ ಪದಜ್ಞಾ ರಾಜಾಜ್ಞಯಾ ಸರ್ವತಶ್ಚರಂತೋಪಿ ತಮನವೇಕ್ಷಮಾಣಾ ವಿಮೂಢಾ ಇವಾಸನ್। ತತಶ್ಚ ಲಂಬಮಾನೇ ಸವಿತರಿ ಕಾಚಿದ್ದಾಸೀ ಮೋಕ್ಷಪದತ್ರಾಣಂ ತ್ರುಟಿತಂ ವಾದಾಯ ಚರ್ಮಕಾರವೇಶ್ಮ ಗಚ್ಛಂತೀಂ ದೃಷ್ಟ್ವಾ ತುಷ್ಟಾ ಇವಾಸನ್ ತತಸ್ತತ್ಪದತ್ರಾಣಂ ತಸ್ಮಾಚ್ಚರ್ಮಕಾರಾತ್ ಕರೇನ್ಯಸ್ತಂ ವೀಕ್ಷ್ಯ ತೈಶ್ಚ ತಸ್ಯಾಃ ಕರೋಸ್ಮಿನ್ ಪೂರ್ಣತರಾದ್ರವ್ಯೇಣ ಪೂರ್ಣೀಕೃತಮುಕ್ತಂ ತದೇವ ಪದಂ ತಸ್ಯೈ ತ್ರಿಜ್ಞಾತ್ವಾ ತಾಂಚ ದಾಸೀಂ ಕ್ರಮೇಣ ವೇಶ್ಯಾಭವನಂ ವಿಶಂತೀಂ ವೀಕ್ಷ್ಯ ತಸ್ಯಾಃ ಮಂದಿರಂ ಪರಿತೋಷಯಾಮಾಸುಃ ತತಶ್ಚ ತೈಃ ಕ್ಷಣೇ ಭೋಜಶ್ರವಣಪಥವಿಷಯಂ ಅಭಿಜ್ಞಾನಂ ವಾರ್ತಾಂ ಪ್ರಾಪಿತಾಃ ॥

ತಾ॥ ಹೆಜ್ಜೆ ಗುರುತುಗಳನ್ನು ಹಿಡಿಯುವವರಲ್ಲಿ ನಿಪುಣರಾದ ಆ ಚಾರರು ದೊರೆಯ ಅಪ್ಪಣೆಯಂತೆ ಅಲ್ಲಲ್ಲಿ ತಿರುಗಾಡುತ್ತಾ ಹುಡುಕಿದಾಗ್ಯೂ ಸಿಕ್ಕದಿರಲು ತುಂಬಾ ಚಿಂತಿಸುತ್ತಿರಲು ಸಾಯಂಕಾಲವಾಗಲು ಒಬ್ಬಾಕೆ ದಾಸಿಯು ಒಂದು ಹರಕು ಜೋಡನ್ನು ಮಾದಿಗನ ಮನೆಗೆ ತೆಗೆದುಕೊಂಡು ಹೋಗುತ್ತಿರುವಳು ಕಂಡು ತಾವೂ ಹಿಂಬಾಲಿಸಿ ಹೋಗಿ ಆ ಜೋಡನ್ನು ತೆಗೆದುಕೊಂಡು ಕಳಕ್ಕೆ ಹಾಕಿ ಆ ಗುರುತನ್ನು ಹಿಡಿದು ಅದರಂತೆ ಇದ್ದ ಹೆಜ್ಜೆ ಗುರುತನ್ನು ಹಿಡಿದು, ಹಾಗೆ ಆ ದಾಸಿಯೊಡನೆ ಹೋಗಿ ಲೀಲಾವತಿ ಮನೆಯೊಳಗಿರುವುದನ್ನು ತಿಳಿದು ಆ ಸಮಾಚಾರವನ್ನು ರಾಯನಿಗೆ ತಿಳಿಸಿದರು.

ಗ॥ ತತೋ ರಾಜಾ ಸಕಾರಸ್ಸ ಮಾತ್ಯೋಪದಾಭ್ಯವೇವ ವಿಲಾಸವತೀ ಭವನಮಗಾತ್

ತಾ॥ ಬಳಿಕ ದೊರೆಯು ಮಂತ್ರಿಗಳೊಡನೆಯೂ ಪಟ್ಟಣಿಗರೊಡನೆಯೂ ಕೂಡಿ ಪಾದಚಾರಿಯಾಗಿಯೇ ವಿಲಾಸವತಿ ಮನೆಗೆ ತೆರಳಿದನು.

ಗ॥ ತತಃ ತಚ್ಛ್ರುತ್ವಾ ವಿಲಾಸವತೀ ಪ್ರಾಹ ಕಾಳಿದಾಸಃ ಪ್ರಿಯೇ ಮತ್ಕೃತೇ ಕಿಂ ಕಷ್ಟಂ ತೇ ಪಶ್ಯ ॥

ತಾ॥ ತರುವಾಯ ಕಾಳಿದಾಸನು ಆ ಸಮಾಚಾರವನ್ನು ತಿಳಿದು ವಿಲಾಸವತಿಯನ್ನು ಕುರಿತು ಎಲೌ ಪ್ರಿಯಳೇ ನನ್ನಿಂದ ನಿನಗೆಷ್ಟು ಕಷ್ಟ

ಹೆಂದು ಅನುತಾಪ ಪಟ್ಟನು. ವಿಲಾಸವತಿ "ಸುಖವೇ"

ಶ್ಲೋ॥ ಉಪಸ್ಥಿತವಿಪ್ಲವಾನಾಂ ಸಮಸ್ತಭಾವಾಃ ಪರಿವರ್ತಯಂತೇ ।
ಆವಾತಿವಾಯೌ ನಹಿತೂಲರಾಶೇಃ ಗಿರೇಶ್ಚ ಕಶ್ಚಿತ್ಪ್ರತಿಭಾತಿ ಭೇದಃ ॥

ತಾ॥ ಮನುಷ್ಯನಿಗೆ ಕಷ್ಟಬಂದ ಕಾಲದಲ್ಲಿ ಎಲ್ಲ ಭಾವಗಳೂ ಅಡಗಿ ಕೊಳ್ಳುತ್ತವೆ. ಗಾಳಿ ಇಲ್ಲವಿದ್ದರೆ ಅಳ್ಳೆಯೂ ಬೆಟ್ಟವೂ ಸಮನಲ್ಲವೆ.

ಶ್ಲೋ॥ ಮಿತ್ರಸ್ವಜನಬಂಧೂನಾಂ ಬುದ್ಧೇರ್ವಿತ್ತಸ್ಯಚಾತ್ಮನಃ ।
ಆಪನ್ನಿಕಷಪಾಷಾಣೇ ಜನೋಜಾನಾತಿಸಾರತಾಂ ॥

ತಾ॥ ಸ್ನೇಹಿತನು ನೆಂಟರು ಬುದ್ಧಿಯು, ಹಣವು ಇವುಗಳನ್ನು ಪರೀಕ್ಷಿಸಬೇಕಾದರೆ ತನಗೆ ಬಂದ ಕಷ್ಟಕಾಲದಲ್ಲಿ ನೋಡಿ ತಿಳುಕೊಳ್ಳಬೇಕು

ಶ್ಲೋ॥ ಅಪ್ರಾರ್ಥಿತಾನಿದುಃಖಾನಿ ಯಥೈವಾಯಾಂತಿದೇಹಿನಃ ।
ಸುಖಾನಿಚತಥಾಮನ್ಯೇ ದೈನ್ಯಮತ್ರಾತಿರಿಚ್ಯತೇ ॥

ತಾ॥ ಅಪೇಕ್ಷಿಸದೇ ಇದ್ದಾಗ್ಯೂ ದುಃಖಗಳು ಹೇಗೆ ಉಂಟಾಗು ವವೊ, ಹಾಗೆಯೇ ಸುಖಗಳೂ ಉಂಟಾಗುತ್ತವೆ.

ಗ॥ ಸುಕವೇರಾಜ್ಞಾ ತ್ವಯಿಪುನಾಜ್ಞಾ ರಾಜ್ಞಾತಿರಸ್ಕೃತಸ್ಯಾಪಿ ಮಯಾಸಹೇ ದಂಪತೀ ಸೇಬ್ಯೇದಂಪ್ರತೀಪಸ್ತ್ವಹಾನ್ನವತಿಷ್ಯತಿ ॥

ತಾ॥ ಎಲೌ ಕವೀಂದ್ರನೇ ಧೊರೆಯು ನಗಾತಿನಿಂದಲಾದರೂ ನಿನ್ನ ನ್ನು ತಿರಸ್ಕರಿಸಿದ ಪಕ್ಷದಲ್ಲಿ ನನ್ನ ಮೊದಲ್ಗೊಂಡು, ಈ ದಾಸಿಯರ ತಂಡ ಹೀನ ಅಗ್ನಿಯಲ್ಲಿ ಬೀಳುತ್ತದೆ. ಯೆಂದು ಹೇಳಲು.

ಗ॥ ಕಾಳಿದಾಸಃ ಪ್ರಿಯೇನ್ಯೈವಂಮಂತವ್ಯಂ ಮಾಂದೃಷ್ಟ್ವೈವ ಕಾಸೀಕ್ರ ತಾಸಕ್ತ್ಯಾಭೋಜಃಪಾದಯೋಃ ಪತಿಷ್ಯತೀತಿ ॥

ತಾ॥ ಯೆಲೌ ಪ್ರಿಯಳೆ ಭೋಜರಾಯನು ನನ್ನನ್ನು ನೋಡುತ್ತಲೂ ಸಂತೋಷ ಹೊಂದಿ ಕಾಲಿಗೆ ಬೀಳುತ್ತಾನೆ, ನೀನು ಬೇರೆ ತಿಳ ಯುಬೇಡ ಯೆಂದನು.

ಗ॥ ತತೋವೇಶ್ಯಾಗೃಹಂ ಪ್ರವಿಶ್ಯಭೋಜಃ ಕಾಳಿದಾಸಂದೃಷ್ಟ್ವಾ ಸಂ ಭ್ರಮತಃಶ್ಲಿಷ್ಯಪಾದಯೋಃ ಪತತಿಸರಾಜಾಪತತಿಚ ॥

ತಾ॥ ಬಳಿಕ ಭೋಜರಾಯನು ವೇಶ್ಯಾಗೃಹವನ್ನೈದಿ ಕಾಳಿದಾಸ ನನ್ನು ನೋಡಿ ಬೇಗ ಅಪ್ಪಿಕೊಂಡು ಕಾಲಿಗೆ ಬಿದ್ದು ಹೇಳುತ್ತಾನೆ.

ಶ್ಲೋ॥ ಗಚ್ಛತಸ್ತಿಷ್ಠತೋವಾಪಿ ಜಾಗ್ರತಸ್ಸ್ವಪತೋಽಪಿವಾ ।
ಮಾಭೂನ್ಮನಃಕದಾಚಿನ್ಮೇ ತ್ವಯಾವಿರಹಿತಂಕವೇ ॥

ತಾ॥ ಯಲೌ ಕವಿಯಾದ ಕಾಳಿದಾಸನೇ ನಾನು ನಡೆಯುತ್ತಿರುವಾಗಲೂ, ನಿಂತಿರುವಾಗಲೂ, ಎದ್ದಿರುವಾಗಲೂ, ನಿದ್ರಿಸುವಾಗಲೂ ನನ್ನ ಮನಸ್ಸು ನಿನ್ನನ್ನಗಲದಿರಲಿ.

ಗ॥ ಕಾಳಿದಾಸಸ್ತಚ್ಛ್ರುತ್ವಾ ವ್ರೀಡಾವನತಾನನಃ ತಿಷ್ಠತಿರಾಜಾಚಕಾಳಿ
ದಾಸಿಮುಖಮುನ್ನಮಯ್ಯ ॥

ತಾ॥ ಕಾಳಿದಾಸನು ಅದನ್ನು ಕೇಳಿ ನಾಚಿಕೆಯಿಂದ ತಲೆಯನ್ನು ಬಗ್ಗಿಸಲು ದೊರೆಯು ಆತನ ಮುಖವನ್ನೆತ್ತಿ ಹೇಳುತ್ತಾನೆ.

ಶ್ಲೋ॥ ಕಾಳಿದಾಸಕಳಾವಾಸ ದಾಸವಚ್ಛಾಲಿತೋಯದಿ ।
ರಾಜಮಾರ್ಗೆವ್ರಜನ್ನತ್ರ ಪರಿ ಷಾಂತತ್ರಕಾತ್ರಪಾ ॥

ತಾ॥ ಶಾಸ್ತ್ರಜ್ಞನಾದ ಕಾಳಿದಾಸನೇ ಸೇವಕನಂತೆ ರಾಜಬೀದಿಯಲ್ಲಿ ಪಾದಚಾರಿಯಾಗಿ ನಾನು ಬರುತ್ತಿರಲು ನಿನಗೆ ಮತ್ತೊಬ್ಬರ ನಾಚಿಕೆಯೆಂದರೇನು.

ಶ್ಲೋ॥ ಧನ್ಯಾಂವಿಲಾಸಿನೀಂಮನ್ಯೇ ಕಾಳಿದಾಸೋಯದೇತಯಾ ।
ನಿಬದ್ಧಸ್ಸ್ವಗುಣೈರೇಷ ಶಕುಂತಾಇವಪಂಜರೆ ॥

ತಾ॥ ಯಾವ ಕಾರಣದಿಂದಲಾದರೋ ಈ ವಿಲಾಸವತಿಯು, ಪಂಜರದೊಳಗಿನ ಪಕ್ಷಿಯನ್ನೊ ಪಾದಿಯಲ್ಲಿ ತನ್ನ ಗುಣಾಧೀನನನ್ನಾಗಿ ಮಾಡಿಕೊಂಡಳೊ ಆದ್ದರಿಂದ ಇವಳೇ ಧನ್ಯಳು ಎಂಬದಾಗಿ.

ಗ॥ ರಾಜಾನೇತ್ರಯೋಃ ಹರ್ಷಾಶ್ರುನಾರ್ಜಯತಿ ಕರಾಭ್ಯಾಂ ಕಾಳಿದಾ
ಸಸ್ಯ ॥

ತಾ॥ ದೊರೆಯು ಕಾಳಿದಾಸನ ಕಣ್ಣೀರನ್ನು ಅಳಿಸಿದನು.

ಗ॥ ತತಃತತ್ಪ್ರಾಪ್ತಿಂ ಪ್ರಸನ್ನೊರಾಜಾಬ್ರಾಹ್ಮಣೇಭ್ಯೋ ಪ್ರತ್ಯೇಕಂ
ಲಕ್ಷಂದದೌ ॥

ತಾ॥ ಬಳಿಕ ರಾಯನು ತಾನು ಪುನಹಾ ಕಾಳಿಸನನ್ನು ಹೊಂದಿದುಕ್ಕಾಗಿ ಬ್ರಾಹ್ಮಣರಿಗೆ ಲಕ್ಷಾಂತರವಾಗಿ ಕೊಟ್ಟನು.

ಗ॥ ನಿಜತುರಗೇಚ ಕಾಳಿದಾಸಮಾರೋಪ್ಯ ಸಪರಿವಾರಃ ನಿಜಗೃಹಂ
ಯಯೌ ॥

ತಾ॥ ತನ್ನ ಕುದುರೆಯಮೇಲೆ ಕಾಳಿದಾಸನನ್ನು ಕೂಡಿಸಿಕೊಂಡು ತನ್ನ ಮನೆಗೆ ಬಂದನು.

ಗ॥ ಕಿಯತ್ಯಪಿಕಾಲೆ ಅತಿಕ್ರಾಂತೇರಾಜಾ ಕದಾಚಿತ್ಸಂಧ್ಯಾಮಾಲೋ

ಕ್ಯ ಪ್ರಾಹ ||

ತಾ|| ಹೀಗೆ ಕೆಲವು ದಿನಗಳಾದಮೇಲೊಂದಾನೊಂದುದಿನ ಸಂಧ್ಯಾ ಕಾಲವನ್ನು ನೋಡಿ ಧೊರೆಯು ಹೇಳುತ್ತಾನೆ.

ಶ್ಲೋ|| ಪರಿಪತತಿಪಯೋನಿಧೌಪತಂಗಃ ||

ತಾ|| ಸಮುದ್ರದಲ್ಲಿ ಸೂರ್ಯನು ಬೀಳುತ್ತಿದ್ಧಾನೆಂದು ಹೇಳಿದನು.

ತತೋಬಾಣಪ್ರಾಹ ||

ಬಳಿಕ ಬಾಣನು ಹೇಳಿದ್ದೇನಂದರೆ—

ಶ್ಲೋ|| ಸರಸಿರುಹಾಮುದರೇಷು ಮತ್ತಭೃಂಗಃ ||

ಅಂದರೆ ಕಮಲಗಳ ಹೊಟ್ಟೆಗಳಲ್ಲಿ ಮಾಧಿಸಿದ ತುಂಬಿಗಳು ಬೀಳುತ್ತಿವೆ ಯೆಂದನು.

ಬಳಿಕ ಕಾಳಿದಾಸನು ಹೇಳುತ್ತಾನೆ.

ಶ್ಲೋ|| ಯುವತಿಜನೇಷುಶನೈಶ್ಶನೈರನಂಗಃ||ಪ್ರಾಯದ ಹುಡಿಗಿಯರಲ್ಲಿ ಮ ನ್ಮಥನು ಮೆಲ್ಲಮೆಲ್ಲಗೆ ಬೀಳುತ್ತಾನೆಂದನು.

ಗ|| ತುಷ್ಟೋರಾಜಾಲಕ್ಷಂಲಕ್ಷಂದದೌಚತುರ್ಥ ಚರಣಸ್ಯ ಲಕ್ಷದ್ವಯಂ ದದೌ ||

ತಾ|| ಧೊರೆಯು ಸಂತೋಷಪಟ್ಟು ಒಂದೊಂದು ಪಾದಕ್ಕೂ ಲಕ್ಷ ಪ್ರಕಾರವಾಗಿ ಕೊಟ್ಟು ಕೊನೇ ಚರಣಕ್ಕೆ ಎರಡು ಲಕ್ಷಗಳನ್ನು ಕೊಟ್ಟನು.

ಗ|| ಕದಾಚಿದ್ರಾಜಾ ಬಹಿರುದ್ಯಾನ ಮಧ್ಯೇಮಾರ್ಗಂ ಪ್ರತ್ಯಾಗಚ್ಛಂತಂ ಕಮಪಿ ವಿಪ್ರಂದದರ್ಶತಸ್ಯಕರೇಚರ್ಮಸುಯಂ ಕಮಂಡಲುಂ ವೀಕ್ಷ್ಯ ತಂಚಾತಿದರಿದ್ರಂ ಜ್ಞಾತ್ವಾಮುಖಶ್ರಿಯಾ ವಿರಾಜಮಾನಂ ಚಾವಲೋ ಕ್ಯತುರಂಗಂ ತದಗ್ರೇನಿಧಾಯಾಹ ವಿಪ್ರಚರ್ಮಪಾತ್ರಂ ಕಿಮರ್ಥಂ ಪಾಣೌಧಾರಯಸೀತಿಸಚವಿಪ್ರಃನೂನಂಮುಖಶೋಭಯಾವ್ಯದೂಕ್ಯಾ ಚಭೋಜ ಇತಿವಿಚಾರ್ಯಾಹ | ದೇವವದಾನ್ಯ ಶಿರೋಮಣೌಭೋಜೇಪೃ ಥ್ವೀಂ ಶಾಸತಿಲೋಹತಾಮ್ರಾ ಭಾವಸ್ಸಮಜ ನಿತೇನಚರ್ಮಮಯಂ ಪಾತ್ರಂವಹಾಮೀತಿ ||

ತಾ|| ಧೊರೆಯಾದ ಭೋಜರಾಯನು ಹೊರಗೆ ಸಂಚಾರ ಮಾಡುತ್ತಿ ರಲು ಒಂದು ವನದ ನಡುದಾರಿಯಲ್ಲಿ ಒಬ್ಬ ಬ್ರಾಂಹ್ಮಣನನ್ನು ನೋಡಿ ಅವ ನುಕೈಯಲ್ಲಿ ತೊಗಲಿನ ಕಮಂಡಲುವನ್ನು ಹಿಡಿದಿರುವದರಿಂದ ಅವನು ಬಹಳ ಬಡವನೆಂದೆಣಿಸಿ ಆದರೂ ತೇಜಸ್ವಿಯಾಗಿದ್ದದ್ದರಿಂದ ಅವನಬಳಿಯಲ್ಲಿ ಕುದು

ರೆಯನ್ನು ನಿಲ್ಲಿಸಿ ಎಲೈ ಬ್ರಾಹ್ಮಣನೆ ಯಾಕೆ ಚರ್ಮದ ಕಮಂಡಲುವನ್ನು ಧರಿಸಿದ್ದೀ ಎನಲಾ ಬ್ರಾಹ್ಮಣನು ಆತನತೇಜಸ್ಸನ್ನೂ ವೃಷಮಧುರವಾದ ಮಾತನ್ನು ಕೇಳಿ ಈತನೇ ಭೋಜನೆಂದು ತಿಳಿದು ಅಯ್ಯಾ ಧರ್ಮಿಷ್ಠನಾದ ಭೋಜರಾಯನು ಭೂಮಿಯನ್ನಾಳುತ್ತಿರಲು ಲೋಹ, ತಾಮ್ರ ಇವುಗಳಿಗೆ ಕ್ಷಾಮವಾಗಿದೆ ಆದ್ದರಿಂದ ಚರ್ಮದ ಪಾತ್ರೆಯನ್ನು ಮಾಡಿಕೊಂಡಿರುವೆನೆಂದನು.

ಗ॥ ರಾಜಾ॥ ನೃಪತಿಶಾಸತಿ ಲೋಹ ತಾಮ್ರಾಭಾವೇಕಾರಣೇ ತ್ವಂ ಕಿಮಿತ್ಯಾ ಹ ॥

ತಾ॥ ಆಗ ದೊರೆಯು ಭೋಜನು ರಾಜ್ಯವಾಳಲು ಲೋಹ ತಾಮ್ರಗಳೆಲ್ಲ ಇಲ್ಲದಿರುವುದಕ್ಕೆ ಕಾರಣವೇನೆಂದು ಕೇಳಲು ಬ್ರಾಹ್ಮಣನು ಹೇಳುತ್ತಾನೆ.

ಶ್ಲೋ॥ ಅಸ್ಯ ಶ್ರೀಭೋಜರಾಜಸ್ಯ ದ್ವಯಮೇವಸುದುರ್ಲಭಂ ।
ಶತ್ರೂಣಾಂ ಶೃಂಖಲೈರ್ಲೋಹಂ ತಾಮ್ರಂ ಶಾಸನಪತ್ರಕೈಃ ॥

ತಾ॥ ಭೋಜರಾಯನು ಶತ್ರುಗಳಿಗೆ ವಿಶೇಷವಾಗಿ ಬೇಡಿ ಹಾಕುತ್ತಿರುವದ್ದರಿಂದ ಲೋಹಕ್ಕೂ ದಾನಶಾಸನಗಳನ್ನು ತಾಮ್ರದಲ್ಲಿ ಬರೆದು ವಿಶೇಷವಾಗಿ ಖರ್ಚು ಮಾಡುವದ್ದರಿಂದ ತಾಮ್ರಕ್ಕೂ ಕ್ಷಾಮವಾಗಿದೆ ಎಂದನು.

ಗ॥ ತತಸ್ತುಷ್ಟೋ ರಾಜಾ ಪ್ರತ್ಯಕ್ಷರ ಲಕ್ಷಂ ದದೌ ॥

ತಾ॥ ಬಳಿಕ ರಾಜನು ಸಂತುಷ್ಟನಾಗಿ ಅಕ್ಷರಕ್ಕೆ ಲಕ್ಷ ಕೊಟ್ಟನು

ಗ॥ ಕದಾಚಿದ್ದ್ವಾರಪಾಲಃ ಪ್ರಾಹ ದೇವ ದೂರದೇಶಾದಾಗತಃ ಕಶ್ಚಿದ್ವಿದ್ವಾನ್ ದ್ವಾರಿ ತಿಷ್ಠತಿ ತತ್ಪತ್ನೀ ಚ ತತ್ಪುತ್ರಸ್ಸಪತ್ನೀಕಃ ಅತಃ ಅತ್ರಿಪವಿತ್ರಂ ಕುಟುಂಬಂ ದ್ವಾರಿ ತಿಷ್ಠತೀತಿ

ತಾ॥ ದೊರೆಯು ಉದ್ಯಾನ ವನದಿಂದ ಮನೆಗೆ ಬಂದು ವಿನೋದದಿಂದ ಸಭೆಯಲ್ಲಿರುತಿರಲೊಂದು ದಿನ ದ್ವಾರಪಾಲಕನು ಬಂದು ಸ್ವಾಮಿ ಬಹಳ ದೂರದೇಶದಿಂದ ಬಂದು ಒಬ್ಬ ಬ್ರಾಹ್ಮಣನು ಪತ್ನೀ, ಪುತ್ರ, ಸೊಸೆಯರೊಂದಿಗೆ ಬಾಗಿಲಲ್ಲಿ ನಿಂತಿರುವನು ಎಂದು ಹೇಳಿದನು.

ಗ॥ ರಾಜಾ॥ ಅಹೋ ಗರೀಯಸೀ ಶಾರದಾಪ್ರಸಾದಪದ್ಧತಿಃ ॥

ತಾ॥ ರಾಯನು ಸರಸ್ವತಿಯ ಅನುಗ್ರಹ ಮಾರ್ಗವು ದೊಡ್ಡದೆಂದು ಆಶ್ಚರ್ಯಪಡುತ್ತಿದ್ದನು.

ಗ॥ ತಸ್ಮಿನ್ನವಸರೆ ಗಜೇಂದ್ರಪಾಲ ಆಗತ್ಯರಾಜಾನಂ ಪ್ರಣಮ್ಯ ಪ್ರಾಹ ।
ಭೋಜೇಂದ್ರ ಸಿಂಹಳದೇಶಾಧೀಶ್ವರೇಣ ಸಪಾದಶತಂ ಗಜೇಂದ್ರಾಃ ಪ್ರೇಷಿತಾಃ ಷೋಡಶ ಸುಹಾಸುಣಯಶ್ಚ ॥

ತಾ॥ ಅದೇ ಸಮಯದಲ್ಲಿಯೇನೆ ಗಜಶಾಲಾಧ್ಯಕ್ಷನು ಬಂದು ಧೊರೆಗೆ ಅಡ್ಡಬಿದ್ದು ಭೋಜೇಂದ್ರನೇ ಸಿಂಹಳದೇಶಾಧಿಪತಿಯು ೨೪ ಆನೆಗಳನ್ನೂ ೧೬ ಮಹಾಮಣಿಗಳನ್ನೂ ಕಳುಹಿಸಿರುವನೆಂದು ಬಿನ್ನವಿಸಿದನು.

ಗ॥ ತತೋಬಾಣಃಪ್ರಾಹ॥ ಶ್ಲೋ॥ ಸ್ಥಾತುಂಕವೀನಾಮಿವ ಕುಂಜರಾಣಾಂ ಸ್ವಮಂದಿರಂವಾನೃಪಮಂದಿರಂವಾ ॥ ಗೃಹೇಗೃಹೇಕಿಂಭಷಕಾ ಇವೈತೇಭವಂತಿ ಭೂಪಾಲವಿಭೂಷಿತಾಂಗಾಃ ॥

ತಾ॥ ಆಗ ಬಾಣನು ಹೇಳುತ್ತಾನೆ ಕವಿಗಳಂತಿರುವ ಆನೆಗಳಿಗೆ ಅರಮನೆ ಮತ್ತು ತಮ್ಮ ಸ್ಥಳವು ವಾಸಕ್ಕೆ ಯೋಗ್ಯವೇ ಹೊರತು ಪ್ರತಿಮನೆಯಲ್ಲಿಯೂ ಸುಲಭವಾಗಿ ನಾಯಿಗಳಂತೆ ಇರಲಾರವು. ಅಂದರೆ ರಾಜನು ರ್‍ಯಾದೆಗೆ ಯೋಗ್ಯವಾದವುಗಳೆಂದರ್ಥವು.

ಗ॥ ತತೊರಾಜಾಗಜಾವಲೋಕನಾಯಬಹಿರ್ಗತ್ ತತಸ್ತಂ ವಿದ್ವತ್ಕುಟುಂಬಂ ವೀಕ್ಷ್ಯಚೋಳಪಂಡಿತೋರಾಜ್ಞಃ ಪ್ರಿಯೊಹಮಿತಿಗರ್ವಂ ದಧಾರ ಯನ್ಮಯಾರಾಜಭವನಮಧ್ಯಂ ಗಮ್ಯತೆವಿದ್ವತ್ಕುಟುಂಬಂತು ದ್ವಾರಪಾಲಜ್ಞಾಪಿತಮಪಿಬಹಿರಾಸ್ತೆ ॥

ತಾ॥ ಬಳಿಕ ಧೊರೆಯು ಆನೆಗಳನ್ನು ನೋಡುವುದಕ್ಕೆ ಹೊರಗೆ ಬಂದು ಆ ವಿದ್ವತ್ಕುಟುಂಬವನ್ನು ನೋಡಿ ಚೋಳಪಂಡಿತನು ತಾನು ರಾಜನ ಪ್ರೀತಿಪಾತ್ರನೆಂದುನ್ನೂ ತಾನು ರಾಜನರಮನೆಯನ್ನು ಪ್ರವೇಶಿಸುವೆನೆಂದುನ್ನೂ ದ್ವಾರಪಾಲಕರಿಂದ ತಿಳಿಸಲ್ಪಟ್ಟರೂಕೂಡ ವಿದ್ವತ್ಕುಟುಂಬವು ಹೊರಗೇ ನಿಂತಿರುವುದೆಂದು ಗರ್ವಪಟ್ಟನು.

ಗ॥ ತತೊರಾಜಾತಚ್ಚೇತಸಿಗರ್ವಂ ವಿದಿತ್ವಾಚೋಳಪಂಡಿತಂ ಸೌಧಾಂಗಣಾನ್ನಿಸ್ಸಾರಿತವಾನ್ ॥

ತಾ॥ ಬಳಿಕ ಧೊರೆಯು ಚೋಳಪಂಡಿತನ ಗರ್ವವನ್ನು ತಿಳಿದು ಅವನನ್ನು ಅರಮನೆಯಿಂದ ಹೊರಗೆ ತಳ್ಳಿಸಿದನು.

ಗ॥ ಕಾಶೀದೇಶವಾಸಿಕೋಪಿ ತಂಡುಲದೇವನಾಮಾರಾಜ್ಞೇ ಸ್ವಸ್ತೀತ್ಯುಕ್ತ್ವಾತಿಷ್ಠತ್ ರಾಜಾಚತಂಪಪ್ರಚ್ಛ ಸುಮತೇಕುತ್ರನಿವಾಸಃ ॥

ತಾ॥ಕಾಶೀವಾಸಿಯಾದ ತಂಡುಲದೇವನೆಂಬೋರ್ವ ಪಂಡಿತನು ಬಂದು ರಾಜನಿಗೆ ಮಂಗಳವಾಗಲೆಂದು ನಿಂತುಕೊಳ್ಳಲಾಗಿ ಧೊರೆಯು ನೀನು ಎಲ್ಲಿ ವಾಸಮಾಡುತ್ತೀಯೆಂದು ಕೇಳಿದನು.

ಕವಿಃ॥ ವರ್ತ್ತತೇಯತ್ರಸಾವಾಣೀ ಕೃಪಾಣೀರಿಕ್ತಶಾಖಿನಃ ।

ಶ್ರೀಮನ್ಮಾಳವಭೂಪಾಲಃ ತತ್ರದೇಶವಸಾಮ್ಯಹಂ ॥

ತಾ॥ ಬಡತನವೆಂಬ ಮರಗಳಿಗೆ ಕೊಡಲಿಯಂತಿರುವ ಭಾಷೆ ಯಾವ ಮಾಳವ ದೇಶದಲ್ಲುಂಟೊ, ಅದರಲ್ಲಿ ವಾಸವಮಾಡುವೆನೆಂದನು.

ಗ॥ ತುಷ್ಟೋರಾಜಾಗಜೇಂದ್ರಸಪ್ತಕಂದದೌ ॥

ತಾ॥ ಧೊರೆಯು ಸಂತೋಷಪಟ್ಟು ಏಳು ಆನೆಗಳನ್ನು ಕೊಟ್ಟನು.

ಗ॥ ತತಃಕೋಪಿವಿದ್ವಾನಾಗತ್ಯಪ್ರಾಹ ॥

ತಾ॥ ಬಳಿಕೊಬ್ಬ ವಿದ್ವಾಂಸನು ಬಂದು ಹೇಳುತ್ತಾನೆ.

ಶ್ಲೋ॥ ತಪಸಸ್ಸಂಪದಃಪ್ರಾಪ್ಯಾಃ ತತ್ತಪೋಪಿನವಿದ್ಯತೆ ।
ಯೇನತ್ವಂಭೊಜಕಲ್ಪದ್ರುದೃಗ್ಗೋಚರಮುಪೈಷ್ಯಸಿ ॥

ತಾ॥ ತಪಸ್ಸುಗಳಿಂದಲೇ ಐಶ್ವರ್ಯಗಳುಂಟಾಗುವವು. ಅಂಥಾ ತಪಸ್ಸು ನನಗೆ ಇರುವದಿಲ್ಲವು. ಯಾವ ಕಾರಣದಿಂದ ಕಲ್ಪವೃಕ್ಷದಂತಿರುವ ನೀನು ಕಣ್ಣಿಗೆ ಕಾಣಿಸುವಿಯೋ ಯೆನಲಾಗಿ ರಾಜಾದಶಗಜೇಂದ್ರಾನ್ದದೌ ಧೊರೆಯು ಹತ್ತು ಆನೆಗಳನ್ನು ಕೊಟ್ಟನು.

ಗ॥ ತತಃಕಶ್ಚಿದ್ಬ್ರಾಹ್ಮಣಪುತ್ರಃ ಭೂಂಭಾರವಂಕುರ್ವಾಣೋ ಭ್ಯೇತಿತ ತಸ್ಸರ್ವೆಸಂಭ್ರಾಂತಾಃ ಕಥಂಭೂಂಭಾರವಂಕರೋಷೀತಿ ರಾಜ್ಞೋದೃಗ್ಗೋಚರಮಾನೀತಂಪೃಷ್ಟಃಪ್ರಾಹ ॥

ತಾ॥ ಬಳಿಕ ಒಬ್ಬ ಬ್ರಾಹ್ಮಣ ಕುಮಾರನು ಭೂಂಭಾರವನ್ನು ಮಾಡುತ್ತಾ ಬರುತ್ತಿರಲು ಯೆಲ್ಲರೂ ಗಾಬರಿ ಪಟ್ಟು ರಾಜನೆದುರಿಗೆ ಕರೆತಂದು ಕೇಳಿದರು ಆಗ ಅವನು ಹೇಳುತ್ತಾನೆ.

ಶ್ಲೋ॥ ದೇವತ್ವದ್ದಾನಪಾಥೋದೌ ದಾರಿದ್ರ್ಯನಿಮಜ್ಜಿತಃ ।
ನಕೋಪಿಹಿಕರಾಲಂಬಂದತ್ತೆಮತ್ತೇಭದಾಯಕಃ ॥

ತಾ॥ ಯೆಲೈ ಮದ್ದಾನೆಗಳನ್ನು ದಾನಮಾಡುವ ಧೊರೆಯೇ ನಿನ್ನ ದಾನಸಮುದ್ರದಲ್ಲಿ ಮುಳಗಿಹೋದ ಬಡತನವನ್ನು ಮೇಲಕ್ಕೆ ಯೆತ್ತುವರಾರೂ ಇಲ್ಲವಲ್ಲಾ ಅಂದದಕ್ಕೆ ರಾಯನು ಆ ಬಾಲಕನಿಗೆ ಮೂಹತ್ತು ಆನೆಗಳನ್ನು ಕೊಟ್ಟನು.

ಗ॥ ತತಃಪ್ರವಿಶತಿಕೋಪಿವಿಲೋಚನ ಹೀನೋಸ್ತ್ರೀಸಹಿತೋದ್ವಾ ಸ್ವಸ್ತೀತ್ಯುಕ್ತ್ವಾಪ್ರಾಹ ॥

ತಾ॥ ಬಳಿಕ ಕಣ್ಣುಗಳಿಲ್ಲದ ಒಬ್ಬಾನೊಬ್ಬ ವಿದ್ವಾಂಸನು ಹೆಂಡತಿ ಯೊಡನೆ ಬಂದು ರಾಜನಿಗೆ ಆಶೀರ್ವದಿಸಿ ಹೇಳುತ್ತಾನೆ.

ಶ್ಲೋ॥ ನಿಜಾನಪಿಗಜಾನ್ಭೋಜಂ ದದಾನಂಪ್ರೇಕ್ಷ್ಯಪಾರ್ವತೀ ।
ಗಜೇಂದ್ರವದನಂಪುತ್ರಂ ರಕ್ಷತ್ಯದ್ಯಪುನಃಪುನಃ ॥

ತಾ॥ ವಿಶೇಷವಾಗಿ ಆನೆಗಳನ್ನೇ ಕೊಡುತ್ತಿರುವ ಭೋಜನನ್ನು ನೋಡಿ ಪಾರ್ವತಿಯು ತನ್ನ ಮುದ್ದು ಮಗುವಾದ ಗಜವದನನನ್ನು ಕಾಪಾಡಿಕೊಂಡು ಜಾಗರೂಕಳಾಗಿರುವಳು.

ಗ॥ ರಾಜಾತಸ್ಮೈಸಪ್ತಗಜೇಂದ್ರಾನ್ದದೌ ॥

ತಾ॥ ಬಳಿಕ ದೊರೆಯು ಆತನಿಗೆ ಏಳು ಆನೆಗಳನ್ನು ಕೊಟ್ಟನು.

ಗ॥ ತತೋರಾಜಾವಿದ್ವತ್ಕುಟುಂಬಂತದ್ವೈವ ಪುರತಸ್ಥಿತಂವೀಕ್ಷ್ಯಬ್ರಾಹ್ಮಣಂಪ್ರಾಹ ॥

ತಾ॥ ತರುವಾಯ ದೊರೆಯು ಎದುರಿಗಿದ್ದ ಆತನ ಕುಟುಂಬವನ್ನು ನೋಡಿ ಬ್ರಾಹ್ಮಣನನ್ನು ಕುರಿತು ಹೇಳುತ್ತಾನೆ.

ಸಮಸ್ಯಾ॥ ಶ್ಲೋ॥ ಕ್ರಿಯಾಸಿದ್ಧಿಸ್ಸತ್ವೇಭವತಿ ಮಹತಾಂನೋಪಕರಣೇ ॥

ತಾ॥ ಅಂದರೆ ಮಹಾತ್ಮರಾದವರಿಗೆ ಕೆಲಸಗಳು ಕೈಗೂಡೋಣವು ಸತ್ವಗುಣದಲ್ಲಿಯೇ ಹೊರತು, ಸಹಾಯ ಸಾಮಗ್ರಿಯಿಂದ ಅಲ್ಲವು ಎಂದು ಸಮಸ್ಯೆಯನ್ನು ದೊರೆಯು ಹೇಳಲಾಗಿ ಬ್ರಾಹ್ಮಣನು ಹೇಳುತ್ತಾನೆ.

ಶ್ಲೋ॥ ಘಟೋಜನ್ಮಸ್ಥಾನಂ ಮೃಗಪರಿಜನೋಭೂರ್ಜ ।
ವಸನಂವನೇವಾಸಃಕಂದಾದಿ ಕಮಶನಮೇವಂವಿಧಗುಣಃ ॥
ಅಗಸ್ತ್ಯಃಪಾಥೋಧಿಂ ಯದಕೃತಕರಾಂಭೋಜ ।
ಕುಹರೇಕ್ರಿಯಾಸಿದ್ಧಿಸ್ಸತ್ವೇ ಭವತಿಮಹತಾಂನೋಪಕರಣೇ ॥

ತಾ॥ ಯಾವ ಅಗಸ್ತ್ಯ ಋಷಿಗಳಿಗಾದರೊ, ಜನ್ಮವು ಮಡಿಕೆಯಲ್ಲಿಯೂ, ಪರಿಜನಗಳು, ಮೃಗಗಳೂ, ಭೂರ್ಜಪತ್ರವೇ ವಸ್ತ್ರವು. ವಾಸಸ್ಥಳವಾದರೊ ಕಾಡು, ಊಟವಾದರೊ, ಗಡ್ಡೆಗೆಣಸುಗಳು ಹೀಗಿದ್ದರೂ ಕೂಡ, ಕ್ರಿಯಾಸಿದ್ಧಿಯಿಂದ ದೊಡ್ಡ ಸಮುದ್ರವನ್ನೇ ಏಕಾಪೋಶನವಾಗಿ ತೆಗೆದುಕೊಂಡರೊ ಆದ್ದರಿಂದ ಮಹಾತ್ಮರಿಗೆ ತಮ್ಮ ಕಾರ್ಯಗಳನ್ನು ತಮ್ಮ ಸತ್ವದಿಂದಲೇ ನೆರವೇರಿಸಿಕೊಳ್ಳುವುದು, ಎಂದು ಪೂರ್ತಿಮಾಡಿದನು.

ಗ॥ ತತೋರಾಜಾಬಹುಮೂಲ್ಯಾನಿ ಷೋಡಶಮಾಣಿಕ್ಯತಸ್ಮೈದದೌ ತತಸ್ತತ್ಪತ್ನೀಂಪ್ರಾಹರಾಜಾಅಪಿತ್ವಮಪಿಪಠ ॥

ತಾ॥ ಅದನ್ನು ಕೇಳಿ ದೊರೆಯು ಆ ಬ್ರಾಹ್ಮಣನಿಗೆ ಬಹಳ ಬೆಲೆಯುಳ್ಳ ಹದಿನಾರು ರತ್ನಗಳನ್ನು ಕೊಟ್ಟು ಆತನ ಹೆಂಡತಿಯನ್ನು ಕುರಿತು

ತಾಯೇ ನೀನೂ ಹೇಳು ಎಂದನು.

ದೇವಿ॥ ಶ್ಲೋ॥ ರಥಸ್ಯೈಕಂ ಚಕ್ರಂ ಭುಜಗಯಮಿತಾಸ್ಸಪ್ತತುರಗಾಃ ।
ನಿರಾಲಂಬೋ ಮಾರ್ಗಃ ಚರಣರಹಿತಸ್ಸಾರಥಿರಪಿ ॥
ರವಿರ್ಯಾತ್ಯೇವಾಂತಂ ಪ್ರತಿದಿನಮಪಾರಸ್ಯ ನಭಸಃ ।
ಕ್ರಿಯಾಸಿದ್ಧಿಸ್ಸತ್ವೇ ಭವತಿ ಮಹತಾಂ ನೋಪಕರಣೇ ॥

ತಾ॥ ದೇವಿಯು ಹೇಳುತ್ತಾಳೆ. ಸೂರ್ಯನು ತನ್ನ ರಥಕ್ಕೆ ಒಂದೇ ಗಾಲಿಯಿದ್ದರೂ ಹಾವುಗಳಿಂದ ಕಟ್ಟಲ್ಪಟ್ಟ ಏಳು ಕುದುರೆಗಳು ತಾನು ಪ್ರಯಾಣಮಾಡುವ ದಾರಿಯಾದರೋ ಆಧಾರವಿಲ್ಲದ್ದು, ಸಾರಥಿಯನ್ನು ನೋಡಿದರೆ ಕುಂಟನು. ಹೀಗಿದ್ದರೂ ಪ್ರತಿನಿತ್ಯವೂ ಅಪಾರವಾದ ಅಂತರಿಕ್ಷವನ್ನು ದಾಟುತ್ತಿರುವನು, ಆದ್ದರಿಂದ ಕ್ರಿಯಾಸಿದ್ಧಿಯು ಒಂದು ವಿಧವಾದ ಸತ್ವದಲ್ಲಿಯೇ ಇರುವುದೇ ಹೊರತು ಒಬ್ಬರ ಸಹಾಯದಲ್ಲಿಲ್ಲವು.

ಗ॥ ರಾಜಾತುಷ್ಟಸ್ಸಪ್ತದಶಗಜಾನ್ ಸಪ್ತರಥಾಂಶ್ಚ ತಸ್ಯೈದದೌ ತತೋವಿಪ್ರಪುತ್ರಂ ಮಹಾರಾಜಾ ವಿಪ್ರಸುತ ತ್ವಮಪಿ ಪಠ ॥

ತಾ॥ ರಾಜನು ಸಂತೋಷಪಟ್ಟು ಹದಿನೇಳು ಆನೆಗಳನ್ನು ಏಳು ರಥಗಳನ್ನು ಕೊಟ್ಟು ಬ್ರಾಹ್ಮಣನ ಮಗನನ್ನು ಕುರಿತು ವಿಪ್ರಪುತ್ರನೇ ನೀನೂ ಹೇಳು ಎಂಬದಾಗಿ ಹೇಳಿದನು. (ವಿಪ್ರಸುತಃ)

ಶ್ಲೋ॥ ವಿಜೇತವ್ಯಾ ಲಂಕಾ ಚರಣತರಣೀಯೋ ಜಲನಿಧಿಃ ।
ವಿಪಕ್ಷಃ ಪೌಲಸ್ತ್ಯೋ ರಣಭುವಿ ಸಹಾಯಾಶ್ಚ ಕಪಯಃ ॥
ಪದಾತಿರ್ಮರ್ತ್ಯೋಸೌ ಸಕಲಮವಧೀದ್ರಾಕ್ಷಸಕುಲಂ ।
ಕ್ರಿಯಾಸಿದ್ಧಿಸ್ಸತ್ವೇ ಭವತಿ ಮಹತಾಂ ನೋಪಕರಣೇ ॥

ತಾ॥ ಜಯಿಸಬೇಕಾದದ್ದು ರಾಕ್ಷಸರಿರುವ ಲಂಕೆಯು, ದಾಟತಕ್ಕದಾದರೋ, ಸಮುದ್ರವೇ ಶತ್ರುವಾದರೂ, ಪುಲಸ್ತ್ಯನ ಮೊಮ್ಮಗನಾದ ರಾವಣನು, ಯುದ್ಧಭೂಮಿಯಲ್ಲಿ ಸಹಾಯಕರು ನೋಡೋಣವೇ ಕಪಿಗಳು ಮನುಷ್ಯನಾಗಿದ್ದರೂ ರಾಮನು ಎಲ್ಲಾ ರಾಕ್ಷಸರನ್ನೂ ಕೊಲ್ಲಲಿಲ್ಲವೇ ಆದ್ದರಿಂದ ಒಬ್ಬರ ಸಹಾಯವ್ಯಾತಕ್ಕಾದೀತು.

ಗ॥ ತತಸ್ತುಷ್ಟೋ ವಿಪ್ರಸುತಾಯ ಅಷ್ಟಾದಶಗಜೇಂದ್ರಾನ್ ದದೌ ॥

ತಾ॥ ಬಳಿಕ ಧೊರೆಯು ಸಂತುಷ್ಟನಾಗಿ ಆ ದ್ವಿಜಪುತ್ರನಿಗೆ ಹದಿನೆಂಟು ಆನೆಗಳನ್ನು ಕೊಟ್ಟನು.

ಗ॥ ತತಸ್ಸುಮನೋಜ್ಞಾ ಸುಕುಮಾರನಿಖಿಲಾವಯವಾಲಂಕೃತಾ . ಸ್ವಂ

ಗಾಢರಸೋಪಜಾತಮೂರ್ತಿಮಿವ ಚಂಪಕಲತಾಮಿವ ಲಾವಣ್ಯಗಾತ್ರ
ಯಷ್ಟಿಂ ವಿಪ್ರಸ್ನುಷಾಂವೀಕ್ಷ್ಯನೂನಂಭಾರತ್ಯೇಕಾಪಿ ಲೀಲಾಕೃ
ತಿರಿಯಮಿತಿಚೇತಸಿನಮಸ್ಕೃತ್ಯರಾಜಾನಮಾಹ ಮಾತಸ್ತ್ವಮಪಿಲಕ್ಷ
ಷಂಪದ ॥

ತಾ॥ ಬಳಿಕ ಬಹಳ ಸುಂದರಳಾದ ಸುಕುಮಾರಾಂಗಗಳಾದ ಅವಯವಗಳಲ್ಲಿ ಶೃಂಗಾರ ರಸದಿಂದುಂಟಾದ ಶರೀರದಂತಿರುವ ಸಂಪಿಗೆ ಹೂವಿನಂತೆ ಲಾವಣ್ಯ ಶರೀರವುಳ್ಳ ಆಕೆ ಬ್ರಾಹ್ಮಣನ ಸೊಸೆಯನ್ನು ನೋಡಿ ಈಕೆಯು ಸರಸ್ವತಿಯ ಲೀಲಾವತಾರವೆಂದು ತಿಳಿದು ಮನಸ್ಸಿನಲ್ಲಿ ನಮಸ್ಕರಿಸಿ ತಾಯೆ ನೀನೂ ಆಶೀರ್ವಾದವಾಗಿ ಹೇಳಬೇಕೆನಲು ಸೊಸೆಯು ಹೇಳುತ್ತಾಳೆ.

ದೇವಿಪ್ರಾಣು॥ಶ್ಲೋ॥ಧನುಃಪೌಷ್ಪಂ ಮೌರ್ವೀಮಧುಕರಮಯೀ ಚಂಚಲ
ದೃಶಾಂದೃಶಾಂ ಕೋಣೋಬಾಣಃ ಸುಹೃದಪಿಜಡಾತ್ಮಾಹಿಮ
ಕರಃ ಸ್ವಯಂಚೈಕೋನಂಗಃಸಕಲಭುವನಂವ್ಯಾಕುಲ
ಯತಿ ಕ್ರಿಯಾಸಿದ್ಧಿಸ್ಸತ್ವೇಭವತಿಮಹತಾಂನೋಪಕರಣೇ॥

ತಾ॥ ಮನ್ಮಥನು ತನಗೆ ಧನುಸ್ಸಾದರೊ ಹೂವಿನದು ಹೆದೆಯಾದರೊ ದುಂಬಿಗಳೆ ಬಾಣವಾದರೊ ಹೆಂಗಸರ ಕಡೆಗಣ್ಣೋಟವು ಸ್ನೇಹಿತನಾದರೊ ಜಡಾತ್ಮನಾದ ಚಂದ್ರನು ತಾನಾದರೊ ಅನಂಗನು ಹೀಗಿದ್ದರೂ ಎಲ್ಲಾ ಪ್ರಪಂಚವನ್ನೂ ಕಳವಳಗೊಳಿಸುತ್ತಿರುವನು. ಆದ್ದರಿಂದ ಕ್ರಿಯಾಸಿದ್ಧಿಯು ಸತ್ವದಲ್ಲಿ ಅಲ್ಲದೆ ಸಹಾಯಸಾಮಗ್ರಿಯಲ್ಲಿಲ್ಲವು ಎಂದಳು.

ಗ॥ಚಮತ್ಕೃತೋರಾಜಾಲೀಲಾದೇವೀಭೂಷಣಾನಿಸರ್ವಾಣ್ಯಾದಾಯತಸ್ಯೈ
ದದೌಅನರ್ಘ್ಯಾಣ್ಯಸುವರ್ಣಮಾಣಿಕ್ಯವೈಡೂರ್ಯಪ್ರವಾಳಾಷ್ಟದದೌ॥

ತಾ॥ ರಾಜನು ಆಶ್ಚರ್ಯಪಟ್ಟು ತನ್ನ ರಾಣಿಯ ಒಡವೆಗಳನ್ನೆಲ್ಲಾ ಆಕೆಗೆ ಕೊಟ್ಟು ಇನ್ನೂ ಬಗೆಬಗೆಯಾದ ಬೆಲೆಯಿಲ್ಲದ ರತ್ನ ಮುತ್ತು ಹವಳ ವೈಡೂರ್ಯಗಳನ್ನು ಕೊಟ್ಟನು.

ಗ॥ ತತಃಕದಾಚಿತ್ ಶ್ರೀಮಂತನಾಮಾಕವಿಃಪ್ರಾಹ ॥

ತಾ॥ ಬಳಿಕೊಂದುದಿನ ಶ್ರೀಮಂತನೆಂಬ ಕವಿಯು ಹೇಳುತ್ತಾನೆ.

ಶ್ಲೋ॥ ಪಂಥಾಸ್ಸಂಹರದೀರ್ಘತಾಂತ್ಯಜ ನಿಜಂತೇಜಃಕಠೋರಂರವೇ ಶ್ರೀ
ಮನ್ವಿಂಧ್ಯಗಿರೇಪ್ರಸೀದಸದಯಂಸದ್ಯಸ್ಸಮೀಪೇಭವ ॥ ಇತ್ಥಂದೂರಪ
ಲಾಯನಶ್ರಮವತೀಂ ದೃಷ್ಟ್ವಾನಿಜಪ್ರೇಯಸೀಂ ಶ್ರೀಮನ್ಭೋಜತವ
ದ್ವಿಷಃಪ್ರತಿದಿನಂಜಲ್ಪಂತಿಮಾರ್ಗಾಂತಿಕೇ ॥

ತಾ॥ ಎಲೈ ಭೋಜರಾಯನೇ ನಿನ್ನ ಶತ್ರುಗಳ ಹೆಂಡತಿಯರು ಓಡಿ ಹೋಗುವಾಗ ಉದ್ದವಾದ ದಾರಿಯೇ ಕಮ್ಮಿಯಾಗು ಎಲೈ ಸೂರ್‍ಯನೇ ನಿನ್ನ ಕ್ರೂರವಾದ ಕಾಂತಿಯನ್ನು ಬಿಡು ಎಲೈ ವಿಂಧ್ಯಪರ್ವತವೇ ಪ್ರಸನ್ನನಾಗು ಮತ್ತು ಬೇಗ ಹತ್ತಿರಕ್ಕೆ ಬಾ ಎಂಬೀ ರೀತಿಯಾಗಿ ಕೂಗಿಕೊಳ್ಳುತ್ತಾ ಮೂರ್ಛೆ ಹೋಗುವರು.

ಗ॥ ತಸ್ಮಿನ್ನೇವಕ್ಷಣೇಕಶ್ಚಿತ್ಸುವರ್ಣಕಾರಃ ಪ್ರಾಂತೇಷು ಪದ್ಮರಾಗಮಣಿಮಂಡಿತಂಸುವರ್ಣಭಾಜನಂರಾಜ್ಞಃ ಪುರೋಮುಮೋಚ ತತೋರಾಜಾಸೀಮಂತಕ ವಿಂಪ್ರಾಹಸುಕವೇ ಇದಂಭಾಜನಂಕಾಮಪಿಶ್ರಿಯಂ ದರ್ಶಯತಿ ತತಃಕವಿರಾಹ ॥

ತಾ॥ ಎಂದು ಹೇಳಿದ ತಕ್ಷಣವೇ ಒಬ್ಬಾನೊಬ್ಬ ಅಕ್ಕಸಾಲಿಗನು ಸುತ್ತಲೂ ಪದ್ಮರಾಗಮಣಿಗಳಿಂದ ಕೆತ್ತಲ್ಪಟ್ಟ ಒಂದು ಚಿನ್ನದ ತಟ್ಟೆಯನ್ನು ತಂದು ರಾಜನ ಮುಂದಿಡಲು ರಾಜನು ಸೀಮಂತಕವಿಯನ್ನು ನೋಡಿ ಕವಿಶ್ರೇಷ್ಠನೇ ಈ ತಟ್ಟೆಯು ಎಷ್ಟು ರಮಣೀಯವಾಗಿದೆ ನೋಡು ಎನಲು ಕವಿಯು ಹೇಳುತ್ತಾನೆ.

ಶ್ಲೋ॥ ಧಾರೇಶತ್ವತ್ಪ್ರಸಾದೇನ ಪರಾಭೂತಸ್ತ್ವಿಷಾಂಪತಿಃ ।
ಸುವರ್ಣಪಾತ್ರವ್ಯಾಜೇನ ದೇವತ್ವಾಮುಪಸೇವತೆ ॥

ತಾ॥ ಎಲೈ ಧಾರಾನಾಥನಾದ ಭೋಜರಾಯನೇ ನಿನ್ನ ನೈರ್ಮಲ್ಯದಿಂದ ಚಂದ್ರನು ಸೋತುಹೋಗಿ ಈ ಚಿನ್ನದ ತಟ್ಟೆಯು ನೆವದಿಂದ ನಿನ್ನನ್ನೇ ಸೇವಿಸುತ್ತಿರುವನೆಂದನು.

ಗ॥ ತತಃತುಷ್ಟೋರಾಜಾತದೇವ ಪಾತ್ರಂಮುಕ್ತಾಫಲೈರಾಪೂರ್‍ಯಪ್ರದಾತ್॥

ತಾ॥ ಬಳಿಕ ರಾಯನು ಸಂತೋಷಪಟ್ಟು ಅದೇ ಪಾತ್ರೆಯಲ್ಲಿ ಮುತ್ತುಗಳನ್ನು ತುಂಬಿ ಆತನಿಗೆ ಕೊಟ್ಟನು.

ಗ॥ ಕದಾಚಿದ್ರಾಜಾಮೃಗಯಾಯಾಂಪುರಃ ಪಲಾಯಮಾನಂವರಾಹಂದೃಷ್ಟ್ವಾ ಸ್ವಯಮೇಕಾಕೀತದಾದೂರಂ ವನಾಂತರ್ಗತ್ವಾ ತತ್ರಕಂಚನ ದ್ವಿಜವರಮವಲೋಕ್ಯಪ್ರಾಹ ॥

ತಾ॥ ಬಳಿಕ ಒಂದಾನೊಂದು ದಿನ ಧೊರೆಯು ಬೇಟೆಗೆ ಹೋಗಿ ಅಲ್ಲಿ ಮುಂದೆ ಓಡುತ್ತಿದ್ದ ಒಂದಾನೊಂದು ಹಂದಿಯನ್ನು ಅಟ್ಟಿಸಿಕೊಂಡು ಹೋಗಿ ಅಲ್ಲಿ ಒಬ್ಬ ಬ್ರಾಹ್ಮಣನನ್ನು ನೋಡಿ ಹೇಳಿದ್ದೇನಂದರೆ.—

ಗ॥ ದ್ವಿಜಕುತ್ರಗಂತಾಸಿ ದ್ವಿಜಃ ಧಾರಾನಗರಂಭೋಜಃ ಕಿಮರ್ಥಂ

ದ್ವಿಜಃ ಭೋಜಂದ್ರಷ್ಟುಂ ದ್ರವಿಣೇಚ್ಛಯಾ ಸತುಪಂಡಿತಾಯದತ್ತೆ ಅಹಮಪಿಮೂರ್ಖಂ ನಯಾಚೆ ಭೋಜಃ ತರ್ಹಿತ್ವಂ ವಿದ್ವಾನ್ಕವಿ ರ್ವಾದ್ವಿಜಃ ಮಹಾಭಾಗಕವಿರಹಂಭೋಜಃ ತರ್ಹಿಕಿಮಪಿಪಠದ್ವಿಜಃ ಭೋಜಂವಿನಾಮತ್ಕವಿಸರಣಿಂ ನಕೋಪಿಜಾನಾತಿ ರಾಜಾ ಮಮಾಪಿ ಅಮರವಾಣೀಪರಿ ಜ್ಞಾನಮಸ್ತಿ ರಾಜಾಚಮಯಿಸ್ನಿಹ್ಯತಿ ತ್ವದ್ಗುಣಂ ಚ ಶ್ರಾವಯಿಷ್ಯಾಮಿ ಕಿಮಪಿಕಳಾಕೌಶಲಂದರ್ಶಯ ವಿಪ್ರಃ ಕಿಂವ ರ್ಣಯಾಮಿ ರಾಜಾಕಲಮಾನೇತಾನ್ ವರ್ಣಯವಿಪ್ರ ||

ತಾ|| ಎಲೈ ಬ್ರಾಹ್ಮಣನೇ ನೀನೆಲ್ಲಿಗೆ ಹೋಗುತ್ತೀಯೆ, ಎಂದು ದೊರೆ ಕೇಳಲು ಬ್ರಾಹ್ಮಣನು ಹೇಳುತ್ತಾನೆ. ಅಯ್ಯಾ ಧಾರಾನಗರಕ್ಕೆ ಹೋಗು ವೆನು. ದೊರೆಯು ಯಾತಕ್ಕೆ (ಬ್ರಾಂ) ಧನಾಭಿಲಾಷೆಯಿಂದ ಭೋಜರಾ ಯನನ್ನು ಕಾಣುವದಕ್ಕೆ ಆತನಾದರೂ ವಿದ್ವಾಂಸರಿಗೇನೆ ಧನಕೊಡತಕ್ಕವನು. ನಾನಾದರೆ ಮೂರ್ಖರನ್ನು ಬೇಡುವದಿಲ್ಲವು ಅಂದನು. (ಭೋಜನು ಹಾಗಾ ದರೆ ನೀನು ಕವಿಯೊ ಅಥವಾ ಪಂಡಿತನೊ (ಬ್ರಾಂ) ನಾ ಕವಿಯೋ ಎಂದನು. (ಭೋಜ) ಹಾಗಾದರೆ ಏನಾದರೂ ಒಂದು ಶ್ಲೋಕವನ್ನು ಹೇಳೆಂದನು. (ಬ್ರಾಂ) ಭೋಜರಾಯನನ್ನು ಬಿಟ್ಟರೆ ನನ್ನ ಕವಿತಾ ಸ್ವಾರಸ್ಯವನ್ನು ಯಾರೂ ತಿಳಿಕೊಳ್ಳಲಾರರು, ಎನಲು ದೊರೆಯು ಅಯ್ಯಾ ಬ್ರಾಹ್ಮಣನೆ ನನಗೂ ಗೀರ್ವಾಣ ಬಾಷಾ ಪರಿಚಯವು ಇರುತ್ತದೆ. ಅಲ್ಲದೆ ದೊರೆಗೂ ನನಗೂ ಸ್ನೇಹವುಂಟು. ಆದ್ದರಿಂದ ನಿನ್ನ ಪದ ಸ್ವಾರಸ್ಯವನ್ನು ನಾನು ಅತನಿಗೆ ತಿಳಿಸುವೆನು. ಆದ್ದರಿಂದ ನಿನ್ನ ಕೌಶಲ್ಯವನ್ನು ತೋರಿಸು ಎಂ ದನು (ಬ್ರಾಂ) ಆದರೆ ಏನನ್ನು ವರ್ಣಿಸಲಿ ದೊರೆಯು ಕವಿಯೋ ಈ ಪೈರು ಗಳನ್ನು ವರ್ಣಿಸು ಎಂದನು.

ಶ್ಲೋ|| ಕಲಮಾಃಪ್ರಾಕವಿನಮ್ರಾಃಮೂಲತಲಾಘ್ರಾತ ಸುರಭಿಕಲ್ಹಾರಾಃ |
ಪವನಾಕಂಪಿತಶಿರಸಃಪಾಯಃಕುರ್ವಂತಿಪರಿಮಳಶ್ಲಾಘಾಂ ||

ತಾ|| ಅಯ್ಯಾ ಈ ಪೈರುಗಳು ಗಾಳಿಯಿಂದ ಅಲ್ಲಾಡುತ್ತಿದ್ದರೆ ಹ್ಯಾಗಿ ವೆ ಎಂದರೆ ಕಮಲಗಳ ಪಕ್ಕದಲ್ಲಿ ಗಾಳಿಯಿಂದ ಕೆಳಕ್ಕೆ ಬಗ್ಗಿತಿರುಗೂ ಎದ್ದು ಅಲ್ಲಾಡುತಿದ್ದರೆ ಕಮಲಗಳ ವಾಸನೆಯು ಬಹಳ ಶ್ಲಾಘ್ಯವಾಗಿದೆಯೆಂದು ಏನಾದರೂ ತಲೆಯನ್ನು ತೂಗುತ್ತಿವೆಯೋ ಏನೋ ಎಂಬಂತೆ ಇರುತ್ತವೆ. ಎಂದು ಬಣ್ಣಿಸಿದನು.

ಗ|| ರಾಜಾತಸ್ಮೈಸರ್ವಾಭರಣಾನ್ಯಕಾರ್ತ್ಸ್ಯದದೌ ||

ತಾ॥ ದೊರೆಯು ಆ ಬ್ರಾಹ್ಮಣನಿಗೆ ತನ್ನ ಒಡವೆಗಳನ್ನೆಲ್ಲ ತೆಗೆದು ಬಹುಮಾನವಾಗಿ ಕೊಟ್ಟನು.

ಗ॥ ತತಃಕದಾಚಿತ್ಕುಂಭಕಾರವಧೂಃ ರಾಜಗೃಹಮೇತ್ಯದ್ವಾರಪಾಲಂಪ್ರಾಹದ್ವಾರಪಾಲರಾಜಾದ್ರಷ್ಟವ್ಯಃ ಸಆಹಕೇಂತೇರಾಜ್ಞಾಕಾರ್ಯಂ ಸಾಚಾಹ ನತೇಽಭಿಧಾಸ್ಯಾಮ್ಯಗ್ರ ಏವಕಥಯಾಮಿ ಸಸಭಾಯಾಮಾಗತ್ಯಾಹ ದೇವಕುಂಭಕಾರಪ್ರಿಯಾಕಾಚಿದ್ರಾಜದರ್ಶನಾಕಾಂಕ್ಷಿಣೀ ನವಕ್ತಿ ಮತ್ಪುರಃ ತ್ವತ್ಪುರಃಕಥಯಿಷ್ಯತೀತಿರಾಜಾಪ್ರವೇಶಯ ॥

ತಾ॥ ಬಳಿಕ ಒಬ್ಬಾಳೊಬ್ಬ ಕುಂಬಾರಳು ಅರಮನೆಯ ಹತ್ತಿರಕ್ಕೆ ಬಂದು ದ್ವಾರಪಾಲನೇ ನನ್ನನ್ನೊಳಕ್ಕೆ ಬಿಡು ಎನಲು ಅವನು ನೀನಾರು ನಿನಗೆ ಒಳಗೇನು ಕೆಲಸವೆನಲು, ನಾನು ಕುಂಬಾರಳು ನಿನ್ನೆದುರಿಗೆ ನನ್ನ ಕೆಲಸವನ್ನು ಹೇಳುವದಿಲ್ಲ, ಧೊರೆಯೊಡನೆ ತಿಳಿಸುವೆನೆನಲಾಗಿ ಆ ದ್ವಾರಪಾಲನು ಈ ಸಮಾಚಾರವೆಲ್ಲವನ್ನೂ ಧೊರೆಗೆ ತಿಳಿಸಲಾಗಿ ಧೊರೆಯು ಒಳಕ್ಕೆ ಬಿಡುವಂತೆ ಅಪ್ಪಣೆ ಮಾಡಿದನು.

ಗ॥ ಸಾಚಾಗತ್ಯನಮಸ್ಕೃತ್ಯವಕ್ತಿ ॥

ತಾ॥ ಆಕೆಯು ಈಚೆಗೆ ಬಂದು ನಮಸ್ಕರಿಸಿ ಹೇಳುತ್ತಾಳೆ.

ಶ್ಲೋ॥ ದೇವಮೃತ್ಖನನಾದ್ದ್ರಷ್ಟಂ ನಿಧಾನಂವಲ್ಲಭೇನಮೇ ।
ಸಪಶ್ಯನ್ನೇವತತ್ರಾಸ್ತೇ ತ್ವಾಂ ಜ್ಞಾಪಯಿತುಮಭ್ಯಗಾಂ ॥

ತಾ॥ ಪ್ರಭುವೇ ನನ್ನ ಗಂಡನು ಮಣ್ಣನ್ನು ಅಗಿಯುತ್ತಾ ಒಂದು ನಿಧಿಯನ್ನು ಕಂಡನು. ಅದನ್ನೇ ನೋಡುತ್ತಾ ಅಲ್ಲಿಯೇ ಇರುವನು ನಾನಾದರೂ ಆ ಸಂಗತಿಯನ್ನು ತಮಗೆ ತಿಳಿಸಲು ಬಂದಿರುವೆನೆಂದಳು.

ಗ॥ ರಾಜಾಚತಮಾತ್ಕೃತೋಽನಿಧಾನಕಲಶಮಾನಾಯಯಾಮಾಸ ॥

ತಾ॥ ಧೊರೆಯು ಆಶ್ಚರ್ಯಪಟ್ಟು ಆ ಕಲಶವನ್ನು ತರಿಸಿದನು.

ಗ॥ ತದ್ವಾರಮುದ್ಘಾಟ್ಯಯಾವತ್ಪಶ್ಯತಿ ರಾಜಾತಾವತ್ತದಂತರ್ವರ್ತಿ ದ್ರವ್ಯಂಮಣಿಪ್ರಭಾಮಂಡಲಮಾಲೋಕ್ಯ ಕುಂಭಕಾರಪತ್ನೀಂತುತೋಷ ಸಾಚಪ್ರಾಹ ॥

ತಾ॥ ಅದರ ಮುಚ್ಚಳವನ್ನು ತೆಗೆದು ನೋಡಲಾಗಿ ಅದರ ತುಂಬಾ ಇರುವ ರತ್ನಗಳ ಕಾಂತಿಯಿಂದ ನಿಬಿಡವಾಗಿತ್ತು ಆಗ ಕುಂಬಾರಳನ್ನು ಕುರಿತು ಧೊರೆಯು ಸಂತೋಷಪಟ್ಟನು. ಆಗ ಕುಂಬಾರಳು ಹೇಳುತ್ತಾಳೆ.

ಶ್ಲೋ॥ ರಾಜನ್ಕಚಂದ್ರಂಸಮಾಲೋಕ್ಯತ್ವಾಂತು ಭೂತಲಮಾಗತಂತ್ವಶ್ರೇ

ಣೀಮಿಷಾಸ್ಮಸ್ಯೆ ನಕ್ಷತ್ರಾಣ್ಯಭ್ಯುಪಾಗಮನ್ ॥

ತಾ॥ ಎಲೌ ರಾಯನೆ ಆಕಾಶದಿಂದ ಭೂಲೋಕಕ್ಕೆ ಇಳಿದು ಬಂದಿರುವ ಚಂದ್ರನಂತೆ ಇರುವ ನಿನ್ನನ್ನು ನೋಡಿ ನಕ್ಷತ್ರಗಳೇನಾದರೂ ಈ ರತ್ನಗಳ ವ್ಯಾಜದಿಂದ ಬಂದಿವೆಯೋ ಏನೊ ಎಂಬಂತಿಧೆ ಎಂದು ಹೇಳಲಾಗಿ—

ಗ॥ ರಾಜಾಕುಂಭಕಾರ ವಧೂಮುಖಾಚ್ಛ್ಲೋಕಂ ಲೋಕೋತ್ತರಮಾಕರ್ಣ್ಯಚಮತ್ಕೃತಃ ತಸ್ಯೈಸರ್ವಂದದೌ ॥

ತಾ॥ ದೊರೆಯು ಆ ಕುಂಬಾರಳ ಮುಖದಿಂದ ಬಂದ ಆ ಶ್ಲೋಕವನ್ನು ಕೇಳಿ ಆಶ್ಚರ್ಯಪಟ್ಟು ಆಕೆಗೆ ಆ ರತ್ನಗಳೆಲ್ಲವನ್ನೂ ಕೊಟ್ಟನು.

ಗ॥ ತತಃ ಕದಾಚಿದ್ರಾಜಾರಾತ್ರಾವೇಕಾಕೀಸರ್ವತೋ ನಗರಚೇಷ್ಟಿತಂಪಶ್ಯನ್ಪೌರಗಿರಮಾಕರ್ಣಯನ್ ಚಚಾರ ತದಾಕ್ವಚಿದ್ವೈಶ್ಯಃ ಸ್ವಪ್ರಿಯಾಂಪ್ರಾಹ ಪ್ರಿಯೇ‌ರಾಜಾಸ್ವಲ್ಪದಾನರತೋಪಿ । ಉಜ್ಜಯಿನೀನಗರಾಧಿಪತೇಃ ವಿಕ್ರಮಾರ್ಕಸ್ಯದಾನ ಪ್ರತಿಷ್ಠಾಂಕಾಂಕ್ಷತೇಸಕಿಂಭೋಜೇನಪ್ರಾಪ್ಯತೇ ಕೈಶ್ಚಿತ್‌ಸ್ತೋತ್ರಪ್ರಾಯೈಃ ಕೈರ್ವರ್ಣಯೂರಾದಿಕವಿಭಿರ್ಮಹಿಮಾನಂ ಪ್ರಾಪಿತೋಭೋಜಃ ಪರಂತುಭೋಜೋಭೋಜ ಏವ ಪ್ರಿಯೇಶೃಣು ॥

ತಾ॥ ಬಳಿಕ ದೊರೆಯು ಒಂದಾನೊಂದುದಿನ ರಾತ್ರಿಯಲ್ಲಿ ಒಬ್ಬನೇ ಸಂಚಾರಮಾಡುತ್ತಾ ಪಟ್ಟಣದ ಬೀದಿಯಲ್ಲಿ ಬರುತ್ತಿರಲು ಒಬ್ಬ ವೈಶ್ಯನ ಮನೆಯಲ್ಲಿ ಆ ವೈಶ್ಯನು ತನ್ನ ಹೆಂಡತಿಯೊಡನೆ ಮಾತನಾಡುತ್ತಿದ್ದುದೇನಂದರೆ ಎಲೌ ಪ್ರಿಯಳೆ ಈ ಭೋಜರಾಯನು ಎಲ್ಲಿಯೋ ಸ್ವಲ್ಪಮಾತ್ರ ದಾನ ಮಾಡುತ್ತಿದ್ದಾಗ್ಯೂ ಉಜ್ಜಯಿನೀಪತಿಯಾದ ಆ ವಿಕ್ರಮಾರ್ಕರಾಯನಂತೆ ಪ್ರಸಿದ್ಧನಾಗಬೇಕೆಂದು ಇರುವನು ಹಾಗಾಗುವನೇನು ಎಂದಿಗೂ ಆಗಲಾರನು. ಏನೊ ಕೇವಲಸ್ತೋತ್ರ ಮಾಡತಕ್ಕ ಸ್ವಭಾವವುಳ್ಳ ಬಾಣಮಯೂರಾದಿ ಕವಿಗಳಿಂದ ಹೊಗಳಲ್ಪಟ್ಟಾಕ್ಷಣವೇ ಭೋಜನು ಭೋಜನೇ ಹೊರತು ವಿಕ್ರಮಾರ್ಕನಾಗಲಾರನು ಆದ್ದರಿಂದ ಎಲೌ ಪ್ರಿಯಳೇ ಕೇಳು.

ಶ್ಲೋ॥ ಅಬದ್ಧಕೃತ್ರಿಮಸಟಾಜಟಿಲಾಂಸಭಿತ್ತಿರಾರೋಪಿ ।

ತೋಮೃದಿಪದಂಮೃಗ ವೈರಿಣಶ್ಚ ॥

ಮತ್ತೇಭಕುಂಭತಟಪಾಟನಲಂಪಟಸ್ಯ ।

ನಾದಂಕರಿಷ್ಯತಿಕಥಂಹರಿಣಾಧಿಪಸ್ಯ ॥

ತಾ॥ ನಾಯಿಯು ತನ್ನ ಜೋಲಾಡುತ್ತಿರುವ ಕೂದಲುಗಳನ್ನು ಹೆಗ

ಅಲ್ಲಿರಿಸಿಕೊಂಡು ತಾನೂ ಸಿಂಹವೇ ಎಂದೆಂದುಕೊಂಡಿದ್ದರೂ ಕೂಡ ಮದ್ದಾನೆಗಳ ಕುಂಭಸ್ಥಳಗಳನ್ನು ಸೀಳುವ ಸಾಮರ್ಥ್ಯವುಳ್ಳ ಸಿಂಹಕ್ಕೆ ಸಮಾನಾಗುತ್ತೇನು ಅಂದನು.

ಗ॥ ರಾಜಾಶ್ರುತ್ವಾವಿಚಾರಿತವಾನ್ ಅಸೌಸತ್ಯಮೇವವದತಿ ತತಃಪುನಃ ಪುನರ್ವೃತ್ತಾಂತಂಶೃಣೋತಿ ॥

ತಾ॥ ದೊರೆಯು ಆ ಮಾತನ್ನು ಕೇಳಿ ವಿಚಾರ ಮಾಡಿಕೊಂಡು ಇವನು ಹೇಳುವುದು ನಿಜವೇ ಎಂದೆಂದುಕೊಂಡು ತಿರುಗೂ ಹೇಳುತ್ತಿರುವ ಅವನ ಮಾತನ್ನೇ ಕೇಳುತ್ತಿದ್ದನು

ಶ್ಲೋ॥ ಆಪನ್ನ ಏವಪಾತ್ರಂ ದೇಹೀತ್ಯುಚ್ಚಾರಣಂ ನವೈದುಷ್ಯಂ ಉಪಪನ್ನ ಮೇವದೇಯಂತ್ಯಾಗ ಸ್ತ್ವೇವಿಕ್ರಮಾರ್ಕಕಿಮುವರ್ಣ್ಯಃ

ತಾ॥ ಬಡವನೇನೆ ದಾನಕ್ಕೆಪಾತ್ರನು ಬೇಡಿಕೊಳ್ಳುವವನೇದಾನಾರ್ಹನು. (ಪಾಂಡಿತ್ಯವನ್ನು ನೋಡಿದಾನಮಾಡುವದು ಯುಕ್ತವಲ್ಲವು ಆದ್ದರಿಂದ ಬಡವರನ್ನುದ್ಧಾರಮಾಡಿದ ನಿನ್ನತ್ಯಾಗವನ್ನು ಎಲೌ ವಿಕ್ರಮಾರ್ಕನೇ ಏನು ಹೊಗಳಲೀ. ಮತ್ತು—

ಶ್ಲೋ॥ ವಿಕ್ರಮಾರ್ಕತ್ವಯಾದತ್ತಂ ಶ್ರೀಮನ್ ಗ್ರಾಮಶತಾಷ್ಟಕಂ ।
ಅರ್ಥಿನೇದ್ವಿಜಪುತ್ರಾಯ ಭೋಜೇತ್ವನ್ಮಹಿಮಾಕುತಃ ॥

ತಾ॥ ಎಲೌ ವಿಕ್ರಮಾರ್ಕರಾಯನೇ ಯಾರೋ ಒಬ್ಬ ಬಡಬ್ರಾಹ್ಮಣಪುತ್ರನು ದೈನ್ಯದಿಂದ ಬೇಡಿಕೊಳ್ಳಲಾಗಿ ಎಂಟನೂರು ಗ್ರಾಮಗಳನ್ನು ಕೊಟ್ಟೆಯಲ್ಲಾ ಅಂಥಾಮಹಿಮೆಯು ಈ ಭೋಜನಲ್ಲಿ ಎಲ್ಲಿಬಂತು.

ಮತ್ತು ಶ್ಲೋ॥ ಪ್ರಾಪ್ನೋತಿಕುಂಭಕಾರೋಪಿ ಮಹಿಮಾನಂಪ್ರಜಾಪತೇಃ।
ಯದಿಭೋಜೋಪ್ಯವಾಪ್ನೋತಿಪ್ರತಿಷ್ಠಾಂತವವಿಕ್ರಮ ॥

ತಾ॥ ಎಲೈ ವಿಕ್ರಮಾರ್ಕರಾಯನೇ ನಿನ್ನಂತೆ ಗೌರವವನ್ನು ಭೋಜರಾಯನು ಪಡೆಯಬೇಕಾದರೆ ಕುಂಬಾರನೂಕೂಡ ಬ್ರಹ್ಮದೇವರಾಗಬಹುದಲ್ಲವೆ ಯೆಂದು ಹೆಂಡತಿಯೊಡನೆ ಮಾತಾಡುತ್ತಿದ್ದನು.

ಗ॥ ರಾಜಾಲೋಕೇಸರ್ವೋಪಿಜನಃ ಸ್ವಗೃಹೇನಿಶ್ಶಂಕಂಸತ್ಯಂ ವದತಿಮಯಾವಾಅನ್ಯೇನವಾಸರ್ವಥಾವಿಕ್ರಮಾರ್ಕಪ್ರತಿಷ್ಠಾನಶಕ್ಯಾಪ್ರಾಪ್ತುಂ ।

ತಾ॥ ದೊರೆಯು ಅಂದುಕೊಂಡದ್ದೇನಂದರೆ ಲೋಕದಲ್ಲಿ ಯೆಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಭಯವಿಲ್ಲದೆ ನಿಜವನ್ನೇ ಮಾತನಾಡಿಕೊಳ್ಳುತ್ತಾರೆ ಆದರೆ ನನ್ನಿಂದಲೂ ಮತ್ತಾರಿಂದಲೂಕೂಡ ವಿಕ್ರಮಾರ್ಕನ ಪ್ರತಿಷ್ಠೆಯನ್ನು

ಹೊಂದಿ ಪದಕ್ಕೆ ಗುಪದಿಲ್ಲವು.

ಗ|| ತತಃಕದಾಚಿತ್ಕವಿಃ ರಾಜದ್ವಾರಂ ಸಮಾಗತ್ಯಾಹ ರಾಜಾದ್ರಷ್ಟವ್ಯ ಇತಿತತೆ ತತಃಪ್ರವೇಶಿಕೋ ರಾಜಾನಂಸ್ವಸ್ತೀತ್ಯುಕ್ತ್ವಾ ತದಾಜ್ಞಯೋ ಪವಿಶ್ಯಪಠತಿ ||

ತಾ|| ಬಳಿಕ ಒಂದಾನೊಂದು ಸಮಯದಲ್ಲಿ ಒಬ್ಬ ಕವಿಯು ಸಭಾ ದ್ವಾರಕ್ಕೆ ಬಂದು ದ್ವಾರಪಾಲಕನ ಮುಖಾಂತರ ಒಳಕ್ಕೆ ಪ್ರವೇಶಿಸಿ ರಾಜ ನಿಗೆ ಆಶೀರ್ವಾದವಮಾಡಿ ರಾಜನಪ್ಪಣೆಯಿಂದ ಕೂತುಕೊಂಡು ಹೇಳುತ್ತಾನೆ.

ಶ್ಲೋ|| ಕವಿಷುವಾದಿಷುಭೋಗಿಷು ದ್ರವಿಣವತ್ಸುಸತಾಮುಪಕಾರಿಷು ।
ಧನಿಷುಧನ್ವಿಷುಧರ್ಮಧನೇಷ್ವಪಿಕ್ಷಿತಿತಲೇನಹಿಭೋಜಸಮೋನೃಪಃ ||

ತಾ|| ಕವಿಗಳೊಳಗೆಲ್ಲಿಯೂ ವಾದಮಾಡುವವರಲ್ಲಿಯೂ ಭೋಗಪಡು ವವರಲ್ಲಿಯೂ, ಕೊಡುಗೆಯರಲ್ಲಿಯೂ, ಸತ್ಪುರುಷರಿಗೆ ಉಪಕಾರಮಾಡುವದರ ಲ್ಲಿಯೂ, ಧನವಂತರಲ್ಲಿಯೂ, ಧನುಸ್ಸನ್ನು ಹಿಡಿಯುವವರಲ್ಲಿಯೂ, ಧರ್ಮಿ ಷ್ಠರಲ್ಲಿಯೂ ಭೋಜರಾಯನಿಗೆ ಸಮನಾದ ದೊರೆಯು ಜಗತ್ತಿನಲ್ಲಿಯೇ ಇಲ್ಲವು ಎಂದು ಹೇಳಲು.

ಗ|| ರಾಜಾತಸ್ಮೈಲಕ್ಷಂಪ್ರಾದಾತ್ ||

ತಾ|| ದೊರೆಯು ಅವನಿಗೆ ಲಕ್ಷವನ್ನು ಕೊಟ್ಟನು.

ಗ|| ತತಃ ಕದಾಚಿದ್ರಾಜಾಕ್ರೀಡೋದ್ಯಾನಂ ಪ್ರಸ್ಥಿತೋಮಧ್ಯೇಮಾರ್ಗಂ ಕಾಮಪಿಮಲಿನವಸನಾಂ ತೀಕ್ಷ್ಣತರತಪನ ಕರವಿದಗ್ಧಮುಖಾರವಿಂ ದಾಂ ಸುಲೋಚನಾಂಲೋಚನಾಭ್ಯಾ ಆಲೋಕಪಪ್ರಚ್ಛ ||

ತಾ|| ತರುವಾಯ ಒಂದಾನೊಂದುದಿನ ಉದ್ಯಾನವನಕ್ಕೆ ಹೋಗುತ್ತಾ ದಾರಿಯಲ್ಲಿ ರಾಯನು ಮಲಿನವಸ್ತ್ರವನ್ನುಟ್ಟಿರುವ ಬಿಸಿಲಿನಿಂದ ಬಾಡಿದ ಮುಖಕಮಲವುಳ್ಳ ಒಬ್ಬ ಹೆಂಗಸನ್ನು ನೋಡಿ ಪ್ರಶ್ನೆ ಮಾಡುತ್ತಾನೆ.

ರಾಜಾ|| ಕಾತ್ವಂಪುತ್ರಿ ಸಾಚತಂಶ್ರೀಭೋಜಭೂಪಾಲಂ ಮುಖಶ್ರಿಯಾವಿದಿ ತ್ವಾತುಷ್ಟಾಪ್ರಾಹ । ನರೇಂದ್ರಲುಬ್ಧಕವಧೂಃ । ಹರ್ಷಸಂಭ್ರತೊ ರಾಜಾತತಸ್ಯಾಃಪ್ರದ್ಯುಪ್ರಭಂಧಾನುಬಂಧೇನಾಹ ಹಸ್ತೇಕಿಮೇತತ್ ಸಾ ಚಾಹಕವಲಂ ರಾಜಾಲಹಕ್ಷಾಮಾಕಿಂಸಾ ||

ಚಾಹ|| ಸಹಜಂಬ್ರವೀಮಿನೃಪತೇಯದ್ವಾದರಾಚಕ್ಷ್ವೈಯತೇಗಾಯಂತಿತ್ವದ ರಿಪ್ರಿಯಾಶ್ರುತಟಿನೀತೀರೇಷು ಸಿದ್ಧಾಂಗನಾಗೀತಂಗಾಸತ್ಯಣಾಂಚರಂ ತಿಹರಿಣಾಸ್ತೇನಾಪಿಷುಂದುರ್ಲಭಃ ||

ತಾ॥ ದೊರೆ ಕೇಳುತ್ತಾನೆ ಮಗಳೇ ನೀನು ಯಾರು ? (ಆಕೆಯು) ರಾಜನೇ ನಾನು ಬೇಟೆಗಾರಳು ಎನಲಾಗಿ ದೊರೆಯು ಸಂತೋಷಪಟ್ಟು ಶ್ಲೋಕರೂಪವಾಗಿ ಕೇಳುತ್ತಾನೆ. (ರಾ) ಆದರೆ ನಿನ್ನ ಕೈಯಲ್ಲಿರುವುದು ಏನು (ಹೆಂಗಸು) ನನ್ನ ಕೈಯಲ್ಲಿರುವುದು ಮಾಂಸವು (ರಾಜಾ) ಮಾಂಸ ಕ್ಕೆ ಕ್ಷಾಮವೇನು ಹೆಂಗಸು ಹೇಳುತ್ತಾಳೆ ಆದರೆ ಇದ್ದ ಸಂಗತಿಯನ್ನು ಹೇಳುವೆನು ಕೇಳು ನಿನ್ನ ಶತ್ರುಸ್ತ್ರೀಯರು ತಮ್ಮ ಗಂಡಂದಿರನ್ನು ಕಳೆದು ಕೊಂಡು ಅಳುತ್ತಿರುವದ್ದರಿಂದ ಉಂಟಾದ ಕಣ್ಣೀರಿನ ನದಿಯ ದಡದಲ್ಲಿ ಗಂಧರ್ವರು ಹಾಡುತ್ತಿರುವದ್ದರಿಂದ ಆ ಸಂಗೀತವನ್ನು ಕೇಳುವದಕ್ಕೆ ಜಿಂಕೆ ಗಳೆಲ್ಲವೂ ಹೋಗಿರುವದ್ದರಿಂದ ನಮಗೆ ಮಾಂಸವು ಸಿಕ್ಕಲು ಕ್ಷಾಮವಾಗಿದೆ ಎಂದು ಹೇಳಿದಳು.

ಗ॥ ರಾಜಾತಸ್ಯೈ ಪ್ರತ್ಯಕ್ಷರ ಲಕ್ಷಂ ಪ್ರಾದಾತ್ ಸರ್ವಾಭರಣಾನ್ಯುತ್ತಾರ್ಯ ತು
ರಂಗಂಚ ದದೌ ತತೋಗೃಹಮಾಗತ್ಯಗವಾಕ್ಷ ಉಪವಿಷ್ಟಃ ॥

ತಾ॥ ದೊರೆಯು ಆಕೆಗೆ ಅಕ್ಷರಲಕ್ಷವನ್ನು ಕೊಟ್ಟು ತನ್ನ ಎಲ್ಲಾ ಒಡವೆಗಳನ್ನು ಕೊಟ್ಟು ತನ್ನ ಕುದುರೆಯನ್ನು ಆಕೆಗೆ ಕೊಟ್ಟು ತಾನು ಅರಮನೆಗೆ ಬಂದು ಒಂದು ಕಿಟಕಿಯ ಬಳಿಯಲ್ಲಿ ಕೂತುಕೊಂಡನು.

ಗ॥ ತತ್ರಾಸೀನಂ ಭೋಜಂ ದೃಷ್ಟ್ವಾ ರಾಜಮಾರ್ಗನಿಸ್ಥಿತಃ ಕಶ್ಚಿದಾಹದೇ
ವಸಕಲಮಹೀಪಾಲ ಆಕರ್ಣಯ ॥

ತಾ॥ ಅಲ್ಲಿ ಕೂತುಕೊಂಡಿದ್ದ ಭೋಜನನ್ನು ಒಬ್ಬಾನೊಬ್ಬ ಕವಿಯು ರಾಜಬೀದಿಯಲ್ಲಿ ಬರುತ್ತಾ ಹೇಳುತ್ತಾನೆ ಎಲೌ ರಾಜಾಧಿರಾಜನಾದ ಭೋಜನೇ ಕೇಳು.

ಶ್ಲೋ॥ ಇತಶ್ಚೇತಶ್ಚಾದ್ಭಿಃ ಘಟಿತತಟಸ್ರೋತುರುದಧಿರಿತೋದುಲಂಘ್ಯಾತ್ಮ
ಬಹುಳಹಿಮಪಂಕೋಗಿರಿರಯಂ ಇದಾನೀಂ ನಿರ್ವೃತ್ತೇ ಕರಿತುರಗನೀ
ರಾಜನವಿಧೌ ನಜಾನೇಯಾತಾರಃ ತವ ಚ ರಿಪವಃ ಕೇನ ಪಥಾಃ ॥

ತಾ॥ ಎಲೌ ರಾಯನೆ ನಿನ್ನ ಸೈನ್ಯಗಳು ಚೈತ್ರಯಾತ್ರೆಗೆ ಹೊರ ಡಲು ಕುದುರೆಗಳಿಗೂ ಆನೆಗಳಿಗೂ ನೀರಾಜನವನ್ನು ಮಾಡುವಾಗಲೇ ನಿನ್ನ ಶತ್ರುಗಳು ಪಲಾಯನಂಗೈದರು. ಅವರು ಎಲ್ಲಿಗೆ ಓಡಿದರೊ, ಪೂರ್ವ ಪಶ್ಚಿಮ ದಕ್ಷಿಣದಿಕ್ಕುಗಳಿಗೆ ಹೋಗಿರಬಹುದೆಂದರೆ ಸಮುದ್ರಗಳು ಅಡ್ಡವಾಗಿರುವವು. ಉತ್ತರದಿಕ್ಕಿನಲ್ಲಾದರೊ ಮಂಜಿನ ಬೆಟ್ಟಗಳು ಆವರಿಸಿಕೊಂಡಿರುತ್ತವೆ. ಆದ್ದರಿಂದ ನಿನ್ನ ಶತ್ರುಗಳು ಹೋದ ದಾರಿಯೇ ತಿಳಿಯದು ಎಂದನು.

ಗ॥ ತುಷ್ಟೋಭೋಜಃ ವರ್ತ್ಮನಿಸ್ಥಿತಸ್ಯೈವ ತಸ್ಯಪಂಚಗಜಾನ್‌ದದೌ ॥

ತಾ॥ ಅದನ್ನು ಕೇಳಿ ಧೊರೆಯು ದಾರಿಯಲ್ಲಿದ್ದ ಆ ಕವಿಗೆ ಐದು ಆನೆಗಳನ್ನು ಕೊಟ್ಟು ಕಳುಹಿಸಿದನು.

ಗ॥ ಕದಾಚಿದ್ರಾಜಾಮೃಗಯಾರಸ ಪರಾಧೀನೋಹಯಮಾರುಹ್ಯಪ್ರತಸ್ಥೌ ।

ತಾ॥ ಒಂದಾದಿನ ಧೊರೆಯು ಬೇಟೆಯಾಡಲು ಇಷ್ಟವುಳ್ಳವನಾಗಿ ಕುದುರೆಯನ್ನೇರಿ ಹೊರಟನು.

ಶ್ಲೋ॥ ತತೋನದೀಂಸಮುತ್ತೀರ್ಣಂ ಶಿರಸ್ಯಾರೋಪಿತೇಂಧನಂ ।
ವೇಷೇಣಬ್ರಾಹ್ಮಣಂಜ್ಞಾತ್ವಾ ರಾಜಾಪಪ್ರಚ್ಛ ಸತ್ವರಂ ॥

ತಾ॥ ತಲೆಯಮೇಲೆ ಸೌದೆಯನ್ನು ಹೊತ್ತುಕೊಂಡು ನದಿಯನ್ನು ದಾಟಿಬರುತ್ತಿರುವವನನ್ನು ಆತನ ಆಕಾರದಿಂದ ಬ್ರಾಹ್ಮಣನೆಂದು ತಿಳಿದು ಕೇಳುತ್ತಾನೆ.

ರಾಜಾ॥ ಕಿಯನ್ಮಾತ್ರಂಜಲಂವಿಪ್ರ ॥

ತಾ॥ ಎಲೈ ಬ್ರಾಹ್ಮಣನೆ ನೀರು ಎಷ್ಟು ಆಳವಾಗಿದೆ. (ಪಟಾಹ) ಅವನು ಹೇಳುತ್ತಾನೆ. ( ಜಾನುದಘ್ನಂನರಾಧಿಪ ) ರಾಯನೇ ಮೊಳಕಾಲುದ್ದವಿದೆ. (ರಾಜಾ) ಚಿಮಂತ್ಯಕ್ರಂತಃ ಈದೃಶೀಂಕಿಮವಸ್ಥಾಂಗತ ॥ ಧೊರೆಯು ಆಶ್ಚರ್ಯಪಟ್ಟು ನಿನಗೇನು ಈ ಅವಸ್ಥೆ ಯೆಂದನು. (ಪಠಹ) ನಹಿಸರ್ವೇ ಭವಾದೃಶಾಃ-ಬ್ರಾಹ್ಮಣನು ಹೇಳುತ್ತಾನೆ ಎಲ್ಲರೂ ನಿನ್ನಂತೆ ಆರುವದಿಲ್ಲವು. (ರಾಜಾಪ್ರಾಹ) ಕುತೂಹಲಾತ್ ವಿದ್ವನ್ ಯಾಚಸ್ವಕೋಶಾಧಿಕಾರಿಣಂ ಲಕ್ಷಂ ದಾಸ್ಯತಿಮದ್ವಚಸಾ ॥

ತಾ॥ ಧೊರೆಯು ಹೇಳುತ್ತಾನೆ, ಎಲೌ ಬ್ರಾಂಹಣನೇ ಕೋಶಾಧಿಕಾರಿಯನ್ನು ನಾನು ಹೇಳಿದೆನೆಂದು ಕೇಳು ಒಂದು ಲಕ್ಷವನ್ನು ಕೊಡುತ್ತಾನೆ ಅಂದನು.

ಗ॥ ತತೋವಿಪ್ರಃಕಾಷ್ಠಂ ಭೂಮೌನಿಕ್ಷಿಪ್ಯ ಕೋಶಾಧಿಕಾರಿಣಂಗತ್ವಾ
ಪ್ರಾಹ ಮಹಾರಾಜೇನಪ್ರೇಷಿತೋಹಂಲಕ್ಷಂಮೇದೀಯತಾಂ ॥

ತಾ॥ ಬಳಿಕ ಆತನು ಸೌದೆಯನ್ನು ತಲೆಯಿಂದ ಇಳಿಸಿ ಕೋಶಾಧಿಕಾರಿಯ ಬಳಿಗೆ ಹೋಗಿ ಎಲೌ ಅಧಿಕಾರಿಯೇ ಧೊರೆಯು ನಿನ್ನಲ್ಲಿಗೆ ಕಳುಹಿಸಿರುವನು ಎಂದನು.

ಗ॥ ತತಸ್ಸಹಸನ್ ಆಹ ವಿಪ್ರಭವನ್ಮೂರ್ತಿಃಲಕ್ಷಂನಾರ್ಹತಿ ॥

ತಾ॥ ಅಧಿಕಾರಿಯು ನಗುತ್ತಾ ಹೇಳಿದ್ದೇನಂದರೆ ಅಯ್ಯಾ ನಿನ್ನನ್ನು

ನೋಡಿದರೆ ಲಕ್ಷ ಕೊಡುವನಾಗಿಲ್ಲವೆಂದನು.

ಗ॥ ತತೊ ವಿಪ್ರೋಽಪಿಸರಾಜಾನಮೇತ್ಯಾಹಸ ಪುನರ್ಹಸತಿಲಕ್ಷಂದೇವನಾರ್ಪಯತಿ ॥

ತಾ॥ ಬ್ರಾಹ್ಮಣನು ದುಃಖಪಟ್ಟು ರಾಜನಬಳಿಗೆ ಬಂದು ಅಯ್ಯಾ ಅಧಿಕಾರಿಯು ನನ್ನನ್ನು ನೋಡಿ ನಕ್ಕನೇಹೊರತು ಏನೂಕೊಡಲಿಲ್ಲವೆಂದನು.

ಗ॥ ರಾಜಾಕೌತೂಹಲಾದಾಹಲಕ್ಷದ್ವಯಂ ಮೂರ್ಖಾಯಪ್ರದಿಶ್ಯತಿ ॥

ತಾ॥ ಧೊರೆಯು ತಿರಿಗೂ ಪ್ರೀತಿಯಿಂದ ಎರಡು ಲಕ್ಷಗಳನ್ನು ಕೇಳಿ ಕೊ ಕೊಡುತ್ತಾನೆ ಅಂದನು.

ಗ॥ ಪುನರಾಗತ್ಯವಿಪ್ರಃ ಲಕ್ಷದ್ವಯಂದೇಯಮಿತಿರಾಜೋಕ್ತಮವಾದ ॥

ತಾ॥ ಬ್ರಾಹ್ಮಣನು ತಿರುಗೂ ಬಂದು ಯೆರಡುಲಕ್ಷ ಕೊಡಬೇಕೆಂದು ರಾಜನು ಹೇಳಿದ್ದನ್ನು ಹೇಳಿದನು.

ಗ॥ ಪುನರ್ಹಸತಿ॥

ತಾ॥ ತಿರುಗೂ ನಕ್ಕನು.

ಗ॥ ಪುನರ್ಭೋಜಂಪ್ರತ್ಯಾಹಸ ಪಾಪಿಷ್ಠೋಮಾಂಹಸತಿನಾರ್ಪಯತೀತಿ॥

ತಾ॥ ತಿರುಗೂ ಧೊರೆಯೆಡೆಗೆಬಂದು ಅಯ್ಯಾ ಆ ಪಾಪಿಯು ನನ್ನ ನೋಡಿ ನಗುವನೇ ಹೊರತು ಏನನ್ನೂ ಕೊಡಲಿಲ್ಲವೆಂದನು.

ಗ॥ ತತಃ ಕೌತೂಹಲೀಲೀಲಾನಿಧಿಃಮಹೇಶಾಂಶಃ ಶ್ರೀಭೋಜಃಪ್ರಾಹಲಕ್ಷತ್ರಯಂಯಾಚಸ್ವಸದಾಸ್ಯತಿ ॥

ತಾ॥ ಬಳಿಕ ತಮಾಷೆಗಾರನಾದ ಧೊರೆಯು ವಿಶ್ವಾಸದಿಂದ ಯೆಲಾ ವಿಪ್ರನೇ ಮೂರು ಲಕ್ಷವನ್ನು ಕೇಳು ನಿಶ್ಚಯವಾಗಿ ಕೊಡುವನೆಂದನು.

ಗ॥ ಪುನರೇತ್ಯಪ್ರಾಹ ರಾಜಾಮೇಲಕ್ಷತ್ರಯಂದಾಪಯತಿ ॥

ತಾ॥ ಬ್ರಾಹ್ಮಣನು ತಿರುಗಹೋಗಿ ಧೊರೆಯು ಮೂರುಲಕ್ಷಗಳನ್ನು ತೆಗೆದುಕೊಳ್ಳುವಂತೆ ಹೇಳಿರುವನೆಂದನು.

ಗ॥ ಸಪುನರ್ಹಸತಿ॥ ಆ ಅಧಿಕಾರಿಯಾದರೊ ಹಾಸ್ಯವನ್ನೇ ಮಾಡುತ್ತಿದ್ದನು.

ಗ॥ ತತಃ ಕ್ರುದ್ಧೋವಿಪ್ರಃ ಪುನರೇತ್ಯಾಹದೇವಸನಾರ್ಪಯತ್ಯೇವ ॥

ತಾ॥ ಬಳಿಕ ಬ್ರಾಹ್ಮಣನು ಕೋಪಗೊಂಡು ರಾಜನ ಹತ್ತಿರಕ್ಕೆ ಬಂದು ಸ್ವಾಮಿ ಆತನು ಕೊಡುವುದೇ ಇಲ್ಲನೆಂದನು.

ಶ್ಲೋ॥ ರಾಜನ್ಕನಕಧಾರಾಭಿ ತ್ವಯಿಸರ್ವತ್ರವರ್ಷತಿ ।

ಆಭಾಗ್ಯಛತ್ರಸಂಛನ್ನೇ ಮಯಿನಾಯಾಂತಿಬಿಂದವಃ ॥

ತಾ॥ ಎಲೈ ದೊರೆಯೆ ನೀನು ಚಿನ್ನದ ಧಾರೆಗಳುಳ್ಳ ಮಳೆಯನ್ನು ಎಲ್ಲೆಲ್ಲಿಯೂ ಸುರಿಸುತ್ತಿದ್ದರೂ ದುರದೃಷ್ಟವೆಂಬ ಕೊಡೆಯಿಂದ ಕೂಡಿದ ನನ್ನ ಮೇಲೆ ಒಂದು ಹನಿಯಾದರೂ ಬೀಳುವದಿಲ್ಲವೆಂದನು.

ಶ್ಲೋ॥ ತ್ವಯಿವರ್ಷತಿಪರ್ಜನ್ಯೇ ಸರ್ವೇಪಲ್ಲವಿತಾದ್ರುಮಾಃ ।
ಅಸ್ಮಾಕಮರ್ಕವೃಕ್ಷಾಣಾಂ ಪೂರ್ವಪತ್ರೇಷುಸಂಶಯಃ ॥

ತಾ॥ ಎಲೈಪರ್ಜನ್ಯನೇ ನೀನು ಎಲ್ಲೆಲ್ಲಿಯೂ ಮಳೆ ಸುರಿಸೋಣದರಿಂದ ಎಲ್ಲಾ ಗಿಡಗಳೂ ಚಿಗುರುತ್ತವೆ. ಎಕ್ಕದ ಗಿಡಗಳಂತಿರುವ ನಮ್ಮ ಎಲೆಗಳೂಕೂಡ ಬಿದ್ದು ಉದರದಿದ್ದರೆ ಸಾಕಾಗಿದೆ ಎಂದನು.

ಶ್ಲೋ॥ ಕ್ರೋಧಂಮಾಕುರುಮುದ್ಧ್ಯಾಕ್ಯಾತ್ಗತ್ವಾಕೋಶಾಧಿಕಾರಿಣಂ । ಲಕ್ಷ
ತ್ರಯಂಗಜೇಂದ್ರಾಶ್ಚ ದಶಗ್ರಾಹ್ಯಾಸ್ತ್ವಯಾದ್ವಿಜ ॥

ತಾ॥ ಎಲೈ ಬ್ರಾಹ್ಮಣನೇ ಕೋಪಮಾಡಬೇಡ. ಈಗಲೂ ಕೋಶಾಧಿಕಾರಿಯ ಬಳಿಗೆ ಹೋಗಿ ಮೂರು ಲಕ್ಷಗಳನ್ನೂ ಹತ್ತು ಆನೆಗಳನ್ನೂ ನನ್ನ ಮಾತಿನಂತೆ ತೆಗದುಕೊಳ್ಳಬೇಕೆಂಬದಾಗಿ ಹೇಳಿದನು.

ಗ॥ ತತಸ್ಸ್ವಾಂಗರಕ್ಷಕಂಚಪ್ರಹಿಣೋತ್ ॥

ತಾ॥ ತರುವಾಯ ತನ್ನ ಸೇವಕನನ್ನು ಆತನೊಡನೆ ಕಳುಹಿಸಿದನು.

ಗ॥ ತತಃಕೋಶಾಧಿಕಾರೀ ಧರ್ಮಪತ್ರೇಲಿಖತಿ ।

ತಾ॥ ಬಳಿಕ ದೇಶಾಧಿಕಾರಿಯು ಶಾಸನದಲ್ಲಿ ಬರೆಯುತ್ತಾನೆ.

ಶ್ಲೋ॥ ಲಕ್ಷಂಲಕ್ಷಂ ಪುನರ್ಲಕ್ಷಂ ಮತ್ತಾಶ್ಚದಶದಂತಿನಃ ।
ದತ್ತಾಭೋಜೇನತುಷ್ಟೇನ ಜಾನುದಘ್ನ ಪ್ರಭಾಷಣಾತ್ ॥

ತಾ॥ ಬ್ರಾಹ್ಮಣನು ಜಾನುದಘ್ನ ಎಂಬ ಪದವನ್ನು ಉಪಯೋಗಿಸಿ ಉತ್ತರ ಹೇಳಿದ್ದರಿಂದ ಭೋಜರಾಯನು ಸಂತೋಷಪಟ್ಟು ಮೂರು ಲಕ್ಷವನ್ನೂ ಹತ್ತು ಆನೆಗಳನ್ನೂ ದೊರೆಯು ಕೊಟ್ಟಿರುವನೆಂದು ಬರೆದನು.

ಗ॥ ತತಸ್ಸಿಂಹಾಸನಮಲಂಕುರ್ವಾಣೇ ಶ್ರೀಭೋಜನೃಪತೌ ದ್ವಾರಪಾಲ
ಆಗತ್ಯಪ್ರಾಹರಾಜನ್ ಕೋಪಿಶುಕದೇವನಾಮಾಕವಿರ್ದ್ವಾರಿತಿಷ್ಠತೀತಿ॥

ತಾ॥ ಬಳಿಕ ರಾಯನು ಸಿಂಹಾಸನಾರೂಢನಾಗಿರಲು ದ್ವಾರಪಾಲಕನು ಬಂದು ಸ್ವಾಮಿ ಯಾರೊ ಶುಕದೇವನೆಂಬ ಕವಿಯು ಬಾಗಿಲಲ್ಲಿರುವನೆಂದನು.

ಗ॥ ರಾಜಾಬಾಣಂಪ್ರಾಹಪಂಡಿತವರ ಸುಕವೇಸ್ತತ್ತ್ವಂಜಾನಾಸಿ ॥

ತಾ॥ ಧೊರೆಯು ಬಾಣನನ್ನು ಕುರಿತು ನೀನು ಆತನನ್ನು ಬಲ್ಲೆಯಾ ಅಂದನು.

(ಬಾಣಃ) ದೇವಶುಕದೇವಪರಿಜ್ಞಾನ ಸಾಮರ್ಥ್ಯಬಿಜ್ಞಃ ಕಾಳಿದಾಸಏವನಾನ್ಯಂ ॥

ತಾ॥ ಸ್ವಾಮಿ ಶುಕದೇವನ ವಿಚಾರದಲ್ಲಿ ಇಷ್ಟುರವೆನೆಂಬ ಪರಿಜ್ಞಾನವು ಕಾಳಿದಾಸನಿಗೊಬ್ಬನಿಗಲ್ಲದೆ ಮತ್ತ್ಯಾರಿಗೂ ಇಲ್ಲವೆಂದನು.

ಗ॥ ರಾಜಾ ಸುಖವೇಕಾಳಿದಾಸ ಕಿಂವಿಜಾನಾಸಿಶುಕದೇವಕವಿಂ ॥

ತಾ॥ ಧೊರೆಯು ಕಾಳಿದಾಸನನ್ನು ಕುರಿತು ಎಲೈ ಕವಿಶೇಖರನೆ ಶುಕದೇವನ ಸಾಮರ್ಥ್ಯವನ್ನು ನೀನು ತಿಳಿದಿರುವೆಯಾ ಅಂದನು.

ಆಹ ಕಾಳಿದಾಸಃ॥ ಶ್ಲೋ॥ ಸುಕವಿದ್ವಿತಯಂಜಾನೆ ನಿಖಿಲೇಪಿಮಹೀತಲೆ ।
ಭವಭೂತಿಶ್ಶುಕಶ್ಚಾಯಂ ವಾಲ್ಮೀಕಿಸ್ತ್ರಿತಯೋನಯೋಃ॥

ತಾ॥ ಎಲೆ ಧೊರೆಯೆ ಈ ಪ್ರಪಂಚದಲ್ಲಿ ಭವಭೂತಿ ಶುಕದೇವ ಈ ಇಬ್ಬರನ್ನು ಸತ್ಕವಿಗಳೆಂದು ತಿಳಿದಿರುವೆನು. ಇವರಿಗೆ ಮೂರನೆಯವನೇ ವಾಲ್ಮಿಕೀಯು ಯೆಂಬದಾಗಿ ಹೇಳಿದನು.

ಗ॥ತತೋವಿದ್ವದ್ವೃಂದವಂದಿತಾಸೀತಾಪ್ರಾಹ॥

ತಾ॥ ಬಳಿಕ ವಿದ್ವಾಂಸರಿಂದ ಪೂಜ್ಯಳಾದ ಸೀತೆಯು ಹೇಳುತ್ತಾಳೆ.

ಶ್ಲೋ॥ ಕಾಕಾಃಕಿಂಕಿಂನಕುರ್ವಂತಿಕ್ರೇಂಕಾರಂಯತ್ರಯತ್ರವಾ ।
ಶುಕಏವಪರಂವಕ್ತಿ ನೃಪಹಸ್ತೋಪಲಾಲಿತಃ ॥

ತಾ॥ ಯೆಲ್ಲೆಲ್ಲಿಯೂ ಕಾಗೆಗಳು ವಕ್ರವಾಗಿ ಕೂಗಿ ಕೊಡೇ ಇರುತ್ತವೆ. ಗಿಳಿಯಾದರೊ ರಾಜರ ಕೈಯಲ್ಲಿ ಕುಳಿತುಕೊಂಡು ಇಂಪಾಗಿ ಮಾತನಾಡುವಂತೆ ಇರುತ್ತದೆಯೇನು ಯೆಂದಳು.

ಗ॥ ತತೋಮಯೂರಃಪ್ರಾಹ ॥ ಬಳಿಕ ಮಯೂರನು ಹೇಳುತ್ತಾನೆ.

ಶ್ಲೋ॥ ಅಪೃಷ್ಟಸ್ತುನರಃಕಿಂಚಿತ್ ಯೋಬ್ರೂತೆರಾಜಸಂಸದಿ ।
ನಕೇವಲಮಸನ್ಮಾನಂ ಲಭತೇಚವಿಡಂಬನಾಂ ॥

ತಾ॥ ಯಾರಾದರೆ ರಾಜಸಭೆಯಲ್ಲಿ ಕೇಳದೆ ಉತ್ತರಹೇಳುತ್ತಾನೊ ಅವನು ಅಪಮಾನವನ್ನು ಹೊಂದುವುದಲ್ಲದೆ ದೂಷಣೆಗೂ ಒಳಗಾಗುವನು ಯೆಂದನು.

ದೇವತಥಾಪ್ಯುಚ್ಯತೇ॥ ಶ್ಲೋ॥ ಕಾಸಭಾಕಿಂಕವಿಜ್ಞಾನಂ ರಸಿಕಾಃಕವಯಶ್ಚಕೇ । ಭೋಜಕಿಂನಾಮತೇವಾನಶುಕಸ್ತು

ಷ್ಯತಿಯೋನಸಃ ||

ತಾ|| ಆದಾಗ್ಯೂ ಹೇಳುತ್ತೇನೆ ಕೇಳು ಸಭೆಯೂ ಎಷ್ಟರದು ಕವಿಜ್ಞಾನವಂದರೇನು ರಸಿಕರಾರು ಕವಿಗಳಾರು ಯೆಲೌ ಭೋಜನೇ ನೀನುಮಾಡುವ ಮಾನವೃತಾನೆ ಏನು ಯಾವದರಿಂದತಾನೆ ಆ ಶುಕದೇವನು ಸಂತೋಷವಟ್ಟನು ಯೆಂದನು.

ಗ|| ತಥಾಪಿಭವನದ್ವಾರ ಮಾಗತಶ್ಶುಕದೇವಃ ಸಭಾಯಾಮಾನೇಯಃ ||

ತಾ|| ಹ್ಯಾಗಾದರೂ ಸಭಾದ್ವಾರಕ್ಕೆ ಬಂದಿರುವ ಶುಕದೇವನನ್ನು ಬರಮಾಡಿಕೊಳ್ಳುವುದೇ ಯುಕ್ತವಾಗಿದೆ ಯೆಂದನು.

ಗ|| ತದಾರಾಜಾವಿಚಾರಯತಿ ಶುಕದೇವಸಾಮರ್ಥ್ಯಂಶ್ರುತ್ವಾ ಹರ್ಷವಿಷಾದಯೋಃಪಾತ್ರಮಾಸೀತ್ ಮಹಾಕವಿರವಲೋಕಿತ ಇತಿಹರ್ಷಃ ಅಸ್ಮೈ ಸತ್ಕವಿಕೋಟಿಮುಕುಟಮಣಯೆ ಕಿಂನಾಮದೇಯಮಿತಿಚವಿಷಾದಃ ಭವತುದ್ವಾರಪಾಲಪ್ರವೇಶಯ ತತಆಯಾಂತಂಶುಕದೇವಂದೃಷ್ಟ್ವಾ ಸಿಂಹಾಸನಾದುದತಿಷ್ಠತ್ ಸರ್ವೇಪಂಡಿತಾಃಶುಕದೇವಃ ಪ್ರಣಮ್ಯಸವಿನಯಮುಪವೇಶಯಂತಿ ಸಚರಾಜಾತಂಸಿಂಹಾಸನೇಉಪವೇಶ್ಯಸ್ವಯಂ ತದಾಜ್ಞಯೋಪವಿಷ್ಟಃ ||

ತಾ|| ಆಗ ರಾಜನು ಆಲೋಚಿಸಿ ಶುಕದೇವಸಾಮರ್ಥ್ಯವನ್ನು ಕೇಳಿ ದೊಡ್ಡ ಕವಿಯನ್ನು ನೋಡಿದೆನೆಂದು ಸಂತೋಷವೂ ಆ ಕವಿಗೆ ಏನುತಾನೆ ಮರ್ಯಾದೆಮಾಡಲೆಂಬ ವಿಷಾದವೂ ಉಂಟಾಗಿ ಆಗಲಿ. ಯೆಲೌ ದ್ವಾರಪಾಲಕನೆ ಆತನನ್ನು ಪ್ರವೇಶಿಸು ಯೆಂದು ಬಳಿಕ ಸಭಾಪ್ರವೇಶಮಾಡಿದ ಆ ಶುಕದೇವನನ್ನು ನೋಡಿ ಯೆಲ್ಲಾ ಪಂಡಿತರೂ ಥಿಗ್ಗನೆ ಯೆದ್ದರು. ರಾಯನೂ ಸಿಂಹಾಸನವಿಂದೆದ್ದು ಯೆಲ್ಲರೂ ಆ ಕವಿಯನ್ನು ಕೂಡಿಸಿದರು, ಆ ಶುಕದೇವ ಕವಿಯೂ ಕೂಡ ರಾಯನನ್ನು ಸಿಂಹಾಸನದಲ್ಲಿ ಕೂಡಿಸಿ ರಾಜಾಜ್ಞೆಯಂತೆ ತಾನೂ ಕೂತುಕೊಂಡನು.

ಗ|| ತತಶ್ಶುಕದೇವಃಪ್ರಾಹದೇವಧಾರಾನಾಥ ಶ್ರೀವಿಕ್ರಮನರೇಂದ್ರಸ್ಯಯಾ ದಾನಲಕ್ಷ್ಮೀಃ ತ್ವಾಮೇವಸೇವತೇದೇವಮಾಳವೇಂದ್ರ ಯೆವಧನ್ಯೋ ನಾನ್ಯೇಭೂಭುಜಃ ಯಸ್ಯತೇಕಾಳಿದಾಸಾದಯೋಮಹಾಕವಯಃ ಸೂತ್ರಬದ್ಧಾಃಪಕ್ಷಿಣಇವನಿವಸನ್ತಿ ||

ತಾ|| ಬಳಿಕ ಶುಕದೇವಕವಿಯು ಭೋಜನನ್ನು ಕುರಿತು ಯೆಲೈ ಧಾರಾಧೀಶನಾದ ಭೋಜರಾಯನೇ ವಿಕ್ರಮಾರ್ಕರಾಯನ ಯಾವ ದಾನಲ

ಕ್ಷ್ಮೆಯುಂಟೊ ಅದು ನಿನ್ನನ್ನೇ ಸೇರಿರುವುದು. ಮಾಳವೇಶ್ವರನಾದ ನೀನೆ ಧನ್ಯನು. ಮತ್ತೊಬ್ಬ ಧೊರೆಯಿಲ್ಲವು ಯಾಕೆಂದರೆ ಕಾಳಿದಾಸನೆ ಮೊದಲಾದ ಕವಿಗಳು ದಾರದಿಂದ ಕಟ್ಟಲ್ಪಟ್ಟ ಪಕ್ಷಿಗಳಂತೆ ನಿನ್ನಲ್ಲಿ ಇರುವರೂ ಆದ್ದರಿಂದ ನೀನು ಧನ್ಯನೆಂದು ಹೇಳಿದನು.

ತತಃಪಠತಿ॥ ಶ್ಲೋ॥ಪ್ರತಾಪಭೀತ್ಯಾಭೋಜಸ್ಯ ತಪನೋಮಿತ್ರತಾಮಗಾತ್ ।
ಔರ್ವೋಬಾಡಬತಾಂಧತ್ತೆ ತಟಿತ್ಕ್ಷಣಿಕತಾಂಗತಾ ॥

ತಾ॥ ಭೋಜರಾಯನ ಪರಾಕ್ರಮದ ಭೀತಿಯಿಂದ ಸೂರ್ಯನು ಮಿತ್ರನಾದನು. ಸಮುದ್ರದಲ್ಲಿರುವ ಅಗ್ನಿಯು ಬಾಡಬವನ್ನು ಸಿಕ್ಕೊಂಡಿತು.(ಕುದುರೆ) ಮಿಂಚಾದರೂ ಒಂದು ಕ್ಷಣ ಇರುವುದು. ಯೆಂದು ಹೇಳಲಾಗ.

ರಾಜಾ॥ ತಿಷ್ಠ ಸುಕವೇಮಾಪಠಃ ಶ್ಲೋಕಃಪರಸ್ಸೀಯಃ ॥

ಧೊರೆಯು ಹೇಳುತ್ತಾನೆ. ಯೆಲೆ ಸತ್ಕವಿಯೆ ಇನ್ನೊಂದು ಶ್ಲೋಕವನ್ನು ಹೇಳಬೇಡ (ಅಂದರೆ ಈಗ ಹೇಳಿದ ಶ್ಲೋಕಕ್ಕೆ ತಕ್ಕ ಮರ್ಯಾದೆ ಮಾಡಿದರೆ ಸಾಕಾಗಿಧೆ ಯೆಂದರ್ಥವು.

ಶ್ಲೋ॥ ಸುವರ್ಣಕಲಶಂಪ್ರಾದಾತ್ ದಿವ್ಯಮಾಣಿಕ್ಯಸಂಭೃತಂ ।
ಭೋಜಶ್ಶುಕಾಯಸಂತುಷ್ಟೋ ದಂತಿನಶ್ಚಚತುಶ್ಶತಂ ॥

ತಾ॥ಧೊರೆಯು ಆ ಶುಕದೇವಕವಿಗೆ ದಿವ್ಯಮಾಣಿಕ್ಯಮಣಿ ಖಚಿತವಾಧ ಚಿನ್ನದ ಕಲಶವನ್ನೂ ನಾನೂರು ಆನೆಗಳನ್ನೂ ಕೊಟ್ಟನು.

ಗ॥ ಇತಿಪುಣ್ಯಪತ್ರೇಲಿಖಿತ್ವಾಸರ್ವಂದತ್ವಾ ಕೋಶಾಧಿಕಾರೀಶುಕಂಪ್ರಸ್ಥಾಪಯಾಮಾಸ ॥

ಹೀಗೆ ದಾನಶಾಸನದಲ್ಲಿ ಬರೆದುಕೊಟ್ಟು ಆ ಶುಕದೇವ ಕವಿಯನ್ನು ಕಳುಹಿಸಿಕೊಟ್ಟನು.

ಗ॥ ರಾಜಾಸ್ವದೇಶಂಪ್ರತಿಗತಂ ಶುಕಂಜ್ಞಾತ್ವಾತುತೋಷಸಾಚಪರಿಷತ್ ಸಂತುಷ್ಟಾ ॥

ತಾ॥ ಧೊರೆಯುಕೂಡ ಶುಕದೇವನು ತನ್ನ ದೇಶಕ್ಕೆ ಹೊರಟುದ್ದನು ಕೇಳಿ ಸಂತೋಷಪಟ್ಟನು. ಸಭಾಸದರೂ ಸಂತುಷ್ಟರಾದರು.

ಗ॥ ಅನ್ಯಥಾವರ್ಷಕಾಲೇ ವಾಸುದೇವೋನಾಮಕವಿಃಕಶ್ಚಿದಾಗತ್ಯ ರಾಜಾನಂದೃಷ್ಟವಾನ್ ॥

ತಾ॥ ಮತ್ತೊಂದುಸಲ ವರ್ಷಕಾಲದಲ್ಲಿ ವಾಸುದೇವನೆಂಬ ಕವಿಯು ಒಬ್ಬನು ಬಂದು ರಾಜನನ್ನು ಕಂಡನು.

(ರಾಜಾ)ಸುಕವೇಪರ್ಜನ್ಯಂಪಠ ||

ತಾ|| ದೊರೆಯು ಆ ಕವಿಯನ್ನು ಕುರಿತು ಮೇಘವನ್ನು ವರ್ಣಿಸೆಂದನು.

ಶ್ಲೋ|| ನೋ ಚಿಂತಾಮಣಿಭಿರ್ನ ಕಲ್ಪತರುಭಿರ್ನೋ ಕಾಮಧೇನ್ವಾದಿಭಿರ್ನೋ
ದೇವೈಶ್ಚ ಪರೋಪಕಾರನಿರತೈಸ್ಸ್ಥೂಲೈರ್ನ ಸೂಕ್ಷ್ಮೈರಪಿ || ಅಂಭೋ
ಧೇನನಿರಂತರಂ ಜಲಭರೈಸ್ತ್ವಮುರ್ವೀಂ ಸಿಂಚತಾ ಧೌರೇಯೇಣ
ಧುರಂತ್ವಯಾದ್ಯ ಸಹಿತಾಮನ್ಯೇ ಜಗಜ್ಜೀವತಿ ||

ತಾ|| ಎಲೈ ಮೇಘವೇ ಈ ಪ್ರಪಂಚಕ್ಕೆಲ್ಲಾ ಮಳೆಯನ್ನು ಸುರಿಸಿ ಉಪಕಾರಮಾಡುವದರಲ್ಲಿ ನಿನ್ನನ್ನು ಬಿಟ್ಟರೆ ಪರೋಪಕಾರದಲ್ಲಿ ಬದ್ಧ ಕಂಕಣರಾಗಿರುವ ಚಿಂತಾಮಣಿಗಳು, ಕಲ್ಪವೃಕ್ಷಗಳು, ಕಾಮಧೇನುಗಳು, ದೇವತೆಗಳಾರೂ ಅಲ್ಲವೆಂದು ನಿಶ್ಚಯವಾಗಿ ನಂಬಿದ್ದೇನೆಂದು ಬಣ್ಣಿಸಿದನು.

ರಾಜಾಲಕ್ಷಂದದೌ|| ದೊರೆಯು ಲಕ್ಷವನ್ನು ಕೊಟ್ಟನು.

ಗ|| ಕದಾಚಿದ್ರಾಜಾನಂ ನಿರಂತರಂ ದೀಯಮಾನ ಮಾಲೋಕ್ಯ ಮುಖ್ಯಾ
ಮಾತ್ಯೋ ವಕ್ತುಮಶಕ್ತೋ ರಾಜ್ಞಶ್ಶಯನ ಭವನಭಿತ್ತೌ ವ್ಯಕ್ತಾನ್ಯಕ್ಷ
ರಾಣಿ ಲಿಖಿತವಾನ್ ||

ತಾ|| ಒಂದಾನೊಂದುದಿನ ಯಾವಾಗಲೂ ಇದ್ದುದೆಲ್ಲವನ್ನು ದಾನಮಾಡುತ್ತಿರುವ ದೊರೆಯನ್ನು ನೋಡಿ ಮುಖ್ಯ ಮಂತ್ರಿಯು ಹೇಳಲು ಶಕ್ತಿಯಿಲ್ಲದೆ ದೊರೆಯು ಮಲಗುವಮನೆ ಗೋಡೆಯಮೇಲೆ ಬರೆದನು. ಏನೆಂದರೆ:—

ಶ್ಲೋ|| ಆಪದರ್ಥಂ ಧನಂ ರಕ್ಷೇತ್ ||

ತಾ|| ಅಂದರೆ ಕಷ್ಟಕಾಲ ಬರಬಹುದೆಂದು ಹಣವನ್ನು ಕಾಪಾಡಿಕೊಳ್ಳಬೇಕು. ಎಂದು ಬರೆದಿತ್ತು.

ಗ|| ರಾಜಾಶಯನಾದುತ್ಥಿತೋಗಚ್ಛನ್ ಭಿತ್ತೌ ತಾನ್ಯಕ್ಷರಾಣಿ ವೀಕ್ಷ್ಯ ಸ್ವ
ಯಂ ದ್ವಿತೀಯಂ ಚರಣಂ ಲಿಲೇಖ ||

ತಾ|| ದೊರೆಯು ಹಾಸಿಗೆಯಿಂದೆದ್ದು ಆ ಶ್ಲೋಕದ ಅಕ್ಷರಗಳನ್ನು ಓದಿಕೊಂಡು ಅದರ ಕೆಳಗೆ ಬರೆದನು. ಏನೆಂದರೆ—

ಶ್ಲೋ|| ಶ್ರೀಮತಾಮಾಪದಃ ಕುತಃ ||

ತಾ|| ಅಂದರೆ ಶ್ರೀಮಂತರಿಗೆ ಕಷ್ಟಗಳೆಲ್ಲಿ ಬರುವವು. ಎಂಬದಾಗಿ

ಗ|| ಅಪರೇದ್ಯುಃ ಅಮಾತ್ಯೋ ದ್ವಿತೀಯಂ ಲಿಖಿತಂ ದೃಷ್ಟ್ವಾ ಸ್ವಯಂ ತೃ

ತೀಯಾಂ ಲಿಖತಿ ॥

ತಾ॥ ಮಾರನೇ ದಿನ ಮಂತ್ರಿಯು ತಾನು ಬರೆದಿದ್ದ ಪಾದದ ಕೆಳಗೆ ಬರೆದಿರುವ ಎರಡನೆ ಪಾದವನ್ನು ನೋಡಿ ಓದಿಕೊಂಡು ಮೂರನೇ ಪಾದವನ್ನು ಬರೆಯುತ್ತಾನೆ.

ಶ್ಲೋ॥ ಸಾಚೇದಪಗತಾ ಲಕ್ಷ್ಮೀಃ ॥

ತಾ॥ ಅಂದರೆ ಆ ಶ್ರೀಮಂತರಿಗಿರುವ ಐಶ್ವರ್ಯವು ನಷ್ಟವಾದರೋ ?

ಗ॥ ಪರೇದ್ಯುಃ ರಾಜಾ ಚತುರ್ಥಂ ಲಿಖತಿ ॥

ತಾ॥ ಮಾರನೇ ದಿನ ದೊರೆಯು ನಾಲ್ಕನೇ ಪಾದವನ್ನು ಬರೆದನು

ಶ್ಲೋ॥ ಸಂಚಿತಾರ್ಥೋ ವಿನಶ್ಯತಿ ॥

ತಾ॥ ಅಂದರೆ ಸಂಪಾದಿಸಿದ್ದು ಹೋಗುತ್ತದೆ.

ಗ॥ ತತಃ ಮುಖ್ಯಾಮಾತ್ಯಃ ರಾಜ್ಞಃ ಪಾದಯೋಃ ಪತತಿ ॥

ತಾ॥ ಬಳಿಕ ಮುಖ್ಯಮಂತ್ರಿಯು ರಾಯನ ಕಾಲಿಗೆ ಬಿದ್ದನು ಮತ್ತೂ ನನ್ನ ತಪ್ಪನ್ನು ಕ್ಷಮಿಸಬೇಕೆಂದನು.

ಗ॥ ಅನ್ಯದಾ ಧಾರಾಧೀಶ್ವರಮುಪರಿಸೌಧಭೂಮೌ ಶಯಾನಂ ಮತ್ವಾ ಕಶ್ಚಿದ್ದ್ವಿಜಚೋರಃ ಖಾತಪಾತಪೂರ್ವಂ ರಾಜ್ಞಃ ಕೋಶಗೃಹಂ ಪ್ರವಿಶ್ಯ ಬಹೂನಿ ವಿವಿಧರತ್ನಾನಿ ಪ್ರದೀಪ್ಯಮಾನಾನಿ ದೃಷ್ಟ್ವಾ ತಾನಿ ತಾನಿ ಪರಲೋಕದುಃಖಾನಿ ಮತ್ವಾ ತತ್ರೈವ ವೈರಾಗ್ಯಮಾಪನ್ನೋ ವಿಚಾರಯಾಮಾಸ॥

ತಾ॥ ಇನ್ನೊಂದು ದಿನ ಒಬ್ಬಾನೊಬ್ಬ ಕಳ್ಳಬ್ರಾಹ್ಮಣನು ಭೋಜನು ಮಹಡಿಮೇಲೆ ಮಲಗಿರುವುದನ್ನು ತಿಳಿದು ಹೂಡಲೆ ಕನ್ನಹಾಕಿದ್ದ ದೊರೆಯ ಖಜಾನೆಯನ್ನು ಪೊಕ್ಕು ಬಗೆಬಗೆಯಾದ ರತ್ನಗಳನ್ನೂ ಧನವನ್ನೂ ಕಂಡು ಅವುಗಳೆಲ್ಲವೂ ಪರಲೋಕದ ಋಣಗಳೆಂದು ತಿಳಿದು ಅಲ್ಲಿಯೆ ವೈರಾಗ್ಯವನ್ನು ತಾಳಿ ಯೋಚಿಸುತ್ತಿದ್ದನು.

ಶ್ಲೋ॥ ಯದ್ವ್ಯಂಗಾಃ ಕುಷ್ಠಿನಶ್ಚಾಂಧಾಃ ಪಂಗವಶ್ಚ ದರಿದ್ರಿಣಃ ।
ಪೂರ್ವೋಪಾರ್ಜಿತಪಾಪಸ್ಯ ಫಲಮಶ್ನಂತಿ ದೇಹಿನಃ ॥

ತಾ॥ ಯಾರಾದರೂ ಅಂಗಹೀನನಾಗಿಯೂ ಕುಷ್ಠರೋಗಮುಳ್ಳವರಾಗಿಯೂ, ಕುರುಡರಾಗಿಯೂ, ಕುಂಟರಾಗಿಯೂ, ದರಿದ್ರರಾಗಿಯೂ ಇರುವರೊ, ಅವರಿಗೆಲ್ಲಾಗೂ ಪೂರ್ವದಲ್ಲಿ ಮಾಡಿದ ಪಾಪಗಳೇ ಕಾರಣವಾಗಿರುತ್ತವೆ.

ಗ॥ ತತೋ ರಾಜಾ ನಿದ್ರಾಕ್ಷಯೇ ವಿಶ್ವಶಯನಸ್ಥಿತೋ ವಿವಿಧಮಣಿಕಂಕಣಾ

ಲಂಕೃತಂಪರ್ಯಂತಸರ್ಗಂ ದರ್ಶನೀಯಂಸಮಾಲೋಕ್ಯಗಜತುರಗ ರಥಪ ದಾತಿಸಾಮಗ್ರೀಂಚಚಿಂತಯನ್ ರಾಜ್ಯಸುಖಸಂತುಷ್ಟಃ ಪ್ರಮೋದ ಭರಾದಾಹ ॥

ತಾ॥ ತರುವಾಯ ಭೋಜರಾಯನು ನಿದ್ರೆಯಿಂದ ಎಚ್ಚೆತ್ತು ಮಂಚ ದಮೇಲೆ ತಾನೇ ಇದ್ದುಕೊಂಡು ಶ್ರೇಷ್ಠಗಳಾದ ರತ್ನ ಆಭರಣಗಳಿಂದ ಅಲಂಕ ರಿಸಲ್ಪಟ್ಟಿರುವ ಅಂತಃಪುರ ಸ್ತ್ರೀಯರನ್ನು ನೋಡಿ ತನ್ನ ಆನೆಗಳೂ ಕು ದುರೆಗಳೂ, ರಥಗಳೂ, ಕಾಲಾಳುಗಳೂ ಮೊದಲಾದ ಸಲಕರಣೆಗಳನ್ನು ಕುರಿತು ಆಲೋಚಿಸುತ್ತಾ ರಾಜ್ಯಸುಖಗಳಿಂದ ಸಂತೋಷವುಳ್ಳವನಾಗಿ ಆನಂದದಿಂದ ಹೇಳುತ್ತಾನೆ.

ಶ್ಲೋ॥ ಚೇತೋಹರಾಯುವತಯಃ ಸುಹೃದೋನುಕೂಲಾಃ ।
ಸದ್ಬಾಂಧವಾಃ ಪ್ರಣಯಗರ್ಭ ಗಿರಶ್ಚಭೃತ್ಯಾಃ॥
ವಲ್ಗಂತಿದಂತಿನಿವಹಾ ಸ್ತರಳಾಸ್ತುರಂಗಾಃ ॥

ತಾ॥ ಮನಸ್ಸನ್ನು ಸೆಳೆಯುವ ಹೆಂಗಸರೂ, ಅನುಕೂಲರಾದ ಸ್ನೇಹಿತರೂ, ಒಳ್ಳೆ ನೆಂಟರೂ ವಿಶ್ವಾಸಕರಗಳಾದ ಮಾತುಗಳುಳ್ಳ ಭೃತ್ಯರೂ ನಲಿಯುತ್ತಿರುವ ಆನೆ ಕುದುರೆಗಳೂ, ಸಂತೋಷಕರವಾಗಿವೆ ಎಂದು ಹೇಳಿ ಮೂರನೇ ಪಾದವನ್ನು ಹೇಳಲು ಆಗದೇ ಹೋಗಲು ಆಗ ಕಳ್ಳನು ಇದನ್ನು ಕೇಳಿಕೊಂಡಿದ್ದು ನಾಲ್ಕನೇ ಪಾದವನ್ನು ಏನೆಂದರೆ.—

"ಸಂಮೀಲನೇ ನಯನಯೋಃ ನಹಿ ಕಿಂಚಿದಸ್ತಿ ॥

ಎಂದು ಪೂರ್ತಿಮಾಡಿ ಹೇಳಿದನು ಅಂದರೆ ದೊರೆಯುಮೇಲೆ ಹೇಳಿದ ವುಗಳೆಲ್ಲವೂ ಕಣ್ಣುಮುಚ್ಚಿಕೊಂಡಮೇಲೆ (ಸತ್ತಬಳಿಕ) ಇವುಗಳಾವವೂ ಇ ರುವುದಿಲ್ಲವೆಂದು ಹೇಳಿದನು.

ಗ॥ ರಾಜಾಚೋರಂವೀಕ್ಷ್ಯತಸ್ಮೈವೀರವಲಯಂದದೌ ॥

ತಾ॥ ದೊರೆ ಆಶ್ಚರ್ಯಪಟ್ಟು ಆ ಕಳ್ಳನನ್ನು ನೋಡಿ ತಾನು ಹಾಕಿ ಕೊಂಡಿರುವ ಬಿರಿದಿನ ಕಡಗವನ್ನು ಅವನಿಗೆ ಕೊಟ್ಟನು.

ಗ॥ ತತಃತಸ್ಕರೋ ವೀರವಲಯಮಾದಾಯ ಬ್ರಾಹ್ಮಣಗೃಹಂಗತ್ವಾಶ ಯಾನಂ ಬ್ರಾಹ್ಮಣಮುತ್ಥಾಪ್ಯತಸ್ಮೈದತ್ವಾಪ್ರಾಹ ವಿಪ್ರಏತದ್ರಾ ಜ್ಞಃ ಪಾಣಿವಲಯಂ ಬಹುಮೂಲ್ಯಂಅಲ್ಪಮೂಲ್ಯೇನನವಿಕ್ರೇಯಂ

ತಾ॥ ತರುವಾಯ ಆ ಕಳ್ಳನು ಆ ಕಡಗವನ್ನು ತೆಗೆದುಕೊಂಡು ಮನೆಗೆ ಬಂದು ಬ್ರಾಹ್ಮಣನನ್ನು ಎಬ್ಬಿಸಿ ಇಗೋ ಈ ಕಡಗವು ದೊರೆಯಕೈಯಲ್ಲಿ

ಇದ್ದುದು ಬಹಳ ಬೆಲೆಯುಳ್ಳದ್ದು ಇದನ್ನು ಸ್ವಲ್ಪ ಬೆಲೆಗೆ ಕೊಡತಕ್ಕದ್ದಲ್ಲವು ಎಂಬದಾಗಿ ಹೇಳಿದನು.

ಗ॥ ತತೋಬ್ರಾಹ್ಮಣಃ ಪಣ್ಯವೀಥ್ಯಾಂ ತದ್ವಿಕ್ರೀಯ ದಿವ್ಯಭೂಷಣಾನಿ ಪಟ್ಟದುಕೂಲಾನಿ ಜಗ್ರಾಹ ತತೋ ರಾಜಕೀಯಾಃ ಕೇಚನಪುಸಂ ಚೋರಂಮನ್ಯಮಾನಾಃ ರಾಜ್ಞೋನಿವೇದಯಂತಿ ತತೋರಾಜಾನಿ ಕಟೇಸೀತಃ ॥

ತಾ॥ ಆಮೇಲೆ ಆ ಬ್ರಾಹ್ಮಣನು ಅಂಗಡಿಬೀದಿಗೆ ಹೋಗಿ ಆ ಬಳೆಯನ್ನು ಮಾರಿ ಬಂದ ಹಣದಿಂದ ಒಳ್ಳೇ ಒಡವೆಗಳನ್ನೂ ದಿವ್ಯ ಪೀತಾಂಬರಗಳನ್ನೂ ಕೊಂಡುಕೊಂಡನು. ಬಳಿಕ ಅವನನ್ನು ಕೆಲವು ಪೋಲೀಸಿನವರು ನೋಡಿ ಇವನು ಕಳ್ಳನೆಂದು ಅವನನ್ನುಹಿಡಿದು ರಾಜನೆಡೆಗೆ ತಂದರು.

ಗ॥ ರಾಜಾಪೃಚ್ಛತಿ ॥ ವಿಪ್ರಧಾರ್ಯ್ಯಂಪಟ ಮಾಪಿನಾಸ್ತಿ ಅದ್ಯಮಾತ್ರೇ ಮದಿವ್ಯಕುಂಡಲಾಭರಣ ಪಟ್ಟದುಕೂಲಾನಿಕುತಃ ॥

ತಾ॥ ಧೊರೆಯು ಅವನನ್ನುನೋಡಿ ಅಯ್ಯಾವಿಪ್ರನೇ ನಿನಗೆಉಡುವುದಕ್ಕೂಬಟ್ಟೆಯಿರಲಿಲ್ಲವು. ಈ ದಿನಮಾತ್ರದಿವ್ಯಪೀತಾಂಬರಗಳು ಆಭರಣಗಳೂ ಎಲ್ಲಿಂದಬಂತು. ಎಂದುಕೇಳಲು ಬ್ರಾಹ್ಮಣನು ಹೇಳುತ್ತಾನೆ.

ಶ್ಲೋ॥ ಭೇಕೈಃಕೋಟರಶಾಯಿಭಿಃ ಮೃತಮಿವಕ್ಷ್ಮಾಂತರ್ಗತಂಕಚ್ಛಪೈಃ ।
ಪಾಠೀನೈಃಪೃಥುಪಂಕಪೀಠಲುಠನಾದ್ಯಸ್ಮಿನ್ ಮುಹುರ್ಮೂರ್ಛಿತಂ ॥
ತಸ್ಮಿಂಶುಷ್ಕಸರಸ್ಯಕಾಲ ಜಲದೇನಾಗತ್ಯತಚ್ಚೇಷ್ಟಿತಂ ।
ಯತ್ರಾಕುಂಭನಿಮಗ್ನವನ್ಯಕರಿಣಾಂ ಯೂಥೈಃಪಯಃಪೀಯತೇ ॥

ತಾ॥ ಯಾವ ಒಣಗಿಹೋಗಿದ್ದ ಸರೋವರದಲ್ಲಿ ಕಪ್ಪೆಗಳು ಪೊಟರೆಗಳಲ್ಲಿ ಸೇರಿಕೊಂಡು ಗೊರಗುಟ್ಟಿಕೊಂಡಿರುತ್ತವೆಯೊ ಮೀನುಗಳೂ ಆಮೆಗಳೂ ನೀರಿಲ್ಲದೆ ಕೆಸರಿನಲ್ಲಿ ಹೊರಳಾಡುತ್ತಾ ಮೂರ್ಛೆ ಹೋಗುತ್ತವೆಯೊ ಅಂಥಾಶುಷ್ಕ ಸರೋವರದಲ್ಲಿ ಅಕಾಲದಮಳೆಯು ಜೋರಾಗಿಬಂದು ತುಂಬಿದಾಗ ಗಡಿಗೆ ಮುಳಗದೆಯೂ ಇರುವ ಆ ಸರೋವರದಲ್ಲಿ ಕಾಡಿನಲ್ಲಿರುವ ಮದ್ದಾನೆಗಳ ಯೂಥಗಳಿಗೂಕೂಡ ನೀರುಕುಡಿಯಲು ಯೋಗ್ಯವಾಗುವದಲ್ಲಿವೇನು ಎಂಬದಾಗಿ ಹೇಳಿದನು.

ಗ॥ ತುಷ್ಟೋರಾಜಾತಸ್ಮೈವೀರವಲಯಂ ಚೋರಪ್ರದತ್ತಂ ಇತಿನಿಶ್ಚಿತ್ಯ ಸ್ವಯಂಚ ಲಕ್ಷಂದದೌ ॥

ತಾ॥ ಧೊರೆಯು ಸಂತೋಷಪಟ್ಟು ಅವನಿಗೆ ಆ ಕಡಗವನ್ನು ಕಳ್ಳನು

ಕೊಟ್ಟಿರುವನೆಂದು ತಿಳಿದುಕೊಂಡು ತಾನೂ ಕೂಡ ಅವನಿಗೆ ಒಂದು ಲಕ್ಷವನ್ನು ಕೊಟ್ಟನು.

ಗ॥ ಅನ್ಯದಾಕೋಽಪಿಕವಿಃಕೌಖಂಡಿವಿಷ್ಣ್ವಾಖ್ಯಃ ರಾಜದ್ವಾರಮಾಗತ್ಯ ಪ್ರವೇಶಿತೋ ರಾಜಾನಂ ದೃಷ್ಟ್ವಾ ಸ್ವಸ್ತಿಪೂರ್ವಕಂ ಪ್ರಾಹ ॥

ತಾ॥ ಇನ್ನೊಂದು ದಿನ ಕವಿಶ್ರೇಷ್ಠನಾದ ವಿಷ್ಣುಕವಿ ಯೆಂಬುವನು ರಾಜ ಮಂದಿರವನ್ನೈದಿ ರಾಜನನ್ನು ನೋಡಿ ಆಶೀರ್ವಾದ ಪುರಸ್ಸರವಾಗಿ ಹೇಳುತ್ತಾನೆ.

ಶ್ಲೋ॥ ಧಾರಾಧೀಶಧರಾಮಹೇಂದ್ರಗಣನಾಕೌತೂಹಲೀಯಾನಯಂ।
ವೇಧಾಸ್ತ್ವದ್ಗಣನಾಂಚಕಾರಖಟಿಕಾಖಂಡೇನರೇಖಾಂದಿವಿ ॥ ಸೈವೇ
ಯಂತ್ರಿದಶಾಪಗಾಸಮಭವತ್ತ್ವತ್ತುಲ್ಯಭೂಮೀಧರಾಭಾವಾತ್ತ್ಯಜ
ತಿಸ್ಮಸೋಽಯಮವನೀಪೀಠೇ ತುಷಾರಾಚಲಃ ॥

ತಾ॥ ಎಲೈ ಧಾರಾಧೀಶನಾದ ಭೋಜರಾಯನೇ ಬ್ರಹ್ಮದೇವರು ಭೂಲೋಕದಲ್ಲಿ ರಾಜೋತ್ತಮರು ಯಾರ್ಯಾರು ಇರುವರೊ ನೋಡೋಣವೆಂದು ಬಳಪವನ್ನು ತೆಗೆದುಕೊಂಡು ಭೋಜರಾಯನೊಬ್ಬನೆಂದು ಆಕಾಶದಲ್ಲಿ ಗೀಚಲಾಗಿ ಆ ಗೀಟೇ ಗಂಗಾನದಿಯಾಯಿತು. ಇನ್ನಾರೂ ಇಂಥವರಿಲ್ಲದ್ದರಿಂದ ಲೆಕ್ಕಕ್ಕೆ ಗೀಚದೆ ಆ ಬಳಪದ ತುಂಡೇ ಹಿಮವತ್ಪರ್ವತವಾಗಿದೆ ಎಂದು ವರ್ಣಿಸಿದನು.

ಗ॥ ರಾಜಾ ಲೋಕೋತ್ತರಂ ಶ್ಲೋಕಮಾಕರ್ಣ್ಯ ಕಿಂದೇಯಮಿತ್ಯಚಿಂತಯತ್ ॥

ತಾ॥ ದೊರೆಯು ಬಹಳ ಶ್ಲಾಘ್ಯವಾದ ಆ ಶ್ಲೋಕವನ್ನು ಕೇಳಿ ಆತನಿಗೆ ಏನು ಕೊಡತಕ್ಕದೆಂದು ಯೋಚಿಸುತ್ತಿದ್ದನು.

ಗ॥ ತಸ್ಮಿನ್‌ಕ್ಷಣೇತದೀಯಕವಿತ್ವಂ ಅಪ್ರತಿದ್ವಂದ್ವಮಾಕರ್ಣ್ಯ ಸೋಮನಾಥಾಖ್ಯಕವೇರ್ಮುಖಂವಿಚ್ಛಾಯಮಭವತ್ ತತಃ ಸ್ವಪೌಷ್ಟ್ಯಾದ್ರಾಜಾನಂಪ್ರಾಹ ದೇವಾಸೌಸುಕವಿರ್ಭವತಿಪರಮನೇನಕದಾಪಿವೀಕ್ಷಿತಾಸ್ತಿರಾಜಸಭಾಯತೋದಾರಿದ್ರ್ಯವಾರಿಧಿರಯಂ ಅಸ್ಯಚ ಜೀರ್ಣಮಪಿಕೌಪೀನಂನಾಸ್ತಿ ॥

ತಾ॥ ಆಗ ಆ ಕವಿಯು ಹೇಳಿದ ಕವಿತ್ವವನ್ನು ಕೇಳಿ ಸೋಮನಾಥನೆಂಬ ಕವಿಯು ಹೊಟ್ಟೆಕಿಚ್ಚಿನಿಂದ ಕೆಟ್ಟಮುಖವುಳ್ಳವನಾಗಿ ತನ್ನ ಕೆಟ್ಟ ಸ್ವಭಾವದಿಂದ ರಾಜನನ್ನು ಕುರಿತು ಅಯ್ಯಾ ಪ್ರಭುವೇ ಈತನು ಒಳ್ಳೇ ಕವಿಯೇ

ಅಹುದು ಆದರೆ ಇವನು ಬಹಳ ಬಡವನು. ಎಂದಿಗೂ ರಾಜ ಸಭೆಯನ್ನೇ ಕಂಡವನಲ್ಲವು. ಇವನಿಗೆ ಒಂದು ಹರಿದ ಲಂಗೋಟಿಯೂ ಕೂಡ ಇಲ್ಲವೆಂದು ಅವನನ್ನು ಹೀಯ್ಯಾಳಿಸಿದನು.

ಗ॥ ತತೋರಾಜಾ ಸೋಮನಾಥಂಪ್ರಾಹ ॥

ತಾ॥ ಬಳಿಕ ದೊರೆಯು ಸೋಮನಾಥನನ್ನು ಕುರಿತು ಹೇಳುತ್ತಾನೆ.

ಶ್ಲೋ॥ ನಿರವದ್ಯಾನಿಪದ್ಯಾನಿ ಯದ್ಯನಾಥಸ್ಯಕಾಕ್ಷತಿಃ । ಭಿಕ್ಷುನಾಶಕ್ಷನಿಕ್ಷಿ
ಪ್ತಃ ಕಿಮಿಕ್ಷುರ್ನೀರಸೋಭವೇತ್ ॥

ತಾ॥ ಯಾಂಥಾ ಬಡವನಿಗಾದರೂ ಶ್ರೇಷ್ಠವಾಗಿ ಪದ್ಯಗಳನ್ನು ಹೇಳತಕ್ಕ ಸಾಮರ್ಥ್ಯವಿದ್ದರೆ ಅವನಿಗೇನೂ ಕಡಮೆಯಿಲ್ಲವು ಕಬ್ಬು ತಿರುಕನ ಕೈಯಲ್ಲಿದ್ದಾಕ್ಷಣವೆ ಅದರ ರುಚಿಯು ಕೆಟ್ಟು ಹೋಗುತ್ತದೆಯೋ ಎಂದು ಹೇಳಿ ರಾಯನು ಸಭೆಯಿಂದೆದ್ದನು.

ಗ॥ ತತಸ್ಸರ್ವೇಪಿಅನ್ಯೋನ್ಯಮಿತ್ಯಭಿದಾಯಿ ಅದ್ಯವಿಷ್ಣುಕವೇಃಕವಿತ್ವ
ಮಾಕರ್ಣ್ಯಸೋಮನಾಥೇನಸಮ್ಯಗ್ದೃಷ್ಟ್ಯಮುಕಾರಿ ತತಸ್ಸ್ವ
ಸ್ಥಿತೋವಿದ್ವತ್ಪರಿಷದಿ ॥

ತಾ॥ ಬಳಿಕ ಆ ಸಭೆಯಲ್ಲಿದ್ದ ವಿದ್ವಾಂಸರೆಲ್ಲರೂ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾ ಎಲ್ಲರೂ ಎದ್ದು ಅವರವರ ಮನೆಗಳಿಗೆ ತೆರಳಿದರು.

ಗ॥ ತತೋವಿಷ್ಣುಕವಿರೇಕಂಪದ್ಯಂ ಪತ್ರೇಲಿಖಿತ್ವಾ ಸೋಮನಾಥಕವಿಹ
ಸ್ತೇದತ್ವಾಪ್ರಣಮ್ಯಗಂತುಮಾರಭತ ಅತ್ರಸಭಾಯಾಂ ತ್ವಮೇವ
ಚಿರಂನಂದ ॥

ತಾ॥ ಆ ಬಳಿಕ ವಿಷ್ಣುಕವಿಯು ಒಂದು ಪದ್ಯವನ್ನು ಕಾಗದದಲ್ಲಿ ಬರೆದು ಸೋಮನಾಥಕವಿಯಕೈಗೆ ಕೊಟ್ಟು ನೀನೇ ಈ ಸಭೆಯಲ್ಲಿ ಬಹುಕಾಲ ಸಂತೋಷವಾಗಿರು ಎಂದನು.

ಗ॥ ತತೋವಾಚಯತಿಸೋಮನಾಥಕವಿಃ ॥

ತಾ॥ ಬಳಿಕ ಸೋಮನಾಥಕವಿಯು ಆ ಪದ್ಯವನ್ನು ಓದಿಕೊಳ್ಳುತ್ತಾನೆ.

ಶ್ಲೋ॥ ಏತೇಷುಹಾತರುಣಮಾರುತಧೂಯಮಾನದಾವಾನಲೈಃಕಬಳಿತೇ
ಷು ।ಮಹೀರುಹೇಷು ಅಂಭೋನಚೇಜ್ಜಲದಮುಂಚಸಿಮಾಸಿಮುಂ
ಚ ವಜ್ರಮಪಿನಿಕ್ಷಿಪನಿರ್ದಯಕಸ್ಯಹೇತೋಃ ॥

ತಾ॥ ಎಲಾ ಮೇಘವೆ ಎಳೆಗಾಳಿಗಳಿಂದ ಅಭಿವೃದ್ಧಿಗಳಾದ ಕಾಡು

ಕಿಚ್ಚುಗಳಿಂ ಸುಡಲ್ಪಡುತ್ತಿರುವ ಮರಗಳಿಗೆ ನೀರನ್ನು ಕೊಡತಕ್ಕ ಸ್ವಭಾವವುಳ್ಳ ನೀನು ನೀರನ್ನು ಕೊಡದೆ ಸಿಡಿಲುಗಳನ್ನು ಬಿಡುಸುತ್ತೀಯಿ ಎಲಾ ಮೇಘವೇ ಯಾತಕ್ಕೆ ಅಂದರೆ ನೀನು ಸಹಾಯ ಮಾಡಬೇಕು. ಬೇಡ ಕೇಡನ್ನೇಕೆ ಮಾಡುವಿ ಎಂದಿತ್ತು.

ಗ|| ತತಸ್ಸೋಮನಾಥಕವಿಃಸ್ವಶಿಬಿರಮುಪೇತ್ಯವಾ ಕೋಶವಿತ್ತಹಿರಣ್ಯಾನಿ
ತುರಂಗಸ್ಸಾದಿಸಂಪತ್ತಿಂಕಳತ್ರವಸ್ತ್ರಾವಶೇಷಂದತ್ತವಾನ್||

ತಾ|| ಬಳಿಕ ಸೋಮನಾಥಕವಿಯು ಸಮಸ್ತವಾದ ಪೀತಾಂಬರಗಳೂ ಹಣವೂ, ಚಿನ್ನವೂ, ಕುದುರೆಗಳೂ ಇವೇ ಮೊದಲಾದ ಐಶ್ವರ್ಯವನ್ನು ಹೆಂಡತಿಯು ಸೀರೆಯನ್ನು ಬಿಟ್ಟು ಉಳಿದದ್ದೆಲ್ಲವನ್ನೂ ಆ ವಿಷ್ಣುಕವಿಗೆ ಕೊಟ್ಟು ಸಂತೋಷಪಡಿಸಿದನು.

ಗ|| ತತೋರಾಜಾಮೃಗಯಾರಸಪ್ರವೃತ್ತೋ ಗಚ್ಛನ್ತಂವಿಷ್ಣುಕವಿಮಾ
ಲೋಕ್ಯವ್ಯಚಿಂತಯತ್ || ಮಯಾಸ್ಮೈಭೋಜನಮಪಿನಪ್ರದತ್ತಂ
ಮಾಮನಾದೃತ್ಯ ಅಯಂಸಂಪತ್ತಿ ಪೂರ್ಣಸ್ಸ್ವದೇಶಂಪ್ರಯಾಸ್ಯತಿ |
ಪೃಚ್ಛಾಮಿ ವಿಷ್ಣುಕವೇಕುತಃಸಂಪತ್ತಿಃಪ್ರಾಪ್ತಾ ||

ತಾ|| ಅನಂತರದಲ್ಲಿ ದೊರೆಯು ಬೇಟೆಯಲ್ಲಿ ಆಸಕ್ತನಾಗಿ ದಾರಿಯಲ್ಲಿ ಹೋಗುತ್ತಾ ವಿಷ್ಣುಕವಿಯನ್ನು ನೋಡಿ ಮನಸ್ಸಿನಲ್ಲಿ ನಾನು ಈ ವಿಷ್ಣು ಕವಿಗೆ ಊಟವನ್ನು ಸಹಾ ಇಡಲಿಲ್ಲವು. ಆದ್ದರಿಂದ ಇವನು ನನ್ನನ್ನು ನಿರಾಕರಿಸಿ ಸಂಪತ್ತಿನಿಂದ ತುಂಬಲ್ಪಟ್ಟವನಾಗಿ ತನ್ನ ದೇಶವನ್ನು ಕುರಿತು ಹೋಗುತ್ತಾನೆ. ಆದಕಾರಣ ಇವನನ್ನು ಪ್ರಶ್ನೆಮಾಡುವೆನು ಯೆಂದು ಕೇಂಡು ಓ ವಿಷ್ಣುಕವಿಯೆ ನಿನಗೆ ಈ ಸಂಪತ್ತು ಯಲ್ಲಿಂದಬಂತು ಎಂದನು.

ಕವಿರಾಹ ಶ್ಲೋ|| ಸೋಮನಾಥೇನರಾಜೇಂದ್ರ ನೇತ್ವದ್ಗೃಹಭಿಕ್ಷುಣಾ |
ಅದ್ಯಶೋಚ್ಯತಮೋಪೂರ್ಣಂ ಮಹಿಕಲ್ಪದ್ರುಮಾಯಿತಂ ||

ತಾ|| ಎಲೈ ರಾಜೇಂದ್ರನೇ ನಿನ್ನಮನೆಯ ಭಿಕ್ಷಗಾರನಾದ ಸೋಮನಾಥ ಕವಿಯಿಂದ ಬಹಳ ವ್ಯಸನದಲ್ಲಿ ಕೂಡಿರುವ ನನ್ನ ವಿಷಯದಲ್ಲಿ ಕಲ್ಪವೃಕ್ಷದಹಾಗೆ ಆಚರಿಸೋಣವಾಯಿತು. ಎಂದು ಹೇಳಿದನು.

ಗ||ರಾಜಾತಚ್ಛೃತ್ವಾಸಂಸಭಾಯಾಂ ಕೃತಸ್ಯಲೋಕೋತ್ತರ ಶ್ಲೋಕಸ್ಯ ಅಕ್ಷರ
ಲಕ್ಷಂದಬ್ಧಾಸೋಮನಾಥೇನಯಾನದತ್ತಂ ತಾವದಪಿಸೋಮನಾಥಾಯ
ದತ್ತವಾನ್ ||

ತಾ॥ ರಾಜನು ಮೊದಲು ಸಭೆಯಲ್ಲಿ ವಿಷ್ಣುಕವಿಯಿಂದ ಹೇಳಲ್ಪಟ್ಟದ್ದ ಶ್ಲೋಕಕ್ಕೆ ಅಕ್ಷರಲಕ್ಷವನ್ನು ಕೊಟ್ಟ ಸೋಮನಾಥಕವಿಯು ವಿಷ್ಣುಕವಿಗ ಕೊಟ್ಟದ್ದ ಸರ್ವಸ್ವವನ್ನು ಹಿಂದಕ್ಕೆ ಸೋಮನಾಥಕವಿಗೆ ಕೊಡಿಸಿದನು.

ಸೋಮನಾಥಃಪ್ರಾಹ॥ ಶ್ಲೋ॥ ಕಿಸಲಯಾನಿಕುತಃಕುಸುಮಾನಿ ವಾಕ್ವಚಫ
ಲಾನಿತಥಾವನವೀರುಧಾಂ । ಅಯಮಕಾರ
ಣಕಾರುಣಿಕೋಯದಾನ ತರತೀಹಸಯಾಂ
ಸಿಮಂಧರಃ ॥

ತಾ॥ ಮೇಘವು ದಯವಾಗಿ ಮಳೆಗರೆಯದಿದ್ದರೆ ಕಾಡಿನಲ್ಲಿರುವ ಬಳ್ಳಿಗಳಿಗೆ ಚಿಗುರುಗಳೆಲ್ಲಿಯವು ಹೂವುಗಳು ತಾನೆಯಲ್ಲಿ ಹಣ್ಣುಗಳೂ ಇರಲಾರವು ಎಂದು ಹೇಳಿದನು.

ಗ॥ ತತಃವಿಷ್ಣುಕವಿಸ್ಸೋಮನಾಥದತ್ತೇನ ರಾಜ್ಞಾದತ್ತೇನಚತುಷ್ಟಸ್ಸಾರ್ಥ॥

ತಾ॥ ಬಳಿಕ ವಿಷ್ಣುಕವಿಯು ರಾಜನೂ ಮತ್ತು ಸೋಮನಾಥಕವಿಯೂ ಕೊಟ್ಟ ದ್ರವ್ಯದಿಂದ ಸಂತೋಷಪಟ್ಟವನಾದನು.

ಗ॥ ತದಾಸೀಮಂತಃಕವಿಃಪ್ರಾಹ ॥

ತಾ॥ ಆಗ ಸೀಮಂತಕವಿಯು ಹೇಳುತ್ತಾನೆ.

ಶ್ಲೋ॥ ವಹತಿಭುವನಶ್ರೇಣೀಂ ಶೇಷಃಫಣಾಫಲಕಸ್ಥಿತಾಂ ।
ಕಮಠಪತಿನಾಮಧ್ಯೇಪೃಷ್ಠಂ ಸದಾಸಚಧಾರ್ಯತೇ ॥
ತಮಪಿಕುರುತೇಕ್ರೋಡಾಧೀನಂ ಪಯೋನಿಧಿರಾದರಾತ್ ।
ಅಹಹಮಹತಾಂನಿಸ್ಸೀಮಾನಃ ಚರಿತ್ರವಿಭೂತಯಃ ॥

ತಾ॥ ಆದಿಶೇಷನು ಈ ಸಮಸ್ತ ಭೂಲೋಕವನ್ನೆಲ್ಲಾ ತನ್ನ ಹೆಡೆಗಳಿಂದ ಹೊತ್ತಿರುವನು. ಅಂಥಾ ಆದಿಶೇಷನನ್ನು ಕೂರ್ಮವು ಧರಿಸಿಕೊಂಡಿರುವುದು. ಅಂಥಾ ಕೂರ್ಮಕ್ಕೂ ವರಾಹನ ಕೋರೆದಾಡೆಯು ಆಧಾರವಾಗಿರುವುದು. ಹೀಗಿರುವುದು ನೋಡಿದರೆ ಮಹಾತ್ಮರ ಚರಿತ್ರೆಗಳಿಗೆ ಪಾರವೇ ಇಲ್ಲವು.

ಗ॥ ಕದಾಚಿತ್ಸ್ವಧತಃರಾಜಾ ನಮೋತ್ಯಭೃತ್ಯಾಃಪ್ರಾಹದೇವ ಅಖಿಲೇಷ್ವಪಿಕೋಶೇಷು ಯದ್ವಿತ್ತಂಜಾತಮಸ್ತಿತತ್ಸರ್ವಂದೇವೇನ ಕವಿಭ್ಯೋದತ್ತಂಪರಂತುಕೋಶಗೃಹೇ ಧನಲೇಶೋಪಿನಾಸ್ತಿ ಕೋಪಿಕವಿಃಪ್ರತ್ಯ

ಹಂದ್ವಾರಿತಿಷ್ಠತಿ ಇತಃಪರಂಕವಿರ್ವಿದ್ವಾನ್ವಾಕೋಪಿರಾಜ್ಞೇನ ಜ್ಞಾಪ್ಯ
ತಇತಿಮುಖ್ಯಾಮಾತ್ಯೇನದೇವ ಸನ್ನಿಧೌಪಿಜ್ಞಾಪನೀಯಮಿತ್ಯುಕ್ತಂ ॥

ತಾ॥ ತರುವಾಯ ಒಂದಾನೊಂದು ಸಮಯದಲ್ಲಿ ಒಬ್ಬ ಸೇವಕನು ರಾಜನೆಡೆಗೆ ಬಂದು ಮಹಾಸ್ವಾಮಿ ಖಜಾನೆಯಲ್ಲಿದ್ದದ್ದೆಲ್ಲವನ್ನೂ ಕವಿಗಳಿಗೆ ತಾವು ಕೊಟ್ಟುಬಿಟ್ಟರುವಿರಿ ಈಗ ಬೊಕ್ಕಸನಾದರೊ ಬರೀದಾಯಿತು ಯಾರೊ ಒಬ್ಬ ಕವಿಯು ಬಾಗಿಲಲ್ಲಿರುವನು, ಇನ್ನುಮೇಲೆ ಕವಿಯಾಗಲಿ ವಿದ್ವಾಂಸನಾಗಲಿ ಬಂದರೆ ಧೊರೆಗೆ ತಿಳಿಸಕೂಡದೆಂದು ಮುಖ್ಯಮಂತ್ರಿಯು ತಂಮ್ಮಿಂದ ಅಪ್ಪಣೆಯಂಪಡೆದು ಬರುವಂತೆ ಹೇಳಿಕಳುಹಿಸಿರುವರೆಂದು ಹೇಳಿದನು.

ಗ॥ ರಾಜಾಕೋಶಸ್ಥಂಸರ್ವಂ ದತ್ತಮಿತಿಜಾನನ್ನಪಿಪ್ರಾಹ ಅದ್ಯದ್ವಾರಸ್ಥ
ಕವಿಂಪ್ರವೇಶಯ ಇತ್ಯವದತ್ ॥

ತಾ॥ ಧೊರೆಯು ಖಜಾನೆಯಲ್ಲಿದ್ದದ್ದೆಲ್ಲವೂ ಖರ್ಚಾಗಿಧೆ ಯೆಂದು ತಿಳಿದಿದ್ದರೂ, ಬಾಗಿಲಲ್ಲಿ ನಿಂತಿರುವ ಕವಿಯನ್ನು ಒಳಗೆ ಕರೆತರುವಂತೆ ಹೇಳಿದನು.

ಗ॥ ತತೋವಿದ್ವಾನಾಗತ್ಯ ಸ್ವಸ್ತೀತಿವದನ್ಪ್ರಾಹ ॥

ತಾ॥ ಬಳಿಕ ವಿದ್ವಾಂಸನು ಬಂದು ಆಶೀರ್ವದಿಸಿ ಹೇಳುತ್ತಾನೆ.

ಶ್ಲೋ॥ನಭಸಿನಿರವಲಂಬೆಸಂ ಗತಾದೀರ್ಘಕಾಲಂತ್ವದ ।
ಭಿಮುಖವಿಸೃಷ್ಟೋ ತ್ತಾನಚಂಚೂಪುಟೇನ ॥
ಜಲಧರಜಲಸಾರಾದೂರ ತಸ್ತಾವದಾಸ್ತಾಂಧ್ವ ।
ನಿರಪಿಮಧುರಸ್ತೇನ ಶ್ರುತಶ್ಚಾತಕೇನ ॥

ತಾ॥ ಎಲೌ ಮೇಘವೇ ಅಂತರಿಕ್ಷದಲ್ಲಿ ಆಧಾರವಿಲ್ಲದೆ ಚಾತಕಪಕ್ಷಿಯು ನಿನ್ನನ್ನೇ ನಂಬಿ ಬಾಯಿ ಬಿಟ್ಟುಕೊಂಡಿರುವುದು, ನಿನ್ನ ಉದಕಧಾರೆಯು ಇಲ್ಲದೇ ಇದ್ದರೂ ನಿನ್ನ ಇಂಪಾದ ಶಬ್ದವನ್ನೂ ಕೂಡ ಕೇಳಲು ಅವಕಾಶವಿಲ್ಲದಂತೆ ಇರುವುದು ಅಂದನು.

ಗ॥ ರಾಜಾಮಾಕರ್ಣ್ಯ ಧಿಗ್ಜೀವಿತಂಯಃವಿದ್ವಾಂಸಃ ಯಚ್ಛದ್ವಾರವಸಾನಾ
ದ್ಯಾಸೀದತೀತಿ ॥

ತಾ॥ ರಾಯನು ಅವನ್ನು ಕೇಳಿ ಕವಿಗಳೂ ವಿದ್ವಾಂಸರೂ ಬಾಗಿಲಲ್ಲಿ ನಿಂತು ದುಃಖಿಸುವವನ್ನರಿಂದ ನನ್ನ ಬಾಳು ವ್ಯರ್ಥವೆಂದಂದುಕೊಂಡು.

ಗ॥ ತಸ್ಮೈವಿಪ್ರಾಯಸರ್ವಾಣ್ಯಾ ಭರಣಾನ್ಯುತ್ತಾರ್ಯದದೌ ॥

ತಾ॥ ಆ ಬ್ರಾಂಹಣನಿಗೆ ತನ್ನ ಒಡವೆಗಳನ್ನೆಲ್ಲಾ ಕೊಟ್ಟುಬಿಟ್ಟನು,

ಗ॥ ತತೋರಾಜಾಕೋಶಾಧಿಕಾರಿಣ ಮಾಹೂಯಭಾಂಡಾರಿಕಮುಂಜರಾಜಸ್ಯ ತಥಾಮೇಪೂರ್ವೇಷಾಂಚ ಯೇಕೋಶಾಸ್ಸಂತಿತೇಷಾಂಸ್ವರ ತ್ನಪೂರ್ಣಾನ್ ಕಲಶಾನಾಹರ ॥

ತಾ॥ ತರುವಾಯ ಧೊರೆಯು ಕೋಶಾಧಿಕಾರಿಯನ್ನು ಕರದು ಎಲೈ ಕೋಶಾಧ್ಯಕ್ಷನೆ ನನ್ನ ಪೂರ್ವಿಕರಾದ ಮುಂಜರಾಯನ್ನೇ ಮೊದಲಾದವರ ಖಜಾನೆಗಳಲ್ಲಿರುವ ರತ್ನಕುಂಭಗಳನ್ನು ತಗದುಕೊಂಡು ಬಾ ಎಂದು ಆಜ್ಞಾಪಿಸಿದನು.

ಗ॥ ತತಃಕಾಶ್ಮೀರದೇಶಾನ್ಮುಚುಕುಂದೋಕವಿರಾಗತ್ಯಸ್ವಸ್ತಿತ್ಯುಕ್ತ್ವಾಪಠತಿ॥

ತಾ॥ ಆ ಮೇಲೆ ಕಾಶ್ಮೀರ ದೇಶದಿಂದ ಬಂದಿರುವ ಮುಚುಕುಂದನೆಂಬ ಕವಿಯು ರಾಜನನ್ನಾಶೀರ್ವದಿಸಿ ಹೇಳುತ್ತಾನೆ.

ಶ್ಲೋ॥ ತ್ವದ್ಯಶೋಜಲಧೌಭೋಜ ನಿಮಜ್ಜನಭಯಾದಿವ ।
ಸೂರ್ಯೇಂದುಬಿಂಬಮಿಷತೋ ಧತ್ತೇಕುಂಭದ್ವಯಂನಭಃ ॥

ತಾ॥ ಎಲೈ ಭೋಜರಾಯನೆ ಆಕಾಶವು ನಿಂನ ಕೀರ್ತಿ ಸಮುದ್ರದಲ್ಲಿ ಎಲ್ಲಿ ಮುಳುಗಿಹೋಗುವೆನೋ ಎಂಬ ಭಯದಿಂದ ಸೂರ್ಯಚಂದ್ರರೆಂಬ ಯೆರಡು ನೀರೇಬುರುಡೆಗಳನ್ನು ಮೊಗಚಿ ಹಿಡಿದುಕೊಂಡಿರುವುದು ಎಂದು ಬಣ್ಣಿಸಿದನು.

ಗ॥ ರಾಜಾತಸ್ಮೈಪ್ರತ್ಯಕ್ಷರಲಕ್ಷಂದದೌ ॥

ತಾ॥ ಧೊರೆಯು ಆತನಿಗೆ ಪ್ರತ್ಯಕ್ಷರ ಲಕ್ಷವನ್ನು ಕೊಟ್ಟನು.

ಪುನರಾಹಕವಿಃ॥ ಶ್ಲೋ॥ ಅಸ್ಯ ಕಣಾಸ್ತಿಯಾವಂತಿಚಾತಕಾಶ್ರೂಣಿತೇಂಬುದ।
ತಾವಂತೋಪಿತ್ವಯೋದಾರ ನಮುಕ್ತಾಜಲಬಿಂದವಃ ॥

ತಾ॥ ತಿರುಗ ಹೇಳುತ್ತಾನೆ. ಎಲೈ ಮೇಘವೇ ಚಾತಕಪಕ್ಷಿಗಳ ಕಣ್ಣೀರಿನ ಬಿಂದುಗಳಷ್ಟು ಕೂಡ ನಿನ್ನ ವರ್ಷಬಿಂದುಗಳು ಬೀಳಲಿಲ್ಲವಲ್ಲಾ ಎಂದನು.

ಗ॥ ತತಸ್ಸರಾಜಾತಸ್ಮೈಶತತುರಗಾನದದೌ ॥

ತಾ॥ ಬಳಿಕ ಅದನ್ನು ಕೇಳಿ ಧೊರೆಯು ಆತನಿಗೆ ನೂರು ಕುದುರೆಗಳನ್ನು ಕೊಟ್ಟಂಥಾವನಾದನು.

ತತಃಭಾಂಡಾರಿಕೋಲಿಖಿತ॥ ಶ್ಲೋ॥ ಮುಚುಕುಂದಾಯಕವಯೆ ಜಾತ್ಯಾನ
ಶ್ವಾನ್‌ಶತಂದದೌ । ಭೋಜಃಪ್ರದತ್ತಾಲ
ಕ್ಷೋಪಿ ತೇನಾನಂಯಾಚಿತಃಪುನಃ ॥

ತಾ॥ ಬಳಿಕ ಕೋಶಾಧಿಕಾರಿಯು ದಾನಶಾಸನದಲ್ಲಿ ಬರೆಯುತ್ತಾನೆ ಏನಂದರೆ ಭೋಜರಾಯನು ಮುಚುಕುಂದ ಕವಿಗೆ ನೂರು ಕುದುರೆಗಳನ್ನು ಕೊಟ್ಟಿರುವನು. ಮೊದಲೇ ಆತನಿಗೆ ಲಕ್ಷ ವರಹಗಳನ್ನು ಕೊಟ್ಟರೂ, ತಿರುಗೂ ಬೇಡಿರುವನೆಂದು ಬರೆದನು.

ಗ॥ ತತೋರಾಜಾಸರ್ವಾನಪಿ ಪ್ರೇಷಯಿತ್ವಾಂತಗಚ್ಛತಿ ॥

ತಾ॥ ಬಳಿಕ ಧೊರೆಯು ಎಲ್ಲರನ್ನೂ ಕಳುಹಿಸಿಬಿಟ್ಟು ತಾನು ಅಂತಃಪುರಕ್ಕೆ ತೆರಳಿದನು.

ಗ॥ ತತೋರಾಜ್ಞಃ ಚಾಮರಗ್ರಾಹಿಣೀಪ್ರಾಹ ॥

ತಾ॥ ಬಳಿಕ ಚಾಮರ ಹಾಕತಕ್ಕವಳು ಹೇಳುತ್ತಾಳೆ.

ಶ್ಲೋ॥ ರಾಜನ್ಮುಂಜಕುಲಪ್ರದೀಪ ಸಕಲಕ್ಷ್ಮಾಪಾಲಚೂಡಾಮಣೇ ।
ಯುಕ್ತಂಸಂಚರಣಂತವಾದ್ಭುತ ಮಣಿಛತ್ರೇಣರಾತ್ರಾವಪಿ ॥
ಮಾಭೂತ್ತ್ವದ್ವದನಾವಲೋಕ ನವಶಾದ್ವ್ರೀಡಾಭಿನಮ್ರಃಶಶೀ ।
ಮಾಭೂಚ್ಚೇಯಮರುಂಧತೀ ಭಗವತೀದುಶ್ಶೀಲತಾಭಾಜನಂ ॥

ತಾ॥ ಎಲೈ ಸಕಲ ನೃಪಾಲಶಿರೋಮಣಿಯೇ ಮುಂಜಕುಲಕ್ಕೆ ಮಂಗಳದೀಪದಂತಿರುವ ಭೋಜಭೂಪಾಲನೇ ನೀನು ರಾತ್ರಿಕಾಲದಲ್ಲಿಯೂ ಕೂಡ ಮಣಿಖಚಿತವಾದ ಕೊಡೆಯನ್ನು ಹಿಡಿಸಿಕೊಳ್ಳುವುದು ಯುಕ್ತವಾಗಿಯೇ ಇದೆ ಯಾಕಂದರೆ ನಿನ್ನ ದಿವ್ಯ ಸುಂದರವಾದ ಮುಖವನ್ನು ನೋಡಿ ಚಂದ್ರನಿಗೆ ನಾಚಿಕೆಯಾದೀತು, ಅಲ್ಲದೆ ಮಹಾಪತಿವ್ರತೆಯಾದ ಅರುಂಧತಿಗೂ ನಿನ್ನ ಸೌಂದರ್ಯದರ್ಶನದಿಂದ ಚಿತ್ತವು ವಿಕಾರವಾದೀತು, ಇವುಗಳಾಗಬಾರದೆಂದು ನೀನು ಛತ್ರವನ್ನು ಹಿಡಿಸಿಕೊಂಡು ಇರುವಿ ಎಂದಳು.

ಗ॥ ರಾಜಾತಸ್ಯೈಪ್ರತ್ಯಕ್ಷರಲಕ್ಷಂದದೌ ॥

ತಾ॥ ಧೊರೆಯು ಆ ಚಾಮರಗ್ರಾಹಿಣಿಗೆ ಅಕ್ಷರಲಕ್ಷವನ್ನು ಕೊಟ್ಟನು.

ಗ॥ ಅನ್ಯದಾಕುಂಡಿನನಗರಾದ್ಗೋಪಾಲೋ ನಾಮಕವಿರಾಗತ್ಯ ಸ್ವಸ್ತಿ
ಪೂರ್ವಕಂಪ್ರಾಹ ॥

ತಾ॥ ಮತ್ತೊಂದುಸಲ ಕುಂಡಿನ ನಗರದಿಂದ ಬಂದ ಗೋಪಾಲನೆಂಬೋ ಕವಿಯು ರಾಜನನ್ನು ಆಶೀರ್ವದಿಸಿ ಹೇಳುತ್ತಾನೆ.

ಶ್ಲೋ॥ ತ್ವಚ್ಚಿತ್ತೇಭೋಜನಿರ್ವ್ಯಾಜಂದ್ವಯಂತ್ರ್ಯಣಕಣಾಯತೇ । ಕ್ರೋಧೇ
ವಿರೋಧಿನಾಂಸೈನ್ಯಂಪ್ರಸಾದೇಕನಕೋಚ್ಚಯಃ ॥

ತಾ॥ ಎಲೈ ಭೋಜಭೂಪಾಲನೇ ನಿನ್ನ ಮನಸ್ಸಿನಲ್ಲಿ ಎರಡುಮಾತ್ರ

ಹುಲ್ಲಿಗಿಂತಲೂ ಕಡೆಯಾಗಿರುವುದು ಯಾವನೆಂದರೆ ನಿನಗೆ ಕೋಪಬಂದರೆ ಶತ್ರುಸ್ತ್ರೀಯರೊಂದೂ ನಿನಗೆ ವಿಶ್ವಾಸವುಂಟಾದರೆ ಸುವರ್ಣ ಸಮೂಹವೂ ತುಚ್ಛವಾಗಿರುವವೆಂದನು.

ಗ॥ ರಾಜಾಶ್ರುತ್ವಾಪಿತುಷ್ಟೋನದಾಸ್ಯತಿ ರಾಜಪುರುಷೈಸ್ಸಹಚರ್ಚಾಂ ಕುರ್ವಾಣಸ್ತಿಷ್ಠತಿ ತತಃಕವಿರ್ವ್ಯಚಿಂತಯತ್ । ಕಿಮುರಾಜ್ಞೋನಾ ಶ್ರಾವಿತತಃಕ್ಷಣೇನಸಮುನ್ನತಮೇವಾವಲೋಕ್ಯ ರಾಜಾನಂಕವಿರಾಹ ॥

ತಾ॥ ಧೊರೆಯು ಆ ಪದ್ಯವನ್ನು ಕೇಳಿದರೂ ರಾಜಕೀಯ ವಿಷಯಗಳಲ್ಲಿ ನಿರತನಾಗಿ ನನಿಗೇನೂ ಕೊಡಲಿಲ್ಲವೆಂದು ರಾಜನು ತಲೆಯನ್ನೆತ್ತಿ ಕವಿಯಕಡೆ ತಿರುಗಿದಾಗ ಧೊರೆಯನ್ನು ಕುರಿತು ಹೇಳುತ್ತಾನೆ.

ಶ್ಲೋ॥ ಹೇಪಾಥೋದಯಥೋನ್ನತಂಹಿಭವತಾಜಿಗ್ಯಾವ್ಯಮುತಾಸರ್ವತಃ । ಮಸ್ಯೇಥೀರತಥಾಕರಿಷ್ಯಸಿಖಿಲುಕ್ಷೀರಾಬ್ಧಿತುಲ್ಯಂರಸಃ ॥ ಕಿಂತ್ವೇಷ ಕ್ಷಮತೆನಹಿಕ್ಷಣಮಪಿಗ್ರೀಷ್ಮೋಷ್ಮಣಾ ವ್ಯಾಕುಲಃಪಾಠೀನಾದಿಗಣಃತ್ವದೇಕಶರಣಃತದ್ವರ್ಷತಾವತ್ಕ್ಷಿಯತ್ ॥

ತಾ॥ ಎಲೌ ಮೇಘವೇ ನೀನು ಸರ್ವೋನ್ನತವಾಗಿ ಕ್ಷೀರ ಸಮುದ್ರೋದಕಕ್ಕೆ ಸಮಾನವಾದ ಉದಕವನ್ನು ಎಲ್ಲಾ ಭೂಮಿಗೂ ಕೊಡುವುದಕ್ಕೆ ಸಿದ್ಧನಾಗಿಯೇ ಇರುತ್ತೀಯೆ ಆದರೆ ಬೇಸಿಗೆಯ ಝಳತದಿಂದ ತಾಪಪಡುತ್ತಿರುವ ನಿನ್ನನ್ನೇ ನಂಬಿ ಎದುರುನೋಡುತ್ತಿರುವ ಜಲಚರಗಳನ್ನು ನೋಡಿ ಸ್ವಲ್ಪ ಮಳೆಯನ್ನು ಸುರಿಸು ಎಂದು ಹೇಳಿದನು.

ಗ॥ ರಾಜಾಕವಿಹೃದಯಂ ವಿಜ್ಞಾಯಗೋಪಾಲಕವೇ ದಾರಿದ್ರ್ಯಾಗ್ನಿನಾಸಿ ರೌಂತಂದಗ್ಧೋಸೀತಿವದನ್ ಷೋಡಶಮಣೀನನರ್ಘ್ಯಾನ್ ಷೋಡಶ ದಂತೀಂದ್ರಾಂಶ್ಚದದೌ ॥

ತಾ॥ ಧೊರೆಯಾದರೊ ಆ ಕವಿಯ ಅಭಿಪ್ರಾಯವನ್ನು ತಿಳಿದುಕೊಂಡು ಕವಿಯೇ ನೀನು ಬಡತನದಿಂದ ದುಃಖಿಸುತ್ತೀಯೆಂದು ಹೇಳಿ ಆತನಿಗೆ ಬಹಳ ಬೆಲೆಯುಳ್ಳ ಹದಿನಾರು ರತ್ನಗಳನ್ನೂ ಹದಿನಾರು ಮದ್ದಾನೆಗಳನ್ನೂ ಕೊಟ್ಟನು.

ಗ॥ ಏಕದಾರಾಜಾಧಾರಾನಗರೇವಿಚರನ್ಕ್ವಚಿಚ್ಛಿವಾಲಾಯೆ ಪ್ರಸುಪ್ತಂಪುರುಷದ್ವಯಮಪಶ್ಯತ್ ತಯೋರೇಕೋವಿಗತನಿದ್ರೋವಕ್ತಿ ಅಹೋತ್ವಂ ಮನಾಸ್ತ್ರಾಸನ್ನನಿವಕಸ್ತ್ವಂಪ್ರಸುಪ್ತೋಸಿಜಾಗರ್ಷಿತೋವಾ । ತತಸ್ತಾಪರಆಹವಿಪ್ರಪ್ರಣತೋಸ್ಮಿ ಅಹಮಿಪಿಬ್ರಾಹ್ಮಣಪುತ್ರಃ ಕ್ವಾಪಿ

ತ್ರಪ್ರಥಮಂರಾತ್ರೌಶಯಾನಂ ವೀಕ್ಷ್ಯಪ್ರದೀಪ್ತೇಚ ಪ್ರದೀಪೇಕಮಂ ಡಲೂಪವಿತಾದಿಭಿಃ ಬ್ರಾಹ್ಮಣಂಜ್ಞಾತ್ವಾ ಭವದನ್ನರಾಸನ್ನ ಏವ ಅಹಂಪ್ರಸುಪ್ತಃ ಇದಾನೀಂತ್ವದ್ಗಿರಮಾಕರ್ಣ್ಯ ಪ್ರಬುದ್ಧೋಸ್ಮಿ ॥ ಪ್ರಥಮಃಪ್ರಾಹ ವತ್ಸಾಯುಷ್ಮಾನ್ಭವ ಯತ್ಪ್ರಣತೋಸಿ ತತೋದೀರ್ಘಾಯುರ್ಭವ ವದಕುತ ಆಗಮ್ಯತೇಕಿಂತೇನಾಮ ಅತ್ರಚಕಿಂಕಾರ್ಯಂ ದ್ವಿತೀಯಃ ಪ್ರಾಹ ವಿಪ್ರಭಾಸ್ಕರ ಇತಿನಾಮಪಶ್ಚಿಮಸಮುದ್ರತೀರೇ ಪ್ರಭಾಸತೀರ್ಥಸಮೀಪೇವಸತಿರ್ಮಮ ತತ್ರಭೋಜಸ್ಯವಿತರಣಂಬಹುಭಿರ್ವ್ಯಾವರ್ಣಿತಂ ತತೋಯಾಚಿತುಮಹಮಾಗತಃ ತ್ವಂಮಮವೃದ್ಧತ್ವಾತ್ಪಿತೃಕಲ್ಪೋಸಿತ್ವಮಪಿವದ ಸಚಾಹ॥ ವತ್ಸಶಾಕಲ್ಯಇತಿಮೇನಾಮ ಮಯಾಪಿತಕ್ಷಶಿಲಾನಗರ್ಯಾಆಗಮ್ಯತೇ ಭೋಜಂಪ್ರತಿದ್ರವಿಣಾಶಯಾತ್ವಯಾನುಕ್ತಮಪಿ ದುಃಖಂತ್ವಯಿಜ್ಞಾಯತೇ ಕೀದೃಶಂತದ್ವದ ತತೋಭಾಸ್ಕರಕವಿಃಪ್ರಾಹ ತಾತಕಿಂಬ್ರವೀಮಿದುಃಖಂ ॥

ತಾ॥ಒಂದುದಿನ ಭೋಜರಾಯ ತನ್ನ ನಗರದಲ್ಲಿ ರಾತ್ರಿ ಸಂಚಾರಮಾಡುತ್ತಾ ಒಂದು ಶಿವದೇವಾಲಯದಲ್ಲಿ ಮಲಗಿ ನಿದ್ರಿಸುತ್ತಿರುವ ಇಬ್ಬರನ್ನು ಕಂಡನು. (ಅವರಿಬ್ಬರಲ್ಲಿ ಒಬ್ಬನು ನಿದ್ರೆಯಿಂದ ಎಚ್ಚೆತ್ತು ಮಾತನಾಡುತ್ತಾನೆ ಏನಂದರೆ, ಎಲೌ ಪಕ್ಕದಲ್ಲಿ ಮಲಗಿರುವನೇ ನೀನುಯಾರು ನಿದ್ರೆಮಾಡುವಿಯಾ ಇಲ್ಲದೆ ಎಚ್ಚರವಾಗಿರುವಿಯಾ ಎಂದು ಕೇಳಲು ಮತ್ತೊಬ್ಬನು ಹೇಳುತ್ತಾನೆ. ಎಲೌ ಬ್ರಾಹ್ಮಣನೇ ನಮಸ್ಕಾರ ಮಾಡುವೆನು, ನಾನೂ ಒಬ್ಬ ಬ್ರಾಹ್ಮಣ ಪುತ್ರನು ನಾನು ರಾತ್ರಿಯಲ್ಲಿ ಮೊದಲೇ ನೀನು ಮಲಗಿರುವದನ್ನು ಕಂಡು ದೀಪ ಉರಿಯುತ್ತಿರಲು ನಿನ್ನ ಬಳಿಯಲ್ಲಿದ್ದ ಕಮಂಡಲು ಯಜ್ಞೋಪವೀತ ಮುಂತಾದವುಗಳನ್ನು ನೋಡಿ ಬ್ರಾಹ್ಮಣನೆಂದು ತಿಳಿದು ನಿನ್ನ ಬಳಿಯಲ್ಲಿಯೇ ಮಲಗಿಕೊಂಡೆನು ಈಗ ನಿನ್ನ ಮಾತನ್ನು ಕೇಳಿ ಯೆಚ್ಚರಗೊಂಡೆನು, ಎಂಬದಾಗಿ ಹೇಳಿದನು. ಆಗ ಮೊದಲನೆಯವನು ಎಲೌ ಹುಡುಗನೆ ನನ್ನನ್ನು ನಮಸ್ಕರಿಸಿದೆ ಯಾದ್ದರಿಂದ ಆಯುಷ್ಮಂತನಾಗೆಂದು ಆಶೀರ್ವದಿಸಿ ನೀನು ಯಾರು ಎಲ್ಲಿಂದಬಂದೆ ಏನು ಕೆಲಸಕ್ಕಾಗಿ ಎಂದು ಪ್ರಶ್ನೆಮಾಡಿದನು ಎರಡನೆಯವನು ಉತ್ತರ ಹೇಳುತ್ತಾನೆ. ಎಲೌ ಬ್ರಾಹ್ಮಣನೆ ನನ್ನನ್ನು ಭಾಸ್ಕರನೆಂದು ಕರೆಯುವರು ಪಶ್ಚಿಮ ಸಮುದ್ರತೀರದಲ್ಲಿ ಪ್ರಭಾಸತೀರ್ಥವು ನನ್ನ ವಾಸಸ್ಥಳವು ನನ್ನೆದುರಿಗೆ ಅನೇಕರು ಭೋಜರಾಯನ ವಿತರಣೆಯನ್ನು ಕೊಂಡಾಡಿರುವರು ಆದ್ದರಿಂದ ಆತನನ್ನು ಯಾಚಿ

ಸಲು ಬಂದಿರುವೆನೆಂದು ಹೇಳಿ ಸ್ವಾಮೀ ತಾವು ವೃದ್ಧರಾಗಿರೋಣದರಿಂದ ನನಗೆ ತಂದೆಗೆ ಸಮಾನರಾಗಿದ್ದೀರಿ ತಾವೂ ತಮ್ಮ ಸಂಗತಿಯನ್ನು ದಯಮಾಡಿ ಹೇಳಬೇಕೆಂದು ಪ್ರಾರ್ಥಿಸಲು ಆ ಮೊದಲನೆಯವನಾದ ವೃದ್ಧ ಬ್ರಾಹ್ಮಣನು ಹೇಳುತ್ತಾನೆ. ಯೆಲಾ ಮಗುವೇ ನನ್ನ ಹೆಸರು ಶಾಕಲ್ಯನೆಂದು ಕರೆಯುವರು ನಾನು ಏಕಶಿಲಾ ನಗರದಿಂದ ಬಂದಿರುವೆನು ನಾನೂ ಭೋಜನನ್ನು ಧನಾಶೆಯಿಂದ ಕಾಣುವದಕ್ಕೋಸ್ಕರ ಬಂದಿರುವೆನು ಯೆಂದು ಹೇಳಿ ಯೆಲಾ ಹುಡುಗನೇ ನೀನು ಹೇಳದೇ ಇದ್ದರೂ ನಿನ್ನನ್ನು ನೋಡಿದರೆ ದುಃಖಮುಖ್ಯವನಾಗಿ ಕಾಣುತ್ತೀಯೆ ಅದೇನು ಕಾರಣ ಹೇಳುಯೆನಲು ಭಾಸ್ಕರನು ಅಪ್ಪಾ ಏನೆಂದು ಹೇಳಲಿ, ಕೇಳು.

ಶ್ಲೋ॥ ಕ್ಷುತ್ಕ್ಷಾಮಾಃ ಶಿಶವಃ ಶವಾಇವಭೃಶಂ ಮಂದಾಶಯಾ ।
ಬಾಂಧವಾಃ ಲಿಪ್ತಾಜರ್ಝರ ಗರ್ಘರೀಜತುಲವೈರ್ನೋ ।
ಮಾಂತಥಾಬಾಧತೇ ಗೇಹಿನ್ಯಾತ್ರುಟಿತಾಂಶುಕಂಘಟಯಿತುಂ ।
ಕೃತ್ವಾಸಕಾಕುಸ್ಮಿತಂ ಕುಪ್ಯಂತೀಪ್ರತಿವೇಶ್ಮಲೋಕ ।
ಗೃಹಿಣೀ ಸೂಚೀಂಯಥಾಯಾಚಿತಾ ॥

ತಾ॥ ಮಕ್ಕಳು ಹಸಿವಿನಿಂದ ಕೃಶರಾಗಿ ಅಳುತ್ತಿರುವರು ನೆಂಟರು ನಮ್ಮ ಮನೆಯಲ್ಲಿ ಅನ್ನ ಕಾಣದೆ ಮುಖಗಳನ್ನು ಒಣಗಿಸಿಕೊಂಡಿರುವರು ಮನೆಯಲ್ಲಿರುವ ಪಾತ್ರೆಗಳಾದರೂ ಒಡಕುಗಳಾಗಿವೆ ಇವೆಲ್ಲಾ ಹೇಗಾದರೂ ಇರಲಿ ನನ್ನ ಹೆಂಡತಿಯು ಹರಕು ಸೀರೆಯನ್ನು ಉಟ್ಟುಕೊಂಡು ಅವುಗಳನ್ನು ಹೊಲಿಯುವುದಕ್ಕೆ ಸೂಜಿ ಇಲ್ಲದೆ ಮನೆ ಮನೆಯಲ್ಲಿಯೂ ಬೇಡುತ್ತಿರುವಳು ಈ ದುಃಖಗಳನ್ನು ಏನೆಂದು ಹೇಳಲಿ ಯೆಂದನು.

ಗ॥ ರಾಜಾಶ್ರುತ್ವಾ ಸರ್ವಾಭರಣಾನ್ಯುತ್ತಾರ್ಯತಸ್ಮೈದತ್ವಾಪ್ರಾಹ ।
ಭಾಸ್ಕರಸೀದಂತ್ಯತೀವತೇಬಾಲಾಃ ಝಟಿತಿತ್ವದ್ದೇಶಂಯಾಹಿ ॥

ತಾ॥ ಭೋಜರಾಯನು ಅದನ್ನೆಲ್ಲಾ ಕೇಳಿ ತನ್ನ ಮೈಮೇಲಿದ್ದ ಒಡವೆಗಳನ್ನೆಲ್ಲಾ ತೆಗೆದು ಆ ಭಾಸ್ಕರನಿಗೆ ಕೊಟ್ಟು ಯೆಲಾ ನಿನ್ನ ಮಕ್ಕಳು ದುಃಖಿಸುತ್ತಿರುವರು ಆದ್ದರಿಂದ ನೀನು ನಿನ್ನ ದೇಶಕ್ಕೆ ಹೋಗು ಯೆಂಬುದಾಗಿ ಹೇಳಿದನು.

ಗ॥ ತತಃಶಾಕಲ್ಯಃಪ್ರಾಹ ॥ ಅತ್ಯದ್ಭುತಾವಸುಮತೀದಳಿತಾರಿವರ್ಗ
ಕ್ರೋಡೀಕೃತಾಬಲವತಾ ಬಲಿರಾಜಲಕ್ಷ್ಮೀಃ ಏಕತ್ರಜನ್ಮನಿಕೃತಂ ಯ
ದನೇನಯೂನಾಜನ್ಮತ್ರಯೇಣತದಕರೋತ್ಪುರುಷಃ ಪುರಾಣಃ ॥

ತಾ॥ ಈ ಭೋಜರಾಯನು ಹಿಂದೇ ಜನ್ಮದಲ್ಲಿ ಭೂಮಿಯನ್ನು ಉದ್ಧಾರಮಾಡಿದನು ಶತ್ರುಗಳನ್ನು ಜೇಯಿಸಿದಾ ಕ್ಷತ್ರಿಯರಿದನು. ಬಲಿರಾಜ್ಯ ಲಕ್ಷ್ಮಿಯನ್ನು ಅಪಹರಿಸಿದನು ಶ್ರೀ ಮಹಾವಿಷ್ಣುವು ಈ ಮೂರು ಕಾರ್ಯಗಳಿಗೆ ಮೂರು ಜನ್ಮಗಳನ್ನೆತ್ತಿ ಮಾಡಿರುವನು ಆದ್ದರಿಂದ ವಿಷ್ಣುವಿಗಿಂತಲೂ ಅಧಿಕನೆಂದರ್ಥವು.

ಗ॥ ತತೋರಾಜಾ ಶಾಕಲ್ಯಾಯ ಲಕ್ಷತ್ರಯಂದದೌ ॥

ತಾ॥ ಬಳಿಕ ಶಾಕಲ್ಯನಿಗೆ ಮೂರು ಲಕ್ಷವನ್ನು ಕೊಟ್ಟನು.

ಗ॥ ಅನ್ಯದಾರಾಜಾಮೃಗಯಾರಸೇನವಿಚರನ್ ತತ್ರಪುರಸ್ಸರಮಾಗತಹ

ರಿಣ್ಯಾಂ ಬಾಣೇನವಿವ್ಯಾಧ್ಯಾಪಿವಿತ್ತಾ ಕಯಾಕೋಪಿಕವಿರಾಹ ॥

ತಾ॥ ಮತ್ತೊಂದು ಸಲ ದೊರೆಯು ಬೇಟೆಯಾಡುತ್ತಾ ಒಂದು ಜಿಂಕೆಯನ್ನು ಕೊಲ್ಲಲಾಗಿ, ಒಬ್ಬ ಕವಿಯು ಧನಾಶೆಯಿಂದ ಪದ್ಯವನ್ನು ಹೇಳುತ್ತಾನೆ.

ಶ್ಲೋ॥ ಶ್ರೀಭೋಜೇಮೃಗಯಾಂಗತೇಪಿಸಹಸಾಚಾಪೇಸಮಾರೋಪಿತೇ ।

ಹ್ಯಾಕರ್ಣಾಂತಗತೇಪಿಮುಷ್ಟಿಗಳಿತೇಬಾಣೇಂಗಲಗ್ನೇಪಿಚ ॥

ಸ್ಥಾನಾನ್ನೈವಪಲಾಯಿತಂ ನಚಲಿತಂಕೋತ್ಕಂಪಿತಂನೋತ್ ।

ಪ್ಲುತಂಮೃಗ್ಯಾಮದ್ಯಶಗಂಕರೋತಿ ದಯಿತಂಕಾಮೋಯಮಿತ್ಯಾಶಯಾ ॥

ತಾ॥ ಶ್ರೀಮಂತನಾದ ಭೋಜರಾಯನು ಬೇಟೆಗೆ ಬಂದು ಬಹಳ ಸಾಹಸದಿಂದ ಬಿಲ್ಲೇರಿಸಿ ತನ್ನ ಕಿವಿಗಳವರಿಗೂ ಸೇಳದು ಬಾಣವನ್ನು ಸಂಧಾನಮಾಡಿ ಹೆಣ್ಣು ಜಿಂಕೆಗಳ ಮೇಲೆ ಭಯಂಕರವಾಗಿಬಿಟ್ಟಾಗ್ಯೂ ಕೂಡ ಆ ಹೆಣ್ಣು ಜಿಂಕೆಯು ಈತನು ಸಾಕ್ಷಾನ್ಮಥನು ತಮ್ಮ ಗಂಡು ಜಿಂಕೆಗಳೊಡನೆ ಸಮಾಗಮವುಂಟುಮಾಡುವನೆಂಬ ಬುದ್ಧಿಯಿಂದ ಇದ್ದ ಸ್ಥಳದಲ್ಲೇ ಓಡಿಹೋಗದೆ ಇರುತ್ತಿದ್ದವು.

ಗ॥ ರಾಜಾತಸ್ಮೈಲಕ್ಷತ್ರಯಂಪ್ರಯಚ್ಛತಿ ॥

ತಾ॥ ದೊರೆಯು ಆತನಿಗೆ ಮೂರುಲಕ್ಷ ವರಹಾಗಳನ್ನು ಕೊಟ್ಟನು.

ಗ॥ ಅನ್ಯದಾಸಿಂಹಾಸನಮಲಂ ಕುರ್ವಾಣೇಶ್ರೀಭೋಜನೃಪತೌ ದ್ವಾರಪಾಲ

ಆಗತ್ಯಪ್ರಾಹ ದೇವಜಾನ್ನವೀತೀರವಾಸೀಕಾಚನ ವೃದ್ಧಬ್ರಾಹ್ಮಣೀ

ವಿದುಷೀದ್ವಾರಿತಿಷ್ಠತಿ ರಾಜಾ ಪ್ರವೇಶಯ, ತತಃಸಾಗಚ್ಛಂತೀಂರಾಜಾ

ಪ್ರಣಮ್ಯತಿಸಾತಂಚಿರಂಜೀವೇತ್ಯುಕ್ತ್ವಾಹ ॥

ತಾ॥ ಮತ್ತೊಂದಾವರ್ತಿ ಧೊರೆಯು ಸಿಂಹಾಸನಾಸೀನನಾಗಿರಲು ದ್ವಾರಪಾಲಕನು ಬಂದು ಮಹಾಸ್ವಾಮಿ ಗಂಗಾತೀರದಲ್ಲಿ ವಾಸಮಾಡುವ ಒಬ್ಬ ಬ್ರಾಂಹಣ ಮುದುಕಿಯು ಬಂದಿರುವಳೆನಲು ಧೊರೆಯು ಕರೆದುಕೊಂಡು ಬರಹೇಳಲು ಆಕೆಯು ಬರಲಾಗಿ ಧೊರೆಯು ನಮಸ್ಕಾರಮಾಡಿದನು. ಆಗ ಆಶೀರ್ವಾದವಾಗಿ ಹೇಳುತ್ತಾಳೆ.

ಶ್ಲೋ॥ಭೋಜಪ್ರತಾಪಾಗ್ನಿರಪೂರ್ವ ಏಷಃಜಾಗರ್ತಿಭೂಭೃತ್ಕಟಕಸ್ಥಲೀಷು।
ಯಸ್ಮಿಂಕ್ಪ್ರವಿಷ್ಟೇರಿಪುಪಾರ್ಥಿವಾನಾಂ ತೃಣಾನಿರೋಹಂತಿಗೃಹಾಂಗಣೇಷು ॥

ತಾ॥ ಈ ಭೋಜರಾಯನ ಪ್ರತಾಪಾಗ್ನಿಯು ಅಪೂರ್ವವಾದುದು. ಹೇಗೆಂದರೆ ಈ ಅಗ್ನಿಯು ಶತ್ರುರಾಜನ ಮೇಲೆ ಬಿದ್ದರೆ ಅವರ ಮನೆಗಳ ಅಂಗಳಗಳಲ್ಲೆಲ್ಲಿಯೂ ಹುಲ್ಲು ಬೆಳೆಯುವುದು. (ಅಂದರೆ ಶತ್ರುಗಳು ಓಡಿಹೋಗಿ ಮನೆಗಳು ಹಾಳುಬೀಳುತ್ತವೆ.

ಗ॥ ರಾಜಾತಸ್ಯೈರತ್ನಪೂರ್ಣಂ ಕಲಶಂಪ್ರಾಯಚ್ಛತ್ ॥

ತಾ॥ ಬಳಿಕ ಧೊರೆಯು ಆಕೆಗೆ ರತ್ನಗಳಿಂದ ತುಂಬಿರುವ ಒಂದು ಕಲಶವನ್ನು ಕೊಟ್ಟನು (ದಾನಶಾಸನದಲ್ಲಿ)

ಶ್ಲೋ॥ ಭೋಜೇನಕಲಶೋದತ್ತಃ ಸುವರ್ಣಮಣಿಸಂಭೃತಃ ಪ್ರತಾಪಸ್ತುತಿ
ತುಷ್ಟೇನವೃದ್ಧಾಯೈರಾಜಸಂಸದಿ ॥

ತಾ॥ ಭೋಜರಾಯನು ಒಬ್ಬ ಮುದುಕಿಯು ರಾಜ ಸಭೆಯಲ್ಲಿ ಬಂದು ರಾಯನ ಪರಾಕ್ರಮವನ್ನು ಬಣ್ಣಿಸಿದ್ದರಿಂದ ಒಂದು ರತ್ನಪೂರಿತ ಕಲಶವನ್ನು ಕೊಟ್ಟಿರುವನೆಂದು ಬರೆದನು.

ಗ॥ ಅನ್ಯದಾದೂರದೇಶಾದಾಗತಃ ಕಶ್ಚಿಚ್ಛಾರೋರಾಜಾನಂಪ್ರಾಹದೇವ ಸಿಂಹಳದೇಶೆಮಯಾಕಾಚನ ಚಾಮುಂಡಾಲಯೆ ರಾಜಕನ್ಯಾದೃಷ್ಟಾಬಾಲಾ ಳಪದೇವಸ್ಯಮಹಿಮಾನಂ ಬಹುದಾಶ್ರುತಂ ತ್ವಮಪಿವ ದೇಶಿಪಪ್ರಚ್ಛ ಮಯಾಚತಸ್ಯಾಃ ದೇವಗುಣಾವ್ಯಾವರ್ಣಿತಾಹ ಸಾಚಾತ್ಯಂ ತತೋ ಪಾಚ್ಛಂದನ ತರೋ ರ್ಸಿರುಪಮಂ ಗರ್ಭಖಂಡಂದತ್ವಾಯಥಾಸ್ಥಾನಂ ಪ್ರಪೇದೇ ದೇವಗುಣಾಭಿವರ್ಣನ ಪ್ರಾಪ್ತಂ ತದೀತಗೃಹಾಣ ಪತ ತ್ರಸ್ಯತಪರಿಮಳಭರಣಿ ಭೃಂಗಾಭುಜಂಗಾಶ್ಚಸಮಾಯಾಂತಿ ರಾಜಾತದ್ಗೃಹೀತ್ವಾತಸ್ಮೈಲಕ್ಷಂದದ೯.

ತಾ॥ ಮತ್ತೊಂದಾವರ್ತಿ ಬಹು ದೂರದೇಶದಿಂದ ಒಬ್ಬಾನೊಬ್ಬ ಚಾ

ರನು ಬಂದು ಸ್ವಾಮಿ ನಾನು ಸಿಂಹಳದೇಶದಲ್ಲಿ ಒಂದಾನೊಂದು ಚಾಮುಂಡೀ ದೇವಾಲಯದಲ್ಲಿ ಒಬ್ಬ ರಾಜ ಕನ್ನಿಕೆಯನ್ನು ಕಂಡೆನು. ಆಕೆಯು ಎಲೌ ಚಾರಣೀ ನಾನು ಭೋಜರಾಯನ ಗುಣಗಳನ್ನು ಕೇಳುವೆನು ನಿನಗೆ ತಿಳಿದಿದ್ದರೆ ಹೇಳು ಎನಲು ನಾನು ತಮ್ಮ ಗುಣಗಳನ್ನು ವರ್ಣಿಸಿದೆನು. ಆಗ ಆಕೆಯು ಸಂತೋಷಪಟ್ಟು ಒಂದು ಗಂಧದ ತುಂಡನ್ನು ಕೊಟ್ಟು ಇದರ ವಾಸನೆಗೆ ದುಂಬಿಗಳೂ ಹಾವುಗಳೂ ಬರುವವೆಂದು ಹೇಳಿ ಹೊರಟುಹೋದಳು. ತಮ್ಮ ಗುಣವರ್ಣನೆಯಿಂದ ಬಂದ ಈ ಗಂಧದ ಕೊರಡನ್ನು ಪರಿಗ್ರಹಿಸಬೇಕೆಂದು ಹೇಳಿ ಮುಂದಿಡಲಾಗಿ ಧೊರೆಯು ಸಂತೋಷಪಟ್ಟು ಅವನಿಗೆ ಲಕ್ಷ ವರಹಗಳನ್ನು ಕೊಟ್ಟನು.

ಗ॥ ತತೋದಾಮೋದರಸ್ತಸ್ಮಿನ್ನೇವಸ್ತೌತಿ ॥

ತಾ॥ ದಾಮೋದರ ಕವಿಯು ಆ ನೆವದಿಂದ ವರ್ಣಿಸುತ್ತಾನೆ.

ಶ್ಲೋ॥ ಶ್ರೀಮಚ್ಚಂದನವೃಕ್ಷಸಂತಿ ಬಹವಸ್ತೇಶಾಖಿನಃಕಾನನೇ ಯೇಷಾಂ
ಸೌರಭಮಾತ್ರಕಂ ನಿವಸತಿಪ್ರಾಯೇಣಪುಷ್ಪಶ್ರಿಯಾ ಪ್ರತ್ಯಂಗಂ
ಸುಕೃತೇನತೇನ ಶುಚಿನಾಖ್ಯಾತಪ್ರಸಿದ್ಧಾತ್ಮನಾಯೇ ಸೌಗಂಧಗು
ಣಾಃತ್ವಯಾಪ್ರಕಟಿತಾಃ ಕಾಸಾವಿಹಪ್ರೇಕ್ಷ್ಯತೇ ॥

ತಾ॥ ಎಲೌ ಶ್ರೀಗಂಧಮರವೇ ಕಾಡಿನಲ್ಲಿ ಇನ್ನೂ ಅನೇಕ ವೃಕ್ಷಗಳಿರುವವು ಆದರೆ ಅವುಗಳ ಹೂವುಗಳಲ್ಲಿಮಾತ್ರವೇ ವಾಸನೆಯು ಇರುತ್ತದೆ ನಿನ್ನಲ್ಲಿಯಾದರೋ ಪ್ರತಿರೆಂಬೆಯಲ್ಲಿಯೂ ಎಲ್ಲೆಲ್ಲಿಯೂ ವಾಸನೆಯಿಂದ ಕೂಡಿರುವೆ ಆದ್ದರಿಂದ ನಿನ್ನಂಥ ವೃಕ್ಷವೇ ಕಾಣುವದಿಲ್ಲವೆಂದು ವರ್ಣಿಸಲು ಧೊರೆಯು ಆತನಿಗೆ ಒಂದು ಲಕ್ಷ ವರಹಾಗಳನ್ನು ಕೊಟ್ಟನು.

ಗ॥ ತತೋದ್ವಾರಪಾಲ ಆಗತ್ಯಪ್ರಾಹದೇವಕಾಚಿತ್ಸೂತ್ರಧಾರೀಸ್ತ್ರೀದ್ವಾರಿ
ವರ್ತತೆ ರಾಜ್ಞಾಪ್ರವೇಶಯ ತತಸ್ಸಾಗತ್ಯರಾಜಾನಂ ಪ್ರಣಮತ್ಯಾಹ ॥

ತಾ॥ ಬಳಿಕ ದ್ವಾರಪಾಲಕನು ಬಂದು ಧೊರೆಯೇ ಒಬ್ಬಸೂತ್ರಧಾರಳು ಬಂದಿರುವಳೆಂದು ಬಿನ್ನವಿಸಿ ರಾಜನಪ್ಪಣೆಯಂತೆ ಅವಳನ್ನು ಕರತರಲಾಗಿ ಅವಳು ಧೊರೆಯನ್ನು ನಮಸ್ಕರಿಸಿ ಹೇಳುತ್ತಾಳೆ.

ಶ್ಲೋ॥ ಬಲಿಃಪಾತಾಳನಿಲಯೋಧಃ ಕೃತಶ್ಚಿತ್ರಮತ್ರಕಿಂ ಅಧಃಕೃತೋದಿವಿ
ಸ್ಥೋಪಿಚಿತ್ರಂಕಲ್ಪದ್ರುಮಸ್ತ್ವಯಾ ॥

ತಾ॥ ಪಾತಾಳದಲ್ಲಿರುವ ಬಲಿಯನ್ನು ನೀನು ಕೆಳಗೆ ಮಾಡಿದ್ದು ಏನು ಹಾನೆ ಆಶ್ಚರ್ಯವು ಸ್ವರ್ಗಲೋಕದಲ್ಲಿರುವ ಕಲ್ಪವೃಕ್ಷವನ್ನೇ ಕೆಳಗೆ ಮಾ

ಡಿವ್ದಿೀಯೆ ಅದೀಗಾಶ್ಚರ್ಯವೆಂದಳು. ಅಂದರೆ ಕಲ್ಪವೃಕ್ಷಕ್ಕಿಂತಲೂ ಹೆಚ್ಚಾ ಗಿ ಕೋರಿಕೆಗಳನ್ನು ಕೊಡುತ್ತೀ ಅಂದಳು.

ಗ॥ ರಾಜಾತಸ್ಯೈ ಪ್ರತ್ಯಕ್ಷರಲಕ್ಷಂದದೌ ॥

ತಾ॥ ಧೊರೆಯು ಆಕೆಗೆ ಅಕ್ಷರಲಕ್ಷವನ್ನು ಕೊಟ್ಟನು.

ಗ॥ ತತಃಕದಾಚಿನ್ಮೃಗಯಾಪರಿಶ್ರಾಂತಃ ರಾಜಾಕ್ವಚಿತ್ಸಹಕಾರತರೋರಧಸ್ತಾತ್ತಿಷ್ಠತಿಸ್ಮತತ್ರಮಲ್ಲಿನಾಥಾಖ್ಯಃ ಕವಿರಾಗತ್ಯಪ್ರಾಹ ॥

ತಾ॥ ಬಳಿಕೊಂದುದಿನ ಧೊರೆಯು ಬೇಟೆಯಿಂದ ಬಳಲಿ ಒಂದು ಮಾವಿನಮರದ ಕೆಳಗೆ ನಿಂತಿರಲು ಮಲ್ಲಿನಾಥನೆಂಬ ಕವಿಯು ಬಂದು ಹೇಳುತ್ತಾನೆ.

ಶ್ಲೋ॥ ಶಾಖಾಶತಶತ ವಿತತಾಸ್ಸಂತಿಕಿಯಂತೋನಕಾನನೇತರವಃ ॥ ಪರಿಮಳಭರಮಿಳದಳಕುಲದಳತದಳಾಶಾಖಿನೋವಿರಳಾಃ ॥

ತಾ॥ ಈ ಕಾಡಿನಲ್ಲಿ ರೆಂಬೆಗಳಿಂದೊಡಗೂಡಿದ ಮರಗಳು ಎಷ್ಟೋ ಇವೆ ಆದರೆ ತನ್ನಲ್ಲಿರುವ ಪರಿಮಳದಿಂದ ಕರಸಿಗೊಳ್ಳಲ್ಪಟ್ಟ ದುಂಬಿಗಳಿಂದ ವ್ಯಾಪ್ತವಾಗಿರುವ ಮರಗಳು ಅಪರೂಪವೆಂದು ಹೇಳಿದನು.

ಗ॥ ತತೋರಾಜಾತಸ್ಮೈ ಹಸ್ತವಲಯಂದದೌ ॥

ತಾ॥ ಬಳಿಕ ಧೊರೆಯು ಅವನಿಗೆ ತನ್ನ ಕೈಬಳೆಯನ್ನು ಕೊಟ್ಟನು.

ಗ॥ ತತ್ರೈವಾಸೀನೇರಾಜ್ಞಿ ಕೋಪಿವಿದ್ವಾನಾಗತ್ಯ ಸ್ವಸ್ತೀತ್ಯುಕ್ತ್ವಾವದಾ, ಹರಾಜನ್ ಕಾಶೀದೇಶಮಾರಭ್ಯ ತೀರ್ಥಯಾತ್ರಯಾ ಪರಿಭ್ರಾಮ್ಯತೆ ದಕ್ಷಿಣದೇಶವಾಸಿನಾಮಯಾ ರಾಜಾತ್ವಾದೃಶಾಂ ತೀರ್ಥವಾಸಿನಾಂದರ್ಶನಾತ್ಕೃತಾರ್ಥೋಸ್ಮಿ ಸಉಹಾಯಂ ಮಾಂತ್ರಿಕಾಶ್ಚ ರಾಜಾವಿಪ್ರೇಷು ಸರ್ವಸಂಭಾವ್ಯತೆ ರಾಜಾಪುನಃಪ್ರಾಹ ಮಂತ್ರವಿದ್ಯಯಾ ಯಥಾಪರಲೋಕೇ ಫಲಪ್ರಾಪ್ತಿಃ ತಥಾಕಿಮಿಹಲೋಕೇಪ್ಯಸ್ತಿ ವಿಪ್ರಃ ರಾಜನ್ ಸರಸ್ವತೀ ಚರಣಾರಾಧನಾದ್ವಿದ್ಯಾಪ್ರಾಪ್ತಿರೀಶ್ವವಿದಿತಾ ಮಂದಧನಾವಾಪ್ತಿರ್ಭಾಗ್ಯಾಧೀನಾ ॥

ತಾ॥ ಧೊರೆಯು ಅಲ್ಲಿಯೇ ಇರುತ್ತಿರಲು ಒಬ್ಬ ವಿದ್ವಾಂಸನು ಬಂದು ಆಶೀರ್ವದಿಸಿ ಹೇಳುತ್ತಾನೆ. ಸ್ವಾಮಿ ನಾನು ದಕ್ಷಿಣದೇಶಸ್ಥನು ಕಾಶೀಯಾತ್ರೆಗಾಗಿ ಸಂಚಾರಮಾಡುತ್ತಾ ಇದ್ದೇನೆ ಎನಲು ಧೊರೆಯು ಒಳ್ಳೇದು ತೀರ್ಥಯಾತ್ರೆಗಳ ದರ್ಶನದಿಂದ ಧನ್ಯನಾದೆನೆಂದನು. ವಿಪ್ರನು ನಾನು ಮಂತ್ರಶಾಸ್ತ್ರಬಿಜ್ಞನೆನಲು ಧೊರೆಯು ಬ್ರಾಹ್ಮಣರಲ್ಲಿ ಎಲ್ಲಾ ಸಾಮರ್ಥ್ಯಗಳೂ ಉಂಟೆಂದನು. ಮತ್ತೂ ಅಯ್ಯಾ ವಿಪ್ರನೇ ಮಂತ್ರ ವಿದ್ಯೆಯಿಂದ ಪರಲೋ

ಕವಲ್ಲಿ ಫಲಪ್ರಾಪ್ತಿಯುಂಟಾದಹಾಗೆ ಈ ಲೋಕದಲ್ಲಿಯೂ ಆಗುವದೇ ಎನಲು ಬ್ರಾಹ್ಮಣನು ಸರಸ್ವತಿಯ ಆರಾಧನೆಯಿಂದ ಈ ಲೋಕದಲ್ಲಿ ವಿದ್ಯೆಯುಂಟಾಗುವುದೆನ್ನುವುದು ಎಲ್ಲರಿಗೂ ತಿಳಿದ ವಿಷಯವೇ ಆದರೆ ಧನ ಲಭಿಸುವುದು ಭಾಗ್ಯಾಧೀನವೆಂದು.

ಶ್ಲೋ॥ ಗುಣಾಃಖಲುಗುಣಾಏವ ನಗುಣಾಭೂತಿಹೇತವಃ ॥ ಧನಸಂಚಯಕರ್ತ್ರೀಣಿಭಾಗ್ಯಾನಿಪೃಥಗೇವಹಿ ॥

ತಾ॥ ಗುಣಗಳು ಗುಣಗಳೇನೆ ಆ ಗುಣಗಳು ಭಾಗ್ಯಕ್ಕೆ ಕಾರಣಗಳಲ್ಲವು ಹಣಸಂಪಾದನೆಗೆ ಕಾರಣಭೂತಗಳಾದ ಭಾಗ್ಯಗಳು ಬೇರೆಯಾಗಿರುತ್ತವೆ ಎಂದನು.

ಗ॥ ದೇವವಿದ್ಯಾಗುಣಾಏವ ಲೋಕಾನಾಂಪ್ರತಿಷ್ಠಾಯೈಭವಂತಿ ಸತುಕೇವಲಂಸಂಪದಃ॥

ತಾ॥ ಆದ್ದರಿಂದ ಎಲೌರಾಯನೇ ವಿದ್ಯಾಗುಣಗಳೇನೆ ಪ್ರಪಂಚದಲ್ಲಿ ಜನಗಳಿಗೆ ಗೌರವಾರ್ಹಗಳಾಗಿರುವವು

ಶ್ಲೋ ॥ ಆತ್ಮಾಯತ್ತೇ ಗುಣಗ್ರಾಮೇ ನೈರ್ಗುಣ್ಯಂವಚನೀಯತಾ । ದೈವಾಯತ್ತೇಷುವಿತ್ತೇಷು ಪುಂಸಾಂಕಾನಾಮವಾಚ್ಯತಾ॥

ತಾ॥ ವಿದ್ಯಾವಿವೇಕಾದಿಗುಣಗಳು ತನ್ನಪ್ರಯತ್ನಕ್ಕೆ ಸಾಧ್ಯವಾಗಿರುತ್ತೆ ಪ್ರಯತ್ನದಿಂದ ಅವುಗಳನ್ನು ಹೊಂದಿದ್ದರೆ ಎಲ್ಲರೂ ನಿಂದಿಸುವರು ಐಶ್ವರ್ಯಗಳು ದೈವಾಧೀನವಾಗಿರುವದ್ದರಿಂದ ಧನಹೀನರನ್ನು ಯಾರೂ ನಿಂದಿಸಲಾರರು.

ಗ॥ ದೇವಮಂತ್ರಾರಾಧನೆ ಅಪ್ರತಿಹತಾಶಕ್ತಿಸ್ಸ್ಯಾತ್ ॥

ತಾ॥ ದೊರೆಯೆ ಮಂತ್ರಾರಾಧನೆಯಲ್ಲಿ ಬಹಳ ಸಾಮರ್ಥ್ಯವುಂಟು.

ಗ॥ ದೇವಕಂತುಕಹಲಂಪಶ್ಯ ಮಯಾಯಸ್ಯಶಿರಸಿಕರೋನಿಧೀಯತೇ ಸರಸ್ವತೀಪ್ರಸಾದೇನ ಅಸ್ಖಲಿತವಿದ್ಯಾಪ್ರಸಾರಸ್ಸ್ಯಾತ್ ॥

ತಾ॥ ಓ ಸ್ವಾಮಿಯೇ ಒಂದು ಆಶ್ಚರ್ಯವನ್ನು ನೋಡುವನಾಗು ನಾನು ಯಾರ ತಲೆಯಮೇಲೆ ಕೈಯನ್ನು ಇಡುವೆನೋ ಅವನು ಸರಸ್ವತೀ ಪ್ರಸಾದದಿಂದ ನಾಶವಾಗದಂತೆ ವಿದ್ಯೆಗಳನ್ನು ಹೊಂದುವನು. ಎಂದನು.

ಗ॥ ರಾಜಾಪ್ರಾಹ॥ ಸಾಮಂತೇಷುಪತಿದೇವತಾಶಕ್ತಿಃ ತತೋರಾಜಾಕಾಮಿದಾಸೀ ಮಾತಃಯರ್ಗವಿಪ್ರಂಪ್ರಾಹ ಹೇದ್ವಿಜಶ್ರೇಷ್ಠ ಅಸ್ಯಾವೇಶ್ಯಾಯಾಶ್ಶಿರಸಿಕರಂನಿಧೇಹಿ ॥

ತಾ॥ ದೊರೆಯು ಹೇಳುತ್ತಾನೆ ಓ ಬುದ್ಧಿವಂತನೇ ದೇವತಾಮಹಿಮೆಯು ಅನ್ಯಾದೃಶವಾದದ್ದು ಎಂದು ಬ್ರಾಹ್ಮಣನನ್ನು ಕುರಿತು ಓ ಬ್ರಾಹ್ಮಣ ಶ್ರೇಷ್ಠನೇ ಈ ಸ್ತ್ರೀಯ ತಲೆಯಮೇಲೆ ಕೈಯ್ಯನ್ನು ಇಡು ಎಂದು ಒಬ್ಬ ದಾಸಿಯನ್ನು ಕರೆಸಿ ನಿಲ್ಲಿಸಿದನು.

ಗ॥ ವಿಪ್ರಸ್ತಸ್ಯಾಃ ಶಿರಸಿ ಕರಂ ನಿಧಾಯ ತಾಂ ಪ್ರಾಹ ದೇವಿ ಯದ್ರಾಜಾ
ಜ್ಞಾಪಯತಿ ತದ್ವದ ।

ತಾ॥ ಅನಂತರ ಆ ಬ್ರಾಹ್ಮಣನು ಆಕೆಯ ತಲೆಯಮೇಲೆ ಕಯ್ಯನ್ನು ಇಟ್ಟು ಆಕೆಯನ್ನು ಕುರಿತು ಓ ದೇವಿಯೇ ರಾಜನು ಯಾವದನ್ನು ಆಜ್ಞಾಪಿಸುವನೋ ಅದನ್ನು ಹೇಳು ಎಂದನು.

ಗ॥ ತತೋ ದಾಸೀ ಪ್ರಾಹ । ದೇವಾಹಮದ್ಯ ಸಮಸ್ತವಾಙ್ಮಯಜಾತಂ । ಹ
ಸ್ತಾಮಲಕವತ್ಪಶ್ಯಾಮಿ ದೇವಾದಿಶ ಕಿಂ ವರ್ಣಯಾಮಿ ತತೋ ರಾಜಾ ಖ
ಡ್ಗಂ ವೀಕ್ಷ್ಯ ಪ್ರಾಹ ಖಡ್ಗಂ ಮೇ ವ್ಯಾವರ್ಣಯೇತಿ॥

ತಾ॥ ಅನಂತರ ದಾಸಿಯು ಓ ದೇವರೇ ನಾನು ಶಬ್ದಸಮೂಹಗಳನ್ನೆಲ್ಲಾ ಕೈಯ್ಯಿನಲ್ಲಿರತಕ್ಕ ನೆಲ್ಲೀಕಾಯಿಯಂತೆ ತಿಳಿದಿರುವೆನು ಯಾವದನ್ನು ವರ್ಣಿಸಲಿ ಆಜ್ಞಾಪಿಸಬೇಕೆನಲು ನನ್ನ ಕತ್ತಿಯನ್ನು ವರ್ಣಿಸೆಂದನು.

ದಾಸೀ ಪ್ರಾಹ॥ ಶ್ಲೋ॥ ಧಾರಾಧರತ್ವದಸಿರೇಷ ನರೇಂದ್ರ ಚಿತ್ರಂ ವರ್ಷಂತಿ
ವೈರವನಿತಾಜನಲೋಚನಾನಿ॥ ಕೋಶೇನ ಸಂತತಮಸಂಗತಿರಾಹ ವೇ
ಸ್ಯದಾರಿದ್ರ್ಯಮಭ್ಯುದಯತಿ ಪ್ರತಿಪಾರ್ಥಿವಾನಾಂ॥

ತಾ॥ ಎಲೈ ರಾಜನೆ ನಿನ್ನ ಕತ್ತಿಯು ಮೇಘವಾಗಿ ನಿನ್ನ ಶತ್ರುಸ್ತ್ರೀಯರ ಕಣ್ಣುಗಳಲ್ಲಿ ಮಳೆಯನ್ನು ಸುರಿಸುತ್ತಿದೆ. ಯಾವಾಗಲೂ ಕೋಶದಲ್ಲಿಯೇ ಇದ್ದುಕೊಂಡು ಶತ್ರುರಾಜರಿಗೆ ಬಡತನವನ್ನುಂಟುಮಾಡುತ್ತದೆ. ಇದು ಆಶ್ಚರ್ಯವಲ್ಲವೇ ?

ಗ॥ ರಾಜಾ ತಸ್ಯೈ ರತ್ನಕಲಶಾನ್ ಅನರ್ಘ್ಯಾನ್ ಪಂಚದದೌ ॥

ತಾ॥ ದೊರೆಯು ಆಕೆಗೆ ಬಹಳ ಬೆಲೆಯುಳ್ಳ ಐದು ರತ್ನ ಕಲಶಗಳನ್ನು ಕೊಟ್ಟನು.

ಗ॥ ತತಸ್ತಸ್ಮಿನ್ ಕ್ಷಣೇ ಕುತಶ್ಚಿತ್ ಪಂಚಕವಯಸ್ಸಮಾಜಗ್ಮುಃ । ತಾನವ
ಲೋಕ್ಯ ಈಷದ್ವಿಚ್ಛಾಯಮುಖಂ ರಾಜಾನಂ ದೃಷ್ಟ್ವಾ ಮಾಹೇಶ್ವ
ರಕವಿಃ ವೃಕ್ಷಮಿಷೇಣಾಹ ॥

ತಾ॥ ಬಳಿಕ ಒಂದು ಕ್ಷಣವಾದಮೇಲೆ ಎಲ್ಲಿಂದಲೊ ಐದು ಜನ ಕವಿಗಳು

ರಾಯನೆಡೆಗೆ ಬರಲು ದೊರೆಯು ಸ್ವಲ್ಪ ಕಳೆಗುಂದಿದವನಾಗಲು ಮಹೇಶ್ವರ ನೆಂಬ ಕವಿಯು ಒಂದು ಪಾದದನೆಪದಿಂದ ವರ್ಣಿಸುತ್ತಾನೆ.

ಶ್ಲೋ॥ ಕಿಂಜಾತೋಽಸಿ ಚತುಷ್ಪಥೇ ಘನತರಚ್ಛಾಯೋಽಸಿ ಕಿಂಛಾಯಯಾ । ಛನ್ನಶ್ಚೇತ್ಫಲಿತೋಽಸಿಕಿಂಫಲಭರೈಃ ಪೂರ್ಣೋಽಸಿಕಿಂಸನ್ನತಃ ॥ ಹೇ ಸದ್ವೃಕ್ಷಸಹಸ್ರಸಂಪ್ರತಿಚಿರಂ ಶಾಖಾಶಿಖಾಕರ್ಷಣಕ್ಷೋಭಾಮೋಟ ನಭಂಜನಾನಿಜನತಸ್ತ್ವಂ ಶ್ರೀಮದುಶ್ಚೇಽಪಿಟ್ಟತ್ಯೈಃ ॥

ತಾ॥ ಎಲೌ ಶ್ರೇಷ್ಠವಾದ ಮರವೇ ನೀನು ನಾಲ್ಕು ದಾರಿಗಳು ಕೂಡಿದ ಉತ್ತಮವಾದ ಸ್ಥಳದಲ್ಲಿ ಬೆಳೆದಿರುವೆಯಾ; ಮತ್ತು ದಿವ್ಯವಾದ ನೆರಳುಳ್ಳದ್ದಾಗಿರುವಿಯಾ ನೆರಳಿಂದಕೂಡಿ ಒಳ್ಳೇ ಫಲಗಳಿಂದ ಪ್ರಕಾಶಿಸುವಿಯಾ ಅಲ್ಲದೆ ಫಲಭಾರದಿಂದ ಬಗ್ಗಿರುವೆಯಾ, ಹೀಗೆಲ್ಲಾ ಇದ್ದರೆ ನೀನು ನಿನ್ನನ್ನು ರೆಂಬೆಗಳನ್ನು ಕಿತ್ತರೂ ಚಿಗುರುಗಳನ್ನು ಕಿತ್ತರೂ, ಮುರಿದುಹಾಕಿದರೂ, ಇನ್ನೂ ಅನೇಕವಾದ ಕೆಟ್ಟಕೆಲ್ಸಗಳನ್ನು ಮಾಡಿದರೂಕೂಡ ಅವೆಲ್ಲವನ್ನೂ ಸಹಿಸಿಕೊ ಎಂದನು.

ಗ॥ ತತೋರಾಜಾತಸ್ಮೈಲಕ್ಷಂದದೌ ॥

ತಾ॥ ಬಳಿಕ ಧೊರೆಯು ಆತನಿಗೆ ಒಂದು ಲಕ್ಷವನ್ನು ಕೊಟ್ಟನು.

ಗ॥ ತತಸ್ತೇದ್ವಿಜವರಾಃ ಪೃಥಕ್ಪೃಥಗಾಶೀರ್ವಾದನಮುದೀರ್ಯ್ಯ ಯಥಾಕ್ರಮಂ ರಾಜಾಜ್ಞಯಾಕಂಬಳ ಉಪವಿಶ್ಯಮಂಗಳಂಚಕ್ರುಃ ॥

ತಾ॥ ತರುವಾಯ ಆ ಬ್ರಾಹ್ಮಣರೆಲ್ಲರೂ ಬೇರೆಬೇರೆಯಾಗಿ ಧೊರೆಯನ್ನಾಶೀರ್ವದಿಸಿ ಕೂತುಕೊಂಡು ಮಂಗಳರೂಪವಾಗಿ ಹೇಳುತ್ತಾರೆ.

ಶ್ಲೋ॥ ಕೂರ್ಮಃ ಪಾತಾಳಗಂಗಾಪಯಸಿಪಿಹರತಾಂ ತತ್ತಟೀರೂಢಮುಸ್ತಾಮಾದತ್ತಾಂ ವಾದಿಪೋತ್ರೀ ಶಿಥಿಲಯತುಫಣಾಮಂಡಲಂ ಕುಂಡಲೀಂದ್ರಃ ॥ ದಿಙ್ಮಾತಂಗಾಮೃಣಾಳೀಕಬಳಕಲನಾಂತುರ್ವತಾಂ ಪರ್ವತೇಂದ್ರಾಃ ಸರ್ವೇಸ್ವೈರಂಚರಂತುತ್ವಯಿವಹತಿವಿಭೋ ಭೋಜದೇವೀಂಧರಿತ್ರೀಂ ॥

ತಾ॥ ಎಲೌ ಭೋಜಭೂಪಾಲನೇ ನೀನು ಈ ಭೂಭಾರವನ್ನು ಹೊತ್ತುಕೊಂಡಿರೋಣದರಿಂದ ಆದಿಕೂರ್ಮವು ಪಾತಾಳಗಂಗೆಯ ನೀರಿನಲ್ಲಿ ಇಷ್ಟಾನುಸಾರ ಆಡಿಕ್ಕೊಂಡಿರಲಿ ಭೂಮಿಯನ್ನು ತನ್ನ ಕೋರೆ ಹಲ್ಲಿನಿಂದ ಹೊತ್ತಿದ್ದವರಾಹವೂಕೂಡ ಆ ನದೀತೀರದಲ್ಲಿರುವ ಹೊನ್ನಾರೀ ಗಡ್ಡೆಗಳನ್ನು ಮೆಯ್ಯಲಿ ಆದಿಶೇಷನೂಕೂಡ ತನ್ನ ಹೆಡೆಗಳನ್ನು ಸಡಲಿಸಿಕ್ಕೊಂಡು

ಆಯಾಸ ಪರಿಹಾರಮಾಡಿಕೊಳ್ಳಲಿ ದಿಗ್ಗಜಗಳು ಅಲ್ಲಲ್ಲಿ ತಾವರೆದಂಟುಗಳನ್ನು ಮೇದುಕೊಂಡಿರಲಿ ಸಪ್ತಕುಲಪರ್ವತಗಳೂ ಕೂಡ ತಮ್ಮಿಷ್ಟಬಂದಂತೆ ತಿರುಗಿಕೊಂಡಿರಲಿ ಅದನ್ನು ಅಂದರೆ ಅವುಗಳೆಲ್ಲವೂ ಕೂಡಿ ವಹಿಸಿಕೊಂಡಿದ್ದ ಈ ಭೂಭಾರವನ್ನು ನೀನು ವಹಿಸಿರುವೆಯಾದ್ದರಿಂದ ಅವಗಳಿಗೆ ಬಿಡುವಾಗಲಿ ಎಂದು ಚಮತ್ಕಾರವಾಗಿ ಹೇಳಿದನು.

ಗ॥ ರಾಜಾಚಮತ್ಕೃತಃ ತಸ್ಮೈ ಶತಾಶ್ವಾನ್ದದೌ ॥

ತಾ॥ ಧೊರೆಯು ಆಶ್ಚರ್ಯಪಟ್ಟು ಆತನಿಗೆ ನೂರು ಕುದುರೆಗಳನ್ನು ಕೊಟ್ಟನು,

ಗ॥ ತತೋಭಾಂಡಾರಿಕೋಲಿಖತಿ ॥

ತಾ॥ ಬಳಿಕ ಭಾಂಡಾರಿಕನು ದಾನಪತ್ರದಲ್ಲಿ ಬರೆಯುತ್ತಾನೆ.

ಶ್ಲೋ॥ ಕ್ರೀಡೋದ್ಯಾನನರೇಂದ್ರೇಣ ಶತಮಶ್ವಾಮನೋಜವಾಃ । ಪ್ರದತ್ತಾ ಕಾಮದೇವಾಯಸಹಕಾರತರೋರಧಃ ॥

ತಾ॥ ಕ್ರೀಡೋದ್ಯಾನದಲ್ಲಿ ಧೊರೆಯಿಂದ ಕಾಮದೇವನೆಂಬ ಕವಿಗೆ ಮಾವಿನಮರದಡಿಯಲ್ಲಿ ನೂರು ಕುದುರೆಗಳು ಕೊಡಲ್ಪಟ್ಟವೆಂಬದಾಗಿ ಬರೆದುಕೊಟ್ಟನು.

ಗ॥ ತತಃ ಕದಾಚಿದ್ಭೋಜೋವಿಚಾರಯತಿಸ್ಮಮತ್ಸದೃಶೋವದಾನ್ಯಃ ಕೋಪಿನಾಸ್ತೀತಿ ತದ್ಗರ್ವಂವಿದಿತ್ವಾಮುಖ್ಯಾಮಾತ್ಯೋ ವಿಕ್ರಮಾರ್ಕಸ್ಯ ಪುಣ್ಯಪತ್ರಂಭೋಜಾಯಪ್ರದರ್ಶಯಾಮಾಸ ಭೋಜಸ್ತುತ್ರಪತ್ರೇಕಿಂಚಿತ್ಪ್ರಸ್ತಾವಮಶ್ಯತ್ ತಥಾಹಿ ವಿಕ್ರಮಾರ್ಕಂಪಿಪಾಸಯಾಪಾಹ॥

ತಾ॥ ಬಳಿಕೊಂದುವೇಳೆ ಭೋಜರಾಯನು ನನಗೆ ಸಮಾನನಾದ ತ್ಯಾಗಿಯು ಇಲ್ಲವೆಂದು ಯೋಚಿಸುತ್ತಿರಲು ಆ ಗರ್ವವನ್ನು ಒಬ್ಬ ಮಂತ್ರಿಯು ತಿಳಿದುಕೊಂಡು ವಿಕ್ರಮಾರ್ಕರಾಯನಕಾಲದ ಒಂದು ದಾನಪತ್ರವನ್ನು ರಾಯನ ಬಳಿ ಇಡಲು ಅದರಲ್ಲಿ ಆತನು ದಾಹದಿಂದ ಹೇಳಿದ್ದಾನೆ. ಏನಂದರೆ—

ಶ್ಲೋ॥ ಸ್ವಚ್ಛಂಸಜ್ಜನಚಿತ್ತವಲ್ಲಘುತರಂ ದೀನಾರ್ಥಿವಚ್ಛೀತಳಂ ಪುತ್ರಾಲಿಂಗನವತ್ತಥೈವಮಧುರಂ ತದ್ಬಾಲ್ಯಸಂಜಲ್ಪಿತಮ್ ॥ ಏಲೋಶೀರಲವಂಗಚಂದನಲಸತ್ಕರ್ಪೂರ ಕಸ್ತೂರಿಕಾಜಾಜೀಪಾಟಲಿಕೇತಕೈಃ ಸುರಭಿತಂಪಾನೀಯಮಾನೀಯತಾಂ ॥

ತಾ॥ ವಿಕ್ರಮಾರ್ಕರಾಯನು ಸಜ್ಜನರ ಮನಸ್ಸಿನಂತೆ ನಿರ್ಮಲವಾಗಿಯೂ ಬಡವನಾದ ಯಾಚಕನ ಮಾತಿನಂತೆ ಹಗುರವಾಗಿಯೂ ಸ್ವಂತ

ಮೃಗನ ಆಲಿಂಗನದಂತೆ ತಣ್ಣಗೂ, ಎಳೆಹುಡುಗರ ಮಾತುಗಳಂತೆ ರುಚಿಯಾಗಿಯೂ ಏಲಕ್ಕಿ ಲಾವಂಚ ಚಂದನಪಚ್ಚಕರ್ಪೂರ, ಕಸ್ತೂರಿ, ಜಾಜಿ, ಪಾದರಿ ಹುಷ್ಪ್ವ ಕೇತಕೀ ಮೊದಲಾದವುಗಳಿಂದ ಸುವಾಸನೆಯುಳ್ಳ ನೀರನ್ನು ತೆಗೆದುಕೊಂಡು ಬನ್ನಿರೆಂದನು.

ಗ॥ ತತೋಮಾಗಧಃಪ್ರಾಹ॥ ಬಳಿಕ ಮಾಗಧನು ಹೇಳುತ್ತಾನೆ.

ಶ್ಲೋ॥ ವಕ್ತ್ರೇಭೋಜಸರಸ್ವತ್ಯಧಿವಸತಿಸದಾಶೋಣ ಏವಾಧರಸ್ತೇಬಾ
ಹುಃಕಾಕುತ್ಸ್ಥವೀರ್ಯಸ್ಮೃತಿಕರಣಪಟುರ್ದಕ್ಷಿಣಸ್ತೇಸಮುದ್ರಃ। ವಾಹಿ
ನ್ಯಃ ಪಾರ್ಶ್ವಮೇತಾಃ ಕಥಮಪಿಭವತೋ ನೈವ ಮುಂಚತ್ಯಭೀಕ್ಷ್ಣಂ
ಸ್ವಚ್ಛೇಚಿತ್ತೇಕುತೋಽಭೂತ್ಕಥಯನರಪತೇತೇಂಬು ಪಾನಾಭಿಲಾಷಃ॥

ತಾ॥ ಎಲೈರಾಯನೆ ನಿನ್ನ ಮುಖದಲ್ಲಿ ಸರಸ್ವತೀ ನದಿಯು ಇರುತ್ತದೆ. ನಿನ್ನ ತುಟಿಯಲ್ಲಿ ಶೋಣಾನದಿಯು ಇರುವದು ನಿನ್ನ ಭುಜವಾದರೋ ಶ್ರೀ ರಾಮನ ಪರಾಕ್ರಮವನ್ನು ನೆನಸಿಕೊಳ್ಳುವ ದಕ್ಷಿಣ ಸಮುದ್ರವೇ ಆಗಿದೆ ನಿನ್ನ ಪಕ್ಕದಲ್ಲಿಯಾದರೆ ವಾಹಿನಿಗಳು (ನದಿಗಳು) ಇದ್ದೇಇಧೆ. ನಿನ್ನ ಮನಸ್ಸು ನಿರ್ಮಲವಾದದ್ದು ಹೀಗಿರಲು ನಿನಗೆ ನೀರಿನ ಆಶೆ ಜೇರೆ ಯಾತಕ್ಕೆ ಅಂದರೆ ಮುಖದಲ್ಲಿ ದಿವ್ಯವಾದ ಕವಿತಾವಾಕ್ಯ ತುಟಿಯು ಕೆಂಪಗಿರುವದು ನಿನ್ನ ಭುಜವು ಸೇತುವೆಯಂತೆ ನೀಳವಾಗಿಧೆ ಪಕ್ಕದಲ್ಲಿ ಸೈನ್ಯಗಳು ಯಾವಾಗಲೂ ಇರುತ್ತವೆ ನಿನ್ನಮನಸ್ಸು ನಿರ್ಮಲವಾಗಿದ್ದೆ. ಇಂಥಾ ವಿದ್ಯೆಯೂ ಶೌರ್ಯ, ಸಂಪತ್ತು ಸತ್ಸ್ವಭಾವವುಳ್ಳವನೆಂದು ವರ್ಣನೆಯಾಯಿತು.

ಗ॥ ತತೋ ವಿಕ್ರಮಾರ್ಕಃಪ್ರಾಹ ॥

ತಾ॥ ಬಳಿಕ ವಿಕ್ರಮಾರ್ಕನು ಹೇಳುತ್ತಾನೆ.

ಶ್ಲೋ॥ ಅಷ್ಟೌಹಾಟಕಕೋಟಿ ಯಃ ತ್ರಿನವತಿರ್ಮುಕ್ತಾ ಫಲಾನಾಂತುಲಾಃ
ಪಂಚಾಶನ್ಮಧುಗಂಧ ಮತ್ತಮಧುಪಾಃ ಕ್ರೋಧೋದ್ಧತಾಸಿಂಧುರಾಃ
ಅಶ್ವಾನಾಮಯುತಂ ಪ್ರಪಂಚಚತುರಂ ವಾರಾಂಗನಾನಾಂಶತಂ
ತ್ತಂ ಪಾಂಡ್ಯನೃಪೇಣಯೌತಕಮಿದಂ ವೈತಾಳಿಕಾಯಾರ್ಪ್ಯತಾಂ

ತಾ॥ ಎಂಟುಕೋಟಿ ಚಿನ್ನದ ನಾಣ್ಯಗಳೂ ತೊಂಭತ್ತುಮೂರುತೊಲೆ ಒಳ್ಳೆ ಮುತ್ತುಗಳೂ ದಿವ್ಯವಾದ ಐವತ್ತಾನೆಗಳೂ ಹತ್ತುಸಾವಿರ ಕುದುರೆಗಳೂ ಲೋಕದಲ್ಲೆಲ್ಲಾ ಕುಶಲಮತಿಯರಾದ ನೂರು ಸೂಳೆಯರೂ ಈ ವೈತಾಳಿಕನಿಗೆ ನನ್ನ ಅಪ್ಪಣೆಯಂತೆ ಕೊಡಬೇಕೆಂದು ಬರೆದಿತ್ತು.

ಗ॥ ತತೋಭೋಜಃ ಪ್ರಥಮಂತ ಏವತದ್ಭುತಂ ವಿಕ್ರಮಾರ್ಕಚರಿತ್ರಂ...

ಷ್ಯಾನಿಜಗರ್ವಂತತ್ಯಾಜ ॥

ತಾ॥ ತರುವಾಯ ಧೂರೆಯು ಮೊದಲೇ ಆಶ್ಚರ್ಯಕರವಾಗಿರುವ ವಿಕ್ರಮಾರ್ಕನ ಚರಿತ್ರೆಯನ್ನು ಕೇಳಿ ತನ್ನ ಗರ್ವವನ್ನು ಬಿಟ್ಟುಬಿಟ್ಟನು.

ಗ॥ ತತಃಕದಾಚಿದ್ಧಾರಾನಗರೇ ರಾತ್ರೌ ವಿಚರನ್ರಾಜಾ ಕ್ವಚನ ದೇವಾಲಯೇ ಶಯಾನಂ ಬ್ರಾಹ್ಮಣಂ ಇತ್ಥಂ ಪಠಂತಮವಲೋಕ್ಯಾಸ್ಥಿತಃ॥

ತಾ॥ ಬಳಿಕ ಒಂದುದಿನ ರಾಯನು ಪಟ್ಟಣದಲ್ಲಿ ಸಂಚರಿಸುತ್ತಾ ಒಂದು ದೇವಾಲಯದಲ್ಲಿ ಒಬ್ಬ ಬ್ರಾಹ್ಮಣನು ಛಳಿಯಿಂದ ಹೀಗೆ ಹೇಳುತ್ತಿದ್ದದ್ದನ್ನು ಕೇಳುತ್ತಾ ನಿಂತುಕೊಂಡನು.

ಶ್ಲೋ॥ ಶೀತೇನಾಧ್ಯುಷಿತಸ್ಯಮಾಘಜಲವಚ್ಚಿಂತಾರ್ಣವೇಮಜ್ಜ ತಶ್ಶಾಂತಾಗ್ನೇಃ ಸ್ಫುಟಿತಾಧರಸ್ಯಧಮತಃ ಕ್ಷುತ್ಕ್ಷಾಮಕುಕ್ಷೇರ್ಮಮ॥ ನಿದ್ರಾ
ಕ್ವಾಪ್ಯವಮಾನಿತೇವದಯಿತಾ ಸಂತ್ಯಜ್ಯದೂರಂಗತಾಸತ್ಪಾತ್ರಪ್ರತಿಪಾದಿತೇವಕಮಲಾ ನೋಹೀಯತೇಶರ್ವರೀ ॥

ತಾ॥ ಮಾಘಮಾಸದಲ್ಲಿ ಇರತಕ್ಕ ನೀರಿನಹಾಗೆ ತನುವಿನಿಂದ ಕೂಡಿರುವ ಚಿಂತೆಯೆಂಬ ಸಮುದ್ರದಲ್ಲಿ ಮುಳುಗುತ್ತಲಿರುವ ಆರಿಹೋದ ಅಗ್ನಿಯು ಊದೋಣದರಿಂದ ಬಿಳಿದ (ಒಣಗಿದ) ತುಟಿಯುಳ್ಳ ಮತ್ತು ಹಸಿವಿನಿಂದ ಬರಿದಾದ ಹೊಟ್ಟೆಯುಳ್ಳ ನನ್ನನ್ನು ಬಿಟ್ಟು ನಿದ್ರೆಯು ಅಪಮಾನವನ್ನು ಹೊಂದಿದ ಸ್ತ್ರೀಯಹಾಗೆ ಯೆಲ್ಲಿಯೋ ಹೋಯಿತು ಯೋಗ್ಯನಾದವನಿಗೆ ದಾನವನ್ನು ಕೊಟ್ಟವರ ಭಾಗ್ಯವು ಹ್ಯಾಗೆ ನಶಿಸುವದಿಲ್ಲವೋ ಆರೀತಿ ರಾತ್ರೆಯು ಕಡಮೆಯಾಗುವದಿಲ್ಲವು.

ಗ॥ ಇತಿ ಶ್ರುತ್ವಾರಾಜಾ ಪ್ರಾತಸ್ತಮಾಹೂಯ ಪಪ್ರಚ್ಛ ವಿಪ್ರ ಪೂರ್ವೇದ್ಯುಃ ರಾತ್ರೌತ್ವಯಾ ದಾರುಣಸ್ಸೀತಭಾರಃ ಕಥಂಸೋಢಃ ॥

ತಾ॥ ಇದನ್ನು ರಾಜನು ಕೇಳಿ ಬೆಳಿಗ್ಗೆ ಆ ಬ್ರಾಹ್ಮಣನನ್ನು ಕರೆಯಿಸಿ ಓ ಬ್ರಾಹ್ಮಣನೇ ! ನಿನ್ನೇ ರಾತ್ರಿಯಲ್ಲಿ ಸಹಿಸಲ ಶಕ್ಯವಾದ ಚಳಿಯು ಹ್ಯಾಗೆ ನಿನ್ನಿಂದ ಸಹಿಸಲ್ಪಟ್ಟಿತು ಎಂದು ಕೇಳಿದನು.

ವಿಪ್ರಆಹ ॥ ಶ್ಲೋ ॥ ರಾತ್ರೌಜಾನುರ್ದಿವಾಭಾನುಃ ಕೃಶಾನುಸ್ಸಂಧ್ಯಯೋರ್ದ್ವಯೋಃ । ಏವಂಶೀತಂ ಮಯಾನೀತಂ ಜಾನುಭಾನುಕೃಶಾನುಭಿಃ.

ತಾ॥ ಬಳಿಕ ಬ್ರಾಹ್ಮಣನು ರಾತ್ರಿಯಲ್ಲಿ ಮೊಣಕಾಲ ಗಳಿಂದಲೂ ಹಗಲೂ ಸೂರ್ಯನಿಂದಲೂ ಎರಡು ಸಂಧ್ಯಾಕಾಲಗಳಲ್ಲಿಯೂ ಯಜ್ಞೇಶ್ವರನಿಂದಲೂ

ಚಳಿಯನ್ನು ಕಳೆದುಕೊಂಡೆನೆಂದನು.

ಗ॥ ರಾಜಾತಸ್ಮೈ ಸುವರ್ಣಕಲಶತ್ರಯಂಪ್ರಾದಾತ್ ॥ ತತಃಕವಿಃರಾಜಾನಂಸ್ತೌತಿ ॥

ತಾ॥ ಅದನ್ನು ಕೇಳಿ ದೊರೆಯು ಮೂರು ಚಿನ್ನದ ಕಲಶಗಳನ್ನು ಕೊಟ್ಟನು. ಆ ಬ್ರಾಹ್ಮಣನು ಅದನ್ನು ತೆಗದುಕೊಂಡು ದೊರೆಯನ್ನು ಸ್ತೋತ್ರಮಾಡುತ್ತಾನೆ.

ಶ್ಲೋ॥ ಧಾರಯಿತ್ವಾತ್ವಯಾತ್ಮಾನಂ ಮಹಾತ್ಯಾಗಧನಾಧುನಾ । ಮೋಚಿತಾಬಲಿಕರ್ಣಾದ್ಯಾಸ್ಸ್ವಯಶೋಗುಪ್ತಿವೇಶ್ಮನಃ ॥

ತಾ॥ ಎಲೈ ತ್ಯಾಗವೇಧನವಾಗಿ ಉಳ್ಳ ಭೋಜರಾಯನೇ ನೀನು ಅವತಾರವಾಗಿ ತಮ್ಮಗಳ ಕೀರ್ತಿಪಂಜರದಲ್ಲಿದ್ದಂಥಾ ಬಲಿಚಕ್ರವರ್ತಿ ಕರ್ಣ ಮೊದಲಾದವರನ್ನು ಬಿಡುಗಡೆ ಮಾಡಿದೆ ಎಂದನು.

ಗ॥ ರಾಜಾತಸ್ಮೈಲಕ್ಷಂದದೌ ॥

ತಾ॥ ದೊರೆಯು ಅವನಿಗೆ ಒಂದು ಲಕ್ಷವನ್ನು ಕೊಟ್ಟನು.

ಗ॥ ಏಕದಾಕ್ರೀಡೋದ್ಯಾನಪಾಲ ಆಗತ್ಯೈಕಮಿಕ್ಷುದಂಡಂರಾಜ್ಞಃ ಪುರೋಮುಮೋಚ ತಂಚರಾಜಾಕರೆ ಗೃಹೀತವಾನ್ ತತೋಮಯೂರಕವಿಃಪಿತಾಂತ ಪರಿಚಯವಶಾತ್ ಆತ್ಮನಿರಾಜ್ಞಾಕೃತಾಮವಜ್ಞಾಂ ಮನಸಿನಿಧಾಯ ಇಕ್ಷುಮಿಕ್ಷೇಣಾಹ ॥

ಗ॥ ಅನ್ಯದಾ ಭೋಜೋ ಧಾರಾನಗರೇ ಏಕಾಕೀ ವಿಚರನ್ ಕಸ್ಯಚಿದ್ವಿಪ್ರವರಸ್ಯ ಗೃಹಂ ಗತ್ವಾ ತತ್ರ ಕಾಂಚನ ಪತಿವ್ರತಾಂ ಸ್ವಾಂಕೇ ಶಯಾನಂ ಭರ್ತಾರಮುದ್ವಹಂತೀಮಪಶ್ಯತ್ ತತಸ್ತಸ್ಯಾಶ್ಶಿಶುಸ್ಸುಪ್ತೋತ್ಥಿತಃ ಜ್ವಾಲಾಯಾಸ್ಸಮೀಪಮಗಚ್ಛತ್ ಇಯಂ ಚ ಪತಿಧರ್ಮಪರಾಯಣಾ ಸ್ವಪತಿಂ ನೋತ್ಥಾಪಯಾಮಾಸ ತತಶ್ಶಿಶುಂ ಚ ವಹ್ನೌ ಪತಂತಂ ನ ಗೃಹ್ಣಾತ್ ರಾಜಾ ಚಾಶ್ಚರ್ಯಮವಲೋಕ್ಯಾತಿಷ್ಠತ್ ತತಸ್ಸಾ ಪತಿಧರ್ಮಪರಾಯಣಾ ವೈಶ್ವಾನರಮಪ್ರಾರ್ಥಯತ್ ಯಜ್ಞೇಶ್ವರ ತ್ವಂ ಸರ್ವಕರ್ಮಸಾಕ್ಷೀ

ಸರ್ವಧರ್ಮಾಣಿ ಜಾನಾಸಿ ಮಾಂಪಾತಿ ಧರ್ಮಪರಾರ್ಥಿನಾಂ ಶಿಶುಮುತ್ಸೃಹ್ಯಂತೀಂ ಚ ಜಾನಾಸಿ ತತ್ರ ಮದೀಯಂ ಶಿಶುಮನುಗೃಹಿತು ದಕ್ಷಸ್ತ್ವಂ ಮಾಮದಹೇತಿ ತತಃ ಶಿಶುಃ ಯಜ್ಞೇಶ್ವರಂ ಪ್ರವಿಶ್ಯ ತಂ ಚ ಹಸ್ತೇನ ಗೃಹೀತ್ವಾರ್ಧಘಟಿಕಾಪರ್ಯಂತಂ ತತ್ರೈವಾತಿಷ್ಠತ್ ತತೋನಾರ್ಯೋಬೀತ್ ಪ್ರಸನ್ನಮುಖ್ಯ ಶಿಶುಃ ಸಾ ಚ ಧ್ಯಾನಾಧಿರೂಢಾತಿಷ್ಠತ್ ತತೋಯದ್ರುಷ್ಟ್ವಾ ಯಾಸವ ಎತ್ತಿತೇ ಭರ್ತಸಾರ್ಧಂತಿ ಶಿಶುಂ ಜಗ್ರಾಹ ತಂ ಚ ಪರಮಧರ್ಮವಾಲೋಕ್ಯ ವಿಸ್ಮಯಾವಿಷ್ಟೋ ನೃಪತಿರಾಹ ಅಹೋಽಸ್ಮ ಭಾಗ್ಯಂ ಕಸ್ಯಾಸ್ತಿ ಯಸ್ಯೇದೃಶ್ಯಃ ಪರಮಪ್ರಣ್ಯಾಸ್ತ್ರಿಯೋಪಿ ಮನ್ನಗರಮಧಿವಸಂತೀತಿ ತತಃ ಪ್ರಾತಸ್ಸಭಾಯಾಮಾಗತ್ಯ ಸಿಂಹಾಸನೇ ಉಪವಿಷ್ಟಃ ರಾಜಾ ಕಾಳಿದಾಸಂ ಪ್ರಾಹ ಸುಕವೇ ಮಹದಾಶ್ಚರ್ಯಂ ಮಯಾ ಪೂರ್ವೇದ್ಯುಃ ರಾತ್ರೌ ದೃಷ್ಟಮಸ್ತೀತ್ಯುಕ್ತ್ವಾ ರಾಜಾ ಪಠತಿ ॥

ಶ್ಲೋ॥ ಹುತಾಶನಶ್ಚಂದನಪಂಕಶೀತಲ ಇತಿ ಕಾಳಿದಾಸಃ ತತಶ್ಚರಣತ್ರಯಂ ಝಟಿತಿ ಪಠತಿ ॥

ತಾ॥ ಮಾತ್ತೊಂದು ಸಲ ಧೊರೆಯು ಧಾರಾಪಟ್ಟಣದಲ್ಲಿ ಸಂಚಾರಮಾಡುತ್ತಾ ಒಬ್ಬಾನೊಬ್ಬ ಬ್ರಾಂಹ್ಮಣನ ಮನೆಗೆ ಬಂದು ಆ ಒಬ್ಬ ಪತಿವ್ರತೆಯನ್ನೂ ಮತ್ತೂ ಆಕೆಯ ತೊಡೆಯ ಮೇಲೆ ಮಲಗಿರುವ ಆಕೆಯ ಗಂಡನನ್ನೂ ನೋಡಿದನು. ಆಗ ಆಕೆಯ ಮಗುವು ನಿದ್ರೆಯಿಂದೆದ್ದು ಸಮೀಪದಲ್ಲಿದ್ದ ಬೆಂಕಿಯ ಹತ್ತಿರಕ್ಕೆ ಹೋಗುತ್ತಿದ್ದರೂ ಕೂಡ ಪತಿವ್ರತೆಯಾದ ಆಕೆಯು ತನ್ನ ಗಂಡನನ್ನು ಎಬ್ಬಿಸಲಿಲ್ಲವು ಆಗ ಮಗುವು ಬೆಂಕಿಯಲ್ಲಿ ಬಿತ್ತು ಆಗಲೂ ಗಂಡನನ್ನು ಎಬ್ಬಿಸಲಿಲ್ಲವು ಆಗ ಧೊರೆಯು ಅದನ್ನು ನೋಡುತ್ತಲೆ ಇರಲು ಆಕೆಯು ಅಗ್ನಿಯನ್ನು ಕುರಿತು ಸ್ವಾಮಿ ಯಜ್ಞೇಶ್ವರನೇ ನೀನು ಯಲ್ಲಾ ಕರ್ಮಗಳಿಗೂ ಸಾಕ್ಷಿಭೂತನು ಮತ್ತು ಸಕಲ ಧರ್ಮಗಳನ್ನೂ ತಿಳಿದವನಾಗಿದ್ದೀಯ ಆದ್ದರಿಂದ ನನ್ನ ಮಗುವನ್ನು ಅನುಗ್ರಹಿಸಲು ತಕ್ಕವನು ಆದ್ದರಿಂದ ಮಗುವನ್ನು ಸುಡಬೇಡವೆಂದು ಪ್ರಾರ್ಥಿಸಿಕೊಳ್ಳಲು ಆ ಮಗುವು ಅರ್ಧಘಳಿಗೆವರಿವಿಗೂ ಬೆಂಕಿಯಲ್ಲಿಯೇ ಆಡುತ್ತಿತ್ತು ಬಳಿಕ ಪತಿಯು ಎಚ್ಚರಗೊಳ್ಳಲಾಗಿ ಆಕೆಯು ಮಗುವನ್ನು ಬೇಗ ಎತ್ತಿಕೊಂಡಳು, ಧೊರೆಯು ಆ ಪರಮ ಧರ್ಮವನ್ನು ನೋಡಿ, ಆಶ್ಚರ್ಯಪಟ್ಟು ನನ್ನ ಈ ಭಾಗ್ಯವು ಎಷ್ಟರದು ಇಂಥಾ ಪುಣ್ಯಸ್ತ್ರೀಯರೂ ನನ್ನ ಪಟ್ಟಣದಲ್ಲಿರುವರಲ್ಲಾ ಎಂದಂದುಕೊಳ್ಳುತ್ತಾ ಮಾರುದಿನ ಪ್ರಾತಃಕಾಲದಲ್ಲಿ ಸಭೆಯನ್ನಲಂಕರಿಸಿ ಕಾಳಿದಾಸ

ನನ್ನು ಕರಿತು (ಶ್ಲೋ॥ ಹುತಾಶನಶ್ಚಂದನಪಂಕಶೀತಲಃ) ಎಂದು ಸಮಸ್ಯೆ ಹೇಳಲು ಕಾಳಿದಾಸನು ಪೂರ್ತಿಮಾಡುವನು. ಹೇಗೆಂದರೆ—

ಶ್ಲೋ॥ ಸುತಂ ಪತಂತಂ ಪ್ರಸಮೀಕ್ಷ್ಯ ಪಾವಕೇ ನಬೋಧಯಾಮಾಸ ಪತಿಂ
ಪತಿವ್ರತಾ । ತದಾಭವತ್ತತ್ಪತಿಭಕ್ತಿ ಗೌರವಾತ್ ಹುತಾಶನಶ್ಚಂದನ
ಪಂಕ ಶೀತಲಃ ॥

ತಾ॥ ಒಬ್ಬಾಕೆಯೊಬ್ಬ ಪತಿವ್ರತೆಯು ತನ್ನ ಮಗು ಬೆಂಕಿಯಲ್ಲಿ ಬೀಳುತ್ತಿದ್ದರೂ ತನ್ನ ಗಂಡನನ್ನು ಎಬ್ಬಿಸದಿರಲು ಅಗ್ನಿಯು ಆಕೆಯ ಪಾತಿವ್ರತ್ಯಕ್ಕೆ ಮೆಚ್ಚಿ ಶ್ರೀಗಂಧದಂತೆ ತಣ್ಣಗಾದನು.

ಗ॥ ರಾಜಾಚ ಸ್ವಾಭಿಪ್ರಾಯ ಮವಲೋಕ್ಯ ವಿಸ್ಮಿತಃ ತಮಾಲಿಂಗ್ಯ
ಪಾದಯೋಃ ಪತತಿಸ್ಮ ॥

ತಾ॥ ದೊರೆಯಾದರೋ ತನ್ನಭಿಪ್ರಾಯವನ್ನೇ ಹೇಳಿರುವದನ್ನು ಕಂಡು ಆತನ ಕಾಲುಗಳಲ್ಲಿ ಬಿದ್ದು ನಮಸ್ಕರಿಸಿದನು.

ಗ॥ ಏಕದಾ ಗ್ರೀಷ್ಮಕಾಲೇ ರಾಜಾ ಅಂತಃಪುರೇ ವಿಚರನ್ ಘರ್ಮತಾಪ
ತಪ್ತಃ ಆಲಿಂಗನಾದಿ ಕರ್ತುಮಶಕ್ತಃ ತಾಭಿಸ್ಸಹ ಸರಸಸಲ್ಲಾಪಾದ್ಯುಪ
ಚಾರಮನುಭೂಯ ತತ್ರೈವಸುಪ್ತಃ ತತಃಪ್ರಾತರುತ್ಥಾಯ ರಾಜಾ
ಸಭಾಂಪ್ರವಿಷ್ಟಃ ಕುತೂಹಲಾತ್ಪ್ರಾಹ ॥

ತಾ॥ ಮತ್ತೊಂದುಸಲ ಗ್ರೀಷ್ಮಕಾಲದಲ್ಲಿ ದೊರೆಯು ಅಂತಃಪುರದಲ್ಲಿ ತಿರುಗಾಡುತ್ತಾ ಘರ್ಮತಾಪದಿಂದ ಕೂಡಿದವನಾಗಿ ಆ ಸ್ತ್ರೀಯರೊಡನೆ ಆಲಿಂಗನಾದಿಗಳನ್ನು ಮಾಡದೆ ಸರಸಸಲ್ಲಾಪ ಸುಖಗಳನ್ನನುಭವಿಸುತ್ತಾ ನಿದ್ರಿಸಿ ಬೆಳಿಗ್ಗೆ ಸಭೆಗೆಬಂದು ತಮಾಷೆಯಾಗಿ ಹೇಳುತ್ತಾನೆ.

ಶ್ಲೋ॥ ಮಾರುತಾಗಮ ವಾರ್ತಯಾಪಿ ಶೂನ್ಯೇ ಸಮಯೇ ಜಾಗ್ರತಿಸಂ-
ಪ್ರವೃದ್ಧ ತಾಪೇ ॥

ತಾ॥ ಅಂದರೆ ಗಾಳಿಬೀಸುವ ಸಮಾಚಾರವೇ ಇಲ್ಲದೆ ತಾಪವು ಹೆಚ್ಚುತ್ತಿರಲು ಎಂದು ಹೇಳಲು (ಭವಭೂತಿಯು) ಹೇಳುತ್ತಾನೆ.

ಶ್ಲೋ॥ ಉರಗೀ ಶಿಶವೇ ಬುಭುಕ್ಷವೇಸ್ವಾ ಮುದಿತತ್ಫೂತ್ಕೃತಿ ಮಾನ
ಸಾನಿಲೇನ ॥

ತಾ॥ ಅಂದರೆ ನಾಗರಹಾವು ತನ್ನ ಮರಿಯು ಹಸಿವುಗೊಂಡಿರಲು ತನ್ನ ಫೂತ್ಕಾರವನ್ನು ಕೊಟ್ಟಿತು. ಆಗ ಕಾಳಿದಾಸನು ಹೇಳುತ್ತಾನೆ.

ಶ್ಲೋ॥ ಅಬಲಾಸುವಿಲಾಸಿನೋನ್ವಭೂವನ್ನಯನೈರೇವನವೋಪಗೂಹನಾನಿ॥

ತಾ॥ ವಸಿಕರು ತಮ್ಮ ಮೇಗಳನ್ನು ನೋಟಗಳಿಂದಲೇ ತಬ್ಬಿ ಕೊಳ್ಳುತ್ತಿದ್ದರು.

ಗ॥ ತದಾರಾಜಾ ಸ್ವಾಭಿಪ್ರಾಯಂ ಜ್ಞಾತ್ವಾ ತುಷ್ಟಃ ಕಾಳಿದಾಸಂ ವಿಶೇ
ಷೇಣ ಸಮ್ಮಾನಿತವಾನ್ ॥

ತಾ॥ ಆಗ ಧೊರೆಯು ಕಾಳಿದಾಸನು ತನ್ನಭಿಪ್ರಾಯವನ್ನೇ ಹೇಳಿದು
ವುದನ್ನು ಕೇಳಿ ಸಂತೋಷಪಟ್ಟು ತುಂಬಾ ಮರ್ಯಾದೆ ಮಾಡಿದನು.

ಗ॥ ಅನ್ಯದಾ ಮೃಗಯಾಪರವಶೋರಾಜಾ ಅತ್ಯಂತಮಾರ್ತಃ ಕಸ್ಯಚಿತ್ತ
ರೋನತಸ್ಯ ತೀರೆನಿಬಿಡಚ್ಛಾಯಸ್ಯ ಜಂಬೂವೃಕ್ಷಸ್ಯ ಮೂಲಮು
ಪಾವಿಶತ್ ತತ್ರಶಯಾನೇರಾಜ್ಞಿ ಜಂಬ್ವಾ ಉಪರಿಚಪಲೈಃಕಪಿಭಿಃ
ಜಂಬೂಫಲಾನಿ ಸರ್ವಾಣ್ಯಪಿ ಚಾಲಿತಾನಿ ತಾನಿಸಶಬ್ದಂ ಪತಿತಾನಿ
ಪಶ್ಚಾತ್ ಘಟಿಕಾಮಾತ್ರಂ ಸ್ಥಿತ್ವಾ ಶ್ರಮಂಪರಿಹೃತ್ಯೋತ್ಥಾಯ ತುರಂಗ
ಮಮಾರುಹ್ಯಾಗತಃ ತತಸ್ಸಭಾಯಾಂರಾಜಾ ಪೂರ್ವಾನುಭೂತ
ಕಪಿಚಲಿತಫಲಪತನ ರವಮನುಕುರ್ವನ್ ಸಮಸ್ಯಾಮಾಹ ॥

ತಾ॥ ಮತ್ತೊಂದುದಿನ ರಾಯನು ಬೇಟೆಗಾಗಿ ಹೋಗಿರಲು ಆಯಾಸ
ಪಟ್ಟು ಬಹಳವಾಗಿ ನೆರಳಿರುವ ಒಂದು ನೇರಳೇ ಮರದ ಬುಡದಲ್ಲಿ ನಿಂತು
ಕೊಂಡು ಆಯಾಸಪರಿಹಾರ ಮಾಡಿಕೊಂಡು ನಿಂತಿರಲಾಗಿ ಆ ಮರದಮೇಲೆ
ಇದ್ದ ಕೋತಿಗಳು ಹಣ್ಣುಗಳನ್ನು ಆದರ ಕೆಳಗಿರುವ ಭಾವಿಯಲ್ಲಿ ಉದುರಿಸು
ತ್ತಿರಲು ಆ ಹಣ್ಣುಗಳು ಬೀಳುತ್ತಿರಲು ಗುಳುಗುಳು ಎಂದು ಶಬ್ದವಾಗುತ್ತಿ
ದ್ದವು. ಆ ಶಬ್ದವನ್ನನುಸರಿಸಿ ಸಮಸ್ಯೆಯನ್ನು ಹೇಳುತ್ತಾನೆ.

ಶ್ಲೋ॥ ಗುಳು ಗುಗ್ಗುಳು ಗುಗಗ್ಗುಂ ತತಆಹ ಕಾಳಿದಾಸಃ ॥

ತಾ॥ ಕಾಳಿದಾಸನು ಹೇಳುತ್ತಾನೆ.

ಶ್ಲೋ॥ ಜಂಬೂಫಲಾನಿ ಪಕ್ವಾನಿಪತಂತಿವಿಮಲೇಜಲೇ ಕಪಿಕಂಪಿತಶಾಖಾಭ್ಯೋ
ಗುಳು ಗುಗ್ಗುಳು ಗುಗ್ಗುಳು.

ತಾ॥ ಕೋತಿಗಳು ಅಲ್ಲಾಡಿಸುತ್ತಿರುವ ಪರೆಂಬೆಗಳಿಂದ ಮಾಗಿದ ನೇರಳೆ
ಹಣ್ಣುಗಳು ನಿರ್ಮಲವಾದ ನೀರಿನಲ್ಲಿ ಬೀಳುತ್ತಿರುವದರಿಂದ ಗುಳುಗುಳು ಎಂದು
ಶಬ್ದವಾಗುತ್ತಿತ್ತೆಂದು ಹೇಳಿದನು.

ಗ॥ ರಾಜಾತುಷ್ಟ ಆಹಸುಖದೇ ಅದೃಷ್ಟಮಪಿ ಪರಹೃದಯಂಕಥಂ
ಜಾನಾಸಿ ಸಾಕ್ಷಾ ಚ್ಛಾರದಾಸೀರ್ದೆವಃಹುತ್ಮಕಃ ಪಾದಯೋಃಪತತಿಸ್ಮ

ತಾ॥ ಧೊರೆಯು ಸಂತೋಷಪಟ್ಟು ಎಲೈ ಸುಕವಿಯೆ ನೀನು ನೋ

ಹದೆ ಇದ್ದರೂ ಇತರರ ಮಾನಸ್ಸಿನಲ್ಲಿರುವುದು ನಿನಗೆ ಹೇಗೆ ತಿಳಿಯುತ್ತಿದೆ ನೀನೇ ಸಾಕ್ಷಾತ್ ಸರಸ್ವತಿಯೆಂದೇ ಹೇಳಬೇಕೆಂದೆರಗಿದನು.

ಗ॥ ಏಕದಾ ಧಾರಾನಗರೇ ಪ್ರಚ್ಛನ್ನವೇಷಃ ವಿಚರನ್ ಕಸ್ಯಚಿದ್ವೃದ್ಧ ಬ್ರಾಹ್ಮಣಸ್ಯ ಗೃಹಂ ರಾಜಾ ಮಧ್ಯಾಹ್ನೇ ಸಮಾಯಿಂಗಚ್ಛನ್ ತತ್ರ ತಿಷ್ಠತಿಸ್ಮ ತದಾ ವೃದ್ಧವಿಪ್ರೋ ವೈಶ್ವದೇವಂ ಕೃತ್ವಾ ಕಾಕಬಲಿಂ ಗೃಹೀತ್ವಾ ಗೃಹಾ ನ್ನಿರ್ಗತ್ಯ ಭೂಮೌ ಜಲಶುದ್ಧಾಯಾಂ ನಿಕ್ಷಿಪ್ಯ ಕಾಕನಾಹೂಯ ಯತಿ ಸ್ಮ ತತ್ರ ಹಸ್ತವಿಸ್ಫಾಲನೇನ ಹಾ ಹೇತಿ ಶಬ್ದೇನ ಚ ಕಾಕಾಸ್ಸಮಾಯಾತಾಃ ತತ್ರ ಕಶ್ಚಿತ್ಕಾಕಃ ಕಾಲಂ ಪಾತಯತಿ ಸ್ಮ ತಚ್ಚ ದೃಷ್ಟ್ವಾ ತತ್ಪತ್ನೀ ತರುಣೀ ಭೀ ತೇವ ಹಸ್ತಂ ನಿಜೋರಸಿ ನಿಧಾಯ ಅಹೋ ವಾತ ಇತಿ ಚಕ್ರಂದ ತತೋ ಬ್ರಾಹ್ಮಣಃ ಪ್ರಾಹ ಪ್ರಿಯೇ ಸಾಧುಶೀಲೇ ಕಿಮರ್ಥಂ ಬಿಭೇಷೀತಿ ಸಾ ಪ್ರಾಹ ನಾಥ ಮಾದೃಶೀನಾಂ ಪತಿವ್ರತಾನಾಂ ಕಾಕಕ್ರೂರಧ್ವನಿಶ್ರವಣಂ ಸರ್ವಂ ವಾ ಸಾಧುಶೀಲೇ ತಥಾ ಭವೇದೇವೇತಿ ವಿಪ್ರ ಆಹ ತತೋ ರಾಜಾ ತಚ್ಚರಿತಂ ಸರ್ವಂ ದೃಷ್ಟ್ವಾ ವ್ಯಚಿಂತಯತ್ ಅಹೋ ಇಯಂ ತರುಣೀ ದು ಶ್ಶೀಲಾ ನೂನಂ ಯತೋ ನಿರ್ವ್ಯಾಜಂ ಬಿಭೇತೀತಿ ಸ್ವಕಾಂತಿವೃತ್ತ್ಯಂ ಸ್ವಯ ಮೇವ ಕೀರ್ತಯತಿ ಚ ನೂನಮಿಯಂ ಭಿನ್ನಾ ಸತೀ ಅತ್ಯಂತಂ ಧೂರ್ತ ಕಾಂ ಕಸ್ಮಾದತ್ರ ಕರೋತ್ಯೇವ ಮನಸಿ ನಿಶ್ಚಿತ್ಯ ರಾಜಾ ತತ್ರೈವ ರಾತ್ರಾ ವಂತರ್ಹಿತ ಏವಾತಿಷ್ಠತ್ ಅಥ ನಿಶೀಥೇ ಭರ್ತರಿ ಸುಪ್ತೇ ಸಾ ಪಾನಂ ಸಮೇಟ ಕಾಂ ವೇಶ್ಯಾಕವೇಷಮಾಧಾಯ ನರ್ಮದಾತೀರಮಗಚ್ಛತ್ ರಾಜಾ ಪ್ಯಾತ್ಮಾನಂ ಗೋಪಯಿತ್ವಾನುಗಚ್ಛತಿ ಸ್ಮ ತತಸ್ಸಾ ನರ್ಮದಾಂ ಪ್ರಾಪ್ಯ ತತ್ರ ಸಮಾಗತಾನಾಂ ಗ್ರಾಹಾಣಾಂ ಮಾಂಸಂ ದತ್ವಾ ನದೀಂ ತೀರ್ತ್ವಾ ಅಪ ರತೀರಸ್ಥೇನ ಶೂಲಾಗ್ರಾರೋಪಿತೇನ ಸ್ವಮನೋರಮೇಣ ಸಹರಮ ತೇಸ್ಮ ತಚ್ಚರಿತ್ರಂ ದೃಷ್ಟ್ವಾ ರಾಜಾ ಗೃಹಂ ಸಮಾಗತ್ಯ ಪ್ರಾತಸ್ಸಭಾ ಯಾಂ ಕಾಳಿದಾಸಮಾಲೋಕ್ಯ ಪ್ರಾಹ ಸುಕವೇಶೃಣು ॥

ತಾ॥ ಮತ್ತೊಂದುದಿವಸ ಭೋಜರಾಯನು ಪಟ್ಟಣದಲ್ಲಿ ಯಾರಿಗೂ ತಿಳಿಯದಂತೆ ತಿರುಗುತ್ತಾ ಮಧ್ಯಾಹ್ನಕಾಲದಲ್ಲಿ ಒಬ್ಬ ಬ್ರಾಹ್ಮಣನ ಮನೆಯ ಹತ್ತಿರ ನಿಂತಿರಲು ಆಗ ಬ್ರಾಹ್ಮಣನು ವೈಶ್ವದೇವವನ್ನು ಮಾಡಿ ಕಾಕ ಬಲಿಯನ್ನು ತೆಗೆದುಕೊಂಡುಬಂದು ಭೂಮಿಯಲ್ಲಿ ಪ್ರೋಕ್ಷಿಸಿ ಬಲಿಯನ್ನು ಹಾಕಿ ಕೈಗಳನ್ನು ತಟ್ಟುತ್ತಾ ಹಾ! ಹಾ! ಎಂದು ಕೂಗಿಕೊಳ್ಳಲಾಗಿ ಕಾಗೆ ಗಳು ಕಾ ಕಾ ಎಂದು ಘಟ್ಟಿಯಾಗಿ ಕೂಗಿಕೊಳ್ಳುತ್ತಾ ಬಂದವು. ಆಗ

ಆತನ ಹೆಂಡತಿಯು ಆ ಕಾಗೆಗಳ ಧ್ವನಿಯನ್ನು ಕೇಳಿ ಎದೆಮೇಲೆ ಕೈಯಿಟ್ಟುಕೊಂಡು ಅಮ್ಮ ಎಂದು ಭಯದಿಂದ ಕೂಗಿಕೊಳ್ಳುತ್ತಿದ್ದಳು. ಆಗ ಆ ಬ್ರಾಹ್ಮಣನು ಏತಕ್ಕೆ ಭಯದಿಂದ ಕೂಗಿಕೊಳ್ಳುವಿ ಎಂದು ಕೇಳಲು ಪತಿಯೇ ನಮ್ಮಂಥಾ ಪತಿವ್ರತೆಯರಿಗೆ ಇಂಥಾ ಕ್ರೂರಧ್ವನಿಯು ಭಯವನ್ನುಂಟುವದಿಲ್ಲವೇ ಎನಲು ಆ ಬ್ರಾಹ್ಮಣನು ನ್ಯಾಯವೇ ಎಂದು ಅವಳನ್ನು ಶ್ಲಾಘಿಸಿದನು ಆಗ ಧೊರೆಯು ಯೋಚಿಸಿದ್ದೇನಂದರೆ ಈಕೆಯು ಬಹಳ ಕೆಟ್ಟ ನಡತೆಯುಳ್ಳವಳು ಯಾತಕ್ಕಂದರೆ ಕಾರಣವಿಲ್ಲದೆ ಈಕೆಯು ಭಯಪಡುತ್ತಿರುವಳು. ಅಲ್ಲದೆ ತನ್ನ ಪಾತಿವ್ರತ್ಯವನ್ನು ತಾನೇ ಹೊಗಳಿಕೊಳ್ಳುವಳು ಇವಳನ್ನು ನೋಡಿದರೆ ಹಗಲು ಭಯವುಳ್ಳವಳಂತೆ ಇದ್ದರೂ ರಾತ್ರಿಕಾಲದಲ್ಲಿ ಭಯವಿಲ್ಲದೆ ಬಹಳ ಕೆಟ್ಟ ಮತ್ತು ಭಯಂಕರವಾದ ಕೆಲಸಗಳನ್ನು ಮಾಡುವಳು. ಎಂದಂದುಕೊಂಡು ಅಲ್ಲಿಯೇ ಯಾರಿಗೂ ತಿಳಿಯದೆ ನಿಂತಿದ್ದನು. ಬಳಿಕ ಅರ್ಧರಾತ್ರಿಯಲ್ಲಿ ಗಂಡನು ನಿದ್ರೆ ಮಾಡುತ್ತಿರಲು ಮಾಂಸದ ಪೆಟ್ಟಿಗೆಯನ್ನೊಂದನ್ನು ಒಬ್ಬ ಸೂಳೆಯ ಕೈಲಿ ತೆಗೆಸಿಕೊಂಡು ನರ್ಮದಾನದಿಗೆ ಹೋಗುತ್ತಿದ್ದಳು. ದೊರೆಯೂ ಕೂಡ ಯಾರಿಗೂ ತಿಳಿಯದೆ ಅವಳ ಹಿಂದೆಯೇನೇ ಹೋಗುತ್ತಿದ್ದನು. ಬಳಿಕ ಅವಳು ನರ್ಮದಾನದಿಯನ್ನು ತಲ್ಪಿ ಅದರಲ್ಲಿದ್ದ ಮೊಸಳೆಗಳಿಗೆ ಮಾಂಸಗಳನ್ನು ಹಾಕಿ ಆ ನದಿಯನ್ನು ದಾಟಿ ಆಚೆ ದಡದಲ್ಲಿದ್ದ ತನ್ನ ಮಿಂಡಗಾರನೊಡನೆ ರಮಿಸಿ ತಿರುಗಿಬಂದು ಮನೆ ಸೇರುತ್ತಿದ್ದಳು. ಧೊರೆಯು ಆ ಸಂಗತಿಯನ್ನು ನೋಡಿ ಮನೆಗೆಬಂದು ಬೆಳಿಗ್ಗೆ ಸಭೆಯಲ್ಲಿ ಕಾಳಿದಾಸನನ್ನು ಕುರಿತು ಹೇಳುತ್ತಾನೆ.

ಭೋ. ಶ್ಲೋ॥ ದಿವಾಕಾಕರುತಾದ್ಭೀತಾ ॥

ತಾ॥ ಹಗಲು ಕಾಗೆಗಳ ಕೂಗಿನಿಂದ ಭಯಪಟ್ಟಳು.

ಕಾ॥ ಶ್ಲೋ॥ ರಾತ್ರೌತರತಿನರ್ಮದಾ ॥

ತಾ॥ ರಾತ್ರಿಯಲ್ಲಿ ನರ್ಮದಾನದಿಯನ್ನು ದಾಟುತ್ತಾಳೆ.

ಭೋ॥ ಶ್ಲೋ॥ ತತ್ರಸಂತಿಜಲೇಗ್ರಾಹಾ ॥

ತಾ॥ ಆ ನದಿಯಲ್ಲಿ ಮೊಸಳೆಗಳಿರುತ್ತವೆ ಅಂದನು.

ಕಾ॥ ಶ್ಲೋ॥ ಮರ್ಮಜ್ಞಾಸ್ತೈವ ಸುಂದರೀ ॥

ತಾ॥ ಆ ಮರ್ಮವನ್ನು ಆಕೆಯು ತಿಳಿದೇ ಇರುತ್ತಾಳೆಂದನು.

ಗ॥ ತತೋರಾಜಾ ಕಾಳಿದಾಸಸ್ಯ ಪಾದಯೋಃ ಪತತಿ ॥

ತಾ॥ ಬಳಿಕ ರಾಯನು ಕಾಳಿದಾಸನ ಕಾಲುಗಳಿಗೆರಗುವನು.

ತತಃಧಾರಾನಗರೇವಿಚರನ್ ವೇಶ್ಯಾವೀಥ್ಯಾಂ ರಾಜಾಕಂತುಕಲೀಲಾ
ತತ್ಪರಾ ತಚ್ಛ್ರವಣವೇಗೇನಪಾದಪತಿತಾಂತಾಂ ಕಾಂಚನಸುಂದ
ರೀಂದೃಷ್ಟ್ವಾ ಸಭಾಯಾಮಾಹ ಕಂತುಕಂ ವರ್ಣಯಂತುಕವಯ
ಇತಿ ತದಾ ಭವಭೂತಿರಾಹ ||

ತಾ|| ಬಳಿಕ ಭೋಜರಾಜನು ಧಾರಾನಗರದಲ್ಲಿ ಸಂಚರಿಸುತ್ತಾ ಸೂಳೆಯರ ಬೀದಿಯಲ್ಲಿ ಒಬ್ಬಾಕೆಯೊಬ್ಬಳು ಚೆಂಡಾಡುತ್ತಿರಲು ತಲೆಯಿಂದ ಕನ್ನೈದಿಲೆಯು ಕಾಲಿಗೆ ಬೀಳುತ್ತಿರುವದನ್ನು ಕಂಡು ಮಾರನೆಯ ಸಭೆಗೆ ಬಂದು ಎಲೈ ಕವಿಗಳಿರಾ ಚೆಂಡನ್ನು ಬಣ್ಣಿಸಿರೆಂದನು. ಆಗ ಭವಭೂತಿಯು ಹೇಳುತ್ತಾನೆ.

ಭವಭೂತಿಃ ||

ಶ್ಲೋ|| ವಿದಿತಂನನುಕಂತುಕತೇ ಹೃದಯಂಪ್ರಮದಾಧರ ಸಂಗಮಲುಬ್ಧ ಇವ
ವನಿತಾಕರತಾಮರಸಾಭಿಹತಃ ಪತಿತಃ ಪತಿತಃ ಪುನರುತ್ಪತಸಿ ||

ತಾ|| ಎಲೈ ಚೆಂಡೆ ನಿನ್ನ ಸಂಗತಿಯು ತಿಳಿಯಿತು ನೀನು ಹೆಂಗಸಿನ ಕೆಳತುಟಿಯನ್ನು ಮುತ್ತಿಡಲು ಹೋಗಿ ಅವಳು ಕೈಯಿಂದ ಹೊಡೆಯಲು ಕೆಳಕ್ಕೆಬಿದ್ದು ತಿರುಗೂ ಮೇಲಕ್ಕೆ ಹಾರುತ್ತಿರುವಿ ಎಂದನು.

ಗ|| ತತೋವರರುಚಿಃಪ್ರಾಹ ||

ತಾ|| ಬಳಿಕ ವರರುಚಿಯು ಹೇಳುತ್ತಾನೆ.

ಶ್ಲೋ|| ಕಾಂತಾಯಾಃಕರತಲರಾಗರಕ್ತರಕ್ತಃ | ಏಕೋಪಿತ್ರಯ ಇವಭಾತಿ
ಕಂದುಕೋಯಂ | ಭೂಮೌತಚ್ಚರಣನಖಾಂಶುಗೌರಗೌರಃ ||
ಖಸ್ಥಸ್ಸನ್ನಯನಮರೀಚಿನೀಲನೀಲಃ ||

ತಾ|| ಈ ಚೆಂಡು ಒಂದೇ ಆಗಿದ್ದರೂ ಮೂರು ಚೆಂಡುಗಳಂತೆ ಕಾಣಬರುತ್ತದೆ ಹೇಗಂದರೆ ಆ ಹೆಂಗಸಿನ ಕೈಕೆಂಪಿನಿಂದ ಕೆಂಪಗೂ ಭೂಮಿಯಲ್ಲಿ ಅವಳ ಪಾದ ನಖಗಳ ಹಳದೀ ಬಣ್ಣದಿಂದ ಹಳದೀ ಬಣ್ಣವುಳ್ಳದ್ದಾಗಿಯೂ ಆಕಾಶದಲ್ಲಿ ಆಕೆಯ ಕಣ್ಣುಗಳ ಕಾಂತಿಯಿಂದ ಕಪ್ಪಗೂ ಇರೋಣದರಿಂದ ಮೂರರಂತೆ ಕಾಣಿಸುತ್ತದೆ.

ಗ|| ಕಾಳಿದಾಸ ಆಹ||

ತಾ|| ಕಾಳಿದಾಸನು ಹೇಳುತ್ತಾನೆ.

ಶ್ಲೋ|| ಪಯೋಧರಾಕಾರ ಧರೋಹಿ ಕಂತುಕಃ | ಕರೇಣ ರೋಷಾದಭಿ
ಹನ್ಯತೇಮುಹುಃ ಇತೀವನೇತ್ರಾ ಕೃತಿಭೀತಮುತ್ಪಲಂ ಸ್ತ್ರಿಯಃ

ಪ್ರಸಾಪಾಯಪಪ ತ್ರಪಾ ಯೋಃ ॥

ತಾ॥ ಚಂಡಾ ರವಮಣಿಯು ಪೋಲೆಯನ್ನು ಹೋಲಿಯೋಣದರಿಂದಕ್ರೈಯಿಂದ ಹೆಣಿಯುಪ್ಪಟ್ಟಿತು ಅದ್ದರಿಂದ ಕನ್ನಿಕೈಯಿರಿಯು ಕಣ್ಣುಗಳ ಹೋಲಿಕೆಯಿಂದ ಏಟು ತಿಂದೇನೆಂಬಪಾಗಿ ಆಕೆಯ ಕಾಲಲ್ಲಿ ಬಿದ್ದು ಮೊರೆಹೋಗುವದೊ ಎಂಬಂತಿಧೆ.

ಗ॥ ತದಾತಾಕರ್ಣ್ಯ ಸ್ಮೃತಿತ್ರಯಾಣಾಂ ಅಕ್ಷರಲಕ್ಷಂದದೌ ವಿಶೇಷೇಣಚ ಕಾಳಿದಾಸಮುದ್ದಿಶ್ಯ ಪ್ರವತಂ ಸಕುಸುಮಪತನಮೊದ್ಧಾರಂ ಸವಸ್ತ್ರಾ ಸಿತವಾನ್ ॥

ತಾ॥ ಆಗ ಧೊರೆಯು ಸಂತೋಷಪಟ್ಟು ಆ ಮೂರುಜನ ಕವಿಗಳಿಗೂ ಅಕ್ಷರಲಕ್ಷವನ್ನಿತ್ತು ಹೆಚ್ಚಾಗಿ ಕಾಳಿದಾಸನು ನೋಪದೆಯಿದ್ದ ಕನ್ನಿಕೈಯಿಲಿ ವಿಷಯವಾಗಿ ವರ್ಣಿಸಿದ್ದಕ್ಕೆ ಬಹಳವಾಗಿ ಹೊಗಳಿದನು.

ಗ॥ ತತ ಕದಾಚಿತ್ ಕಸ್ಯಚಿದ್ರಾಜ ಚಿತ್ರಲಿಖಿತಂ ಬಿಡೌಜಸ ... ತಮಾಕರ್ಣ್ಯಾಚಿಷ್ಟಿವಶ ಮರ್ಗನಾಮಾ ಕವಿಃ ... ॥

ತಾ॥ ಬಳಿಕ ಒಂದಾನೊಂದು ಧೊರೆಯು ಚಿತ್ರನನ್ನು ನೋಡಲಪೇಕ್ಷಿಸಿ ಅವಿಶೇಷನ ಚಿತ್ರವನ್ನು ನೋಡಿ ಚನ್ನಾಗಿದೆ ಎನಲು ಶಿವಶರ್ಮನೆಂಬ ಕವಿಯು ಅವಿಶೇಷನ ವ್ಯಾಜ ... ॥

ಶ್ಲೋ॥ ಫಣಿನೊ ಬಹವಸ್ಸಂತಿ ಭೇಕಭಕ್ಷಣತತ್ಪರಾಃ । ಏಕಏವಹಿಶೇಷೋಯಂ ಧರಣೀಧರಣಕ್ಷಮಃ ॥

ತಾ॥ ಹಾವುಗಳೆಷ್ಟೊ ಇರುವವು ಆದರೇನು ಅವುಗಳೆಲ್ಲವೂ ಕಪ್ಪೆಗಳನ್ನು ತಿನ್ನುವುದರಲ್ಲಿ ಆಸಕ್ತವಾದವುಗಳು ಹೊರತು ಭೂಭಾರವನ್ನು ಹಿಡೆಯಮೇಲೆ ಹೊರುವುದು ಅವಿಶೇಷನೊಬ್ಬನೇ ಅಂದನು.

ಗ॥ ತದಾನೀಂ ರಾಜಾತದಭಿಪ್ರಾಯಂಜ್ಞಾತ್ವಾ ತಸ್ಮೈಲಕ್ಷಂದದೌ ॥

ತಾ॥ ಆಗ ಧೊರೆಯು ಅವನ ಅಭಿಪ್ರಾಯವನ್ನು ತಿಳಿದು ಅತನಿಗೊಂದು ಲಕ್ಷವನ್ನು ಕೊಟ್ಟನು.

ಗ॥ ಕದಾಚಿತ್ ಹೇಮಂತಕಾಲೇ ಸಮಾಗತೇ ಕಂಪಮಾನಃ ಹಸಂತೀಂ ಸಸೀ ಮಂತಿನಾ ಕಾಳಿದಾಸಂಪ್ರತಿ ಸುಕವೆ ಹಸಂತೀಂವರ್ಣಯೇತಿ॥

ತಾ॥ ಧೊರೆಯು ಒಂದಾನೊಂದು ಹಿಮಾಂತರುತುವಿನಲ್ಲಿ ಕಂಪಟಿಯನ್ನು ಕಾಸಿಕೊಳ್ಳುತ್ತಾ ಕಾಳಿದಾಸನೇ ಇದನ್ನು ಬಣ್ಣಿಸೆಸಲು ಕಾಳಿದಾಸನು.

ಶ್ಲೋ॥ ಕವಿಮಾತಿರಿವ ಬಹುಲೋಹಾ। ಸುಘಟಿತ ಚಕ್ರಾ ಪ್ರಭಾತವೇಳೇವ॥ ಹರ ಮೂರ್ತಿರಿವ ಹಸಂತೀ ಭಾತಿ ವಿಧೂಮಾನಲೋಪೇತಾ ॥

ತಾ॥ ಕವಿಗಳ ಬುದ್ಧಿಯು ಬಹು ಲೋಹಗಳು ಹೆಚ್ಚಾದ ಊಹೆಗಳು ಉಳ್ಳದ್ದೊ ಹಾಗೆ ಇದೂ ಬಹುಲೋಹ ಹೆಚ್ಚಾದ ಲೋಹದಿಂದ ಮಾಡಿದ್ದು ಪ್ರಾತಃಕಾಲವು ಸುಘಟಿತಚಕ್ರವುಳ್ಳದ್ದೊ ಚಕ್ರವಾಕ ಪಕ್ಷಿಗಳಿಂದ ಕೂಡಿದ್ದು ಈ ಅಗ್ಗಿಷ್ಟಿಕೆಯೂ ಬಹಳ ಚಕ್ರಗಳುಳ್ಳದ್ದಾಗಿದೆ. ಶಿವನ ದೇಹ ದಃಕ ಹೊಗೆಯಿಲ್ಲದಂತೆ ಪ್ರಕಾಶಿಸುತ್ತದೆಂದನು.

ಗ॥ ರಾಜಾ ಅಕ್ಷರಲಕ್ಷಂದದೌ ॥

ತಾ॥ ದೊರೆಯು ಅಕ್ಷರಲಕ್ಷ ಕೊಟ್ಟನು.

ಗ॥ ಏಕದಾ ಭೋಜರಾಜೋಂತಗ್ರೃಹೇ ಭೋಗಾಹಾರ್ಣಸು ಲ್ಯ ಗುಣಾಶ್ಚತ ಸ್ರೊಸಿಜಾಂಗನಾ ಅಪಶ್ಯತ್ ತಾಸುಶಕುಂತಲೇಶ್ವರ ಪುತ್ರ್ಯಾಂ ಪದ್ಮಾವತ್ಯಾಂ ಋತುಸ್ನಾನಂ ಅಂಗರಾಜಸ್ಯ ಪುತ್ರ್ಯಾಂಚಂದ್ರಮು ಖ್ಯಾಂ ಕ್ರಮಪ್ರಾಪ್ತಿಂ ಕಮಲನಾವ್ನ್ಯಾಂಚದ್ಯೂತ ಪಣಜಯಲ ಬ್ಧಪ್ರಾಪ್ತಿಂ ಅಗ್ರಮಹಿಷ್ಯಾಂಚ ಲೀಲಾದೇವ್ಯಾ ದೂತೀಪ್ರೇಷಣ ಮುಖೇನ ಆಹ್ವಾನಂಚ ಏವಂಚತುರೋಗುಣಾನ್ ದೃಷ್ಟ್ವಾತೇಷು ಗುಣೇಷು ನ್ಯೂನಾಧಿಕಭಾವಂ ರಾಜಾಪ್ಯಚಿಂತಯುತ್ ತತ್ರಸರ್ವ ತ್ರದಾಕ್ಷಿಣ್ಯನಿಧಿಃ ರಾಜರಾಜಃ ಶ್ರೀಭೋಜಃ ತುಲ್ಯಂಭಾವೇನದ್ವಿತ್ರಿಘ ಟಿಕಾಪರ್ಯಂತಂ ವಿಚಿಂತ್ಯವಿಶೇಷಾ ನವಧಾರಣೇನ ನಿದ್ರಾಂಗತಃ ಪ್ರಾತ ಶ್ಕೃತ್ಥಾಯಕೃತಾಹ್ನಿಕ ಸಭಾಮಗಾತ್ ತತ್ರಚಸಿಂಹಾಸನಪಾಲಂ ಕುರ್ವಾಣಃ ಶ್ರೀಭೋಜಃಸಕಲ ವಿದ್ವತ್ಕವಿಮಂಡಲಮಂಡನಂ ಕಾಳಿ ದಾಸಮಾಲೋಕ್ಯ ಸುಕವೇಇಮಾಂತ್ರ್ಯಕ್ಷರೋನತುರೀಯ ಚರಣಾಂ ಸಮಸ್ಯಾಂಶೃಣು ಇತ್ಯುಕ್ತ್ವಾಪಠತಿ ॥

ಶ್ಲೋ॥ ಅಪ್ರತಿಪತ್ತಿ ಮೂಢಮನಸಾದ್ವಿತ್ರಾಸ್ಥಿತಾನಾಡಿಕಾಃ । ಇತಿಪಠಿತ್ವಾ ರಾಜಾ ಕಾಳಿದಾಸಮಾಹಸುಕವೇ ಏತತ್ಸಮಸ್ಯಾಪೂರಣಂ ಕುರ್ವಿತಿ ತತಃ ಕಾಳಿದಾಸಃತಸ್ಯಹೃದಯಂ ಕರತಲಾಮಲಕವತ್ಪಶ್ಯಂಸ್ತ್ರ್ಯ ಕ್ಷರಾಧಿಕ ಚರಣತ್ರಯ ವಿಶಿಷ್ಟಾಂತಾಸಮಸ್ಯಾಂಪಠತಿ ॥

ತಾ॥ ಭೋಜರಾಯನೊಂದುದಿನ ಅಂತಃಪುರ ಸ್ತ್ರೀಯರೊಳಗಾರ ರವಿ ಸಬೇಕೆಂದು ಯೋಚಿಸಲು ಆದಿನ ಒಬ್ಬಳಿಗೆ ಋತುಸ್ನಾನವಾಗಿದ್ದಿತು. ಮತ್ತೊಬ್ಬಳಿಗೆ ಸರದಿಯ ದಿನವಾಗಿತ್ತು ಬೇರೊಬ್ಬಳಿಗೆ ಜೂಜಿನಲ್ಲಿ ಸೋತು

ಮಾತು ಕೊಟ್ಟಿದ್ದನು ಪಟ್ಟದ ರಾಣಿಯಾದರೂ ತಾನೆ ಬಯಸಿ ದೂತಿಯರ ಮುಖಾಂತರ ಹೇಳಿ ಕಳುಹಿಸಿದ್ದಳು. ಹೀಗಿರಲು ಯಾವಳಲ್ಲಿ ಕ್ರೀಡಿಸಬೇಕೋ ಹೀಗೆಂದು ಮನಸ್ಸಿಗೆ ಯೋಚಿಸಿ ನಿದ್ರೆ ಬಾರದೆ ರಾತ್ರಿಯನ್ನು ಕಳೆದು ಬೆಳಗ್ಗೆ ಸಭೆಗೆ ಬಂದು ಸಿಂಹಾಸನದಲ್ಲಿ ಕೂತುಕೊಂಡು ಮೂರು ಅಕ್ಷರಗಳು ಕಷ್ಟವಾಗಿರುವ ಒಂದು ಸಮಸ್ಯೆಯನ್ನು ಕೊಡಲು ಕಾಳಿದಾಸನು ಅದನ್ನು ಪೂರ್ಣಮಾಡುವನು.

ಶ್ಲೋ॥ ಸ್ನಾತಾತಿಷ್ಠತಿ ಕುಂತಳೇಶ್ವರಸುತಾ ವಾರೋಂಗರಾಜಸ್ವಸುಃ
ದ್ಯೂತೇರಾತ್ರಿರಿಯಂಜಿತಾ ಕಮಲಯಾದೇವೀ ಪ್ರಸಾದ್ಯಾಧುನಾ ॥
ಇತ್ಯಂತಃಪುರಸುಂದರೀ ಜನಗುಣೇ ನ್ಯೂನಾಧಿಕಂ ಧ್ಯಾಯತಾ ।
ದೇವೇನಾಪ್ರತಿ ಪತ್ತಿಮೂಢಮನಸಾ ದ್ವಿತ್ರಾಸ್ಸ್ಥಿತಾನಾಡಿಕಾಃ ॥

ತಾ॥ ಕುಂತಳೇಶ್ವರನ ಮಗಳು ಋತುಸ್ನಾನ ಮಾಡಿದ್ದಾಳೆ. ಅಂಗ ರಾಜ ಪುತ್ರಿಯು ಸರದಿಯು ಬಂದಿದೆ, ಕಮಲೆಯಂಬಾಕೆಗೆ ಜೂಜಿನಲ್ಲಿ ಸೋತಿರುವೆನು. ಪಟ್ಟದರಸಿಯು ಕುತೂಹಲ ವುಳ್ಳವಳಾಗಿದ್ದಾಳೆಂದು ಅಂತಃಪುರಸ್ತ್ರೀಯರ ಗುಣಗಳ ತಾರತಮ್ಯವನ್ನು ಯೋಚಿಸುತ್ತಿರುವ ಮೂಢಬುದ್ಧಿಯಿಂದ ಹೊತ್ತು ಕಳೆಯಿತು.

ಗ॥ ತದಾ ರಾಜ್ಞಾ ಸ್ವಹೃದಯಮೇವ ಜ್ಞಾತಮಿತಿ ಕಾಳಿದಾಸಸ್ಯ ಪಾದ
ಯೋಃ ಪತತಿಸ್ಮ ಕವಿಮಂಡಲಂ ಚ ಚಮತ್ಕೃತಮಜಾಯತ ॥

ತಾ॥ ಆಗ ದೊರೆಯು ತನ್ನ ಮನಸ್ಸಿನಲ್ಲಿದ್ದುದನ್ನೇ ತಿಳಿದು ಹೇಳಿದ ಕಾಳಿದಾಸನ ಪಾದಗಳಲ್ಲಿ ಬೀಳಲು ಕವಿಗಳೆಲ್ಲರೂ ಆಶ್ಚರ್ಯ ಪಡುತ್ತಿದ್ದರು.

ಗ॥ ಏಕದಾ ರಾಜಾ ಧಾರಾನಗರೇ ವಿಚರನ್ ಕ್ವಚಿತ್ಪೂರ್ಣಕುಂಭಂ ಧೃ
ತ್ವಾ ಸಮಾಯಾಂತೀಂ ಪೂರ್ಣಚಂದ್ರಾನನಾಂ ಕಾಂಚಿದ್ದೃಷ್ಟ್ವಾ
ತತ್ಕುಂಭಜಲೇ ಶಬ್ದಂ ಚ ಕಂಚನ ಶ್ರುತ್ವಾ ಸಮಾಯಾಂತೀಂ ಪೂರ್ಣ
ಚಂದ್ರಾನನಾಂ ನೂನಮೇವ ತಸ್ಯಾಃ ಕಂಠಗ್ರಹೇಯಂ ಘಟಃ ರತಿ
ಕೂಜಿತಮಿವ ಕೂಜತೀತಿ ॥ ಮನ್ಯಮಾನಃ ಸಭಾಯಾಂ ಕಾಳಿದಾಸ
ಪ್ರಾಹ ॥ ಕೂಜಿತಂ ರತಿಕೂಜಿತಂ ಇತಿ ॥

ತಾ॥ ಒಂದಾನೊಂದು ದಿನ ದೊರೆಯು ಧಾರಾ ನಗರದಲ್ಲಿ ಸಂಚರಿಸುತ್ತಾ ಒಂದು ಪೂರ್ಣ ಕುಂಭವನ್ನು ಹೊತ್ತುಕೊಂಡು ಬರುತ್ತಿರುವ ಚಂದ್ರ, ಮುಖಿಯೊಬ್ಬಳನ್ನು ನೋಡಿ ಆ ಕುಂಭದ ನೀರಿನಲ್ಲಿ ಉಂಟಾಗುತ್ತಿರುವ

ಶಬ್ದವನ್ನು ಕೇಳಿ, ರತಿಕಾಲದ ಧ್ವನಿಯುಂಟಿರುವದೆಂದು ತಿಳಿದು ಸಭೆಯಲ್ಲಿ ಕಾಳಿದಾಸನನ್ನು ಕುರಿತು.

ಶ್ಲೋ॥ ಕೂಜಿತಂ ರತಿಕೂಜಿತಂ ॥ ಎಂದು ಸಮಸ್ಯೆ ಹೇಳಿದನು.

ಆಗ ಕಾಳಿದಾಸನು.

ಶ್ಲೋ॥ ವಿಧಗ್ದೇನು ಸುಂಟೇರಕ್ತೇ ನಿತಂಬೋ ಪರಿಸಂಸ್ಥಿತೆ । ಕಾಮಿನಸ್ತ್ರಾಶ್ಲಿಷ್ಟಸುಗಳೇ ಕೂಜಿತಂ ರತಿಕೂಜಿತಂ ॥

ತಾ॥ ಸುಟ್ಟ ಒಳ್ಳೇ ಬಾಯಿಯುಳ್ಳ ಕೆಂಪಗಿರುವ ನೊಂಟದಲ್ಲಿ ಕಾಳಿತಿರುವ ಹೆಂಗಸಿನಿಂದ ಅಪ್ಪಿಕೊಳ್ಳಲ್ಪಟ್ಟ ಕುಂತವುಳ್ಳ ಘಟದಲ್ಲಿ ರತಿಧ್ವನಿಯುಂಟಾಗುತ್ತೆ, ಅಂದರೆ ರಸಿಕನಾಗಿ ಸೊಗಸಾದ ಮುಖವುಳ್ಳ ಪ್ರೀತಿಯುಳ್ಳ ನಾರಿಯು ಜಘನದಲ್ಲಿ ಕೂತು ಆಕೆಯಿಂದ ತಬ್ಬಿಕೊಳ್ಳಲ್ಪಟ್ಟಗ ಉಂಟಾಗುವದೇ ರತಿಕೂಂಜಿತವೆಂದು ಹೇಳಿದನು

ಗ॥ ತದಾತುಷ್ಟೋರಾಜಾ ಪ್ರತ್ಯಕ್ಷರ ಲಕ್ಷಂದದೌ ॥ ಸನಾವುಚ.

ತಾ॥ ಆಗ ದೊರೆಯು ಅವನಿಗಾಗೆ ಗೆ ಅಕ್ಷ ಲಕ್ಷವನ್ನು ಕೊಟ್ಟನು

ಗ॥ ಏಕದಾನರ್ಮದಾನದ್ಯಾಂಮಹಾಹ್ರದೆ ಜಾಲಸ್ಥೈಕಃ ಶಿಲಾಖಂಡಃ ಕೋಪಿ ಬ್ರಾಹ್ಮಣೇನ ಕಶ್ಚಿದ್ದೃಷ್ಟಃ ತಸ್ಮಿನ್ ಪರಿಚಂತಿತಂ ವರ್ಣಮಾತ್ರ ಲಿಖಿತಮಿವಕಿಂ ಚಿದ್ಭಾತಿನೂನಮಿದಂರಾಜ ನಿಕಟೇನೇಯಮಿತಿ ಬುದ್ಧ್ಯಾಭೋಜಸದ ಸಿಸಮಾನೀತಂ ತದಾಕರ್ಣ್ಯಭೋಜಃ ಪುರಾಪೂರ್ವಂ ಭಗವತಾ ಹನುಮತಾ ಶ್ರೀಮದ್ರಾಮಾಯಣಂ ಕೃತಂ ತದತ್ರಹ್ರದೇನೂನಂ ಪ್ರಕ್ಷಿಪ್ತಮಿತಿ ಪ್ರತನುಂ ಜತುಕಿನೇದಂ ಲಿಖಿತಮಿತ್ಯನ್ಯಾಂ ಪಚಾರ್ಯ್ಯೇತಿ [illegible] ಅಕ್ಷರಾಣಿ ಪರಿಜ್ಞಾಯ ಪಠತಿತತ್ರಚರಣದ್ವಯಮಾನಪೂರ್ವ್ಯಲ್ಲಬ್ಧಂ॥

ತಾ॥ ಒಂದಾನೊಂದುದಿನ ಒಬ್ಬ ಬೆಸ್ತರವನು ನರ್ಮದಾನದಿಯಲ್ಲಿ ಸವೆದುಹೋಗಿದ್ದ ಒಂದು ಶಾಸನವನ್ನು ಕಂಡು ಅದನ್ನು ರಾಜನೆಡೆಗೆ ತಲು ರಾಯನು ಆ ಮಡುವಿನಲ್ಲಿ ಆಂಜನೇಯನು ಬರೆದ ರಾಮಾಯಣವು ಶಾಸನಗಳಲ್ಲಿ ಬರೆದಿದೆ ಎಂದು ತಿಳಿದು ಅದನ್ನು ಅಂಗಿನಿಂದ ಅಕ್ಷರಗಳ ಸ್ಥಿತಿ ಸಿ ಓದಿಸಲು ಅದರಲ್ಲಿ ಎರಡು ಪಾದಗಳು ಕ್ರಮವಾಗಿದ್ದವು ಇದನ್ನು ಪೂರೈಸುವಂತೆ ಕವಿಗಳಿಗೆ ಹೇಳಲು.

ಶ್ಲೋ॥ ಅಯಿಖಲು ವಿಷಮಃ ಪುರಾಕೃತಾನಾಂ ಭವತಿಹಿಜಂತುಷು ಕರ್ಮಣಾಂವಿಪಾಕಃ ।

ಎಂಬಿತ್ತು ಆಗ ಭವಭೂತಿಯು ಹೇಳುತ್ತಾನೆ.

ಶ್ಲೋ॥ ಕ್ವಸಾಕುಲ ಮಾಕಳಂಕ ಮಾಯತಾಕ್ಷ್ಯಾಃ ಕ್ವಾಸುರಜನೀಚರ ಸಂಗ ಮಾಪವಾದಃ ॥

ತಾ॥ ಅಂದರೆ ಪತಿವ್ರತೆಯಾದ ಸೀತಾದೇವಿಯ ಕುಲವು ಅನಿಂದ್ಯವಾದದ್ದು. ಆದರೂ ರಾಕ್ಷಸನ ಸಹವಾಸದಿಂದ ಅಪವಾದವು ತಪ್ಪಲಿಲ್ಲವೋ ಆದ್ದರಿಂದ ಪೂರ್ವದಲ್ಲಿ ಮಾಡಿದ ಕರ್ಮಫಲವು ಪ್ರಾಣಿಗಳಿಗೆ ತಪ್ಪಲಾರದು.

ಗ॥ ತತೋಭೋಜಃ ತತ್ರ ಧ್ವನಿದೋಷಂ ಮನ್ವಾನಃ ತದೇವ ಪೂರ್ವಾರ್ಧಂ ಅನ್ಯಥಾಪಠತಿಸ್ಮ ॥

ತಾ॥ ಬಳಿಕ ದೊರೆಯು ಅದರಲ್ಲಿ ಧ್ವನಿ ದೋಷವಿದ್ದೊಂದು ಅದನ್ನೆ ಬೇರೆ ಹೇಳುತ್ತಾನೆ.

ಶ್ಲೋ॥ ಕ್ವಜನಕತನಯಾಕ್ವರಾಮ ಜಾಯಾಕ್ವಚದಶ ಕಂಧರಮಂದಿರೇ ನಿವಾಸಃ ॥

ಎಂದು ಹೇಳಿ ಕಾಳಿದಾಸನೇ ನೀನೂ ಹೇಳೆನಲು ಕಾಳಿದಾಸನು.

ಶ್ಲೋ॥ ಶಿವಶಿರಸಿಶಿರಾಂಸಿಯಾನಿರೇಜುಃ ಶಿವಶಿವತಾನಿಲುಠಂತಿಗೃಧ್ರಪಾದೈಃ ॥

ತಾ॥ ಸಾಕ್ಷಾತ್ ಪರಮೇಶ್ವರನ ತಲೆಯಲ್ಲಿ ಯಾವ ರಾವಣನ ತಲೆಗಳು ಪೂಜಿಸಲ್ಪಟ್ಟಿದ್ದವು ಅಂಥಾ ತಲೆಗಳೇ ಈಗ ಹದ್ದುಗಳ ಕಾಲುಗಳಿಂದ ಉರಳಲ್ಪಡುತ್ತಿರುವವು.

ಗ॥ ತತಸ್ತಸ್ಯ ಶಿರಃ ಖಂಡಸ್ಯ ಪೂರ್ವಪುಟೇಜತುಶೋಧನೇನ ಕಾಳಿದಾಸ ಪಠಿತಮೇವ ಪ್ರಾಪ್ಯ ರಾಜಾಭೃಶಂತುತೋಷ ॥

ತಾ॥ ಬಳಿಕ ರಾಯನು ಆ ಶಾಸನವನ್ನು ಚನ್ನಾಗಿ ನೋಡಲು ಕಾಳಿದಾಸನು ಹೇಳಿದ್ದೇ ಇತ್ತು ಅದನ್ನ ಕಂಡು ಬಹಳ ಸಂತೋಷಪಟ್ಟನು.

ಗ॥ ಕದಾಚಿದ್ಭೋಜೇನ ವಿಲಾಸಾರ್ಥಂ ನೂತನಗೃಹಾಂತರಂ ನಿರ್ಮಿತಂ ತತ್ರಗೃಹಾಂತರೇಗೃಹಪ್ರವೇಶಾತ್ಪೂರ್ವಮೇವ ಕಶ್ಚಿದ್ಬ್ರಹ್ಮರಾಕ್ಷಸಃ ಪ್ರವಿಷ್ಟಃ ಸಚ ರಾತ್ರೌ ತತ್ರಯೇ ಸಂತಿತಾನ್ ಭಕ್ಷಯತಿ ತತೋ ಮಂತ್ರಿಕಾನ್ ಸಮಾಹೂಯ ತದುಚ್ಚಾಟನಾಯ ರಾಜಾಯುತತೇಸ್ಮ ಸಚ ಆಗತ್ಯ ಸ್ನೇಪಿ ಮಾಂತ್ರಿಕಾನೇವ ಭಕ್ಷಯತಿ ಕಿಂಚ ಸ್ವಯಂ ಕವಿತ್ವಾದಿಕಂ ಪೂರ್ವಾರ್ಧ್ಯಸ್ಯಸ್ಯೇವ ಪಠತಿಸ್ಮ ತಿಷ್ಠಂತಿ ತೇ ತ್ರೈಸ್ಮಸರಕ್ಷಸಿ ರಾಜಾಕಥಮಸ್ಯ ನಿವೃತ್ತಿರಿತಿವ್ಯಚಿಂತಯತ್ ತದಾಕಾಳಿದಾಸಃ ಪ್ರಾಹದೇವ ನೂನಮಯಂ ರಾಕ್ಷಸಃ ಸಕಲಶಾಸ್ತ್ರಪ್ರವೀಣಃ ಸುಕ

ವಿಶ್ವಭಾತಿ ಅತಸ್ತ್ವಮೇವತೋಷಯಿತ್ವಾ ಕಾರ್ಯಂಸಾಧಯಾವಿವಾಂ ತಿಕಾಳಿದಾಸಸ್ತು ಮಮಾನುಗ್ರಹಂ ಪಶ್ಯೇತ್ಯುಕ್ತ್ವಾ ನಿಶಾಯಾಂ ತತ್ರ ರಾತ್ರೌಗತ್ವಾಶೇತೇಸ್ಮ ತತ್ರಃಪ್ರಥಮಯಾಮಾವೇಕೈಕಾಂ ಸಮಸ್ಯಾಂ ಪಾಣಿಸಿಸೂತ್ರಸೋಪಠತಿ ಯೇನೋತ್ತರಂ ತದ್ಹೃದಯಂಗತಂ ನೋಕ್ತಂ ಅಯಂನ ಬ್ರಾಹ್ಮಣೋತೋಹನ್ತವ್ಯ ಇತಿನಿಶ್ಚಿತ್ಯಹಂತಿ ತದಾಸೀಮಪಿ ಪೂರ್ವವದಯಮಪೂರ್ವಃ ಪುರುಷಃ ಅತಃ ಮಯಾಸಮಸ್ಯಾಪಠನೀಯಾನ ಚೇದ್ವಕ್ತಿಸದೃಶಮುತ್ತರಂ ತಸ್ಯಃತದಾಹಂತವ್ಯಾಇತಿ ನಿಶ್ಚಿತ್ಯಹಂತಿಬಂಧ್ಯಾಪಠತಿ ॥

ತಾ॥ ಒಂದಾನೊಂದು ಕಾಲದೊಳ್ ಭೋಜನು ವಿಲಾಸವಾಗಿ ಒಂದು ಹೊಸ ಕಟ್ಟಡವನ್ನು ಕಟ್ಟಿಸಿರಲು ಗೃಹಪ್ರವೇಶಕ್ಕೆ ಮುಂಚೆಯೇ ಒಬ್ಬ ಬ್ರಹ್ಮರಾಕ್ಷಸನು ವಾಸವಾಗಿಕೊಂಡು ಇದ್ದು ಅಲ್ಲಿ ಮಲಗುವವರನ್ನೆಲ್ಲಾ ಕೊಲ್ಲುತ್ತಿರಲು ರಾಯನು ಮಂತ್ರಜ್ಞರನ್ನು ಕರೆಸಿ ಹೇಳಲು ಅವರಿಗೂ ಸಾಧ್ಯವಾಗದಿರಲು ಚಿಂತಿಸುತ್ತಿದ್ದನು. ಆಗ ಕಾಳಿದಾಸನು ಅಯ್ಯಾ ರಾಯನೇ ಇವನಂತೂ ರಾಕ್ಷಸನೇ ಕೆಡಕನೇ ಅಹುದು. ಆದರೂ ವಿದ್ಯಾವಂತನೂ ಕವಿಯೂ ಆಗಿರುವಂತೆ ಕಾಣುತ್ತದೆ ಆದ್ದರಿಂದ ಆತನಿಗೆ ಸಮಾಧಾನಪಡಿಸಿ ತಾನೇ ಹೊರಟುಹೋಗುವಂತೆ ಮಾಡಬೇಕೆಂದು ಆದಿನರಾತ್ರೆ ತಾನು ಆಮನೆಯಲ್ಲಿ ಮಲಗಲುಹೋಗಿ ನಿದ್ರೆಮಾಡುತ್ತಿರಲು ರಾಕ್ಷಸನು ಇವನನ್ನುನೋಡಿ ತಾನು ಎಂದಿಗೂ ಯಾಮಕ್ಕೆ ಒಂದು ಸಮಸ್ಯೆ ಹೇಳುತ್ತಿದ್ದು ಅಲ್ಲಿ ಮಲಗುವವರು ಸರಿಯಾದ ಉತ್ತರವನ್ನು ಹೇಳದಿದ್ದರೆ ಕೊಲ್ಲುತ್ತಿರುವಂತೆ ಪದ್ಧತಿ ಪ್ರಕಾರ ಆದಿನವೂ ಸಮಸ್ಯೆ ಹೇಳಿ ಈದಿನ ಬಂದಿರುವನು ಯಾರೋ ಅಪೂರ್ವನೆಂದು ತಿಳಿದು ಉತ್ತರ ಹೇಳದಿದ್ದರೆ ಕೊಲ್ಲುವೆ ಎಂಬುದಾಗಿ ಸಮಸ್ಯೆ ಹೇಳುತ್ತಾನೆ.

ರಾಕ್ಷಸಃ. ಸರ್ವಸ್ಯದ್ವೇ-ಎಲ್ಲದಕ್ಕೂ ಎರಡು ಎಂದನು.

ಕಾಳಿದಾಸಃ. ಸುಮತಿ ಕುಮತೀಸಂಪದಾಪತ್ತಿಹೇತೂ ॥

ಅಂದರೆ ಒಳ್ಳೇಬುದ್ಧಿ ಕೆಟ್ಟಬುದ್ಧಿ ಇವೆರಡೂ ಒಳ್ಳೇದಕ್ಕೂ ಕೆಡಕಿಗೂ ಕಾರಣವು.

ಎರಡನೇ ಜಾವದಲ್ಲಿ ಹೇಳುತ್ತಾನೆ.

ಶ್ಲೋ॥ ವೃದ್ಧೋಯುವಾನಾ ॥ ತಾ॥ ಅಂದರೆ ಮುದುಕನು ಯಾವನೊಡನೆ ಅಂದನು.

ಕಾ. ಸಹಪರಿಚಯಾತ್ತ್ಯಜ್ಯತೇ ಕಾಮಿನೀಭಿಃ ॥ ಹೆಂಗಸರು ಪ್ರಾಯದವನ ಸಹವಾಸ ಮಾಡಿದರೆ ಮುದುಕನನ್ನು ಬಿಟ್ಟುಬಿಡುತ್ತಾರೆ.

ಮೂರನೇ ಜಾವದಲ್ಲಿ.

ರಾ. ಏಕೋಗೋತ್ರೇ ॥ ಒಬ್ಬನೇ ಕುಲದಲ್ಲಿ ಉತ್ತಮನು.

ಕಾ. ಪ್ರಭವತಿಪುರುಷಃ ಯಃಕುಟುಂಬಂಬಿಭರ್ತಿ ॥

ಯಾರು ಕುಟುಂಬ ಪೋಷಣೆ ಮಾಡುವನೋ ಅವನೇ ಕುಲದಲ್ಲಿ ಶ್ರೇಷ್ಠನು. ನಾಲ್ಕನೇ ಯಾಮದಲ್ಲಿ.

ರಾ. ಸ್ತ್ರೀ ಪುಂವಚ್ಚ ॥ ಹೆಂಗಸು ಗಂಡಸಿನಂತೆ.

ಕಾ. ಪ್ರಭವತಿಯದಾತದ್ಧಿಗೇಹಂವಿನಷ್ಟಂ॥ಆಮನೆಯು ನಾಶವಾಗುತ್ತದೆ.

ಗ॥ ತತಸ್ಸರಾಕ್ಷಸೋ ಯಾಮಚತುಷ್ಟಯೇ ಸ್ವಾಭಿಪ್ರಾಯಮೇವ ಜ್ಞಾತ್ವಾತುಷ್ಟಃ ಪ್ರಭಾತಸಮಯೇ ಸಮಾಗತ್ಯ ತಮಾಶ್ಲಿಷ್ಯಪ್ರಾಹ ಸುಮತೇತುಷ್ಟೋಸ್ಮಿ ಕಿಂವಾಭೀಷ್ಟಮಿತಿ ಕಾಳಿದಾಸಃಪ್ರಾಹ ಭಗವನ್ ಏತದ್ಗೃಹಂವಿಹಾಯ ಅನ್ಯತ್ರಗಂತವ್ಯಮಿತಿ ಸೋಪಿತಥೇತಿಗತಃ ॥

ತಾ॥ ಬಳಿಕಾ ಬ್ರಹ್ಮರಾಕ್ಷಸನು ನಾಲ್ಕು ಯಾಮಗಳಲ್ಲಿಯೂ ತನ್ನ ಅಭಿಪ್ರಾಯವನ್ನೇ ಹೇಳಿದುದರಿಂದ ಸಂತೋಷಪಟ್ಟು ಅಯ್ಯಾ ಯೇನೊಸಗಬೇಕು ಕೇಳಿಕೋ ಎನಲಾಗಿ ಕಾಳಿದಾಸನು ಅಯ್ಯಾ ರಾಕ್ಷಸನೇ ಈ ಮನೆಯುಂಬಿಟ್ಟು ಹೊರಟು ಹೋಗಬೇಕೆನಲು, ಹೊರಟುಹೋದನು. ಬಳಿಕ ಧೊರೆಯು ಕಾಳಿದಾಸನನ್ನು ಬಹಳವಾಗಿ ಮರ್ಯಾದೆಮಾಡಿದನು.

ಗ॥ ಏಕದಾಸಿಂಹಾಸನ ಮಲಂಕುರ್ವಾಣೇ ಶ್ರೀ ಭೋಜೇ ಸಕಲಭೂಪಾಲ ಶಿರೋಮಣೌ ದ್ವಾರಪಾಲ ಆಗತ್ಯಪ್ರಾಹ ದೇವದಕ್ಷಿಣದೇಶಾತ್ಕೋಪಿ ಮಲ್ಲಿನಾಥನಾಮಾಕವಿಃ ಕೌಪೀನಾವಶೇಷೋ ದ್ವಾರಿತಿಷ್ಠತಿ ರಾಜಾ ಪ್ರವೇಶಯೇತ್ಯಾಹ ತತಃ ಕವಿರಾಗತ್ಯ ಸ್ವಸ್ತೀತ್ಯುಕ್ತ್ವಾ ತದಾಜ್ಞಯಾ ಚೋಪವಿಷ್ಟಃ ಪಠತಿ ॥

ತಾ॥ ಒಂದಾನೊಂದು ಸಮಯದಲ್ಲಿ ರಾಯನು ಸಿಂಹಾಸನಾರೂಢನಾಗಿರಲು ಮಲ್ಲಿನಾಥನೆಂಬೋರ್ವ ಕವಿಯು ಬಂದು ಆಶೀರ್ವಾದಮಾಡಿ ಭೋಜಮಹಾರಾಯನನ್ನು ಕುರಿತು ಹೇಳುತ್ತಾನೆ.

ಶ್ಲೋ॥ ನಾಗೋಭಾತಿಮದೇನಖಂ ಜಲಧರೈಃ ಪೂರ್ಣೇಂದುನಾಶರ್ವರೀ ಶೀ
ಲೇನ ಪ್ರಮದಾಜವೇನತುರಗೋ ನಿತ್ಯೋತ್ಸವೈರ್ಮಂದಿರಂ ವಾಣೀ
ವ್ಯಾಕರಣೇನ ಹಂಸಮಿಥುನೈ ರ್ನದ್ಯಸ್ಸಭಾಪಂಡಿತೈಃ ಸತ್ಪುತ್ರೇಣ

ಕುಲಂತ್ವಯಾವಸುಮತೀ ಲೋಕತ್ರಯಂಭಾನುನಾ ॥

ತಾ॥ ಆನೆಯು ಮದದಿಂದಲೂ, ಆಕಾಶವು ಮೇಘಗಳಿಂದಲೂ, ರಾತ್ರಿಯು ಪೂರ್ಣಚಂದ್ರನಿಂದಲೂ, ಹೆಂಗಸರು ಆಚಾರದಿಂದಲೂ, ಕುದುರೆಯು ವೇಗದಿಂದಲೂ ಮನೆಯು ಹಬ್ಬಗಳಿಂದಲೂ, ಮಾತು ವ್ಯಾಕರಣದಿಂದಲೂ, ನದಿಗಳು ಹಂಸಪಕ್ಷಿಗಳಿಂದಲೂ, ಸಭೆಯು ಪಂಡಿತರಿಂದಲೂ ಮೂರು ಲೋಕಗಳು ಸೂರ್ಯನಿಂದಲೂ ಪ್ರಕಾಶಿಸುವಂತೆ ನಿನ್ನಿಂದಲೂ ಭೂಮಿಯು ಪ್ರಕಾಶಿಸುತ್ತಿಧೆ ಎಂದನು.

ಗ॥ ತತೋರಾಜಾಪಾಪ್ರಹ ವಿದ್ವನ್ ತತ್ರೋದ್ದೇಶ್ಯಂಕಿಮಿತಿ ತತಃಕವಿರಾಹ ॥

ತಾ॥ ಬಳಿಕ ರಾಯನು ಎಲೈ ಕವಿಯೇ ನಿನ್ನ ಉದ್ದೇಶವೇನೆನಲು ಕವಿಯು ಹೇಳುತ್ತಾನೆ.

ಶ್ಲೋ॥ ಅಂಬಾಕುಪ್ಯತಿ ನಮಯಾ ನಪ್ನುಷಯಾನಾಪಿ ನಾಂಬಯಾ ನನುಯಾ।
ಅಹಮಪಿ ನತಯಾನತಯಾವದರಾಜನ್ ಕಸ್ಯ ದೋಷೋಯಂ ಇತಿ ॥

ತಾ॥ ಅಯ್ಯಾ ರಾಯನೆ ನಮ್ಮ ತಾಯಿಯೂ ಸಿಟ್ಟುಮಾಡುವದಿಲ್ಲವು ನಾನೂ ಮತ್ತು ನನ್ನ ಸೊಸೆ ಹೆಂಡತಿ ಈ ನಾಲ್ವರಗಳ್ಯಾರೂ ಪರಸ್ಪರ ಕೋಪ ಮಾಡುವದಿಲ್ಲವು ಈ ತಪ್ಪು ಯಾರದೆಂದು ಹೇಳಿದನು

ಗ॥ ರಾಜಾಪಾರಿದ್ರ್ಯದೋಷಂ ಜ್ಞಾತ್ವಾಕವಿಂ ಪೂರ್ಣ ಮನೋರಥಂ ಚಕ್ರೆ ॥

ತಾ॥ ದೊರೆಯು ಆತನನ್ನು ಬಹಳ ಬಡವನೆಂದು ತಿಳಿದು ಬಹಳ ಹಣ ಕೊಟ್ಟನು.

ಗ॥ ಏಕದಾ ದ್ವಾರಪಾಲಃ ಆಗತ್ಯರಾಜಾನಂಪ್ರಾಹ ದೇವಕವಿಶೇಖರೋನಾಮ ಮಹಾಕವಿಃ ದ್ವಾರಿತಿಷ್ಠತೀ ರಾಜಾಪ್ರವೇಶಯೇತ್ಯಾಹ ತತಃಕವಿ ರಾಗತ್ಯ ಸ್ವಸಿ ಇತ್ಯುಕ್ತ್ವಾಪಠತಿ ॥

ತಾ॥ ಬಳಿಕ ಮತ್ತೊಂದು ಸಮಯದಲ್ಲಿ ಕವಿಶೇಖರನೆಂಬೋವನ ಕವಿಯು ರಾಜನಬಳಿಗೈತಂದು ಆಶೀರ್ವದಿಸಿ ಹೇಳುತ್ತಾನೆ.

ಶ್ಲೋ॥ ರಾಜನ್ ದೌವಾರಿಕಾದೇವ ಪ್ರಾಪ್ತವಾನಸ್ಮಿವಾರಣಂ । ಮದವಾರಣ ಮಿಚ್ಛಾಮಿತ್ವತ್ತೋಹಂಜಗತೀಪತೇ ॥

ತಾ॥ ಎಲೈ ರಾಯನೆ ನಾನು ದ್ವಾರಪಾಲಕನಿಂದಲೇ ವಾರಣವನ್ನು ಅಂದರೆ ತಡೆಮಾಡುವಿಕೆಯನ್ನು ಹೊಂದಿದ್ದೇನೆ ನಿನ್ನಿಂದಲಾದರೊ ಮದ್ದಾನೆ ಯನ್ನು ಕೋರುವೆನೆಂದನು.

ಗ॥ ತದಾಪ್ರಾಙ್ಮುಖಸ್ತಿಷ್ಠನ್ ರಾಜಾತಿಸಂತುಷ್ಟಃತಂಪ್ರಾಗ್ದೇಶಂಸರ್ವಂ ಕವಯೆದತ್ತ್ವಂ ಮತ್ವಾದಕ್ಷಿಣಾಭಿಮುಖೋಭೂತ್ ತತಃಕವಿಶ್ಚಿಂತೆ ಯಾತಿಕಿಮಿದಂ ರಾಜಾಮುಖಂ ಪರಾವೃತ್ತ್ಯಮಾಂ ನಪಶ್ಯತೀತಿ ದಕ್ಷಿಣ ದೇಶಂ ಸಮಾಗತ್ಯ ಅಭಿಮುಖಃ ಕವಿಃಪಠತಿ ॥

ತಾ॥ ಆಗ ರಾಯನು ಪೂರ್ವದಕಡೆ ನಿಂತುಕೊಂಡಿದ್ದು ಬಹಳ ಸಂತೋಷಪಟ್ಟು ಆ ದಿಕ್ಕನ್ನೇ ಕವಿಗೆ ಕೊಟ್ಟೆನೆಂಬ ಬುದ್ಧಿಯಿಂದ ದಕ್ಷಿಣ ದಿಕ್ಕಿಗೆ ತಿರುಗಲು ಕವಿಯು ಅದನ್ನರಿಯದೆ ಇದೇನು ಧೊರೆಯು ಹಿಂತಿರುಗಿದನೆಂದು ಯೋಚಿಸಿ ತಾನೂ ದಕ್ಷಿಣ ದಿಕ್ಕಿಗೆ ತಿರುಗಿ ಧೊರೆಗೆದುರಾಗಿ ಹೇಳುತ್ತಾನೆ.

ಶ್ಲೋ॥ ಅಪೂರ್ವೇಯಂ ಧನುರ್ವಿದ್ಯಾ ಭವತಾಃಶಿಕ್ಷಿತಾಕಥಂ । ಮಾರ್ಗಣೌಘಃ ಸ್ಸಮಾಯಾತಿಗುಣೋಯಾತಿದಿಗಂತರಂ ॥

ತಾ॥ ಅಯ್ಯಾ ಭೋಜನೆ ಬಾಣಗಳು ನಿನ್ನ ಹತ್ತಿರಕ್ಕೆ ಬರುತ್ತಿರಲು ಹೆದೆಯು ದಿಕ್ಕು ದಿಕ್ಕಿಗೆ ಹೋಗುತ್ತಿದೆ (ಈ ಧನುರ್ವಿದ್ಯೆಯನ್ನು ನೀನೆಲ್ಲಿ ಕಲಿತೆ).

ಗ॥ ತತೋ ರಾಜಾದಕ್ಷಿಣದೇಶಮಪಿ ಮನಸಾಕವಯೇ ದತ್ವಾಸ್ವಯಂಪ್ರತ್ಯ ಙ್ಮುಖೋಭೂತ್ ಕವಿಸ್ತತ್ರಾಗತ್ಯಪ್ರಾಹ ॥

ತಾ॥ ಬಳಿಕ ಧೊರೆಯು ಆ ದಕ್ಷಿಣ ದಿಕ್ಕನ್ನು ಆ ಕವಿಗೆ ಕೊಟ್ಟೆನೆಂದು ತಿಳಿದುಕೊಂಡು ಪಶ್ಚಿಮಕ್ಕೆ ತಿರುಗಲು ಪುನಃ ಕವಿಯು ಹೇಳುತ್ತಾನೆ.

ಶ್ಲೋ॥ ಸರ್ವಜ್ಞಇತಿ ಲೋಕೋಯಂಭವಂತಂ ಭಾಷತೆಮೃಷಾ । ಪದಮೇಕಂ ನಜಾನೀಷೆವಕ್ತುಂ ನಾಸ್ತೀತಿಯಾಚಕೇ ॥

ತಾ॥ ಅಯ್ಯಾ ರಾಯನೇ ನಿನ್ನನ್ನೆಲ್ಲರೂ ಸರ್ವಜ್ಞನೆಂದು ಹೇಳುವದು ಆದರೆ ಕವಿಗಳಿಗೆ (ಇಲ್ಲ) ಎಂಬ ಎರಡಕ್ಷರಗಳುಳ್ಳ ಪದವನ್ನುಮಾತ್ರ ನೀನು ತಿಳಿದಿಲ್ಲವೆಂದನು.

ಗ॥ ತತೋ ರಾಜಾತಮಪಿದೇಶಂ ಕವೇರ್ದತ್ತಂಮತ್ವಾ ಉದಙ್ಮುಖೋಭೂತ್ ಕವಿಸ್ತತ್ರಾಪಿ ಆಗತ್ಯಪ್ರಾಹ ॥

ತಾ॥ ಬಳಿಕ ದೊರೆಯು ಆ ದಿಕ್ಕನ್ನು ಕವಿಗೆ ಕೊಟ್ಟದ್ದನ್ನಾಗಿ ತಿಳಿದು ಉತ್ತರಕ್ಕೆ ತಿರುಗಲು ಕವಿಯು ಅಲ್ಲಿಗೂ ಬಂದು ಹೇಳುತ್ತಾನೆ.

ಶ್ಲೋ॥ ಸರ್ವದಾಸರ್ವದೋಸೀತಿ ಮಿಥ್ಯಾತ್ವಂಕಥ್ಯಸೇಬುಧೈಃನಾರಯೋಲೇಭಿರೆಪೃಷ್ಠಂನಪಕ್ಷಃ ಪರಯೋಷಿತಃ ॥

ತಾ॥ ಅಯ್ಯಾ ರಾಯನೆ ನೀನು ಯಾವಾಗಲೂ ಎಲ್ಲವನ್ನೂ ಕೊಡತಕ್ಕವನೆಂದು ಅನ್ನಿಸಿಕೊಂಡಿದ್ದರೂ ಶತ್ರುಗಳಿಗೆ ಬೆನ್ನನ್ನೂ ಪರಸ್ತ್ರೀಯರಿಗೆ ನಿನ್ನ ವಕ್ಷಸ್ಥಳವನ್ನೂ ಎಂದಿಗೂ ಕೊಟ್ಟಿಲ್ಲವೆಂದನು.

ಗ॥ ತತೋ ರಾಜಾಸರ್ವಾಂ ಭೂಮಿಂ ಕವೇರ್ದತ್ತಾಂ ಮತ್ವಾಉತ್ತಿಷ್ಠತಿ
ಸ್ಮ ಕವಿಶ್ಚತದಭಿಪ್ರಾಯಮಾಜ್ಞಾತ್ವಾಪುನರಾಹ ॥

ತಾ॥ ಬಳಿಕ ಭೋಜನು ಎಲ್ಲಾ ಭೂಮಿಯನ್ನೂ ಕವಿಗೆ ಕೊಟ್ಟದ್ದನ್ನಾಗಿ ತಿಳುಕೊಂಡು ಮೇಲಕ್ಕೆ ಎದ್ದು ನಿಂತುಕೊಳ್ಳಲಾಗಿ ಕವಿಯು ಅದನ್ನು ತಿಳುಕೊಳ್ಳದೆ ತಿರುಗೂ ಹೇಳುತ್ತಾನೆ.

ಶ್ಲೋ॥ ರಾಜನ್ ಕನಕಧಾರಾಭಿಃತ್ವಯಿಸರ್ವತ್ರ ವರ್ಷತಿ ಅಭಾಗ್ಯಚ್ಛತ್ರ
ಸಂಪನ್ನೇಮಯಿನಾಯಾಂತಿಬಿಂದವಃ ॥

ತಾ॥ ಎಲೌ ಧೊರೆಯೇ ನೀನು ಚಿನ್ನದ ಮಳೆಯನ್ನು ಎಲ್ಲೆಲ್ಲಿಯೂ ಸುರಿಯುತ್ತಿದ್ದರೂ ದುರದೃಷ್ಟವೆಂಬ ಕೊಡೆಯುಳ್ಳ ನನ್ನಮೇಲೆ ಒಂದು ತೊಟ್ಟಾದರೂ ಬೀಳುವದಿಲ್ಲವೆಂದನು.

ಗ॥ ತದಾರಾಜಾ ಚಾಂತಃಪುರಂಗತ್ವಾ ಲೀಲಾದೇವೀಂ ಪ್ರಾಹದೇವಿಸರ್ವಂ
ರಾಜ್ಯಂಕವಯೇದತ್ತಂ ತತಸ್ತಪೋವನಂ ಮಯಾಸಹಾಗಚ್ಛೇತಿ ॥

ತಾ॥ ಆಗ ರಾಯನು ಅಂತಃಪುರಕ್ಕೆ ಹೋಗಿ ಎಲೌ ಪತ್ನಿಯೇ ನಾನು ರಾಜ್ಯವನ್ನೆಲ್ಲಾ ಕವಿಗೆ ಕೊಟ್ಟುಬಿಟ್ಟೆನಾದ್ದರಿಂದ ತಪೋವನಕ್ಕೆ ಬರಬೇಕೆಂದನು.

ಗ॥ ಅಸ್ಮಿನ್ನವಸರೇವಿದ್ವಾನ್ ದ್ವಾರಿನಿರ್ಗತಃ ಬುದ್ಧಿಸಾಗರೇಣ ಮುಖ್ಯ
ಮಾತ್ಯೇನಪೃಷ್ಟಃ ವಿದ್ವನ್‌ರಾಜ್ಞಾ ಕಿಂದತ್ತಮಿತಿ ಸಆಹ ನಕಿಮ
ಪೀತಿ ತದಾಅಮಾತ್ಯಃ ಪ್ರಾಹತತೋಕ್ತಂ ಶ್ಲೋಕಂಪಠತತಃಕವಿಃ
ಶ್ಲೋಕಚತುಷ್ಟಯಂ ಪಠತಿ ಅಮಾತ್ಯಸ್ತುತಃ ಪ್ರಾಹಸುಕವೇ ತವ
ಕೋಟಿದ್ರವ್ಯಂದೀಯತೇ ರಾಜ್ಞಾ ಯತ್ತ್ವಯಾದತ್ತಂ ಭವತಿ ತತ್ಪು
ನರ್ವಿಕ್ರಯತಾಮಿತಿ ಕವಿಸ್ತಥಾಕರೋತಿತತಃಕೋಟಿದ್ರವ್ಯಂದತ್ವಾ
ಕವಿಂಪ್ರೇಷಯಿತ್ವಾಅಮಾತ್ಯೋರಾಜನಿಕಟಮಾಗತ್ಯ ತಿಷ್ಠತಿಸ್ಮತದಾ
ರಾಜಾಚತಮಾಹ ಬುದ್ಧಿಸಾಗರ ರಾಜ್ಯ ಮಿದಂಸರ್ವಂದತ್ತಂ
ಕವಯೇಪತ್ನೀಭಿಸ್ಸಹ ತಪೋವನಂಗಚ್ಛಾಮಿ ತ್ವತ್ರತಪೋವನೇ
ತವಾಪೇಕ್ಷಾಯದಿ ಮಯಾಸಹಾಗಚ್ಛೇತಿ ತತೋಽಮಾತ್ಯಃಪ್ರಾಹದೇ
ವಕೇನ ಕವಿನಾಕೋಟಿ ದ್ರವ್ಯಮೂಲ್ಯೇನ ರಾಜ್ಯಮಿದಂ ವಿಕ್ರೀತಂ

ಕೋಟಿದ್ರವ್ಯಂ ಚ ವಿದುಷೇ ದತ್ತ್ವಾ ತತೋ ರಾಜ್ಯಂ ಭವದೀಯಮೇವೇತಿ ಭುಂಕ್ಷ್ವೇತಿ। ತದಾ ರಾಜಾ ತಂ ಬುದ್ಧಿಸಾಗರಂ ವಿಶೇಷೇಣ ಸಮ್ಮಾನಿತವಾನ್ ॥

ತಾ॥ ಅಷ್ಟರಲ್ಲಿ ಬ್ರಾಹ್ಮಣನು ಬಾಗಿಲಿಂದ ಹೊರಗೆ ಬರಲು ಬುದ್ಧಿಸಾಗರನೆಂಬ ಮಂತ್ರಿಯು ಆ ಕವಿಯನ್ನು ನೋಡಿ ಅಯ್ಯಾ ಧೊರೆಯು ನಿನಗೇನು ಬಹುಮಾನವಿತ್ತನೆನಲು. ಆತನು ಏನೂ ಕೊಡಲಿಲ್ಲವೆಂದನು ಆದರೇ ನೀನೇನು ಶ್ಲೋಕಗಳನ್ನು ಹೇಳಿದೆನ್ನಲು ಕವಿಯು ತಾನು ಹೇಳಿದ ನಾಲ್ಕು ಶ್ಲೋಕಗಳನ್ನು ಹೇಳಿದನು ಮಂತ್ರಿ ಅದನ್ನು ಕೇಳಿ ಇರಲಿ ನಾನು ಒಂದು ಕೋಟಿ ವರಹಾಗಳನ್ನು ಕೊಡುವೆನು ಧೊರೆ ಕೊಡುವುದನ್ನು ನನಗೆ ಕೊಡುವೆಯಾ ಎನಲು ಕವಿಯು ಸಂತೋಷದಿಂದ ಒಪ್ಪಿಕೊಂಡನು ಬಳಿಕಾತನಿಗೆ ಕೊಟ್ಟ ಧನವನ್ನು ಕೊಟ್ಟು ಕಳುಹಿಸಿ ತಾನು ರಾಜನೆಡೆಗೆ ಬರಲು ಧೊರೆಯು ಬುದ್ಧಿಸಾಗರನೇ ನಾನೀ ರಾಜ್ಯವನ್ನು ಕವಿಗೆ ಕೊಟ್ಟುಬಿಟ್ಟೆನು ನಾನು ಅಂತಃಪುರದವರೊಡನೆ ತಪೋವನಕ್ಕೆ ತೆರಳುವೆನೆನಲು ಬುದ್ಧಿಸಾಗರನು ಸ್ವಾಮಿ ನಾನು ಆ ಬ್ರಾಹ್ಮಣನಿಗೆ ಬೆಲೆಯನ್ನು ಕೊಟ್ಟು ಕಳುಹಿರುವೆನೆಂದು ರಾಜ್ಯವು ನಿನ್ನದೇ ನೀನೆ ಅನುಭವಿಸೆನಲು ಧೊರೆಯು ಸಂತೋಷಪಟ್ಟು ಆತನನ್ನು ಮರ್ಯಾದೆ ಮಾಡಿ ಹೊಗಳಿದನು.

ಗ॥ ಅನ್ಯದಾ ರಾಜಾ ಮೃಗಯಾಯಾ ಸೇನಾಟವೀಂ ವಿಹರನ್ ಪಿಪಾಸಾಪರ್ಯಾಕುಲಃ ನಿಜ ತುರಗಮಾರುಹ್ಯ ಉದಕಾರ್ಥೀ ಗಿರಿ ಕಟತಟಭುವಮಟನ್ ತದಲಬ್ಧ್ವಾ ಪರಿಶ್ರಾಂತಃ ಕಸ್ಯ ಚಿನ್ಮಹಾತರೋಃ ಅಧಸ್ತಾದುಪವಿಷ್ಟಃ ತತ್ರ ಕಾಚಿದ್ಗೋಪಕನ್ಯಾ ಸುಕುಮಾರ ಮನೋಜ್ಞಸರ್ವಾಂಗಾ ಯದೃಚ್ಛಯಾ ಧಾರಾನಗರಂ ಪ್ರತಿ ತಕ್ರಂ ವಿಕ್ರೇತು ಕಾಮಾ ತಕ್ರ ಭಾಂಡಂ ನೊದ್ವಹಂತೀ ಸಮಾಗಚ್ಛತ್ ತಾಮಾಗಚ್ಛಂತೀಂ ದೃಷ್ಟ್ವಾ ರಾಜಾ ಪಿಪಾಸಾವಶಾತ್ ಏತದ್ಭಾಂಡಸ್ಥಂ ದೇಯಂ ಚೇತ್ ಪಿಬಾಮೀತಿ ಬುದ್ಧ್ವಾ ಪೃಚ್ಛತ್ ತರುಣಿ ಕಿಮಾನಯಸೀತಿ ಸಾ ಚ ತನ್ಮುಖಶ್ರಿಯಾ ಭೋಜಂ ಮತ್ವಾ ತತ್ಪಿಪಾಸಾಂ ಚ ಜ್ಞಾತ್ವಾ ತಸ್ಮಿನ್ನವಲೋಕನಪರಾ ಛಂದೋರೂಪೇಣಾಹ ॥

ತಾ॥ ಮತ್ತೊಂದು ಸಮಯದಲ್ಲಿ ಧೊರೆಯು ಬೇಟೆಯಿಂದ ಬಳಲಿ ಒಂದು ಮರದಡಿಯಲ್ಲಿ ಕುಳಿತಿರಲು ಮೊಸರು ಮಾರುವವಳು ತರುಣಿಸ್ತ್ರೀಯೊಬ್ಬಳು ಮೊಸರು ತರುತ್ತಿರುವುದನ್ನು ಕಂಡು ಬಾಯಾರಿಕೆಯಿಂದ ಎಲೌ ಯುವತಿಯೇ ಆ ಮಡಿಕೆಯಲ್ಲಿರುವುದೇನೆಂದು ಕೇಳಲು ಆಕೆಯು.

ಶ್ಲೋ॥ ಹಿಮಕುಂದ ಶಶಿಪ್ರಭಶಂಖನಿಭಂ ಪರಿಪಕ್ವಕಪಿತ್ಥಸುಗಂಧರಸಂ ॥
ಯುವತೀಕರನಿರ್ಮಥಿತಂಮಥಿತಂಪಿಬ ಹೇನೃಪಸರ್ವರುಜಾಪಹರಂ ॥

ತಾ॥ ಚಂದ್ರನೂ ಮಲ್ಲಿಗೆ ಹುವ್ವು ಚಂದ್ರ ಶಂಖ ಇವುಗಳಂತೆ ಶುಭ್ರವಾಗಿರುವ ಒಳ್ಳೇ ಮಾಗಿದ ಬೇಲದಹಣ್ಣಿನಂತೆ ಸುವಾಸನೆಯೂ ರುಚಿಯೂ ಉಳ್ಳ ತರುಣಿಸ್ತ್ರೀ ಕರಗಳಿಂದ ಚನ್ನಾಗಿ ಕಡಿಯಲ್ಪಟ್ಟ ಮೊಸರನ್ನು ಕುಡಿಯಯ್ಯಾ ಎಂದಳು.

ಗ॥ ಇತಿರಾಜಾ ತಚ್ಚತುರೋಕ್ತ್ಯಾತುಷ್ಟಃ ಸೀತ್ಯಾಂಪ್ರಾಹ ಸುಭ್ರೂಕಿಂ ತವಾಂಭೀಷ್ಟಮಿತಿ ಸಾಚಕಿಂಚಿದಾವಿಷ್ಕೃತ ಯೌವನಾ ಮದನ ಪರವಶಾ ಮೋಹಾಕುಲನಯನಾಪ್ರಾಹ ದೇವಮಾಂಕನ್ಯಾ ಮೇವಾ ವೈಹಿ ಸಾಪುನಗಾಹ ॥

ತಾ॥ ಧೊರೆಯಾ ಮಾತನ್ನು ಕೇಳಿ ಸಂತೋಷಪಟ್ಟು ಮಜ್ಜಿಗೆಯನ್ನು ಕುಡಿದು ಎಲೌ ಯುವತಿಯೇ ನಿನಗೇನು ಬೇಕೆನ್ನಲು ಅವಳು ಮದನಪರವಶಳಾಗಿ ಹೇಳಿದ್ದೇನಂದರೆ ಅಯ್ಯಾ ನನ್ನನ್ನು ಹುಡಿಗಿ ಎಂದು ತಿಳಿ ಮತ್ತೂ

ಶ್ಲೋ॥ ಇಂದುಂಕೈರವಿಣೀವ ಕೋಕಪಟಲೀ ವಾಂಭೋಜಿನೀವಲ್ಲಭಂ ।
ಮೇಘಂಚಾತಕ ಮಂಡಲೀವಮಧುಪ ಶ್ರೇಣೀವಪುಷ್ಪವ್ರಜಂ ॥
ಮಾಕಂದಂಪಿಕ ಸುಂದರೀ ವರಮಣೀ ಮಾತ್ಮೇಶ್ವರಂಪ್ರೋಷಿತಂ ।
ಚೇತೋವೃತ್ತಿರಿಯಂ ಸದಾನೃಪವರತ್ವಾಂ ದ್ರಷ್ಟುಮುತ್ಕಂಠತೇ ॥

ತಾ॥ ಬಿಳೀ ಕಮಲಗಳು ಚಂದ್ರನನ್ನು ಹೇಗೂ ಚಕ್ರವಾಕಗಳು ಸೂರ್ಯನನ್ನು ಹಾದಿಯಲ್ಲಿಯೂ ಚಾತಕ ಪಕ್ಷಿಗಳು ಮೇಘವನ್ನೂ ದುಂಬಿಗಳು ಹೂವ್ವುಗಳನ್ನು ಕೋಗಿಲೆಗಳು ಶೀಮಾವಿನ ಗಿಡಗಳನ್ನೂ ರಮಣಿಯು ಗಂಡನನ್ನೂ ಹೇಗೋ ಹಾಗೆ ನನ್ನ ಮನಸ್ಸು ನಿನ್ನನ್ನು ನೋಡ ಲಿಚ್ಛೆಪಡುತ್ತದೆಂದಳು.

ಗ॥ ರಾಜಾ ಚಮತ್ಕೃತಃ ಪ್ರಾಹಸುಕುಮಾರಿತ್ವಾಂ ಲೀಲಾ ದೇವ್ಯಾ ಅನುಮತ್ಯಾ ಸ್ವೀಕುರ್ಮ ಇತಿ ಧಾರಾನಗರಂ ನೀತ್ವಾತಾಂತಥೈವ ಸ್ವೀಕೃತವಾನ್ ॥

ತಾ॥ ಧೊರೆಯು ಆಶ್ಚರ್ಯಪಟ್ಟು ಎಲೈ ಸುಂದರಿ ನಿನ್ನನ್ನು ಲೀಲಾ ದೇವಿಯ ಅನುಮತಿಯಿಂದ ಪರಿಗ್ರಹಿಸುವೆನೆಂದನು.

ಗ॥ ಕದಾಚಿದ್ರಾಜಾಭಿಷೇಕೇ ಮದನಶರಪೀಡಿತಾಯಾಃ ಮದಿರಾಕ್ಷ್ಯಾಃ ಕರತಲಗಳಿತೋ ಹೇಮಕಲಶಃ ಸೋಪಾನವಜ್ರೆ ಮುರಟನ್ನೇವಪಪಾತ

ತತೋರಾಜಾ ಸಭಾಯಾಮಾಗತ್ಯ ಕಾಳಿದಾಸಂಪ್ರಾಹ ಸುಕವೇ ಏನಾಂ ಸಮಸ್ಯಾಂಪೂರಯ ॥ ಟಂಟಂಟಟಂಟಂಟಟಟಂಟಟಂಟಂ ॥ ಕಾಳಿದಾಸಃಪ್ರಾಹ ॥

ತಾ॥ ಮತ್ತೊಂದುದಿನ ರಾಜನ ಪಟ್ಟಾಭಿಷೇಕದಲ್ಲಿ ಪ್ರಾಯದವಳಾದ ಒಬ್ಬಸ್ತ್ರೀಯು ಮದನನಕೊಬ್ಬಿನಿಂದ ನೀರಿಗೆ ಭಾವಿಗೆ ಹೋಗಿ ಚಿನ್ನಗಡಿಗೆಯನ್ನು ಜಾರಬಿಡಲು ಅದು ಮೆಟ್ಲಲ್ಲಿ ಬಿದ್ದು ಟಂಟಂ ಎಂದು ಶಬ್ದವಾಗುತ್ತಿರಲು ರಾಯನದನ್ನು ಕಂಡು ಬೆಳಿಗ್ಗೆ ಸಭೆಗೆ ಬಂದು ಕಾಳಿದಾಸನನ್ನು ಕುರಿತು ಸಮಸ್ಯೆ ಹೇಳಲು ಆತನು.

ಶ್ಲೋ॥ ರಾಜಾಭಿಷೇಕಮದವಿಹ್ವಲಾಯಾ ಹಸ್ತಾಚ್ಚ್ಯುತೋ ಹೇಮಘಟೋ ಯುವತ್ಯಾಃ ಸೋಪಾನಮಾರ್ಗೇಷು ಕರೋತಿಶಬ್ದಂ ಟಂಟಂಟ ಟಂಟಂಟಟಟಂಟಟಂಟಂ ॥

ತಾ॥ ಅಂದರೆ ರಾಜಾಭಿಷೇಕ ಕಾಲದಲ್ಲಿ ಒಬ್ಬ ಯುವತಿಯಿಂದ ಭಾವಿಯಲ್ಲಿ ಬಿಡಲ್ಪಟ್ಟ ಚಿನ್ನದ ಕಲಶವು ಮೆಟ್ಲುಗಳಲ್ಲಿ ಟಂ ಟಂ ಎಂದು ಶಬ್ದಮಾಡುತ್ತಿತ್ತೆಂದನು.

ಗ॥ ತತೋರಾಜಾ ಸ್ವಾಭಿಪ್ರಾಯಂ ಜ್ಞಾತ್ವಾ ಅಕ್ಷರಲಕ್ಷಂದದೌ ॥

ತಾ॥ ಬಳಿಕ ದೊರೆಯು ತನ್ನ ಅಭಿಪ್ರಾಯವನ್ನೇ ಹೇಳಿದ್ದಕ್ಕೆ ಸಂತೋಷಪಟ್ಟು ಅಕ್ಷರಲಕ್ಷವನ್ನು ಕೊಟ್ಟನು.

ಗ॥ ಅನ್ಯದಾ ಸಿಂಹಾಸನ ಮಲಂಕುರ್ವಾಣೇ ಶ್ರೀಭೋಜೇ ಕಶ್ಚನಚೋರಃ ಆರಕ್ಷಕೈಃ ರಾಜಸನಿಕಟಂನೀತಃ ರಾಜಾತಂದೃಷ್ಟ್ವಾ ಕೋಯಮಿತ್ಯಪೃಚ್ಛತ್ ತದಾಆರಕ್ಷಕಾಃ ಪ್ರಾಹದೇವ ಅನೇನತಃಭಿಲ್ಲಕೇನ ಕಸ್ಯಾಶ್ಚಿದ್ವೇಶ್ಯಾಗೃಹೇ ಘಾತಪಾತಮಾರ್ಗೇಣದ್ರವ್ಯಾಣಿ ಅಪಹೃತಾನೀತಿ॥ ತದಾರಾಜಾ ಪ್ರಾಹ ಅಯಂದಂಡನೀಯ ಇತಿ ತತೋಘತ್ಕಂಠೋ ನಾಮ ಚೋರಃ ಪ್ರಾಹ ॥

ತಾ॥ ಮತ್ತೊಂದುದಿನ ಶ್ರೀ ಭೋಜನು ಸಿಂಹಾಸನದಲ್ಲಿ ಕುಳಿತಿರಲು ದೂತರು ಒಬ್ಬ ಕಳ್ಳನನ್ನು ಹಿಡಿತಂದು ಮಹಾಸ್ವಾಮಿ ಇವನು ಒಬ್ಬ ಸೂಳೆಯ ಮನೆಯಲ್ಲಿ ತನ್ನ ಕೊಂದು ಬಹಳ ಹಣವನ್ನು ಕದ್ದಿರುವನೆನಲು ಆಗ ದೊರೆಯು ಅವನನ್ನು ಶಿಕ್ಷಿಸಿರಿ ಎಂದನು. ಆಗ ಘತ್ಕಂಡನೆಂಬ ಕಳ್ಳನು ಹೇಳುತ್ತಾನೆ.

ಶ್ಲೋ॥ ಭಟ್ಟಿರ್ನಷ್ಟೋ ಭಾರವೀಯೋಪಿನಷ್ಟಃ ಭಿಕ್ಷುರ್ನಷ್ಟೋಭೀಮಸೇ

ಸೋಪಿನಷ್ಟಃ॥ ಘಟಕ್ಕಂಡೋಹಂ ಭೂಪತಿಸ್ತ್ವಂ ತಥಾಪರ್ಣ ಬ
ಬಾಣಸ್ಯಾಂತಕಸ್ಸನ್ನಿವಿಷ್ಟಃ ॥

ತಾ॥ ಘಟಪ್ರನೂ ಬಾಣನೂ ಚಕ್ರವರ್ತಿ ಭೋಜನೂ ಇವರುಗಳು ಕ್ರಮವಾಗಿ ನಾಶವಾಗಿದ್ದಾರೆ, ನಾನೋ ಘಟಕ್ಕುಂಡನು ನೀನು ಭೂಪತಿಯು ಪ್ರವೂದಲು ಇವರಿಗೂ ನಾಶವಾದಂತೆ ಘಟಕ್ಕುಂಡನಿಗೆ ತೊಂದರೆ ಬಂದರೆ ಭೂಪತಿಗೇನಾಗುವುದೋ ಯೋಚಿಸಿರೆಂದನು.

ಗ॥ ತಥಾ ರಾಜಾ ಪ್ರಾಹ ಘೋ ಘಟಕ್ಕಂಡ ಗಚ್ಛ ಗಚ್ಛ ಯಥೇಚ್ಛಂ ವಿಹರ॥

ತಾ॥ ಆಗ ದೊರೆಯು ಎಲೈ ಘಟಕ್ಕುಂಡನೆ ನಿನ್ನಿಷ್ಟದಂತೆ ಹೊರಟುಹೋಗೆಂದುಬಿಟ್ಟನು.

ಗ॥ ಕದಾಚಿದ್ಭೋಜೋ ಮೃಗಯಾಪರ್ಯಾಕುಲಃ ವನೇ ವಿಚರನ್ ವಿಶ್ರಮ
ವಿಷ್ಟಹೃದಯಃ ಕಂ ಚಿತ್ತಟಾಕಮಾಸಾದ್ಯ ಸ್ಥಿತವಾನ್ ಕ್ರಮಾತ್ಪ್ರ
ಸುಪ್ತಃ ತತೋವನವಹೋನಿಧಿ ಕುಹರಂ ಗತೋಭಾಸ್ಕರೇ.

ತಾ॥ ಒಂದಾನೊಂದುದಿನ ಭೋಜರಾಯನು ಬೇಟೆಗೆ ಹೋಗಿ ಬಳಲಿ ಒಂದು ಕೆರೆಕಟ್ಟೆಯಬಳಿ ನಿಂತಿರಲು ಆಗ ಸಾಯಂಕಾಲವಾಯಿತು

ಶ್ಲೋ॥ ತತ್ರ ನಾರೋಚತ ನಿಶಾ ತಸ್ಯರಾಜ್ಞಸ್ಸುಖಪ್ರದಾ । ಚಂಚಚ್ಚಂ
ದ್ರಕರಾನಂದ ಸಂದೋಹಪರಿಕಂಪಿತಾ ॥

ತಾ॥ ಆ ರಾತ್ರಿಯು ಚಂದ್ರಕಿರಣಗಳಿಂದ ವ್ಯಾಪ್ತವಾಗಿ ರಾಯನಿಗೆ ಹಿತಕರವಾಗಿತ್ತು.

ಗ॥ ತತಃ ಪ್ರತ್ಯೂಷ ಸಮಯೇ ನಗರಂ ಪ್ರತಿ ಪ್ರಸ್ಥಿತೋ ರಾಜಾ ಚರಮಗಿರಿ
ನಿತಂಬಲಂಬಮಾನ ಶಶಾಂಕಬಿಂಬ ಮಾಲೋಕ್ಯ ಸ ಕೌತೂಹಲಸ್ಸ
ಭಾಮಾಸಾದ್ಯ ತದಾ ಸಮೀಪಸ್ಥಾನ್ ಕವೀಂದ್ರಾನ್ನಿರೀಕ್ಷ್ಯ ಸಮಸ್ಯಾ
ಮೇಕಾಮುವದತ್ ॥ ಚರಮಗಿರಿನಿತಂಬೇ ಚಂದ್ರಬಿಂಬಂ ಲಲಂಬೇ ॥

ತಾ॥ ಬಳಿಕ ಬೆಳಗಿನ ಜಾವದಲ್ಲಿ ಚಂದ್ರನು ಮುಳುಗುತ್ತಿದ್ದುದನ್ನು ನೋಡಿ ರಾಯನು ಸಭೆಗೆ ಬಂದು ಕವಿಗಳನ್ನು ಕುರಿತು ಸಮಸ್ಯೆ ಹೇಳುತ್ತಾನೆ ಏನೆಂದರೆ:—

ರಾಜಾ. ಶ್ಲೋ॥ ಚರಮಗಿರಿನಿತಂಬೆ ಚಂದ್ರಬಿಂಬಂ ಲಲಂಬೇ.

ತಾ॥ ಅಂದರೆ ಅಸ್ತಪರ್ವತದ ಸೊಂಟದಲ್ಲಿ ಚಂದ್ರಬಿಂಬವು ಜೋಲಾಡುತ್ತಿದೆ.

ಭವಭೂತಿ. ಶ್ಲೋ॥ ಅರುಣಕಿರಣಜಾಲೈರಂತರಿಕ್ಷೇಗತರ್ಕ್ಷೇ

ತಾ॥ ಅರುಣನ ಕಿರಣಗಳಿಂದಾಕಾಶವು ನಕ್ಷತ್ರಗಳಿಂದ ರಹಿತವಾಗುತ್ತಿರಲು.

ದಂಡಿಃ. ಶ್ಲೋ॥ ಚಲತಿಶಿಶಿರವಾತೋ ಮಂದಮಂದಂ ಪ್ರಭಾತೇ ।

ತಾ॥ ಅಂದರೆ ಮುಂಜಾವಿನ ಗಾಳಿಯು ಮೆಲ್ಲಮೆಲ್ಲಗೆ ಬೀಸುತ್ತಿರಲು

ಕಾಳಿದಾಸ. ಶ್ಲೋ॥ ಯುವತಿಜನಕದಂಬೇನಾಥ ಮುಕ್ತೋಷ್ಠಬಿಂಬೇ

ತಾ॥ ಗಂಡಂದಿರು ತಮ್ಮ ಹೆಂಡತಿಯರ ಅಧರೋಷ್ಠವನ್ನು ಬಿಟ್ಟುಬಿಡುತ್ತಿರಲು.

ಗ॥ ತತೋ ರಾಜಾಸರ್ವಾನಪಿ ಸಮ್ಮಾನಿತವಾನ್ ಕಾಳಿದಾಸಂ ವಿಶೇಷತಃ ಪೂಜಿತವಾನ್ ॥

ತಾ॥ ಬಳಿಕ ದೊರೆಯು ಆ ಕವಿಗಳನ್ನೆಲ್ಲಾ ಸನ್ಮಾನವನ್ನಾಡಿ ಕಾಳಿದಾಸನನ್ನು ಹೆಚ್ಚಾಗಿ ಕಂಡನು.

ಗ॥ ಅಥಕದಾಚಿದ್ಭೋಜಃ ನಗರಾದ್ಬಹಿರ್ನಿರ್ಗತಃ ನೂತನೇನ ತಟಾಕಾಂಭಸಾ ಬಾಲ್ಯಸಾಧಿತಕಪಾಲ ಶೋಧನಾಧಿತ ಕಪಾಲಶೋಧತಾದಿ ಚಕಾರತನ್ಮೂಲೇನ ಕಶ್ಚನಶಫರಶಾಬಃಕಪಾಲಂ ಪ್ರವಿಷ್ಟೋವಿಕಟ ಕರೋಟಿಕಾನಿಕಟಘಟಿತೇನ ನಿರ್ಗತಃ ತತಃರಾಜಾಸ್ವಪುರೀಮಾಗತ ವತ್ತದಾರಭ್ಯರಾಜ್ಞಃ ಕಪಾಲವೇದನಾಜಾತಾ ತತಸ್ತತ್ರತ್ಯೈರ್ಭಿಷಗ್ವರ್ಯೈಃ ಸಮ್ಯಕ್ಚಿಕಿತ್ಸಿತಾಪಿನ ಶಾಂತಾಪಿಪಮಹದ್ನಿಗಲಂ ನಿಶ್ಚಲಾಮ ಸ್ವಸ್ಥೋರಾಜ್ಞಾ ಅಮಾನುಷವಿದಿತೆ ಮಹಾರೋಗೇಣ ॥

ತಾ॥ ಬಳಿಕೊಂದುದಿನ ಭೋಜರಾಯನು ಚಿಕ್ಕತನದಲ್ಲಿ ಕಲ್ತಿರಿನಾಟಗಳನ್ನಾಡಲು ಕೆರೆಗೆಹೋಗಿ ಈಜೆತಲೆಗೆನೀರು ತುಂಬಿಕೊಳ್ಳಲು ಒಂದು ಮೀನುತಲೆಬುರುಡೆ ಯೊಳಕ್ಕೆ ಹೊಕ್ಕುಸಿಕ್ಕಿಕೊಳ್ಳಲು ದೊರೆಗೆ ತಲೆ ನೋವುಂಟಾಗಿ ಯಾವವೈದ್ಯನು ಔಷಧಮಾಡಿದರೂ ಗುಣವಾಗದೆ ರೋಗವು ಅಮಾನುಷವಾದದ್ದರಿಂದ ದುಃಖಪಡುತ್ತಿದ್ದನು.

ಶ್ಲೋ॥ ಶ್ವಾಸಂ ಶ್ವಾಸಮುಖೋದ್ಭವಪ್ರಗಲ್ಭಿತಸುಖಂ ಹೇಮಂತಕಾಲೇ ವಕ್ತ್ರಂನಿರ್ಗತಕಾಂತಿರಾಹುವದನಾ ಕ್ರಾಂತಾಬ್ಜಬಿಂಬೋಪಮಂ ಚೇತಃ ಕಾರ್ಶ್ಯಪದೇಮು ತಸ್ಯವಿಮುಖಂಕ್ಲಿಷ್ಟ್ಯಾ ವಾರಿಜ ವ್ಯಾಧಿಃ ಪೂರ್ಣತರೋಬ ಭೂಪವಿಪಿನೇಕುಪ್ಯಕಿಬಾವಾನಿವ.

ತಾ॥ ರಾಯನಶರೀರವುಸುಖವಿಲ್ಲದೆ ಹಿಮಂತರುತುವಿನ ಕಮಲದಂತೆ ನಾಸಿಹೋಯಿತು ಮುಖಕಾಂತಿಯಾದರೆ ರಾಹುಗ್ರಸ್ತನಾದ ಚಂದ್ರನಂ

ಕಳೆಗುಂದಿತು ಮನಸ್ಸ್ವಯಲ್ಲಕಲ್ಪಗಳಲ್ಲಿಯೂ ನಪುಂಸಕನು ಹೆಂಗಸರಲ್ಲಿ
ಹಿಂತೆಗೆಯುವಂತೆ ಹಿಂತೆಗೆಯುತ್ತಿತ್ತು ರೋಗವುಮಾತ್ರ ಒಣಗಿದಕಾಡಿ
ನಲ್ಲಬೆಂಕಿಯು ವ್ಯಾಪಿಸುವಂತೆ ವ್ಯಾಪಿಸುತ್ತಿತ್ತು.

೧॥ ಏವಮತೀತೇ ಸಂವತ್ಸರೇಪಿ ಕಾಲೇ ನಕೇನಾಪಿ ನಿವಾರಿತಃ ತದ್ರೋಗಃ। ತತ
ಶ್ರೀಭೋಜಃ ನಾನಾವಿಧ ಸಮಯೌಷಧಗ್ರಸನಪರೋ ರೋಗದುಃಖಿತ
ಮನಾಃ ಸವಿಷಾದಸ್ತಂ ಶೋಕಸಾಗರನಿಮಗ್ನಂ ಬುದ್ಧಿಸಾಗರಂ ಕಥ
ಮಪಿಸಂ ಯತಾಕ್ಷರ ಮುವಾಚವಾಚಂ ಬುದ್ಧಿಸಾಗರ ಇತಃ ಪರಮ
ಸ್ಮದ್ವಿಷಯೇ ನಕೋಪಿ ಭಿಷಗ್ವರೋ ವಸತಿ ಮಾತನೂತಂ ಬಾಹಟಾದಿ
ಭೇಷಜಕೋಶಾನ್ ನಿಖಿಲಾನ್ ನ್ಯಸ್ತಸಿ ನಿರಸ್ಯಾಗಚ್ಛ ಮಮದೇಹ
ಸಮಾಗಮ ಸಮಯಸ್ಸಮಾಗತ ಇತಿ ತಚ್ಛ್ರುತ್ವಾ ಸರ್ವೇಪಿ ಪೌರ
ಜನಾಃ ಕಮಯಶ್ಚ ಅಪರೇ ಘಸಮಾಜಾಶ್ಚ ವಿಗಳದಸ್ರಸಾರ ನಯ
ನಾ ಬಭೂವುಃ ತತಃ ಕದಾಚಿದ್ದೇವಸಭಾಯಾಂ ಪುರಂದರಃ ಸಕಲ
ಮುನಿಬೃಂದ ಮಧ್ಯಸ್ಥಂ ವೀಣಾಮುನಿ ಮಾಹಮುನೇ ಇದಾನೀಂ
ಭೂಲೋಕೇ ಕಾನಾಮ ವಾರ್ತೇತಿ ತತಃ ನಾರದಃ ಪ್ರಾಹ ಗುರುನಾಥನ
ಶಿವಾಮ್ಯಾಶ್ಚರ್ಯಂ ಕಿಂತು ಧಾರಾನಗರವಾಸೀ ಶ್ರೀಭೋಜ ಭೂಪಾ
ಲಃ ರೋಗಪೀಡಿತೋ ನಿತರಾಮಸ್ವಸ್ಥಃ ವರ್ತತೇ ಸತಸ್ಯ ರೋಗಃ
ಕೇನಾಪಿ ನನಿವಾರಿತಃ ತದನೇನ ಭೋಜನೃಪಾಲೇನ ಭಿಷಗ್ವರಾ ಅಪಿ
ಸ್ವದೇಶಾನ್ನಿಷ್ಕಾಸಿತಾಃ ವೈದ್ಯಶಾಸ್ತ್ರಮಪಿ ಅನೃತಮಿತಿ ನಿರಸ್ತ
ಮಿತಿ ಏತದಾಕರ್ಣ್ಯ ಪುರುಹೂತಃ ಸವಿಷಾದಸ್ತಾನ್ ಸತ್ಯಾವಿದಮಾಹ
ಭೋಸ್ಸ್ವರ್ವೈದ್ಯೌ ಕಥಮನೃತಂ ಧನ್ವಂತರೀಯಂ ಶಾಸ್ತ್ರಂ ತದಾತ್ಮ
ಮಾಹತಂ ಅಮರೇಶಂ ದೇವ ನವ್ಯಳೀಕಮಿದಂ ಶಾಸ್ತ್ರಂ ಕಿಂತ್ವಮರ
ವಿದಿತೇನ ರೋಗೇಣ ಬಾಧ್ಯತೇ ಸೌ ಭೋಜ ಇತಿ ಇಂದ್ರಃ ಕೋಸಾ
ವವಾರ್ಯ್ಯರೋಗಃ ಕಿಂ ಭವತೋರ್ವಿದಿತಃ ತತಸ್ತಾವೂಚತುಃ ದೇವಕಪಾ
ಲಶೋಧನೇ ಕೃತೇ ಭೋಜೇನ ತದಾ ಪ್ರವಿಷ್ಟಃ ಪಾಠೀನಸ್ತನ್ಮೂಲೋ
ಯಂ ರೋಗ ಇತಿ. ತದಾ ಇಂದ್ರಸ್ಸ್ಮಯಮಾನಮುಖಃ ಪ್ರಾಹ ತದಿದಾನೀ
ಮೇವ ಯುವಾಭ್ಯಾಂ ಗಂತವ್ಯಂ ನಚೇತ್ ಇತಃ ಪರಂ ಭೂಲೋಕೇ ಭಿಷ
ಕ್ಶಾಸ್ತ್ರಸ್ಯ ಸಿದ್ಧಿರ್ಭವೇತ್ ನಖಲು ಪರಸ್ವತೀ. ವಿಲಾಸಸ್ಯ ನಿಕೇ
ತನಂ ಶಾಸ್ತ್ರಣಾಮುದ್ಧರ್ತಾ ಚೇತಿ ತತಸ್ಸುರೇಂದ್ರಾದೇಶೇನ ತಾವು
ಭಾವಪಿಧೃತ ದ್ವಿಜನ್ಮವೇಷೌ ಧಾರಾನಗರಂ ಪ್ರಾಪ್ಯದ್ವಾರಸ್ಥಂ

ಪ್ರಾಹತುಃ ದ್ವಾರಸ್ಥಉವಾಚಭಿಷಜೌಕಾಶೀದೇಶಾದಾಗತೌ ಶ್ರೀಭೋ
ಜಾಯವಿಜ್ಞಾಪಯತೇ ನಾನ್ಯತವಿತಾಂಗಿಕ ತ [illegible] ಶಾಸ [illegible]
ತಿಶ್ರುತ್ವಾತತ್ಪ್ರತಿಸ್ಥಾಪನಾಯ ತದ್ರೋಗ [illegible]
ತೋದ್ವಾರಸ್ಥಃ ಪ್ರಾಹಭೋವಿಪ್ರಾ ನಕೋಪಿಭಿಷಕ್ಪ್ರವರಃ ಪ್ರವೇ
ಷ್ಟವ್ಯ ಇತಿ ರಾಜ್ಞೋಕ್ತಂ ರಾಜಾತು ಕೇವಲಮಸ್ವಸ್ಥಃ ನಾಯ
ಮವಸರೋ ವಿಜ್ಞಾಪನಸ್ಯೇತಿ ತಸ್ಮಿನ್ಕ್ಷಣೇಕಾರ್ಯ ವಶಾದ್ಬಹಿರ್ನಿರ್ಗತೋ
ಬುದ್ಧಿಸಾಗರಂ ಸ್ತೌದ್ರ ಸ್ಮಾಕ್ಯಕೌಭವಂತೌ ವಿತ್ತೇಪ್ಸ್ವಚ್ಛ ತತಸ್ತೌ
ಯಥಾಗತಮೂಚತುಃ ತತೋಬುದ್ಧಿಸಾಗರೇಣಾ ತೌರಾಜ್ಞಸ್ಸಮೀ
ಪಂನೀತೌ ತತೋರಾಜಾ ಸತ್ಯಸಪಲೋಕ್ಯ ಮುಖಶ್ರಿಯಾತಾವಮಾ
ನುಷಾವಿತಿಬುದ್ಧ್ವಾ ಆಭ್ಯಾಂಶಕ್ಯತೇಯಂ ರೋಗೋನಿವಾರಿತುಮಿತಿ
ನಿಶ್ಚಿತ್ಯತೌಬಹುಮಾನಿತವಾನ್ ತತಸ್ತೌಪೂಜಿತೌ ರಾಜನ್ನಭೀಕ್ಷ್ಣ
ನ್ಯಾಂ ರೋಗೋನಿರ್ಗತಃಕಿಂತು ಕಾಶ್ಚಿದೇಕಾಂತೇತ್ವಯಾ ಭವಿತವ್ಯ
ಮಿತಿ ತತಃರಾಜ್ಞಾ ತಥಾಕೃತಂ ತತಸ್ತಾವಪಿ ರಾಜಾನಂಮೋಹ
ಚೂರ್ಣೇನ ಮೋಹಯಿತ್ವಾಶಿರಃಕಪಾಲಮಾದಾಯ ತತ್ಕರೋಟಿಕಾ
ಪುಟಸ್ಥಿತಂ ಶಫ ತುಲಂ ಗೃಹೀತ್ವಾಕಸ್ಮಿಂಶ್ಚಿದ್ಭಾಜನೇ ಕ್ಷಿಪ್ಯಸಂ
ಧಾನಕರಣ್ಯಾಕಪಾಲಂ ಯಥಾವದಾರಚಯ್ಯ ಸಂಜೀವಿನ್ಯಾ ಚಿರಂ
ಜೀವಯಿತ್ವಾತಸ್ಮೈ ತದದರ್ಶಯತಾಂ ತದಾತದ್ದೃಷ್ಟ್ವಾ ರಾ
ಜಾವಿಸ್ಮಿತಃ ಕಿಮೇತದಿತಿತೌಪೃಷ್ಟವಾನ್ ತದಾತಾವೂಚತುಃ ರಾಜನ್
ತ್ವಯಾ ಬಾಲ್ಯಾದಾರಭ್ಯ ಪರಿಚಿತಃ ಕಪಾಲಶೋಧನ ಸ್ನಂಪ್ರಾಪ್ತ
ಮಿದಮಿತಿ ತತೋರಾಜಾತಾವಶ್ವಿನೌಮತ್ವಾತಚ್ಛೋಧನಾರ್ಥಮಪೃ
ಚ್ಛತ್ ಕಿಮಸ್ಮಾಕಂಪಥ್ಯಮಿತಿ ತತಃತಾವೂಚತುಃ ||

ಶ್ಲೋ|| ಹಿತೋಷ್ಣೇನಾಂಭಸಾಸ್ನಾನಂಕೋಷ್ಣಮುಷ್ಣೋಷ್ಟಭೋಜನಂ |
ಏತದೇವಮಾನುಷಾಃಪಥ್ಯಂ ಪಯಃಪಾನಂ ಮಧುಃಸ್ತ್ರಿಯಃ ||

ತಾ|| ಈರೀತಿಯಾಗಿ ಭೋಜರಾಯನಿಗೆ ರೋಗವು ಹೆಚ್ಚುತ್ತಿರಲು ಒಂದು ವರುಷವಾದಾಗ್ಯೂ ಯಾವನೂ ಗುಣಪಡಿಸದಿರಲು ಧೊರೆಯು ಕೋಪ ಗೊಂಡು ಹತ್ತಿರದಲ್ಲಿಯೇ ಕುಳಿತಿದ್ದ ಮಂತ್ರಿಯನ್ನು ಕುರಿತು ಎಲೈ ಬುದ್ಧಿ ಸಾಗರನೇ ಇನ್ನುಮೇಲೆ ನಮ್ಮ ದೇಶದಲ್ಲಿ ವೈದ್ಯರ್ಯಾರೂ ಇರಲಾಗದು. ಕಪಟ ವೈದ್ಯಗ್ರಂಥಗಳನ್ನು ನದಿಯಲ್ಲಿ ಬಿಸಾಡಬೇಕೆಂದು ಹೇಳಿ ನನಗೆ ಪ್ರಾಣಹೋಗುವ ಸಮಯವೆನಲು ಕವಿಗಳೂ ವಿದ್ವಾಂಸರೂ ಅಂತಃಪುರ

ಸ್ತ್ರೀಯರೂ ಎಲ್ಲರೂ ದುಃಖದಿಂದ ಅಳುತ್ತಾ ಆವರಿಸಿಕೊಂಡಿದ್ದರು. ಹೀಗಿರಲೊಂದಾನೊಂದುದಿನ ದೇವಲೋಕದಲ್ಲಿ ಇಂದ್ರನು ಲೋಕಚಾರಿಗಳಾದ ನಾರದರನ್ನು ನೋಡಿ ನಾರದರೆ ಏನು ಸಮಾಚಾರವೆನಲು ಆತನು ಅಯ್ಯಾ ಏನಿರುವುದು ಆದರೆ ಭೂಲೋಕದಲ್ಲಿ ಭೋಜಮಹಾರಾಯನಿಗೆ ಒಂದು ರೋಗ ಬಂದಿರುವುದು ಅದನ್ನು ಯಾವ ವೈದ್ಯನೂ ಗುಣಪಡಿಸದಿರಲು ವೈದ್ಯಶಾಸ್ತ್ರವೇ ಸುಳ್ಳೆಂದು ಆ ಗ್ರಂಥಗಳನ್ನೆಲ್ಲಾ ಬಿಸಾಟು ವೈದ್ಯರನ್ನೆಲ್ಲಾ ಹೊರಡಿಸಿರುವನು ಎಂದನು. ಆಗ ಇಂದ್ರನು ದೇವವೈದ್ಯರಾದ ಅಶ್ವಿನಿದೇವತೆಗಳ ಕಡೆ ನೋಡಲು ಅವರು ಮಹಾಸ್ವಾಮಿ ವೈದ್ಯಶಾಸ್ತ್ರವು ಎಂದಿಗೂ ಸುಳ್ಳಲ್ಲ ಆದರೆ ಆ ರಾಯನಿಗೆ ಬಂದಿರುವರೋಗವು ಮನುಷ್ಯರಿಗೆ ತಿಳಿಯದು ಆ ರೋಗವು ಕಪಾಲ ಶೋಧನೆಯಿಂದಲ್ಲದೆ ಗುಣವಾಗುವುದಿಲ್ಲವೆಂದರು. ಇಂದ್ರನು ನಾಸತ್ಯರೇ ಭೋಜಭೂಪಾಲನು ಸರಸ್ವತಿಗೆ ಆಧಾರಭೂತನು ಅನ್ಯಾಯವಾಗಿ ಈಗ ಧನ್ವಂತರಿಪ್ರೋಕ್ತವಾದ ವೈದ್ಯಶಾಸ್ತ್ರಕ್ಕೆ ಸುಳ್ಳು ಬಾರದಂತೆ ನೀವು ಹೋಗಿ ಆ ರೋಗವನ್ನು ಗುಣಪಡಿಸಿ ಬನ್ನಿರೆಂದು ಹೇಳಲು ಅವರು ಮನುಷ್ಯರಾಗಿ ಧಾರಾನಗರಕ್ಕೆ ಬಂದು ರಾಜನೆಡೆಗೆ ಬಂದು ನೋಡಲು ದೊರೆಯು ಇವರನ್ನು ಅಮಾನುಷರೆಂದು ತಿಳಿದು ಅವರಿಂದ ಗುಣಹೊಂದಲು ನಿಶ್ಚೈಸಿದನು. ಬಳಿಕ ಅವರು ದೊರೆಗೆ ಪ್ರಜ್ಞೆ ತಪ್ಪುವಂತೆ ಮಾಡಿ ಕಪಾಲವನ್ನು ಮೂಲಿಕೆಗಳಿಂದ ತೆಗೆದು ಅದರಲ್ಲಿ ಶಿಕ್ಕಿಕೊಂಡಿದ್ದ ಮೀನನ್ನು ತೆಗೆದು ತಿರುಗೂ ಜೋಡಿಸಿ ಸಂಜೀವಕರಣಿಯಿಂದ ಜೀವ ಬರುವಂತೆ ಮಾಡಿ ದೊರೆಯನ್ನು ಅಯ್ಯಾ ನೀನು ಬಲ್ಯದಿಂದಲೂ ಅಭ್ಯಾಸಮಾಡಿದ್ದ ಕಪಾಲ ಶೋಧನೆಯಿಂದ ಈ ರೋಗವು ಬಂತೆಂದು ಹೇಳಿ ತೋರಿಸಲು ದೊರೆಯು ಆಶ್ಚರ್ಯಪಟ್ಟು ಅವರನ್ನು ಅಶ್ವಿನೀದೇವತೆಗಳೆಂದು ತಿಳಿದು ಪ್ರಶ್ನೆ ಮಾಡುತ್ತಾನೆ ಏನೆಂದರೆ—ಸ್ವಾಮಿ ನಮಗೆ ಪಥ್ಯವೇನು ಎನಲು ಅಶ್ವಿನೀದೇವತೆಗಳು ಹಿತವಾದ ಬಿಸಿನೀರಿನಿಂದ ಸ್ನಾನವೂ, ಸ್ವಲ್ಪ ಬಿಸಿಯಾಗಿ ತಮ್ಮಗಳಿಗಿಷ್ಟವಾದ ಮಿತಭೋಜನವೂ, ಹಾಲು ಕುಡಿಯುದೂ, ಯವ್ವನಸ್ತ್ರೀಯ ಸಂಗವೂ ಮನುಷ್ಯರಿಗೆ ಪಥ್ಯವೆಂದು ಹೇಳಿದರು.

ಗ॥ ತತ್ರಾಂತರೇ ರಾಜಾ ಮಧ್ಯೇಮಾನುಷಾ ಇತಿ ಸಂಭೋಧನಂಶ್ರುತ್ವಾವ ಯಂಚೇನ್ಮಾನುಷಾಃ ಕೌಯುವಾಮಿತಿ ತಯೋರ್ನಿಸ್ತಾರ್ಥುಡಿತಿಸ್ವಹಸ್ತಾಭ್ಯಾಂ ಅಗ್ರಹೀತ್ ತತಸ್ತಕ್ಷಣ ಏವತಾವಂತರಧತ್ತಾಂಬ್ರವಂ

ತಾವೇವ ಕಾಳಿದಾಸೇನ ಪೂರಣೀಯಂತುರೀಯ ಚರಣಮಿತಿ ತತೋ ರಾಜಾವಿಸ್ಮಿತಃ ಸರ್ವಾನ್ಮಹೋಯ ತದ್ವೃತ್ತಮಬ್ರವೀತ್ ತಚ್ಛ್ರುತ್ವಾ ಸರ್ವೇಪಿಚಮತ್ಕೃತಾಃ ವಿಸ್ಮಿತಾಶ್ಚಬಭೂವುಃ ತತ್ಕಾಳಿದಾಸೇನ ತುರೀಯಚರಣಂಪೂರಿತಂ ಸ್ನಿಗ್ಧಮುಷ್ಣಂಚಭೋಜನಮಿತಿ ತತೋ ಭೋಜೋಪಿ ಕಾಳಿದಾಸಂ ಲೀಲಾಮಾನುಷಂ ಮತ್ವಾಪರಂ ಸಮಾಸ್ಥಿತವಾನ್ ॥

ತಾ॥ ಅಪ್ಸರರಲ್ಲಿ ಭೋಜನು ಅಮಾನುಷಾ ಎಂದು ಪ್ರಯೋಗ ಮಾಡಿದ್ದನ್ನು ಕೇಳಿ ನೀವಾರೆಂದು ಕೇಳಿ ಕೈಗಳನ್ನು ಹಿಡಿದುಕೊಳ್ಳಲು ಅವರು ಅಂತರ್ಧಾನರಾಗಿ ನಾಲ್ಕನೇ ಪಾದವನ್ನು ಕಾಳಿದಾಸನು ಹೇಳುತ್ತಾನೆಂದು ಹೇಳಿದರು. ಬಳಿಕ ಕಾಳಿದಾಸನು ಹಿತವಾಗಿಯೂ ಬಿಸಿಯಾಗಿಯೂ ಇರುವ ಭೋಜನವು ಪಥ್ಯವೆಂದು ನಾಲ್ಕನೇ ಪಾದವನ್ನು ಹೇಳಲು ಆತನನ್ನೂ ಅಮಾನುಷನೆಂದು ತಿಳಿದನು.

೧॥ ಅಥಭೋಜನೃಪಾಲಃ ಪ್ರತಿದಿನಂ ಸಂಜಾತ ಕಂದಳತ್ಕಾಂತಿರ್ವವೃಧೆ ಧಾರಾಧೀಶಃ ಕೃಷ್ಣೇತರಪಕ್ಷಚಂದ್ರ ಇವತತಃ ಕದಾಚಿತ್ಸಿಂಹಾಸನ ಮಲಂಕುರ್ವಾಣೆ ಶ್ರೀಭೋಜೆ ಕಾಳಿದಾಸ ಭವಭೂತಿ ದಂಡಿಬಾಣಮಯೂರ ವರರುಚಿಪ್ರಭೃತಿಕವಿತಿಲಕ ಕುಲಾಲಂಕೃತಾಯಾಂ ಸಭಾಯಾಂ ದ್ವಾರಪಾಲಃಪತ್ಯಾಹ ದೇವಕಶ್ಚಿತ್ಕವಿಃ ದ್ವಾರಿತಿಷ್ಠತಿತೇನೇಯಂ ಪ್ರೇಷಿತಾಗಾಥಾಸನಾಥಾಚೀಟಿಕಾ ದೇವಸಭಾಯಾಂ ನಿಕ್ಷಿಪ್ಯತಾ ಮಿತಿತಾಂದರ್ಶಯತಿ ರಾಜಾಗೃಹೀತ್ವಾತಾಂ ವಾಚಯತಿ ॥

ತಾ॥ ಅನಂತರ ಭೋಜರಾಯನು ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ವೃ[illegible]ಲಂಕರಿಸಿರಲು ಒಬ್ಬ ದ್ವಾ[illegible] ಕಾಗದವನ್ನು ತಂದು ಮಹಾಸ್ವಾಮಿ ಯಾರೋ ಒಬ್ಬ ಕವೀಶ್ವರನು ಇದನ್ನು ದೇವರ ಸಭೆಯಲ್ಲಿ ಕೊಡುವಂತೆ ಹೇಳಿದನೆಂದು ಕೈಗೆ ಕೊಡಲು ಧೊರೆಯು ಅದನ್ನು ಓದುತ್ತಾನೆ.

ಶ್ಲೋ॥ ಕಾಚಿದ್ಬಾಲಾ ರಮಣವಸತಿಂ ಪ್ರೇಷಯಂತೀಕರಂಡಂ । ದಾಸೀಹಸ್ತಾತ್ಸಭಯಮ ಲಿಖದ್ವ್ಯಾಳಮಸ್ಯೋಪರಿಸ್ಥಂ ॥ ಗೌರೀಕಾಂತಂ ಪವನತನಯಂಚಂ ಪಂಕಂಚಾತ್ರಭಾವಂ ಪೃಚ್ಛತ್ಯಾರ್ಯೋನಿಪುಣತಿಲಕೋಮಲ್ಲಿನಾಥಃ ಕವೀಂದ್ರಃ ॥

ತಾ॥ ತರುಣಿಯೊಬ್ಬಳು ತನ್ನ ಗಂಡನೆಡೆಗೆ ದಾಸಿಯನ್ನು ಕಳುಹಿಸಿ

ಆಕೆಯು ಕೈಗೆ ಕೊಟ್ಟ ಭರಣಿಯುಮೇಲೆ ಒಂದು ಹಾವನ್ನೂ ಶಿವನನ್ನೂ ಆಂಜನೇಯುನನ್ನೂ, ಸಂಪಿಗೆಹೂವ್ವನ್ನೂ ಬರೆದು ಕಳುಹಿಸಿದಳು. ಇದರ ತಾತ್ಪರ್ಯವೇನೆಂದು ಮಲ್ಲಿನಾಥನು ಕೇಳುತ್ತಾನೆ.

ಗ॥ ತಚ್ಛ್ರುತ್ವಾಸರ್ವ್ವಾಪಿ ವಿದ್ವತ್ಪರಿಷಚ್ಚಮತ್ಕೃತಾತತಃಕಾಳಿದಾಸಃ ಪ್ರಾಹ ರಾಜನ್ ಮಲ್ಲಿನಾಥಶ್ಶೀಘ್ರಮಾಕಾರಿತವ್ಯ ಇತಿ ತತೋ ರಾಜಾ ದೇಶಾತ್ ದ್ವಾರಪಾಲೇನ ಸಪ್ರವೇಶಿತೋಕವಿಃ ರಾಜಾನಂಸ್ವಸ್ತೀತ್ಯು ಕ್ತ್ವಾ ತದಾಜ್ಞಯೋಪವಿಷ್ಟಃ ತತೋರಾಜಾಪ್ರಾಹತಂ ಕವೀಂದ್ರಂ ವಿಧ್ವನ್ ಮಲ್ಲಿನಾಥಕವೇ ಸಾಧುರಚಿತಾ ಗಾಥಾ ತದಾಕಾಳಿದಾಸಃಪ್ರಾಹ ಕಿಮುಚ್ಯತೇ ಸಾದ್ವಿತಿ ದೇಶಾಂತರಗತ ಕಾಂತಾಯಾಶ್ಚಾರಿತ್ರ ವರ್ಣನೇನ ಶ್ಲಾಘನೀಯೋಸಿ ವಿಶಿಷ್ಯತಸ್ತದ್ಭಾವ ಪ್ರತಿಭಟವರ್ಣನೇನ ತಮಾಭವಭೂತಿಃಪ್ರಾಹ ವಿಶಿಷ್ಯತೇ ಇಯಂಗಾಥಾಪಂಕ್ತಿ ಕಂಠೋ ದ್ಯಾನವೈರಿಣೋಮಾತಾತ್ಮಕಸ್ಯ ವರ್ಣನಾದಿತಿ ತತಃ ಪ್ರೀತೇನರಾಜ್ಞಾ ತಸ್ಮೈದತ್ತಂ ಸುವರ್ಣಾನಾಂ ಲಕ್ಷಂಪಂಚಗ [illegible] ದ ಶತುರಗಾಶ್ಚದ ತ್ತಾಃ ತತಃಪ್ರೀತೋವಿದ್ವಾನ್ ಸ್ತೌತಿರಾಜಾನಂ ॥

ತಾ॥ ಅದನ್ನು ಕೇಳಿ ಎಲ್ಲಾ ಪಂಡಿತರೂ ಆಶ್ಚರ್ಯಪಟ್ಟರು ಕಾಳಿದಾಸನು ರಾಯುನನ್ನು ಕುರಿತು ಬೇಗ ಮಲ್ಲಿನಾಥನನ್ನು ಕರೆತರಿಸೆನಲು ರಾಜಾಜ್ಞೆಯಿಂದ ಬಂದ ಶ್ರೀನಾಥನು ಧೊ [illegible]ನ [illegible] ರ್ವದಿಸಿ ಕೂತು ಕೊಳ್ಳಲು ಧೊರೆಯು ಆತನನ್ನು ತುಂಬಾ ಹೊಗಳಿದನು. [illegible]ಗ ಕಾಳಿದಾಸನು ಎಲೈ ಮಲ್ಲಿನಾಥನೆ ದೇಶಾಂತರಕ್ಕೆ ಹೋಗಿರುವ ಗಂಡನ ವಿಷಯುವಾಗಿ ನೀನು ಬರೆದಿರುವ ಗಾಥೆಯುು ಚನ್ನಾಗಿಧೆ ಎಂದನು ಆಗ ಭವಭೂತಿಯುು ರಾವಣನ ವನವನ್ನು ಮುರಿದ ಆಂಜನೇಯನ ವರ್ಣನೆಯಿಂದ ಚನ್ನಾಗಿಧೆ ಎಂದನು. ಅಂತು ಆ ಗಾಥೆಯು ತಾತ್ಪರ್ಯ[illegible]ನೆಂದರೆ—ಒಬ್ಬ ವಿರಹಸ್ತ್ರೀಯುುತನಿಗೆ ವಿರಹವನ್ನುಂಟುಮಾಡಿದ ಮಂದವ[illegible] ತ[illegible]ನ್ನೂ ಚಂದ್ರನನ್ನೂ ಹೆದರಿಸಲು ಹಾವನ್ನೂ ಮನ್ಮಥ[illegible]ಗೆ ಹೆದರಿಕೆಯಾಗುವಂತೆ ಶಿವನನ್ನೂ ಮಾರನಧನುಷ್ಟಂಕಾರವನ್ನು ಸೂಚಿಸುವ ದುಂಬಿಗಳು ಹೆದರುವಂತೆ ಸಂಪಿಗೆ ಹೂವ್ವನ್ನು ಉದ್ಯಾನಕ್ಕೆ ಭಯಂಕರನಾದ ಹನುಮಂನನ್ನೂ ಬರೆದಳೆಂದು ತಾತ್ಪರ್ಯವು. ಆಗ ಆ[illegible]ಗೆ ಧೊರೆಯುು ಲಕ್ಷ ಚಿನ್ನದ ನಾಣ್ಯಗಳನ್ನೂ ಐದು ಆನೆಗಳನ್ನೂ ಹತ್ತು ಕುದುರೆಗಳನ್ನೂ ಕೊಡಲು ಮಲ್ಲಿನಾಥನು ಸಂತೋಷಪಟ್ಟು ಹೊಗಳುತ್ತಾನೆ.

ಶ್ಲೋ॥ ದೇವಭೋಜತವದಾನಜಲೌಘೈಃಸೋಯಮಬ್ಧಿರಜನೀತಿವಿಶಂಕೇ॥
ಅನ್ಯಥಾತದುದಿತೇಷು ಶಿಲಾಗೋಭೂರುಹೇಷುಕಥಮೀದೃಶದಾನಂ॥

ತಾ॥ ಎಲೌ ಭೋಜರಾಯನೇ ನಿನ್ನ ದಾನೋದಕದಿಂದಲೆ ಈ ಸಮುದ್ರವುಂಟಾಯಿತೆಂದು ನಂಬುತ್ತೇನೆ ಏಕಂದರೆ ಆ ಸಮುದ್ರದಲ್ಲಿ ಹುಟ್ಟಿದ ಚಿಂತಾಮಣಿ, ಕಾಮಧೇನು, ಕಲ್ಪವೃಕ್ಷ ಇವುಗಳಿಗೆ ಕೋರಿಕೆಗಳನ್ನು ಕೊಡುವ ಶಕ್ತಿ ಎತ್ತಣದೆಂದನು.

ಶ್ಲೋ॥ ತತೊ ಲೋಕೋತ್ತರಂ ಶ್ಲೋಕಂಶ್ರುತ್ವಾ ರಾಜಾಪುನರಪಿ ತಸ್ಮೈ ಲಕ್ಷತ್ರಯಂದದೌ ತತೊಲಿಖತಿಸ್ಮಭಾಂಡಾಗಾರಿಕೊ ಧರ್ಮಪತ್ರೆ ॥

ತಾ॥ ಬಳಿಕ ಲೋಕೋತ್ತರವಾದ ಶ್ಲೋಕವನ್ನು ಕೇಳಿ ದೊರೆಯು ತಿರುಗೂ ಮೂರು ಲಕ್ಷವನ್ನು ಕೊಟ್ಟನು. ಆಗ ಶಾಸನದಲ್ಲಿ ಬರೆದುದೇ ನೆಂದರೆ—

ಶ್ಲೋ॥ ಪ್ರೀತಶ್ರೀಭೋಜಭೂಪಃ ಸದಶವಿರಹಿಣೀಗೂಢ ನರ್ಮೋಕ್ತಪದ್ಯಂ ಶ್ರುತ್ವಾಹೇಮ್ನಾಂಚ ಲಕ್ಷಂದಶಚಸತುರಗಾನ್ ಪಂಚನಾಗಾನಯಚ್ಛತ್ ॥ ಪಶ್ಚಾತ್ತತ್ರೈವಸೋಯಂ ವಿತರಣಗುಣ ವರ್ಣನಾತ್ ಪ್ರೀತಚೇತಾಃ ಲಕ್ಷಂ ಲಕ್ಷಂಚಲಕ್ಷಂ ಪುನರಪಿಚ ದದೌ ಮಲ್ಲಿನಾಥಾಯತಸ್ಮೈ ॥

ತಾ॥ ಮಲ್ಲಿನಾಥ ಕವಿಯು ವಿರಹಿಣಿಸ್ತ್ರೀಯ ಗುಟ್ಟು ಅಭಿಪ್ರಾಯ ವುಳ್ಳ ಪದ್ಯವನ್ನು ಬರದಿದ್ದರಿಂದ ಸಂತೋಷಪಟ್ಟು ಲಕ್ಷ ಚಿನ್ನದ ನಾಣ್ಯಗಳನ್ನೂ ಐದಾನೆಗಳನ್ನೂ ಹತ್ತು ಕುದುರೆಗಳನ್ನೂ ಕೊಟ್ಟು ತಿರುಗು ತನ್ನ ದಾನ ಗುಣವರ್ಣನೆ ಮಾಡಿದ್ದಕ್ಕೆ ಮೂರುಲಕ್ಷ ವರಹಾಗಳನ್ನು ಕೊಟ್ಟನಾವನೆಂದು ಬರೆದನು.

ಗ॥ ತತಃಕದಾಚಿದ್ಭೋಜಃ ಕಾಳಿದಾಸಂ ಪ್ರತಿಪ್ರಾಹ ಸುಕವೇತ್ವಮಸ್ಮಾಕಂ ಚರಮಗ್ರಂಥಂ ಪಠತತಃ ಕ್ರುದ್ಧೊರಾಜಾನಂ ವಿನಿಂದ್ಯ ಕಾಳಿದಾಸಃ ಕ್ಷಣೇನತಂದೇಶಂ ತ್ಯಕ್ತ್ವಾ ವಿಲಾಸವತ್ಯಾ ಸಹ ಏಕಶಿಲಾನಗರಂಪ್ರಾಪ ತತಃ ಕಾಳಿದಾಸವಿಯೋಗೇನ ಶೋಕಾಕುಲಃ ತಂಕಾಳಿದಾಸಂ ಮೃಗಯಿತುಂ ರಾಜಾಕಾಪಾಲಿಕವೇಷಂ ಧೃತ್ವಾಕ್ರಮೇಣ ಏಕಶಿಲಾನಗರಂ ಪ್ರಾಪ ॥

ತಾ॥ ಬಳಿಕೊಂದು ಸಮಯದಲ್ಲಿ ಭೋಜನು ಕಾಳಿದಾಸನನ್ನು ಕುರಿತು ಎಲೌ ಸತ್ಕವಿಯೇ ನೀನು ನನ್ನ ನಂತರದ ವರ್ಣನೆಯುಳ್ಳ ಶ್ಲೋಕಗ

ಳನ್ನು ಹೇಳೆನಲು ಕಾಳಿದಾಸನು ಕೋಪಗೊಂಡು ಆಗಲೇ ಯಾರಿಗೂ ತಿಳಿಯದಂತೆ ತನ್ನ ಸೂಳೆಯಾದ ವಿಲಾಸವತಿಯ ಸಂಗಡ ಏಕಶಿಲಾನಗರಕ್ಕೆ ಹೊರಟುಹೋದನು. ಬಳಿಕ ಧೊರೆಯು ಆತನನ್ನು ಹುಡಕಲು ಕಾಪಾಲಿಕ ವೇಷವನ್ನು ತಾಳಿ ಏಕಶಿಲಾನಗರವನ್ನೈದಿದನು.

ಗ॥ ತತಃ ಕಾಳಿದಾಸಃಯೋಗಿನಂ ದೃಷ್ಟ್ವಾತಂ ಸಾಮಪೂರ್ವ್ವಂಪಪ್ರಚ್ಛ ಯೋಗಿನ್‌ಕುತ್ರತೇ ಸ್ಥಿತಿರಿತಿಯೋಗೀವದತಿಸುಕವೆ ಅಸ್ಮಾಕಂ ಧಾರಾನಗರೆಸ್ಥಿತಿಃ ತತಃ ಕವಿರಾಹ ತತ್ರಭೋಜಃ ಕುಶಲೀಕಿಂ ತತೋಯೋಗೀಪ್ರಾಹ ಕಿಂವುಯಾಚವಕ್ತವ್ಯಮಿತಿ ತತಃಕವಿರಾಹ ತತ್ರಾತಿಶಯವಾರ್ತ್ತಾಸ್ತಿಚೇತ್ತ್ವತ್ವಂ ಕಥಯೇತಿ ತದಾ ಯೋಗೀಪ್ರಾಹ ಭೋಜೋದಿವಂಗತ ಇತಿತತಃಕವಿಃ ಭೂಮೌನಿಪತ್ಯ ಪ್ರಲಪತಿದೇವತ್ವಾಂ ವಿನಾಸ್ಮಾಕಂ ಕ್ಷಣಮಪಿ ಭೂಮೌನಸ್ಥಿತಿಃ ಅತಸ್ತ್ವತ್ಸಮೀಪ ಮಹಮಾಗಚ್ಛಾಮಿ ಇತಿಕಾಳಿದಾಸಃಬಹುಶೋವಿಲಪ್ಯಚರಮಶ್ಲೋಕಂಕೃತವಾನ್॥

ತಾ॥ ಬಳಿಕ ಕಾಳಿದಾಸನು ಕಾಪಾಲಿಕನನ್ನು ಕಂಡು ನಿನ್ನ ವಾಸವೆಲ್ಲಿ ಎನಲು ಯೋಗಿಯು ನಮ್ಮದು ಧಾರಾನಗರವೆಂದನು. ಅಲ್ಲಿ ಸಮಾಚಾರವೇನೆನಲು ಅದನ್ನು ನಾನೂ ಹೇಳಬೇಕು ಅಂದನು. ಅಲ್ಲೇನಾದರೂ ಹೆಚ್ಚು ಸಂಗತಿ ಇದ್ದರೆ ಖಂಡಿತವಾಗಿ ಹೇಳೆಂದನು. ಆಗ ಆ ಯೋಗಿಯು ಧಾರಾನಗರದಲ್ಲಿ ಭೋಜನು ಸ್ವರ್ಗಸ್ಥನಾದನೆನಲು ಕಾಳಿದಾಸನು ಥಟ್ಟನೆ ದುಃಖದಿಂದ ಕೆಳಕ್ಕೆಬಿದ್ದು ಅಯ್ಯೋ ಭೋಜಭೂಪಾಲನೆ ನಿನ್ನನ್ನುಬಿಟ್ಟು ನಮಗೀ ಭೂಲೋಕದಲ್ಲಿ ಏನು ಪ್ರಯೋಜನವೆಂದು ಅಳುತ್ತಾ ಚರಮ ಶ್ಲೋಕವನ್ನು ಹೇಳುತ್ತಾನೆ.

ಶ್ಲೋ॥ ಅದ್ಯಧಾರಾ ನಿರಾಧಾರಾ ನಿರಾಲಂಬಾಸರಸ್ವತಿ ಪಂಡಿತಾ ಖಂಡಿತಾಸ್ಸರ್ವೆ ಭೋಜರಾಜೆದಿವಂಗತೆ ॥

ತಾ॥ ಭೋಜರಾಯನು ಸ್ವರ್ಗಸ್ಥನಾಗಲು ಧಾರಾನಗರವು ಆಧಾರವಿಲ್ಲದ್ದಾಯಿತು ಸರಸ್ವತಿಗೆ ಆಶ್ರಯವು ತಪ್ಪಿತು ಪಂಡಿತರು ನಾಶನಾದರೆಂದು ಹೇಳಲು.

ಗ॥ ಏವಂ ಕವಿನಾಚರಮ ಶ್ಲೋಕಉಕ್ತಃ ತದೈವಸ ಯೋಗೀಭೂತಲೆ ವಿಸಂಜ್ಞಃಪಪಾತತತಃಕಾಳಿದಾಸ ಸ್ತಥಾವಿಧಂತಮವಲೋಕ್ಯಾಯಂ ಭೋಜಏವೇತಿ ನಿಶ್ಚಿತ್ಯ ಆಹಮಹಾರಾಜ ತತ್ರಭವತಾಹಂವಂಚಿತೋಸ್ಮೀತ್ಯಭಿಧಾಯ ಝಡಿತಿತಂ ಶ್ಲೋಕ ಪ್ರಕಾರಾಂತರೇಣಪಪಾಠ ॥

ತಾ॥ ಹೀಗೆ ಕವಿಯು ಚರಮ ಶ್ಲೋಕವನ್ನು ಹೇಳಲಾಗಿ ಆ ಯೋಗಿಯು ಆಗಲೆ ಜ್ಞಾನತಪ್ಪಿ ಭೂಮಿಯಮೇಲೆ ಬಿದ್ದನು ಬಳಿಕ ಕಾಳಿದಾಸನು ಆತನನ್ನು ನೋಡಿ ಭೋಜನು ಈತನೇ ಎಂದು ತಿಳಿದು ಮೋಸಹೋದೆನೆಂದು ಬೇಗ ಅದೇ ಶ್ಲೋಕವನ್ನೆ ಬೇರೆ ರೀತಿಯಾಗಿ ಹೇಳುತ್ತಾನೆ.

ಶ್ಲೋ॥ ಅದ್ಯಧಾರಾ ಸದಾಧಾರಾ ಸದಾಲಂಬಾ ಸರಸ್ವತಿ ।
ಪಂಡಿತಾಮಂಡಿತಾಸ್ಸರ್ವೇ ಭೋಜರಾಜೆಭುವಂಗತೇ ॥

ತಾ॥ ಭೋಜರಾಯನು ಭೂಮಿಯನ್ನೈದಲು ಧಾರಾನಗರವು ಸಾಧಾರಣವುಳ್ಳದ್ದಾಯಿತು ಸರಸ್ವತಿಗೆ ಒಳ್ಳೇ ಆಧಾರವುಂಟಾಯಿತು ಪಂಡಿತರೆಲ್ಲರೂ ಅಲಂಕರಿಸಲ್ಪಟ್ಟವರಾದರು ಎಂದು ಹೇಳಲು.

ಗ॥ ತತೋಭೋಜಸ್ತಮಾಲಿಂಗ್ಯಪ್ರಣಮ್ಯ ಧಾರಾನಗರಂಪ್ರತಿಯಯೌ॥

ತಾ॥ ಬಳಿಕ ಭೋಜನು ತಕ್ಷಣವೇ ಜ್ಞಾನವುಳ್ಳವನಾಗಿ ಮೇಲಕ್ಕೆದ್ದು ಕಾಳಿದಾಸನನ್ನು ಆಲಿಂಗಿಸಿಕೊಂಡು ನಮಸ್ಕಾರಮಾಡಿ ತನ್ನ ನಗರವಾದ ಧಾರಾನಗರಕ್ಕೆ ತಂದು ಸಕಲ ಕವಿಕಲ್ಪದ್ರುಮನೆನಿಸಿ ಸದಾ ಕಾವ್ಯರಸಾಸ್ವಾದವುಳ್ಳ ಸರಸಕವಿತಾ ಧುರೀಣನಾಗಿ ಅನೇಕ ಗ್ರಂಥಗಳನ್ನು ರಚಿಸಿ ತಾನೂ ರಚಿಸಿಸಿ ವಿನೋದವಾಗಿ ರಾಜ್ಯವನ್ನು ಧರ್ಮದಿಂದಾಳುತ್ತಾ ದೇವಬ್ರಾಹ್ಮಣಪೂಜಾ ಧುರಂಧರನಾಗಿ ಸುಧರ್ಮಾ ಎಂಬ ಸಭೆಯೊಳ್ ದೇವೇಂದ್ರನಂತೆ ರಾರಾಜಿಸುತ್ತಿದ್ದನು.

ಶ್ಲೋ॥ ಶೀಲಂಶೈಲವಿಶಿಶ್ಛಲಂಚ ಹೃದಯಾಮುಂಜಸ್ಯತಸ್ಮಿನ್‌ಕ್ಷಣೆ ಭೋಜೆ ಜೀವತಿಹರ್ಷಸಂಚಯು ಸುಧಾಧಾರಾಂಬುದಾಮಜ್ಜತಿ। ಸ್ತ್ರೀಭಿಶ್ಶೀಲವತೀಭಿರೇವ ಸಹಸಾಕರ್ತುಂ ತಪಸ್ತತ್ವರೇ ಮುಂಜೇಮುಂಚತಿ ರಾಜ್ಯಭಾರಮಭಜತ್ ತ್ಯಾಗೈಶ್ಚಭೋಗೈರ್ನೃಪಃ ॥

ತಾ॥ ಭೋಜನನ್ನು ಅಂಥಾ ಶಿಕ್ಷೆಗೆ ಗುರಿಮಾಡಿದಾಗ ಮುಂಜರಾಯನ ನಡತೆಯು ಮತ್ತು ಮನಸ್ಸೂ ದೊಡ್ಡ ಕಲ್ಲಿನಂತಿತ್ತು ಅದೇ ಭೋಜನು ಬದುಕಿ ಸುಖವಾಗಿರುವನೆಂದು ತಿಳಿದು ಅದೇ ಮುಂಜನೆ ಅಮೃತ ಸಮುದ್ರದಲ್ಲಿ ಮುಳುಗಿದನು. ಬಳಿಕ ಮುಂಜರಾಯನು ಪತ್ನಿಯೊಡನೆ ತಪೋವನಕ್ಕೆಹೋಗಲು ಭೋಜನು ಕವಿಕಲ್ಪ ಭೋಜನೆನಿಸಿ ತ್ಯಾಗ ಭೋಗಗಳಿಂದ ರಾಜ್ಯವಾಳುತ್ತಿದ್ದನೆಂಬಲ್ಲಿಗೆ ತಾತ್ಪರ್ಯ ಟೀಕಾ ಭೋಜ ಚರಿತ್ರೆಯು ಸಂಪೂರ್ಣವಾದುದು.



# ಪ್ರಕಟನೆ.

ನಿರಂಜನಾವಧೂತರಿಂದ ರಚಿಸಲ್ಪಟ್ಟ

## ವೇದಾಂತ ಗಗನತಾರಾವಳಿ

ಇದರಲ್ಲಿ ಗುರುಸ್ತೋತ್ರ, ಗುರುಕಟಾಕ್ಷ, ಸಾಧನಚತುಷ್ಟಯ, ನವವಿಧಭಕ್ತಿಯೋಗ, ಮಂತ್ರಲಯಹಠರಾಜಯೋಗ ಷಣ್ಮತಸ್ಥಾಪನವಿಸ್ತಾರ, ಹಂಸಸ್ವರೂಪ ನಿರೂಪಣೆ, ಪಂಚೀಕರಣವಿಚಾರಣೆ, ಧ್ಯಾನದ್ವಯನಿರ್ಣಯ, ನಾಡೀಚಕ್ರವಿಚಾರಣೆ, ಷಣ್ಮುಖೀಮುದ್ರೆ, ಶಾಂಭವೀಮುದ್ರೆ, ಖೇಚರೀಮುದ್ರೆ, ವ್ಯಷ್ಟಿಸಮಾಧಿ, ನಿಕ್ಷಿಪ್ತಸಮಾಧಿ, ವಿಲಕ್ಷಣಸಮಾಧಿ, ನಿರ್ವಿಷಯಸಮಾಧಿ, ಸಮಷ್ಟಿಪೂರ್ಣಸಮಾಧಿ, ಕೋಶಪ್ರತಿಕೋಶ, ಬಿಂದುನಿರ್ಣಯ, ಮಹಾತಾರಕ. ಪರಮತುರಿಯಮನಸ್ಕರಾಜಯೋಗ, ವೇದವಾಕ್ಯವಿಚಾರತತ್ವ, ಇವುಗಳೆಲ್ಲಾ ಈ ಪುಸ್ತಕದಲ್ಲಿ ಸೇರಿರುತ್ತೆ. (ಕ್ರಯ ೧೦ ಆಣೆ.) ಮತ್ತು ನಮ್ಮಲ್ಲಿ ಯಾವಾಗ್ಯೂ ಕನ್ನಡ, ತೆಲುಗು, ಸಂಸ್ಕೃತ ವಗೈರೆ ಪುಸ್ತಕಗಳು ಸುಲಭಕ್ರಯಕ್ಕೆ ದೊರೆಯುತ್ತೆ.

ಸಿ. ಯಲ್. ಕೃಷ್ಣಯ್ಯಶೆಟ್ಟಿ,

ಬುಕ್‌ಡಿಪೋ, ಬೆಂಗಳೂರು ಸಿಟಿ.